# ಅಧ್ಯಾಯ – ೨

## ಇತಿಹಾಸ

ಕರ್ನಾಟಕ ರಾಜ್ಯದ ಆಗ್ನೇಯ ಭಾಗದಲ್ಲಿರುವ ತುಮಕೂರು ಜಿಲ್ಲೆಯು ರಾಜಧಾನಿ ಬೆಂಗಳೂರಿಗೆ ೭೦ ಕಿ.ಮೀ. ಅಂತರದಲ್ಲಿದೆ. ಭೌಗೋಳಿಕವಾಗಿ ಬಯಲು ಪ್ರದೇಶದಿಂದ ಕೂಡಿದ್ದು ಇದರ ಒಟ್ಟು ಭೂವಿಸ್ತೀರ್ಣ ೧೦೫೯೭ ಚ.ಕಿ.ಮೀ.ಗಳು. ಇದು ೧೨° ೪೫" ದಿಂದ ೧೪° ೨೦" ಉತ್ತರ ಅಕ್ಷಾಂಶ ಮತ್ತು ೭೬° ೨೦" ರಿಂದ ೭೭° ೩೧" ಪೂರ್ವ ರೇಖಾಂಶಗಳ ನಡುವಿದೆ. ಈ ಜಿಲ್ಲೆಯ ಈಶಾನ್ಯ ಭಾಗಕ್ಕೆ ಆಂಧ್ರಪ್ರದೇಶ, ಪೂರ್ವಕ್ಕೆ ಕೋಲಾರ ಮತ್ತು ಬೆಂಗಳೂರು ಜಿಲ್ಲೆಗಳು, ದಕ್ಷಿಣಕ್ಕೆ ಮಂಡ್ಯ, ಪಶ್ಚಿಮ ಮತ್ತು ವಾಯವ್ಯ ಭಾಗಕ್ಕೆ ಹಾಸನ ಮತ್ತು ಚಿತ್ರದುರ್ಗ ಜಿಲ್ಲೆಗಳಿವೆ. ಇದರ ಈಶಾನ್ಯ ಭಾಗದಲ್ಲಿರುವ ಪಾವಗಡ ತಾಲೂಕನ್ನು ನೆರೆಯ ರಾಜ್ಯ ಆಂಧ್ರಪ್ರದೇಶದ ಗಡಿಯು ಎಲ್ಲಾ ಕಡೆಯಿಂದಲೂ ಸುತ್ತುವರಿದಿದ್ದರೂ ಪಾವಗಡ ತಾಲೂಕಿನ ಪಶ್ಚಿಮ ಗಡಿಯು ಸ್ವಲ್ಪ ದೂರ ಚಿತ್ರದುರ್ಗ ಜಿಲ್ಲಾ ಗಡಿಗೆ ಅಂಟಿಕೊಳ್ಳುವ ಮೂಲಕ ಸಂಪರ್ಕ ಹೊಂದಿರುವುದು ಉಲ್ಲೇಖಾರ್ಹ.

ಈ ಜಿಲ್ಲೆಯಲ್ಲಿ ಅನೇಕ ನದಿಗಳಿದ್ದರೂ ಅವು ಕೇವಲ ಮಳೆಗಾಲದಲ್ಲಿ ಮಾತ್ರ ತುಂಬಿ ಹರಿಯುವ ಉಪನದಿಗಳಾಗಿವೆ. ಇಂತಹ ಪರಿಮಿತ ಜಲಾಸರೆಯನ್ನು ಹೊಂದಿರುವ ಈ ಜಿಲ್ಲೆಯ ಚರಿತ್ರೆ ಶಿಲಾಯುಗ ಕಾಲದಿಂದ ಆರಂಭವಾಗುತ್ತದೆ. ಆದರೂ ಸ್ಪಷ್ಟ ಇತಿಹಾಸ ಆರಂಭವಾಗುವುದು ಗಂಗರ ಕಾಲದಿಂದಲೇ. ಗಂಗರಿಂದ ಆರಂಭಗೊಂಡು ವಿಜಯನಗರ ಸಾಮ್ರಾಜ್ಯ ಪತನ ಹೊಂದುವವರೆಗೆ ಕರ್ನಾಟಕವನ್ನಾಳಿದ ಎಲ್ಲಾ ರಾಜಮನೆತನಗಳು ಸ್ವಲ್ಪ ಕಾಲವಾದರೂ ಈ ಜಿಲ್ಲೆಯ ಮೇಲೆ ಹಿಡಿತ ಸಾಧಿಸಿದ್ದು ಅವು ತಮ್ಮ ಅಧಿಕಾರಿಗಳ ಮೂಲಕ ಆಡಳಿತ ನಡೆಸುತ್ತಿದ್ದುದಕ್ಕೆ ಶಾಸನಾಧಾರಗಳಿವೆ.

ಜಿಲ್ಲೆಯಲ್ಲಿ ಹುಳಿಯಾರು ನಾಯಕರು (ಕ್ರಿ.ಶ.೧೦೪೪ ರಿಂದ ೧೩೫೬ ರವರೆಗೆ) ಸುಮಾರು ಹದಿನಾಲ್ಕು ತಲೆಮಾರಿನ ಇತಿಹಾಸವನ್ನು ಹೊಂದಿದ್ದು, ಇವರ ಆಡಳಿತಕ್ಕೆ ಸಂಬಂಧಿಸಿದಂತೆ ೨೪ ಶಾಸನಗಳಿವೆ. ನಿಡುಗಲ್ ದುರ್ಗದಿಂದಾಳಿದ ಹೊಳಕಲ್ (ನಿಡುಗಲ್) ಮನೆತನಕ್ಕೆ ಸಂಬಂಧಿಸಿದಂತೆ ೨೧ ಶಾಸನಗಳಿದ್ದು (ಕ್ರಿ.ಶ.೧೨೯೨–೧೪೮೫) ಅವು ೧೩ ತಲೆಮಾರಿನ ಇತಿಹಾಸವನ್ನು ಅರುಹುತ್ತವೆ.. ಗುಬ್ಬಿ ತಾಲೂಕಿನ ಇಡುಗೂರನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳಿದ ಅಗ್ನಿವಣಿ ಕ್ಷತ್ರಿಯ ತಿಗುಳ ವಂಶಜರ ಇತಿಹಾಸವನ್ನು ಅರಿಯಬೇಕಿದೆ. ಇದೇ ರೀತಿ ವೈ.ಎನ್.ಹೊಸಕೋಟೆಯ

ಯಲ್ಲಪ್ಪನಾಯಕನ ಇತಿಹಾಸ, ಪಾವಗಡ ತಾಲೂಕಿನ ಗುಜ್ಜನಾಡಿನ ನಾಯಕರ ಇತಿಹಾಸ, ಆನೆಬಿದ್ದಸರಿಯನ್ನಾಳುತ್ತಿದ್ದ ಚಿಕ್ಕವೀರಕೇತಯ್ಯನ ಇತಿಹಾಸ, ಮೂಗನಾಯಕನಕೋಟೆಯ ಇತಿಹಾಸ, ಭಸ್ಮಾಂಗಿ ಬೂದಿಬಸಪ್ಪನ ಇತಿಹಾಸ, ನಿಜಗಲ್ ಇತಿಹಾಸ, ಪುರವರ, ಕೊಡಗೇನಹಳ್ಳಿ, ತೆರಿಯೂರು, ಇಟಕೆ ದಿಬ್ಬನಹಳ್ಳಿ ಹೋಬಳಿಗಳನ್ನಾಳಿದ ತೆಲುಗು ಚೋಡರು ಮುಂತಾದ ಸಣ್ಣ ಪುಟ್ಟ ಸ್ಥಳೀಯ ನಾಯಕ ಮನೆತನಗಳ ಇತಿಹಾಸವನ್ನು ತಿಳಿಯಬೇಕಿದೆ.

ಮುಂದೆ ಕ್ರಿ.ಶ.೧೫೬೫ ತರುವಾಯ ವಿಜಯನಗರ ಸಾಮ್ರಾಜ್ಯದ ಆಡಳಿತಾವಧಿಯಲ್ಲಿ ಅಧಿಕಾರ ವಿಕೇಂದ್ರೀಕರಣ ವ್ಯವಸ್ಥೆಯಡಿ ನೇಮಕಗೊಂಡಿದ್ದ ಅಮರನಾಯಕರು ಸ್ವತಂತ್ರವಾಗಿ ಬಲಾಢ್ಯ ಕೋಟೆ–ಕೊತ್ತಲಗಳನ್ನು ಕಟ್ಟುವುದರ ಮೂಲಕ ಸ್ವತಂತ್ರ ಪಾಳೇಪಟ್ಟುಗಳನ್ನು ಸ್ಥಾಪಿಸಿದರು. ಇಂತಹ ಸ್ವತಂತ್ರ ರಾಜ್ಯಗಳು ಜಿಲ್ಲೆಯಲ್ಲಿ ಸುಮಾರು ೨೦೦ ವರ್ಷ ಅಸ್ತಿತ್ವದಲ್ಲಿದ್ದವು. ಮೈಸೂರು ಸಂಸ್ಥಾನದ ಸರ್ವಾಧಿಕಾರಿ ಹೈದರಾಲಿಯು ಸಂಸ್ಥಾನದ ಒಳಗೆ ಹಾಗೂ ಹೊರಗೆ ಇದ್ದ ಅನೇಕ ಪಾಳೇಗಾರರನ್ನು ಸೋಲಿಸಿ ಮೈಸೂರು ರಾಜ್ಯವನ್ನು ವಿಸ್ತರಿಸಿದನು. ಆದರೆ, ನಾಲ್ಕನೆಯ ಆಂಗ್ಲೊ–ಮೈಸೂರು ಯುದ್ಧದಲ್ಲಿ ಟಿಪ್ಪು ಮೇಲೆ ಗೆಲುವು ಸಾಧಿಸಿದ ಬ್ರಿಟಿಷರು, ಮೈಸೂರು ರಾಜ್ಯದ ಕೆಲವು ಭಾಗವನ್ನು ಮೈಸೂರು ರಾಜಮನೆತನಕ್ಕೆ ಹಸ್ತಾಂತರಿಸಿದರು. ಆದರೆ ದಿವಾನ್ ಪೂರ್ಣಯ್ಯ ಈ ಪಾಳೇಗಾರರಿಗೆ ಅಧಿಕಾರ ಹಿಂತಿರುಗಿಸುವ ಬದಲು ವಿಶ್ರಾಂತಿ ವೇತನ ನೀಡಿದ್ದರಿಂದ ಪಾಳೇಗಾರರಿಗೆ ನಿರಾಸೆ ಉಂಟಾಯಿತು.

ಮುಂದೆ ೧೮೩೧ ರಲ್ಲಿ ಬ್ರಿಟಿಷ್ ಕಮೀಷನರುಗಳ ಆಡಳಿತಕ್ಕೆ ಒಳಪಟ್ಟ ಮೈಸೂರು ಸಂಸ್ಥಾನವು ಐದು ದಶಕಗಳ ನಂತರ ಕ್ರಿ.ಶ.೧೮೮೧ರಲ್ಲಿ ಮರು ಅಧಿಕಾರ ಪಡೆಯಿತು. ನಂತರ, ಮೈಸೂರು ಸಂಸ್ಥಾನದಲ್ಲಿ ಪ್ರಥಮವಾಗಿ ಪ್ರಜೆಗಳನ್ನು ಪ್ರತಿನಿಧಿಸುವ ಪ್ರಜಾಪ್ರತಿನಿಧಿ ಸಭೆಯನ್ನು ಸ್ಥಾಪಿಸಲಾಯಿತು. ಈ ನಡುವೆ, ಕ್ರಿ.ಶ. ೧೮೮೫ರಲ್ಲಿ ಅಖಿಲ ಭಾರತ ಕಾಂಗ್ರೆಸ್ ಸ್ಥಾಪನೆಯಾಗಿ ಅದು ರಾಷ್ಟ್ರೀಯವಾಗಿ ಏನೇನು ಪ್ರಭಾವವನ್ನು ಬೀರಿತ್ತೋ ಅವೆಲ್ಲವೂ ಈ ಜಿಲ್ಲೆಯ ಮೇಲೂ ಆಯಿತು. ಮುಂದೆ, ಮಹಾತ್ಮ ಗಾಂಧೀಜಿ ೧೯೨೭ರಲ್ಲಿ ತುಮಕೂರಿಗೆ ಆಗಮಿಸಿ ಸಾರ್ವಜನಿಕರನ್ನು ಉದ್ದೇಶಿಸಿ ಭಾಷಣ ಮಾಡಿದ ಮೇಲೆ ಸ್ವಾತಂತ್ರ್ಯ ಹೋರಾಟ ತೀವ್ರತೆಯನ್ನು ಪಡೆದುಕೊಂಡು ಅವಿಧೇಯತಾ ಚಳವಳಿ, ಕಾನೂನುಭಂಗ ಚಳವಳಿ, ಮದ್ಯಪಾನ ನಿರೋಧ ಚಳವಳಿ, ಅರಣ್ಯ ಸತ್ಯಾಗ್ರಹ, ಸ್ವದೇಶಿ ವಸ್ತ್ರ ಬಳಕೆ ಚಳವಳಿಗಳು ಜಿಲ್ಲೆಯಲ್ಲಿ ಪ್ರಾಮುಖ್ಯ ಪಡೆದುಕೊಂಡವು. ಅಂತಿಮವಾಗಿ ೧೯೪೨ರಲ್ಲಿ ಕ್ವಿಟ್ ಇಂಡಿಯಾ ಚಳವಳಿ ಆರಂಭವಾದಾಗ ಜಿಲ್ಲೆಯ ಸಮಸ್ತ ಜನತೆ ಸ್ಪಂದಿಸಿತು. ೧೯೪೭ರಲ್ಲಿ ಭಾರತ ಸ್ವತಂತ್ರ ಗೊಂಡ ಮೇಲೆ ಮೈಸೂರು ಚಲೋ ಚಳವಳಿ ಆರಂಭವಾಯಿತು. ಸುಮಾರು ೪೨ ದಿನ ನಡೆದ ಈ ಚಳವಳಿಗೆ ಬೆಂಬಲ ನೀಡಿದ ಇಲ್ಲಿನ ಜನತೆ ಅದನ್ನು ಯಶಸ್ವಿಗೊಳಿಸಿದರೂ ಪೊಲೀಸರ ಗುಂಡಿಗೆ ತುಮಕೂರಿನಲ್ಲಿ ಮೂವರು ಮತ್ತು ಮೈಸೂರಿನಲ್ಲಿ ಇಬ್ಬರು ಬಲಿಯಾಗಬೇಕಾಯಿತು. ಅಂತಿಮವಾಗಿ ಮಹಾರಾಜರು ಜವಾಬ್ದಾರಿ ಸರ್ಕಾರ ಸ್ಥಾಪಿಸಲು ಒಪ್ಪಿಗೆ ನೀಡಿದಾಗ ಈ ಚಳವಳಿ ಅಂತ್ಯಗೊಂಡಿತು. ಒಟ್ಟಾರೆ ಜಿಲ್ಲೆಯ ಜನತೆ ಪಟ್ಟ ಪರಿಶ್ರಮ, ಮಾಡಿದ ತ್ಯಾಗ, ಬಲಿದಾನಗಳು ಉಲ್ಲೇಖಾರ್ಹವೇ. ಅದನ್ನು ಇಲ್ಲಿ ಸಂಕ್ಷಿಪ್ತವಾಗಿ ನೀಡಲಾಗಿದೆ.

**ಪೌರಾಣಿಕ ಹಿನ್ನೆಲೆ:** ಈ ಜಿಲ್ಲೆಯ ಕೆಲವು ಸ್ಥಳಗಳು ಪ್ರಚಲಿತ ಪೌರಾಣಿಕ ಹಿನ್ನೆಲೆಯನ್ನು ಹೊಂದಿವೆ. ಆ ಸ್ಥಳಗಳು ರಾಮಾಯಣ ಮತ್ತು ಮಹಾಭಾರತದ ಪೌರಾಣಿಕ ಘಟನೆಗಳೊಂದಿಗೆ ತಳಕು ಹಾಕಿಕೊಂಡಿವೆ. ಗುಬ್ಬಿ ತಾಲೂಕಿನ ಕಡಬದ ಕೆರೆಯನ್ನು ಶ್ರೀರಾಮಚಂದ್ರನು ಲಂಕೆಯಿಂದ ಅಯೋಧ್ಯೆಗೆ ವಾಪಸ್ಸಾಗುತ್ತಿದ್ದಾಗ, ಪತ್ನಿ ಸೀತೆಯ ಪ್ರಾರ್ಥನೆಯಂತೆ ಅಲ್ಲಿ ಹರಿಯುತ್ತಿದ್ದ ನದಿಯೊಂದಕ್ಕೆ ಅಡ್ಡಲಾಗಿ ಕಟ್ಟೆಯೊಂದನ್ನು ನಿರ್ಮಿಸಿ ಆ ನದಿ ಕಣಿವೆಯನ್ನೇ ಕೆರೆಯನ್ನಾಗಿ ಮಾಡಿಸಿದನೆಂಬ ಪೌರಾಣಿಕ ಐತಿಹ್ಯವಿದೆ. ಮತ್ತೊಂದು ಐತಿಹ್ಯದ ಪ್ರಕಾರ ಕಡಬವು ಶಿಂಶಾ ನದಿ (ಶಿಂಶಿಪ)ಯ ಧಂಡೆಯ ಮೇಲಿದ್ದು, ಅಲ್ಲಿ ಆಶ್ರಮ ಕಟ್ಟಿಕೊಂಡು ವಾಸ ಮಾಡುತ್ತಿದ್ದ ಕದಂಬ ಋಷಿಯ ಹೆಸರಿನಿಂದಲೇ ಆ ಊರಿಗೆ ಕಡಬ ಎಂಬ ಹೆಸರು ಬಂದಿತಂತೆ. ಕುಣಿಗಲ್ ತಾಲೂಕಿನಲ್ಲಿ ಹರಿಯುವ ನಾಗಿಣಿ ನದಿಯಲ್ಲಿ ಸ್ನಾನ ಮಾಡಿ ನೃಗನೆಂಬ ರಾಜರ್ಷಿಯು ಮುಕ್ತಿ ಪಡೆದನೆಂಬ ದಂತಕಥೆಯೂ ಪ್ರಚಲಿತವಿದೆ. ತುರುವೇಕೆರೆ ಸಮೀಪದಲ್ಲಿ ಪಂಚಲಿಂಗಗಳಿದ್ದು ಇವುಗಳ ಪೂಜೆಗಾಗಿ ಅಲ್ಲಿಯೇ ಪರ್ಣಶಾಲೆಯನ್ನು ನಿರ್ಮಿಸಿಕೊಂಡು ನೆಲೆ ನಿಂತ "ಕೈಕಂಡು" ಮಹರ್ಷಿಯು ತನ್ನ ತಪಸ್ಸಿದ್ದಿಯಿಂದ ಮುಕ್ತಿ ಪಡೆದನೆಂದು ಪ್ರತೀತಿ ಇದೆ. ತುರುವೇಕೆರೆ ತಾಲೂಕಿನ ಸಂಪಿಗೆ ಗ್ರಾಮವು ಪುರಾಣ ಕಾಲದಲ್ಲಿ ಚಂಪಕಾ ನಗರವೆಂದು ಪ್ರಸಿದ್ಧವಾಗಿದ್ದು, ಮಹಾಭಾರತದ ಹಂಸಧ್ವಜನ ಮಗ ವೀರಸುಧನ್ವ ಮಹಾರಾಜನ ರಾಜಧಾನಿಯಾಗಿತ್ತು. ಆ ಕಾಲದ ಚಂಪಕ ನಗರವೇ ಈಗಿನ 'ಸಂಪಿಗೆ' ಎಂಬ ಐತಿಹ್ಯವೂ ಇದೆ. ದ್ವಾಪರ ಯುಗದಲ್ಲಿ ಮೃಖಂಡ ಮತ್ತು ಚಂದ್ರಚೂಡಾ

ಮುನಿಗಳು ಬದರಿಯಿಂದ ತೀರ್ಥಯಾತ್ರೆ ಹೊರಟು ತುರುವೇಕೆರೆಗೆ ಆಗಮಿಸಿ ತಪಸ್ಸು ಮಾಡುತ್ತಿದ್ದಾಗ ಇಲ್ಲಿ ಅಡಗಿದ್ದ ಮಹಾಮಾಯಾವಿ ರಾಕ್ಷಸರು ಮೃಗರೂಪ ಧರಿಸಿ ತಪಸ್ಸಿಗೆ ಭಂಗ ತರಲಾರಂಭಿಸಿದಾಗ, ಮುನಿಗಳ ಪ್ರಾರ್ಥನೆಗೆ ಪ್ರಸನ್ನನಾಗಿ ಅಶ್ವಾರೂಢನಾಗಿ ಆಗಮಿಸಿ ರಾಕ್ಷಸರನ್ನು ಸಂಹರಿಸಿ ಮುನಿಗಳಿಗೆ ದರ್ಶನವಿತ್ತು ಆಶೀರ್ವದಿಸಿದನೆಂಬ ಪ್ರತೀತಿ ಇದೆ. ಸಾಕ್ಷಾತ್ ಭಗವಂತನೇ ಮೃಗರೂಪ ಧರಿಸಿ ಬೇಟೆಯಾಡಿ ರಾಕ್ಷಸರನ್ನು ಕೊಂದಿದ್ದರಿಂದ ಅವನಿಗೆ ವರದಬೇಟೆರಾಯಸ್ವಾಮಿ ಎಂಬ ಹೆಸರು ಬಂದಿತೆಂದೂ ಹೇಳಲಾಗುತ್ತದೆ. ಈ ದೇವಾಲಯವು ತುರುವೇಕೆರೆ ಪಟ್ಟಣದ ಮಧ್ಯಭಾಗದಲ್ಲಿದೆ.

ತುರುವೇಕೆರೆ ತಾಲೂಕಿನ ತಂಡಗವು ಪ್ರಸಿದ್ಧ ದೊರೆ ಶಾಲಿವಾಹನನ ಜನ್ಮಸ್ಥಳವೆಂದೂ, ಸ್ಥಳಪುರಾಣ ಪ್ರಕಾರ ಅವನು ಕುಂಬಾರ ಮಹಿಳೆಯ ಗರ್ಭದಲ್ಲಿ ಜನಿಸಿದನೆಂದೂ ಹೇಳಲಾಗುತ್ತದೆ. ಮಿಡಿಗೇಶಿ ಸಮೀಪದ ಕತ್ತಿರಾಜನಹಳ್ಳಿ ಬೆಟ್ಟಗಳಲ್ಲಿ ಕೊಂತಿಬಂಡೆ ಮತ್ತು ಭೀಮನ ಗವಿಗಳೆಂದು ಪ್ರಚಲಿತವಿರುವ ಪ್ರದೇಶಗಳು ಮಹಾಭಾರತಕ್ಕೆ ಸಂಬಂಧಿಸಿದ ಐತಿಹ್ಯವಾಗಿದೆ. ದೇವರಾಯನದುರ್ಗದಲ್ಲಿರುವ ನಾಮದ ಚಿಲುಮೆಯನ್ನು ರಾಮ ಸ್ಥಾಪಿಸಿದನೆಂದು ಅಭಿಪ್ರಾಯವಿದ್ದು, ಅಯೋಧ್ಯೆಗೆ ತನ್ನ ಪರಿವಾರವನ್ನು ಕರೆದುಕೊಂಡು ಹೋಗುವಾಗ ದೇವರಾಯನದುರ್ಗದ ಅರಣ್ಯದ ಮಧ್ಯೆ ತನ್ನ ಪರಿವಾರದವರ ನೀರಿನ ದಾಹವನ್ನು ಇಂಗಿಸಲು ಬಾಣವನ್ನು ಹೂಡಿ ಈ ಚಿಲುಮೆಯನ್ನು ನಿರ್ಮಿಸಿದ್ದು, ಈ ಚಿಲುಮೆ ಕ್ರಮೇಣ ನಾಮದ ಚಿಲುಮೆಯಾಗಿ ಮಾರ್ಪಾಟಾಯಿತೆಂದು ಹೇಳಲಾಗುತ್ತದೆ. ಕೆಂಪು ಪಟ್ಟೆ ಇರುವ ಜಾಗವನ್ನು 'ಸೀತೆಯ ಸೆರಗು' ಎಂದು ಸ್ಥಳೀಯವಾಗಿ ಹೇಳಲಾಗುತ್ತದೆ. ಆದರೆ ಶ್ರೀರಾಮನು ಲಂಕೆಯಿಂದ ಪುಷ್ಪಕವಿಮಾನದಲ್ಲಿ ಆಯೋಧ್ಯೆಗೆ ಹೋದನೆಂದು ರಾಮಾಯಣದಲ್ಲಿ ಹೇಳಿರುವ ಹಿನ್ನೆಲೆಯಲ್ಲಿ ಈ ಐತಿಹ್ಯಗಳನ್ನು ವಿವೇಚಿಸಬೇಕಾಗುತ್ತದೆ.

ತುರುವೇಕೆರೆಗೆ ಸಂಬಂಧಿಸಿದಂತೆ ಇರುವ ವಿಷ್ಣು ವಿಗ್ರಹ ಪವಾಡವೂ ಒಂದು ಐತಿಹ್ಯವಾಗಿದ್ದು, ಸ್ಥಳಪುರಾಣವಾಗಿ ಈ ಭಾಗದಲ್ಲಿ ಈಗಲೂ ಚಾಲ್ತಿಯಲ್ಲಿದ್ದು, ಇಂತಹ ಅಸಂಖ್ಯಾತ ಐತಿಹ್ಯಗಳ ಸತ್ಯಾಸತ್ಯತೆಯನ್ನು ಸಮರ್ಪಕವಾಗಿ ಅರಿಯಲು ಅವನ್ನು ವೈಜ್ಞಾನಿಕ ಚೌಕಟ್ಟಿನಲ್ಲಿ ವಿಮರ್ಶಿಸುವ ಅಗತ್ಯವಿದೆ.

**ಇತಿಹಾಸಪೂರ್ವ ಕಾಲ:** ಈ ಜಿಲ್ಲೆಯು ಕರ್ನಾಟಕ ರಾಜ್ಯದ ಬಯಲುಸೀಮೆ ಪ್ರದೇಶದಲ್ಲಿದ್ದು ತನ್ನದೇ ಆದ ವಿಭಿನ್ನ ಪ್ರಾಕೃತಿಕ ಸಂಪತ್ತನ್ನು ಹೊಂದಿದೆ. ಅಲ್ಲಲ್ಲಿ ಇರುವ ಬೆಟ್ಟಗುಡ್ಡ ಮತ್ತು ದಟ್ಟವಾದ ಅರಣ್ಯಗಳು ಈ ಭೂಭಾಗದ ಭೌಗೋಳಿಕ ಲಕ್ಷಣಗಳಾಗಿವೆ. ಈ ಪ್ರಕೃತಿ ಲಕ್ಷಣಗಳು ಆದಿಮಾನವರ ಜೀವನಕ್ರಮಕ್ಕೆ ಹೆಚ್ಚು ಪೂರಕವಾಗಿದ್ದವು. ಇಡೀ ಕರ್ನಾಟಕದಲ್ಲಿ, ಶಿಲಾಯುಗ ಸಂಸ್ಕೃತಿಯ ವಿವಿಧ ಹಂತಕ್ಕೆ ಸೇರಿದ ಅತೀ ಹೆಚ್ಚು ನೆಲೆಗಳು (೨೬೬) ಈ ಜಿಲ್ಲೆಯ ೬೦ ಗ್ರಾಮಗಳಲ್ಲಿ ಪತ್ತೆಯಾಗಿವೆ. ಈ ಬಗ್ಗೆ ಪ್ರೊ. ಸಂಪತ್ ಅಯ್ಯಂಗಾರ್, ಜಿ.ರಾಮರಾವ್, ಶ್ರೀಮತಿ ಆಲ್ಚಿನ್, ಪ್ರೊ. ಎಂ.ಶೇಷಾದ್ರಿ ಮುಂತಾದವರು ಈಗಾಗಲೇ ಸಂಶೋಧನೆ ನಡೆಸಿ ಮಹತ್ವದ ಅಂಶಗಳನ್ನು ಬೆಳಕಿಗೆ ತಂದಿದ್ದಾರೆ. ಜಿಲ್ಲೆಯ ಶಿಲಾಯುಗ ಸಂಸ್ಕೃತಿಗೆ ಸಂಬಂಧಿಸಿದಂತೆ ಡಾ.ಕೆ.ಶಿವತಾರಕ್ ವಿಶೇಷ ಅಧ್ಯಯನ ನಡೆಸಿದ್ದಾರೆ. ಜಿಲ್ಲೆಯ ಹತ್ತು ತಾಲೂಕುಗಳಲ್ಲಿ ಈವರೆಗೆ ವಿವಿಧ ಶಿಲಾಯುಗಕ್ಕೆ ಸಂಬಂಧಿಸಿದಂತೆ ಪತ್ತೆಯಾಗಿರುವ ಒಟ್ಟು ೨೬೬ ನೆಲೆಗಳನ್ನು ಹೀಗೆ ವರ್ಗೀಕರಿಸಬಹುದು. ೧) ಆದಿ ಹಳೇ ಶಿಲಾಯುಗ ಸಂಸ್ಕೃತಿಯ ೨೧, ೨) ಮಧ್ಯ ಹಳೇ ಶಿಲಾಯುಗ ಸಂಸ್ಕೃತಿಯ ೨೩. ೩) ಅಂತ್ಯ ಹಳೇ ಶಿಲಾಯುಗ ಸಂಸ್ಕೃತಿಯ ೫೨, ೪)ಸೂಕ್ಷ್ಮ ಶಿಲಾಯುಗ ಸಂಸ್ಕೃತಿಯ ೬೯, ೫) ನೂತನ ಶಿಲಾಯುಗ ಸಂಸ್ಕೃತಿಯ ೩೪, ೬) ಶಿಲಾ-ತಾಮ್ರಯುಗ ಸಂಸ್ಕೃತಿಯ ೦೨, ೭) ಬೃಹತ್ ಶಿಲಾಯುಗ ಸಂಸ್ಕೃತಿಯ ೪೫, ಹಾಗೂ ೮) ಇತಿಹಾಸ ಆರಂಭ ಕಾಲದ ೨೦ ನೆಲೆಗಳು ಪತ್ತೆಯಾಗಿವೆ.

**ಆದಿ ಹಳೇಶಿಲಾಯುಗ ಸಂಸ್ಕೃತಿ:** ಈ ಜಿಲ್ಲೆಯ ಬಾಣಸಂದ್ರ ಭೂ ಪ್ರದೇಶದ ಭೂ ವಿಜ್ಞಾನ ಸರ್ವೇಕ್ಷಣೆಯನ್ನು ೧೯೦೦-೧೯೦೧ರಲ್ಲಿ ಭೂಗರ್ಭ ವಿಜ್ಞಾನಿ ವಿಥಿರಲ್ ಕೈಗೊಂಡು ಪದರುಗಲ್ಲು, ಅಗ್ನಿಶಿಲೆ, ಮತ್ತು ಕಗ್ಗಲ್ಲುಗಳು ಎಂದು ವರ್ಗೀಕರಿಸಿದ್ದು, ಅವುಗಳಲ್ಲಿ ಪದರುಗಲ್ಲಿನ ಅಂಶ ಅತೀಹೆಚ್ಚು ಇದೆ ಎಂದು ಹೇಳಿದ್ದಾರೆ. ಕಬ್ಬಿಣದ ಅದಿರುಯುಕ್ತ ಸ್ಫಟಿಕ ಶಿಲೆಯು ಆಯುಧ ತಯಾರಿಕೆಗೆ ಯೋಗ್ಯವಾದ ಕಚ್ಚಾವಸ್ತುವಾಗಿದ್ದಿತೆಂಬ ಪ್ರಮುಖ ಅಂಶವನ್ನು ಒತ್ತಿ ಹೇಳಿದ್ದಾರೆ. ಮುಂದೆ ೧೯೨೪ರಲ್ಲಿ ಕಿಬ್ಬನಹಳ್ಳಿ-ಬಿಳಿಗೆರೆ ಪ್ರದೇಶಗಳ ಅನ್ವೇಷಣೆ ಕೈಗೊಂಡ ಭೂಗರ್ಭ ವಿಜ್ಞಾನಿ ಪ್ರೊ. ಸಂಪತ್ ಅಯ್ಯಂಗಾರ್, ಅಲ್ಲಿದ್ದ ಹಳೇ ಶಿಲಾಯುಗ ಸಂಸ್ಕೃತಿಯ ನೆಲೆಯನ್ನು ಬೆಳಕಿಗೆ ತಂದಿದ್ದಾರೆ. ಅವರು ಈ ಪ್ರದೇಶದಲ್ಲಿ ಹಲವಾರು ಶಿಲಾಯುಧಗಳನ್ನು ಸಂಗ್ರಹಿಸಿ ಇದೊಂದು ಶಿಲಾಯುಧ ತಯಾರಿಕಾ ಕೇಂದ್ರವಾಗಿತ್ತೆಂದೂ ಹೇಳಿದ್ದಾರೆ. ಇದೇ ಸ್ಥಳದಲ್ಲಿ ಮತ್ತೊಬ್ಬ ಭೂಗರ್ಭ ವಿಜ್ಞಾನಿ ಜಿ.ರಾಮರಾವ್ ೧೯೨೮ರಲ್ಲಿ ಮತ್ತೊಮ್ಮೆ ಪರಿವೀಕ್ಷಿಸಿ ಇಲ್ಲಿ ದೊರೆತಿರುವ

ಆಯುಧಗಳ ಬಗ್ಗೆ ಮತ್ತಷ್ಟು ವಿವರಗಳನ್ನು ನೀಡಿದ್ದಾರೆ. ೧೯೫೧ರಲ್ಲಿ ಶ್ರೀಮತಿ ಅಲ್ಚಿನ್‌ರವರು ಇದೇ ಸ್ಥಳದಲ್ಲಿ ಪುನಃ ಸರ್ವೇಕ್ಷಣೆ ಮಾಡಿ ಕಿಬ್ಬನಹಳ್ಳಿಯಲ್ಲಿ ದೊರೆತಿರುವ ಆಯುಧಗಳು, ತಮಿಳುನಾಡಿನ ಅತಿರಂಪಾಕಂ ಹಾಗೂ ಇತರ ಸ್ಥಳಗಳಲ್ಲಿ ದೊರೆತಿರುವ ಆಯುಧಗಳನ್ನು ಹೋಲುತ್ತವೆಂದೂ ಹಾಗೂ ಇವುಗಳನ್ನು ತಯಾರಿಸಲು ಬಳಸಿರುವ ಬೆಣಚುಕಲ್ಲು ಒಂದೇ ಎಂದು ತಿಳಿಸಿರುವರು. ಅವರು ಕಿಬ್ಬನಹಳ್ಳಿಯ ಆಯುಧಗಳನ್ನು ವೈಜ್ಞಾನಿಕವಾಗಿ ಪರಿಶೀಲಿಸಿ ಇಲ್ಲಿ ಕಚ್ಚಾಶಿಲೆ ಹೇರಳವಾಗಿ ದೊರಕುತ್ತಿದ್ದುದರಿಂದ ಇಲ್ಲಿನ ಹಳೇ ಶಿಲಾಯುಗದ ಮಾನವನು ದಕ್ಷಿಣ ಆಫ್ರಿಕಾದ ತನ್ನ ಸಂಬಂಧಿಗಳಂತೆ ಆಯುಧಗಳಿಗೆ ಅಗತ್ಯವಾದ ಕಚ್ಚಾಕಲ್ಲಿಗೋಸ್ಕರ ನಿಗಧಿತ ಸ್ಥಳಗಳಿಗೆ ಆಗಾಗ ಹೋಗಿ, ಆಯುಧಗಳನ್ನು ತಯಾರಿಸಿ ಕೊಳ್ಳುತ್ತಿದ್ದಿರಬೇಕೆಂದು ಹೇಳಿರುವರು. ಕಿಬ್ಬನಹಳ್ಳಿಯಲ್ಲಿ ದೊರೆತಿರುವ ಶಿಲಾಯುಧಗಳ ಸಂಪೂರ್ಣ ಅಧ್ಯಯನ ಕೈಗೊಂಡು ತಿರುಳುಗಲ್ಲಿನಲ್ಲಿ ಮಾಡಿರುವ ಕೈಗೊಡಲಿಗಳು ಮೂರು ನಮೂನೆಯಲ್ಲಿದ್ದು ಅವುಗಳು ಅಬ್ಬೆವಿಲಿಯನ್ ಮತ್ತು ಆಷೂಲಿಯನ್ ತಂತ್ರಗಳಿಂದ ತಯಾರಾದವುಗಳೆಂದು ಪುರಾತತ್ವಜ್ಞ ಪ್ರೊ.ಎಂ.ಶೇಷಾದ್ರಿ ಹೇಳಿರುವರು. ಒಟ್ಟಾರೆ ಕಿಬ್ಬನಹಳ್ಳಿ ಮತ್ತು ಬಿಳಿಗೆರೆ ನೆಲೆಗಳು ಆದಿ ಹಳೇ ಶಿಲಾಯುಗದ ಆಯುಧ ಉದ್ಯಮ ಕೇಂದ್ರಗಳಾಗಿದ್ದವೆಂಬ ಅಂಶವನ್ನು ಸ್ಪಷ್ಟಪಡಿಸುತ್ತವೆ. ಆದರೆ ಆದಿ ಮತ್ತು ಮಧ್ಯ ಹಳೇ ಶಿಲಾಯುಗ ಸಂಸ್ಕೃತಿಗಳ ಬಗ್ಗೆ ನಿರ್ದಿಷ್ಟವಾಗಿ ವಿವರಿಸುತ್ತರಾದರೂ ಅಂತ್ಯ ಹಳೇ ಶಿಲಾಯುಗದ ಬಗ್ಗೆ ಭಿನ್ನಾಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಈ ಸಂಸ್ಕೃತಿಗೆ ಸಬಂಧಿಸಿದಂತೆ ಇತ್ತೀಚಿನ ಅನ್ವೇಷಣೆಯಲ್ಲಿ ತಿಪಟೂರು ತಾಲೂಕಿನ ಹರೇನಹಳ್ಳಿ, ಹೊನ್ನೇಮಾರನಹಳ್ಳಿ ಮತ್ತು ಬೊಮ್ಮೇನಹಳ್ಳಿ,; ಮಧುಗಿರಿ ತಾಲೂಕಿನ ಅವರ್ಗಲ್ಲುಗುಟ್ಟೆ ಮತ್ತು ಚಿಕ್ಕೇಗೌಡನರೊಪ್ಪ; ಪಾವಗಡ ತಾಲೂಕಿನ ವೈ.ಎನ್.ಹೊಸಕೋಟೆ; ತುಮಕೂರು ತಾಲೂಕಿನ ಸೀಗೆಹಳ್ಳಿಗಳಲ್ಲಿ ಕೆಲವೇ ಆಯುಧಗಳನ್ನು ಸಂಶೋಧಕರು ಬೆಳಕಿಗೆ ತಂದಿದ್ದಾರೆ. ಆದರೆ ಗುಬ್ಬಿ ತಾಲೂಕಿನ ಅಪ್ಪಾನಹಳ್ಳಿ, ದೊಡ್ಡಗುಣಿ, ಮೂಗನಾಯ್ಕನಕೋಟೆ, ಮಾರಶೆಟ್ಟಿಹಳ್ಳಿ, ಗಳಿಗೆಕೆರೆ, ಶಿವಪುರ, ಓಬಳಾಪುರ ಮತ್ತು ಮಂಚಲದೊರೆಗಳಲ್ಲಿ ದೊರೆತಿರುವ ವಿವಿಧ ಮಾದರಿಯ ಆಯುಧಗಳಿಂದಾಗಿ ಈ ಸ್ಥಳಗಳು ಅತಿ ಪ್ರಮುಖ ನೆಲೆಗಳಾಗಿದ್ದವೆಂಬ ಅಂಶ ಸ್ಪಷ್ಟವಾಗುತ್ತದೆ. ಈ ಎಲ್ಲ ಪ್ರದೇಶಗಳಿಂದ ಕೈಗೊಡಲಿ, ಸೀಳುಗತ್ತಿ, ಮಚ್ಚುಗತ್ತಿ, ಹೆರೆಗತ್ತಿ, ಈಟಿ, ದುಂಡಾದ ಚಪ್ಪಟೆ ಆಯುಧ, ಮೊನಚಾದ ಚಕ್ಕೆಕಲ್ಲಿನ ಆಯುಧ, ಕೊಚ್ಚುಗತ್ತಿ, ತೆಳುಚಕ್ಕೆ ಆಯುಧ, ಬೈರಿಗೆ ಇತ್ಯಾದಿ ಶಿಲಾಯುಧಗಳನ್ನು ವಿದ್ವಾಂಸರು ಈಗಾಗಲೇ ಸಂಗ್ರಹಿಸಿದ್ದಾರೆ. ಈ ಆಯುಧಗಳನ್ನು ಪದರುಗಲ್ಲು, ಅಗ್ನಿಶಿಲೆ ಮತ್ತು ಕಗ್ಗಲ್ಲುಗಳನ್ನು ಬಳಸಿ ತಯಾರಿಸಲಾಗಿದೆ. ಮೂಗನಾಯ್ಕನಕೋಟೆಯಲ್ಲಿ ದೊರೆತಿರುವ ಒಂದು ಕೈಗೊಡಲಿಯು ಅಬ್ಬೆವಿಲಿಯನ್ ಮಾದರಿಯಲ್ಲಿದ್ದು ಅದನ್ನು ಕಬ್ಬಿಣದ ಅದಿರುಯುಕ್ತ ಸ್ಪಟಿಕ ಶಿಲೆಯಲ್ಲಿ ಸಿದ್ಧಪಡಿಸಲಾಗಿದೆ. ಮತ್ತೊಂದು ಶಿಲಾಯುಧವು ಯಕ್ಕಲಕಟ್ಟೆ ಕೈಕಂಬದ ನೆಲೆಯಲ್ಲಿ ದೊರೆತಿದ್ದು,ಇದನ್ನು ಹಿಡಿಕೆಗೆ ಕಟ್ಟಿಕೊಂಡು 'ಈಟಿ'ಯಂತೆ ಬಳಸಲಾಗುತ್ತಿತ್ತೆಂಬ ಅಭಿಪ್ರಾಯವಿದೆ. ತಿಪಟೂರು ಮತ್ತು ಗುಬ್ಬಿ ತಾಲೂಕಿನ ಶಿಲಾಯುಗ ನೆಲೆಗಳಿರುವ ಪರಿಸರವು ಗುಡ್ಡಗಳಿಂದ ಕೂಡಿದ್ದು, ಬಿದ್ದ ಮಳೆ ನೀರು ಒಂದು ಕಡೆ ಶೇಖರವಾಗಿ ಅದು ವರ್ಷವಿಡೀ ಮಾನವನಿಗೆ ಉಪಯೋಗಕ್ಕೆ ಬರುತ್ತಿದ್ದಿರಬೇಕು. ಆದುದರಿಂದ ಆ ಮಾನವನು ಇಂತಹ ಸರೋವರಗಳನ್ನು ಅವಲಂಬಿಸಿ ತನ್ನ ನೀರಿನ ಅವಶ್ಯಕತೆಯನ್ನು ಪೂರೈಸಿಕೊಂಡಿರಬೇಕೆಂಬ ಅಂಶ ತಿಳಿಯುತ್ತದೆ. ಒಟ್ಟಾರೆ ಆದಿ ಹಳೇ ಶಿಲಾಯುಗ ಸಂಸ್ಕೃತಿಯು ಕಿಬ್ಬನಹಳ್ಳಿ ಪ್ರದೇಶದಲ್ಲಿ ಕೇಂದ್ರೀಕೃತವಾಗಿದ್ದರೂ ಅದು ಈ ಜಿಲ್ಲೆಯ ಪೂರ್ವದ ಕಡೆಗೂ ಪಸರಿಸಿತ್ತೆಂಬ ಅಂಶ ಸ್ಪಷ್ಟವಾಗುತ್ತದೆ.

**ಮಧ್ಯ ಹಳೆಶಿಲಾಯುಗ ಸಂಸ್ಕೃತಿ:** ಈ ಸಂಸ್ಕೃತಿಯು ಆದಿ ಹಳೆ ಶಿಲಾಯುಗ ಸಂಸ್ಕೃತಿಯ ಮುಂದುವರಿಕೆಯಾಗಿದೆ. ಆದಿ ಹಳೆ ಶಿಲಾಯುಗ ಸಂಸ್ಕೃತಿಯ ಅವಶೇಷಗಳು ದೊರೆತಲ್ಲಿಯೇ ಈ ಸಂಸ್ಕೃತಿಯ ಅವಶೇಷಗಳೂ ಕಂಡು ಬಂದಿವೆ. ಜಿಲ್ಲೆಯಲ್ಲಿ ಒಟ್ಟು ೨೨ ನೆಲೆಗಳು ದೊರೆತಿದ್ದು ಅವುಗಳಲ್ಲಿ ಬಹಳಷ್ಟು ಭಿನ್ನತೆಯಿದೆ. ಈ ನೆಲೆಗಳಿಂದ ೨೪೬ ಉಪಕರಣಗಳು ಸಂಗ್ರಹವಾಗಿದ್ದು ಅವುಗಳ ವೈವಿಧ್ಯವನ್ನಾಧರಿಸಿ ಚಕ್ರಾಕಾರದ ಉಪಕರಣ, ಹೆರೆಚಕ್ಕೆ, ಮೊನೆ, ಬಾಣದ ಮೊನೆ, ಕೊರೆಗ ಹಾಗೂ ನೀಳ ಚಕ್ಕೆಗಳನ್ನು ಒಬ್ಬದಿ, ಇಬ್ಬದಿ ನೀಳಚಕ್ಕೆ, ಕೈಚಾಕುನೀಳಚಕ್ಕೆ ಮಾದರಿ ಮುಂತಾಗಿ ವಿಂಗಡಿಸಲಾಗಿದೆ. ಇವುಗಳಲ್ಲಿ ಪ್ರಮುಖವಾಗಿ ಉಂಡೆಕಲ್ಲು ಮತ್ತು ಮೂಲಗಟ್ಟಿಗಳೆ ಬಳಕೆಯಾಗಿರುವುದನ್ನು ಕಾಣಬಹುದಾಗಿದೆ. ಅಲ್ಲದೆ ಮಧ್ಯಮ ಮತ್ತು ಕಿರುಗಾತ್ರದ ವಿವಿಧ ಆಕಾರದ ಶಿಲಾಯುಧ ಮಾದರಿಗಳನ್ನು ಬಳಸಿರುವುದು ಕಂಡು ಬರುತ್ತದೆ. ಉತ್ತಮ ಜಾತಿಯ ನಯ-ಕಣಶಿಲಾ ವಿಶಿಷ್ಟತೆಯನ್ನು ಒಳಗೊಂಡಿದ್ದಂತಹ ಮಧ್ಯ ಹಳೆ ಶಿಲಾಯುಗ ಸಂಸ್ಕೃತಿಯು ಈ ಪ್ರದೇಶದಲ್ಲಿದ್ದುದು ಕಂಡು ಬರುತ್ತದೆ. ಈ ಸಂಸ್ಕೃತಿಯು ಸುಮಾರು ೧.೫ ಲಕ್ಷದಿಂದ ಒಂದು ಲಕ್ಷ ವರ್ಷಗಳ ಹಿಂದೆ ಇದ್ದಿತೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ.

**ಅಂತ್ಯ ಹಳೆಶಿಲಾಯುಗ:** ಈ ಸಂಸ್ಕೃತಿಯ ಒಟ್ಟು ೫೦ ನೆಲೆಗಳು ಈವರೆಗೆ ಜಿಲ್ಲೆಯಲ್ಲಿ ಶೋಧವಾಗಿದ್ದು ಹೆಚ್ಚಿನ ನೆಲೆಗಳು ಮೂಗನಾಯ್ಕನಕೋಟೆ ಪರಿಸರದಲ್ಲಿ ಕೇಂದ್ರೀಕೃತವಾಗಿದ್ದು ಸಾಂಸ್ಕೃತಿಕ ಅನುಪೂರ್ವಿಯ ನೆಲೆಗಳಲ್ಲಿಯೇ ಈ ಸಂಸ್ಕೃತಿಯು ಮುಂದುವರಿದಿದ್ದು ಉತ್ತರ ಮತ್ತು ಪೂರ್ವಭಾಗಗಳಿಗೆ ಪ್ರಸರಣ ಹೊಂದಿರುವುದು ಕಂಡುಬರುತ್ತದೆ. ಇಲ್ಲಿ ಹೆಚ್ಚು ಸಂಖ್ಯೆಯ ಉಪಕರಣಗಳು ದೊರೆತಿರುವುದರಿಂದ ಜನಸಂಖ್ಯೆಯು ಹೆಚ್ಚಾಗಿದ್ದಿರಬಹುದೆಂಬ ಅಭಿಪ್ರಾಯವಿದೆ. ಈ ಸಂಸ್ಕೃತಿಗೆ ಸೇರಿದ್ದೆಂದು ಹೇಳಲಾದ ಒಟ್ಟು ೬೯೭ ವಿವಿಧ ಉಪಕರಣಗಳು ಪತ್ತೆಯಾಗಿವೆ. ಈ ಉಪಕರಣಗಳನ್ನು ಅಲಗಿನ ಉಪಕರಣ, ಅಲಗಿಲ್ಲದ ಉಪಕರಣ, ಸಂಯುಕ್ತ ಉಪಕರಣ ಎಂದು ವರ್ಗೀಕರಿಸಬಹುದಾಗಿದ್ದು, ಇವುಗಳಲ್ಲಿ ನೀಳಚಕ್ಕೆ, ಹೆರೆಚಕ್ಕೆ, ಮೊನೆಮಾದರಿಗಳು, ಕೊರಗೆ, ಕೊರೆಯುಳಿ, ಅರ್ಧಚಂದ್ರಾಕೃತಿ ಮತ್ತು ಬಾಣದ ಮೊನೆ ಮಾದರಿ ಉಪಕರಣಗಳಿರುವುದು ಕಂಡು ಬಂದಿದೆ.

ಈ ಹಂತದ ಉಪಕರಣಗಳು ಮುಖ್ಯವಾಗಿ ಚಕ್ಕೆ ಉಪಕರಣಗಳಾಗಿದ್ದು ಗಾತ್ರ ಆಕಾರ ಮತ್ತು ವಿವಿಧತೆಯಲ್ಲಿ ಹೆಚ್ಚಿನ ಸೂಕ್ಷ್ಮತೆ ಇರುವುದು ಕಂಡುಬರುತ್ತದೆ. ಚಕ್ಕೆ ಎಬ್ಬಿಸುವ ತಾಂತ್ರಿಕತೆ ಮುಂದುವರಿದು ಅದರಲ್ಲಿಯೂ ಸೂಕ್ಷ್ಮತೆಯನ್ನು ರೂಪಿಸಲು ವ್ಯಕ್ಷಸ್ಥಳ ಒತ್ತಡ, ಪರೋಕ್ಷ ಒತ್ತಡ ಮತ್ತು ನೇರ ಒತ್ತಡಗಳ ತಂತ್ರಜ್ಞಾನ ಬಳಕೆಯಾಗಿದೆ. ಈ ಸಂಸ್ಕೃತಿಯ ಬಹುಮುಖ್ಯ ನೆಲೆಗಳೆಂದರೆ ಗುಬ್ಬಿ ತಾಲೂಕಿನ ಅದಲಗೆರೆ, ಅಪ್ಪಾನಹಳ್ಳಿ, ಊನಗನಾಲ, ಓಬಳಾಪುರ, ಕಾರೇಕುರ್ಚಿ, ಗಳಿಗೆಕೆರೆ, ತ್ಯಾಗಟೂರು, ತಿಪ್ಪಸಂದ್ರ, ಬಣ್ಣಿಗಾನಹಳ್ಳಿ, ಬೋಗಸಂದ್ರ, ಬಂಡನಹಳ್ಳಿ, ಮಾರಶೆಟ್ಟಿಹಳ್ಳಿ, ಮುದಿಪುರ, ಮೂಗನಾಯ್ಕನಕೋಟೆ, ಮಂಚಲದೊರೆ, ಯಲ್ಲಾಪುರ, ಯಕ್ಕಲಕಟ್ಟೆ, ಕೈಮರ, ವೀರಾಪುರ, ಸಾರನಕೋಟೆ, ಹೂವಿನಕಟ್ಟೆ, ಹೊಸಕೆರೆ, ಶಿವಪುರ; ಚಿಕ್ಕನಾಯ್ಕನಹಳ್ಳಿ ತಾಲೂಕಿನ ಅಂಕನಬಾವಿ, ಸಾಲ್ಕಟ್ಟೆ, ಹೊಸಹಳ್ಳಿ; ಮಧುಗಿರಿ ತಾಲೂಕಿನ ಅವರ್ಗಲ್ಲು, ಗುಟ್ಟೆ, ಮಿಡಿಗೇಶಿ; ಕೊರಟಗೆರೆ ತಾಲೂಕಿನ ಇರಕಸಂದ್ರ ಕಾಲೋನಿ, ಗೊಲ್ಲರಹಟ್ಟಿ; ತಿಪಟೂರು ತಾಲೂಕಿನ ಕರಡಿ, ಬೊಮ್ಮೆನಹಳ್ಳಿ, ಸಿಡ್ಲೆಹಳ್ಳಿ, ಹರೇನಹಳ್ಳಿ, ಹೊನ್ನೇಮಾರನಹಳ್ಳಿ, ಶೆಟ್ಟಿಹಳ್ಳಿ; ತುಮಕೂರು ತಾಲೂಕಿನ ಢಣಾಕಪುರ; ಪಾವಗಡ ತಾಲ್ಲೂಕಿನ ನಾಗಲಾಪುರ, ನಿಡಗಲ್ಲು ಮತ್ತು ವೈ.ಎನ್.ಹೊಸಕೋಟೆ.

**ಸೂಕ್ಷ್ಮ ಶಿಲಾಯುಗ ಸಂಸ್ಕೃತಿ:** ಈ ಸಂಸ್ಕೃತಿಯ ಒಟ್ಟು ೬೬ ನೆಲೆಗಳು ಜಿಲ್ಲೆಯಲ್ಲಿ ಕಂಡು ಬಂದಿದ್ದು ಇವುಗಳಿರುವ ಪರಿಸರ ಅಲ್ಲಿ ದೊರೆತಿರುವ ಉಪಕರಣದ ವೈವಿಧ್ಯಗಳನ್ನು ಆಧರಿಸಿ ಈ ನೆಲೆಗಳನ್ನು ಅನುಪೂರ್ವಿ ಹಾಗೂ ಮುಂದಿನ ಸಾಂಸ್ಕೃತಿಕ ಹಂತಗಳೊಂದಿಗಿರುವ ನೆಲೆಗಳು, ಮತ್ತು ಸ್ವತಂತ್ರವಾಗಿರುವಂತಹ ನೆಲೆಗಳು ಎಂದು ವಿಭಜಿಸಬಹುದು. ಹಲವಾರು ದೃಷ್ಟಿಕೋನಗಳನ್ನಿಟ್ಟುಕೊಂಡು ಈ ಪ್ರದೇಶದ ಒಟ್ಟು ನೆಲೆಗಳು ಒಂದೇ ಕಾಲಮಾನದಲ್ಲಿ ಪ್ರಬುದ್ಧವಾಗಿರದೆ ವಿವಿಧ ಕಾಲಮಾನಗಳಲ್ಲಿ ಪ್ರಚುರವಾಗಿದ್ದಿರಬೇಕೆಂದು ಅಭಿಪ್ರಾಯ ಪಡಲಾಗಿದೆ. ಹೀಗಾಗಿ ದೊರೆತಿರುವ ಒಟ್ಟು ೬೬ ನೆಲೆಗಳನ್ನು ವಿಭಜಿಸುವಲ್ಲಿ ಮೊದಲನೆ ಹಂತದ ನೆಲೆಗಳು, ಹಳೆಶಿಲಾಯುಗ ಸಂಸ್ಕೃತಿಯ ನೆಲೆಗಳು ದೊರೆತಿರುವ ನೆಲೆಗಳ ಜೊತೆಗಿದ್ದು ಇವುಗಳನ್ನು ಕಾಲಮಾನದಂತೆ ಮೊದಲನೇ ಹಂತದ ನೆಲೆಗಳೆಂದು ಹೇಳಬಹುದು. ಇಂತಹ ಒಟ್ಟು ೩೮ ನೆಲೆಗಳಿಗೆ. ಅದೇ ರೀತಿ ಕೇವಲ ಮೂರು ನೆಲೆಗಳು ಯಾವುದೇ ಸಾಂಸ್ಕೃತಿಕ ಹಂತದ ನೆಲೆಗಳೊಂದಿಗಿರದೆ ಸ್ವತಂತ್ರವಾಗಿದ್ದು ಇವುಗಳನ್ನು ಎರಡನೇ ಹಂತದ ನೆಲೆಗಳೆಂದು ಗುರ್ತಿಸಬಹುದು. ಅದೇ ರೀತಿ ಈ ಸಂಸ್ಕೃತಿಯಿಂದ ಆರಂಭವಾಗಿ ಮುಂದಿನ ಸಾಂಸ್ಕೃತಿಕ ಹಂತಗಳ (ನೂತನ ಮತ್ತು ಬೃಹತ್) ಜೊತೆಗಿದ್ದು ಒಟ್ಟು ೨೫ ನೆಲೆಗಳು ಇರುವುದು ತಿಳಿಯುತ್ತದೆ. ಈ ಸಂಸ್ಕೃತಿಯ ಒಟ್ಟು ೧೮೬೩ ಉಪಕರಣಗಳಲ್ಲಿ ಮೊದಲ ಹಂತಕ್ಕೆ ೧೩೩೭, ಎರಡನೆ ಹಂತಕ್ಕೆ ೧೮, ಮೂರನೇ ಹಂತಕ್ಕೆ ೫೦೮ ಸೇರಿವೆ. ಉಪಕರಣ ವೈವಿಧ್ಯದಂತೆ ನೀಳಚಕ್ಕೆ ಮಾದರಿ ೮೦೬, ಹೆರೆಚಕ್ಕೆ ಮಾದರಿ ೪೪೬, ಮೊನೆ ಮಾದರಿ ೨೯೦, ಬಾಣದ ಮೊನೆ ೮೭, ಕೊರಗ ೫೦, ಕೊರೆಯುಳಿ ೨೪, ಅರ್ಧ ಚಂದ್ರಾಕೃತಿ ೬೧, ದಬ್ಬಳ ೩೩, ಮತ್ತು ಮೂಲ ಶಿಲಾಗಟ್ಟಿ ೪೬೬ ಎಂದು ವಿಂಗಡಿಸಬಹುದು. ಈ ಕಾಲಮಾನದಲ್ಲಿ ಅಲಗು, ಅಲಗಿಲ್ಲದ ಮತ್ತು ಸಂಯುಕ್ತ ಉಪಕರಣಗಳನ್ನೇ ಹೆಚ್ಚಾಗಿ ರೂಪಿಸಿರುವುದು ಕಂಡುಬರುತ್ತದೆ. ಈ ಸಂಸ್ಕೃತಿಗೆ ಸೇರಿದ ನೆಲೆಗಳು ಹೆಚ್ಚು ಸಂಖ್ಯೆಯಲ್ಲಿರಲು ಕಾರಣ, ಆ ಕಾಲಮಾನದಲ್ಲಾದ ಜನಸಂಖ್ಯೆಯ ಹೆಚ್ಚಳ; ಪರಿಸರದಲ್ಲಿ ಮತ್ತು ಪ್ರಾಣಿ ಸಂಕುಲದಲ್ಲಾದ ಬದಲಾವಣೆ. ಅದೇ ರೀತಿ ಭವಿಷ್ಯದ ಕೃಷಿಜೀವನಕ್ಕೆ ಹೊಂದಿಕೊಳ್ಳಲು ಸಹಾಯಕವಾಗುವಂತೆ ಜೀವನಕ್ರಮದಲ್ಲೂ ಮಾರ್ಪಾಟು ಮಾಡಿಕೊಂಡಂತೆ ತೋರುತ್ತದೆ.

**ನೂತನ ಶಿಲಾಯುಗ ಸಂಸ್ಕೃತಿ:** ಕೆಲವೇ ಸಾವಿರ ವರ್ಷಗಳ ಹಿಂದೆ ಮಾನವ ಕೃಷಿಯಲ್ಲಿ ತೊಡಗಿ ಒಂದುಕಡೆ ನೆಲೆ ನಿಂತು ಪಶುಸಂಗೋಪನೆ ಮೊದಲಾದ ನಿರ್ದಿಷ್ಟ ಕಾರ್ಯಗಳಲ್ಲಿ ತೊಡಗಿ, ಉಜ್ಜಿ ನಯಗೊಳಿಸಿದ ಉಪಕರಣಗಳನ್ನು ರೂಪಿಸಿಕೊಂಡಂತಹ ಸಾಂಸ್ಕೃತಿಕ ಹಂತವೇ ನೂತನ ಶಿಲಾಯುಗ ಸಂಸ್ಕೃತಿ. ಈ ಸಂಸ್ಕೃತಿಯ ನೆಲೆಗಳು ಪ್ರಾದೇಶಿಕ ವಿಭಿನ್ನತೆಯನ್ನು ಹೊಂದಿದ್ದು ದೇಶದ ವಿವಿಧ ಭಾಗಗಳಲ್ಲಿ ಇರುವುದು ಕಂಡು ಬರುತ್ತದೆ. ಈ ಜಿಲ್ಲಾ ಪ್ರದೇಶದಲ್ಲಿ ಒಟ್ಟು ೩೧ ನೆಲೆಗಳು ದೊರೆತಿದ್ದು ೨೨ ನೆಲೆಗಳಲ್ಲಿ ವಿವಿಧ ಶಿಲೋಪಕರಣಗಳು ದೊರೆತರೆ, ನಾಲ್ಕು ನೆಲೆಗಳಲ್ಲಿ ಮೃತ್ಪಾತ್ರೆ(ಮಣ್ಣಿನ ಪಾತ್ರೆ) ಮಾತ್ರ ದೊರೆತಿದೆ. ಇನ್ನುಳಿದ ಐದು ನೆಲೆಗಳಲ್ಲಿ ಉಪಕರಣಗಳ ಜೊತೆಯಲ್ಲಿ ಮೃತ್ಪಾತ್ರೆಗಳೂ ದೊರಕಿದ್ದು ಇವನ್ನು ಸಮೃದ್ಧವಾದ ವಾಸ್ತವ್ಯ ನೆಲೆಗಳೆಂದು ಗುರ್ತಿಸಬಹುದಾಗಿದೆ. ಇಲ್ಲಿನ ನೆಲೆಗಳಲ್ಲಿ ವಿಶಿಷ್ಟ ಶಿಲೋಪಕರಣಗಳ ಜೊತೆಗೆ ಮೃತ್ಪಾತ್ರೆಯ ಭಾಗಗಳೂ ಹಾಗೂ ಬೂದಿದಿಬ್ಬಗಳೂ ದೊರೆತಿವೆ. ಈ ನೆಲೆಗಳು ವಿಶೇಷವಾಗಿ ಜಿಲ್ಲೆಯ ಉತ್ತರದ ಬೆಟ್ಟಸಾಲಿನ ಪ್ರದೇಶಗಳನ್ನೊಳಗೊಂಡ ಪೆನ್ನಾರ್ ನದಿಪಾತ್ರಕ್ಕೆ ಸೇರುವ ಪಾವಗಡ, ಮಧುಗಿರಿ, ಕೊರಟಗೆರೆ ಮತ್ತು ತುಮಕೂರು ತಾಲೂಕುಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿವೆ. ಈ ಜಿಲ್ಲೆಯ ದಕ್ಷಿಣ ಭಾಗದ ಶಿಂಷಾನದಿ ಪಾತ್ರದ ಉಳಿದ ಭಾಗಗಳಲ್ಲಿಯೂ ಅಲ್ಲೊಂದು ಇಲ್ಲೊಂದು ಎನ್ನುವಂತೆ ಬಿಡಿ ಉಪಕರಣಗಳು ದೊರೆತಿದ್ದು ಈ ಸಂಸ್ಕೃತಿಯು ಉತ್ತರದಿಂದ ದಕ್ಷಿಣಕ್ಕೆ ಅಲ್ಪ ಪ್ರಮಾಣದಲ್ಲಿ ಪ್ರಸರಣವಾಗಿರುವ ಸೂಚನೆಯನ್ನು ನೀಡುತ್ತದೆ. ಈ ಪ್ರದೇಶದ ನೆಲೆಗಳಿರುವ ಬಹಳಷ್ಟು ಸ್ಥಳಗಳನ್ನು ಕೃಷಿಗೆ ಬಳಸಿರುವುದರಿಂದ ಹೆಚ್ಚಿನ ಅವಶೇಷಗಳು ಕಣ್ಮರೆಯಾಗುತ್ತಿವೆ.

**ಬೃಹತ್ ಶಿಲಾಯುಗ ಸಂಸ್ಕೃತಿ**: ಈ ಜಿಲ್ಲೆಯಲ್ಲಿ ಬೃಹತ್ ಶಿಲಾಯುಗ ಸಂಸ್ಕೃತಿಯನ್ನು ಪ್ರಥಮವಾಗಿ ಶೋಧಿಸಿದ ಕೀರ್ತಿ ಬಿ.ಎಲ್.ರೈಸ್‌ಗೆ ಸಲ್ಲುತ್ತದೆ. ಅವರು ೧೮೯೨–೯೩ರಲ್ಲಿ ಬೆಳ್ಳಿಬಟ್ಟಲು ಗ್ರಾಮದಲ್ಲಿ ಕೆಲವು ಗೋರಿನೆಲೆಗಳನ್ನು ಪತ್ತೆಹಚ್ಚಿದ್ದಾರೆ. ೧೯೦೬ರಲ್ಲಿ ಹೆಚ್.ಕೆ.ಸ್ಲೇಟ್ ತಿಪಟೂರು ತಾಲೂಕಿನ ಕೇರಳಕಟ್ಟೆಯಲ್ಲಿ ದೊರೆತ ಗೋರಿನೆಲೆಗಳ ಬಗೆಗೆ ದಾಖಲಿಸಿದ್ದಾರೆ. ಹಿರೇಗುಂಡಗಲ್ಲು ಪ್ರದೇಶದ ನೆಲೆಯನ್ನು ೧೯೭೮ರಲ್ಲಿ ಕೆ.ವಿ.ರಾವ್ ಪತ್ತೆಹಚ್ಚಿದ್ದಾರೆ. ಇವುಗಳಲ್ಲದೆ ಇತ್ತೀಚಿನ ಸಂಶೋಧನೆಗಳ ಫಲವಾಗಿ ಈ ಜಿಲ್ಲೆಯಲ್ಲಿ ಒಟ್ಟು ೩೮ ನೆಲೆಗಳು ಶೋಧವಾಗಿದ್ದು, ಅವುಗಳಲ್ಲಿ ೨೧ ಗೋರಿನೆಲೆಗಳಾಗಿದ್ದು ೧೭ ವಸತಿ ನೆಲೆಗಳಾಗಿವೆ. ಇದರ ಪೈಕಿ ೧೮ ನೆಲೆಗಳು ನೂತನ ಶಿಲಾಯುಗ ಸಂಸ್ಕೃತಿಯೊಂದಿಗಿದ್ದು ಉಳಿದ ೨೦ ನೆಲೆಗಳು ಆ ಕಾಲಮಾನದಲ್ಲೇ ಸಮೃದ್ಧವಾಗಿರುವುದು ಕಂಡು ಬರುತ್ತದೆ. ಕೊರಟಗೆರೆ ತಾಲೂಕಿನ ಇರಕಸಂದ್ರ ಕಾಲೋನಿ ಮತ್ತು ಮಧುಗಿರಿ ತಾಲೂಕಿನ ಕತ್ತಿರಾಜನಹಳ್ಳಿಗಳಲ್ಲಿ ವಿವಿಧ ಮಾದರಿಯ ಶಿಲಾಗೋರಿಗಳು ಹೆಚ್ಚು ಸಂಖ್ಯೆಯಲ್ಲಿ ಕಂಡುಬಂದಿವೆ.

ಜಿಲ್ಲೆಯಲ್ಲಿ ಈವರೆಗೆ ೨೨೩ ಗೋರಿಗಳು ಪತ್ತೆಯಾಗಿದ್ದು ಅವುಗಳ ರಚನಾ ವಿಧಾನ ತಳವಿನ್ಯಾಸ ಮತ್ತು ಇನ್ನಿತರ ಅಂಶಗಳನ್ವಯ ಅವುಗಳನ್ನು ಕಲ್ಗುಪ್ಪೆ, ಕಲ್ಲುವೃತ್ತ, ಕಲ್ಮನೆ ಮತ್ತು ವಸತಿ ನೆಲೆ ಎಂದು ನಾಲ್ಕು ಗುಂಪಾಗಿ ವಿಂಗಡಿಸಬಹುದು. ಏಳು ನೆಲೆಯಲ್ಲಿ ಒಟ್ಟು ೬೯ ಕಲ್ಗುಪ್ಪೆಗಳನ್ನು ವಿದ್ವಾಂಸರು ಪತ್ತೆಹಚ್ಚಿದ್ದು ಇರಕಸಂದ್ರ ಕಾಲೋನಿ, ಸೀಗೆಪಾಳ್ಯ, ಕತ್ತಿರಾಜನಹಳ್ಳಿಯಲ್ಲಿ ಹೆಚ್ಚಿನ ಅವಶೇಷಗಳಿವೆ. ಕಲ್ಲುವೃತ್ತ ಗೋರಿಗಳನ್ನು ಗುಂಡುಗಲ್ಲು ವೃತ್ತ ಮತ್ತು ಚಪ್ಪಡಿಕಲ್ಲು ವೃತ್ತ ಮಾದರಿಯ ಗೋರಿಗಳೆಂದು ವಿಂಗಡಿಸಲಾಗಿದೆ. ೧೫ ನೆಲೆಗಳಲ್ಲಿ ಒಟ್ಟು ೮೯ ಗುಂಡುಕಲ್ಲು ವೃತ್ತಗಳು ಪತ್ತೆಯಾಗಿದ್ದು, ಚಿನವಾರ, ಬೆಳ್ಳಿಬಟ್ಟಲು, ಮರಿದಾಸನಹಳ್ಳಿ, ಕತ್ತಿರಾಜನಹಳ್ಳಿ, ಥರಟಿ ಮೊದಲಾದವು ಪ್ರಮುಖ ನೆಲೆಗಳಾಗಿವೆ. ಚಪ್ಪಡಿಕಲ್ಲು ವೃತ್ತದ ಒಟ್ಟು ಮೂರು ನೆಲೆಗಳಲ್ಲಿ ೪೪ ಅವಶೇಷಗಳು ಶೋಧಿಸಲ್ಪಟ್ಟಿದೆ. ಅವುಗಳಲ್ಲಿ ಕತ್ತಿರಾಜನಹಳ್ಳಿಯಲ್ಲಿ ೨೬, ಸೀಗೆಪಾಳ್ಯದಲ್ಲಿ ನಾಲ್ಕು ಮತ್ತು ಇರಕಸಂದ್ರ ಕಾಲೋನಿಯಲ್ಲಿ ೧೪ ಲಭಿಸಿವೆ. ಇವುಗಳಲ್ಲಿ ಹಲವು ಸುಸ್ಥಿತಿಯಲ್ಲಿದ್ದು ಕೆಲವು ಹಾಳಾಗಿವೆ. ಕಲ್ಮನೆ ಮಾದರಿಯ ಒಟ್ಟು ೧೩ ಸಮಾಧಿಗಳು ದೊರೆತಿದ್ದು ಅವುಗಳಲ್ಲಿ ಕಲ್ಗುಪ್ಪೆ, ಶವಕುಳಿ, ಮತ್ತು ನಿಲಸುಗಲ್ಲುಗಳೂ ಇವೆ. ಕತ್ತಿರಾಜನಹಳ್ಳಿ ಮತ್ತು ಇರಕಸಂದ್ರ ಕಾಲೋನಿಗಳಲ್ಲಿ ಈ ಮೂರು ಮಾದರಿಗಳು ಕಂಡು ಬಂದಿವೆ. ಆದರೆ ಹೊನ್ನೇನಹಳ್ಳಿಯ ನೆಲೆಯಲ್ಲಿ ಕಲ್ಗುಪ್ಪೆ ಮತ್ತು ಶವಕುಳಿ ಮಾತ್ರ ಇದೆ. ಈ ೧೩ ಕಲ್ಮನೆ ಮಾದರಿಗಳಲ್ಲಿ ನಾಲ್ಕು, ಭೂಮಿಯ ಮೇಲ್ಭಾಗದಲ್ಲಿದ್ದರೆ, ಉಳಿದವು ಭೂಮಿಯ ಒಳಭಾಗದಲ್ಲಿವೆ.

ಕೊರಟಗೆರೆ, ಮಧುಗಿರಿ ಮತ್ತು ತುಮಕೂರು ತಾಲೂಕುಗಳಲ್ಲಿನ ಅಗ್ರಹಾರ, ಇರಕಸಂದ್ರ ಕಾಲೋನಿ, ಕತ್ತಿರಾಜನಹಳ್ಳಿ, ಗೌಡನಕಟ್ಟೆ, ಚಿನಗ ಹಾಗೂ ಸೀಗೆಹಳ್ಳಿಗಳಲ್ಲಿ ಒಟ್ಟು ೧೦ ನಿಲಸುಗಲ್ಲುಗಳನ್ನು ವಿದ್ವಾಂಸರು ಈಗಾಗಲೇ ಪತ್ತೆಹಚ್ಚಿದ್ದಾರೆ. ಇವುಗಳಲ್ಲಿ ಅಗ್ರಹಾರ ನೆಲೆಯ ಮೂರು ನಿಲಸುಗಲ್ಲುಗಳು ಇತರ ಯಾವುದೇ ಸಮಾಧಿಗಳೊಂದಿಗೆ ಸೇರದೆ

ಸ್ವತಂತ್ರವಾಗಿದ್ದರೆ ಉಳಿದ ಹೆಚ್ಚಿನ ಸ್ಥಳಗಳಲ್ಲಿ ಶಿಲಾವೃತ್ತಗಳೊಂದಿಗೆ ಇವೆ. ಬೃಹತ್ ಶಿಲಾಯುಗ ಸಂಸ್ಕೃತಿಯ ವಸತಿ ನೆಲೆಗೆ ಸಂಬಂಧಿಸಿದಂತೆ ಜಿಲ್ಲೆಯಲ್ಲಿ ಈವರೆಗೆ ಹದಿನೇಳು ನಿವೇಶನಗಳು ಬೆಳಕಿಗೆ ಬಂದಿವೆ. ಸಾಮಾನ್ಯವಾಗಿ ನಿವೇಶನ ನೆಲೆಗಳು ಬೆಟ್ಟದ ತಪ್ಪಲು ಮತ್ತು ಮೈದಾನ ಪ್ರದೇಶಗಳಲ್ಲಿದ್ದರೆ, ಇಲ್ಲಿ ಹೆಚ್ಚಿನ ನಿವೇಶನಗಳು ಕೃಷಿ ಭೂಮಿಯಲ್ಲಿದ್ದು ಹಾಳಾಗಿವೆ. ಉಳಿದಿರುವ ಅವಶೇಷಗಳ ಆಧಾರದ ಮೇಲೆ ಇವು ೧.೫ ಎಕರೆಯಿಂದ ೨.೫ ಹೆಕ್ಟೇರ್ ಪ್ರದೇಶದಲ್ಲಿ ನೆಲೆಗೊಂಡಿವೆ. ಇವುಗಳನ್ನು ನಾವು ಕೊರಟಗೆರೆ, ಮಧುಗಿರಿ ಮತ್ತು ಪಾವಗಡ ತಾಲೂಕುಗಳಲ್ಲಿ ಕಾಣಬಹುದು. ಖನಿಜಗಳ ದೃಷ್ಟಿಯಿಂದ ಈ ವಸತಿ ನಿವೇಶನಗಳಲ್ಲಿ ಕೇವಲ ಎರಡರಲ್ಲಿ ಮಾತ್ರ ಕಬ್ಬಿಣವನ್ನು ಬೇರ್ಪಡಿಸಿದ ಮೇಲೆ ಉಳಿಯುವ ಕಿಟ್ಟದ ಅವಶೇಷಗಳು ಬೆಳಕಿಗೆ ಬಂದಿವೆ. ಈ ಕುರುಹುಗಳು ಕಂಡು ಬಂದಿರುವ ರಾಚಮಾರನಹಳ್ಳಿ ಮತ್ತು ವೈ. ಎನ್.ಹೊಸಕೋಟೆ ನಿವೇಶನಗಳು ಬಹುಶಃ ದೀರ್ಘಕಾಲೀನ ಗಣಿಗಾರಿಕೆಗೆ ಉಪಯುಕ್ತವಾಗುವಂತಹ ಪ್ರಮಾಣದಲ್ಲಿ ಖನಿಜವನ್ನು ಹೊಂದಿರದೆ ಕೇವಲ ಭೂಮಿಯ ಮೇಲ್ಪದರದಲ್ಲಿ ಖನಿಜಾಂಶವನ್ನು ಹೊಂದಿದ್ದು ಕಂಡು ಬರುತ್ತದೆ. ಈ ಬೃಹತ್ ಶಿಲಾಗೋರಿಗಳನ್ನು ಸ್ಥಳೀಯರು "ಮೋರ್‍ಯರ ಗುಡಿ" "ಮೋರ್‍ಯರ ಮನೆ" "ಪಾಂಡವರ ಮನೆ" "ಭಸ್ಮದ ಕಟ್ಟೆ" "ಮುನಿವಾಸದ ಗುಹೆ" "ಪಾಂಡವರ ಕಲ್ಲು" ಮುಂತಾಗಿ ಕರೆಯುತ್ತಾರೆ.

**ಇತಿಹಾಸಾರಂಭ ಕಾಲ:** ಈ ಪ್ರದೇಶದಲ್ಲಿ ಇತಿಹಾಸಾರಂಭ ಕಾಲದ ಅವಶೇಷಗಳನ್ನು ಸಂಶೋಧಕರು ಇತ್ತೀಚೆಗೆ ಶೋಧಿಸಿದ್ದು ಆ ಕಾಲಮಾನಕ್ಕೆ ಸೇರಿದ ಮೃತ್ಪಾತ್ರೆಗಳು ೧೯ ನೆಲೆಗಳಲ್ಲಿ ಪತ್ತೆಯಾಗಿವೆ. ಇವು ಕೆಂಪು ವರ್ಣ, ಕೆಂಪು ಲೇಪನದಡಿ ಬಿಳಿವರ್ಣದ ಚಿತ್ರಿತ ಕಪ್ಪು–ಕೆಂಪು ವರ್ಣದ ಮೃತ್ಪಾತ್ರೆಗಳಾಗಿವೆ. ಇದರ ಜೊತೆಯಲ್ಲಿ ಸುಡಾವೆ ಮಣ್ಣಿನ ಮತ್ತು ಗಾಜಿನಲ್ಲಿ ರೂಪಿಸಿದ ವಿವಿಧ ಆಕಾರದ ಮಣಿಗಳು ಕಂಡು ಬಂದಿವೆ. ಇವುಗಳ ಅಧ್ಯಯನದಿಂದ ಈ ಜಿಲ್ಲೆಯ ರಾಚಮಾರನಹಳ್ಳಿ, ಯಲ್ಲಪ್ಪನಾಯಕನ ಹೊಸಕೋಟೆ, ಯಲ್ಲಪ್ಪನಾಯಕನಹಳ್ಳಿ (ಪಾವಗಡ ತಾಲೂಕು) ಹೊಳೆಕಲ್ಲುಬೆಟ್ಟ (ಶಿರಾ ತಾಲೂಕು) ಬೆಟ್ಟದಹಳ್ಳಿ (ಗುಬ್ಬಿ ತಾಲೂಕು) ಮುಂತಾದ ಸ್ಥಳಗಳು ಇತಿಹಾಸಾರಂಭ ಕಾಲದ ನೆಲೆಗಳಾಗಿದ್ದ ಅಂಶ ವೇದ್ಯವಾಗುತ್ತದೆ.

ಈ ಜಿಲ್ಲೆಯ ಇತಿಹಾಸದ ಪುಟಗಳನ್ನು ಅವಲೋಕಿಸಿದರೆ, ಭಾರತದ ಮೊದಲ ಐತಿಹಾಸಿಕ ಸಾಮ್ರಾಜ್ಯವೆನಿಸಿದ ಮೌರ್‍ಯರ ದಾಖಲೆಗಳಾಗಲಿ ಅಥವಾ ಅವರ ನಂತರ ದಕ್ಷಿಣದಲ್ಲಿ ಆಳ್ವಿಕೆ ನಡೆಸಿದ ಶಾತವಾಹನರ ಕಾಲದ ದಾಖಲೆಗಳಾಗಲೀ, ಅವಶೇಷಗಳಾಗಲೀ ಇದುವರೆಗೂ ಜಿಲ್ಲೆಯಲ್ಲಿ ದೊರೆತಿಲ್ಲ. ಆದರೂ ಈ ಪ್ರದೇಶ ಆ ರಾಜಮನೆತನಗಳ ಆಳ್ವಿಕೆಗೆ ಒಳಪಟ್ಟಿತ್ತೆಂದು ಪರೋಕ್ಷವಾಗಿ ಹೇಳಬಹುದು. ಮೌರ್ಯ ಸಾಮ್ರಾಜ್ಯದ ಸ್ಥಾಪಕನಾದ ಚಂದ್ರಗುಪ್ತ ಮೌರ್ಯ ತನ್ನ ಕೊನೆಯ ದಿನಗಳನ್ನು ಹಾಸನ ಜಿಲ್ಲೆಯ ಶ್ರವಣಬೆಳಗೊಳದಲ್ಲಿ ಕಳೆದನೆಂದೂ ಹೇಳಲಾಗಿರುವುದರಿಂದ ಆ ಪ್ರದೇಶ ತುಮಕೂರು ಜಿಲ್ಲೆಯ ದಕ್ಷಿಣ–ಪಶ್ಚಿಮ ಗಡಿಯಲ್ಲಿರುವುದರಿಂದ ಈ ಜಿಲ್ಲೆಯೂ ಕೂಡ ಮೌರ್ಯರ ಆಳ್ವಿಕೆಯಲ್ಲಿತ್ತೆನ್ನಬಹುದು. ಚಂದ್ರಗುಪ್ತ ಮೌರ್ಯನ ಮಗ ಅಶೋಕನ ಶಿಲಾಶಾಸನಗಳು ತುಮಕೂರು ಜಿಲ್ಲೆಯ ಉತ್ತರದ ಗಡಿಯಲ್ಲಿನ ನೆರೆಯ ಚಿತ್ರದುರ್ಗ ಜಿಲ್ಲೆಯ ಬ್ರಹ್ಮಗಿರಿ, ಸಿದ್ಧಾಪುರ, ಜಟಿಂಗ ರಾಮೇಶ್ವರದಲ್ಲಿ ದೊರೆತಿರುವುದರಿಂದ ಈ ಪ್ರದೇಶವು ಮೌರ್‍ಯಾಡಳಿತಕ್ಕೊಳಪಟ್ಟಿತ್ತೆಂದು ಹೇಳಬಹುದು.

**ಕದಂಬರು:** ಕರ್ನಾಟಕದ ಮೊದಲ ರಾಜಮನೆತನವಾದ ಕದಂಬ ರಾಜ್ಯವು ಬನವಾಸಿಯಲ್ಲಿ ಕ್ರಿ.ಶ.೩೨೫ರಲ್ಲಿ ಮಯೂರವರ್ಮನಿಂದ ಸ್ಥಾಪನೆಯಾಯಿತು. ಬನವಾಸಿಯು ಅವರ ಮೂಲ ರಾಜಧಾನಿ ಆಗಿದ್ದರೂ, ಅವರ ಮತ್ತೊಂದು ರಾಜಧಾನಿ ಮೊಳಕಾಲ್ಮೂರಿನ ಸಮೀಪವಿರುವ ಉಚ್ಚಶೃಂಗಿ ಅಥವಾ ಉಚ್ಚಂಗಿ ಈ ಜಿಲ್ಲೆಗೆ ಸಮೀಪದಲ್ಲೇ ಇದೆ. ಅಲ್ಲದೆ, ಚಂದ್ರವಳ್ಳಿ ಶಾಸನದಿಂದ, ಅಲ್ಲಿನ ಕೆರೆಯನ್ನು ಮಯೂರವರ್ಮನು ಜೀರ್ಣೋದ್ಧಾರ ಮಾಡಿಸಿದನೆಂದು ತರ್ಕಿಸಬಹುದಾಗಿದೆ. ಕದಂಬರ ನಿಯಂತ್ರಣದಲ್ಲಿ ಈ ಜಿಲ್ಲೆಯ ಕೆಲವು ಪ್ರದೇಶಗಳಾದರೂ ಇದ್ದಿರಬಹುದೆಂದು ಊಹಿಸಬಹುದಾಗಿದೆ. ಇತ್ತೀಚೆಗೆ ಪತ್ತೆಯಾಗಿರುವ ಕದಂಬ ಕೃಷ್ಣವರ್ಮನ ಕಾಲದ ಕೋಡಿನಾಗೇನಹಳ್ಳಿ ತಾಮ್ರಶಾಸನ, "ಕದಂಬ ವಂಶದ ಮಾನವ್ಯ ಗೋತ್ರದ ವಿಕ್ರಮಾದಿತ್ಯನು ಅಶ್ವಮೇಧಯಾಗವನ್ನು ಮಾಡಿದ ಪುರುಷೋತ್ತಮನೆಂದು ದಾಖಲಿಸಿದೆ. ಈತನ ಅಗ್ರಪಟ್ಟ ಮಹಿಷಿ ದೇವದೇವಿಯ ಮಗನೇ ಕೃಷ್ಣಶರ್ಮ. ಅವನು ಯುವರಾಜನಾಗಿದ್ದಾಗ ಮರುಗರೆ ನಾಡಿನ ತೇಗಟೂರ್ (ಇಂದಿನ ತ್ಯಾಗಟೂರು) ಸಪ್ತತಿಯ ಪೊಂಕುನ್ನೂರು ಮತ್ತು ಸೀಗೂರ್ ಗ್ರಾಮಗಳನ್ನು ಜಿನೇಂದ್ರನ ಪೂಜೆಗಾಗಿ ಮತ್ತು ಸಂಘದ ಭೋಜನ ವ್ಯವಸ್ಥೆಗಾಗಿ ದಾನ ಕೊಟ್ಟಿರುವುದನ್ನು ತಿಳಿಸುತ್ತದೆ. ಆದರೆ ಬಾಣ ಹಾಗೂ ಶಾತವಾಹನರ ಶಾಸನಗಳಾವೂ ಈ ಜಿಲ್ಲೆಯಲ್ಲಿ ಇದುವರೆಗೂ ದೊರೆತಿಲ್ಲ.

**ತಲಕಾಡಿನ ಗಂಗರು:** ಕರ್ನಾಟಕದ ದಕ್ಷಿಣ ಭಾಗದಲ್ಲಿ ಸುಮಾರು ನಾಲ್ಕನೇ ಶತಮಾನದ ಮಧ್ಯಭಾಗದಿಂದ ಹತ್ತನೇ ಶತಮಾನದ ಕೊನೆಯವರೆಗೆ ಗಂಗರು ಆಳ್ವಿಕೆ ಮಾಡಿದರು. ಈ ಮನೆತನದ ಆರಂಭಿಕ ಅರಸರ ಕಾಲದ ಶಾಸನಗಳು ತಾಮ್ರಶಾಸನಗಳೇ ಆಗಿದ್ದು, ಶ್ರೀವಿಕ್ರಮನಿಂದೀಚೆಗೆ ಶಿಲಾಶಾಸನಗಳು ಕಂಡು ಬರುತ್ತವೆ. ಅವನಿಗಿಂತ ಹಿಂದೆ ಶಿಲಾಶಾಸನಗಳನ್ನು ಹಾಕಿಸಿದ್ದಿರಬಹುದಾದರೂ ಸದ್ಯಕ್ಕೆ ಅವು ಲಭ್ಯವಿಲ್ಲ. ಗಂಗರ ತಾಮ್ರಶಾಸನಗಳ ಕಾಲದ ಬಗ್ಗೆ ವಾದವಿವಾದಗಳಿದ್ದರೂ ವಿಷಯದ ದೃಷ್ಟಿಯಿಂದ ಅವು ಸ್ಥಳೀಯವಾಗಿ ಕೆಲವು ವಿವರವನ್ನು ನೀಡುತ್ತವೆ. ದೊರೆತಿರುವ ಶಿಲಾಶಾಸನಗಳಲ್ಲಿ ಬಹುತೇಕ ಶಾಸನಗಳು ವೀರಗಲ್ಲು ಹಾಗೂ ಕಿರುಶಾಸನಗಳು. ದೊರೆತಿರುವ ಅನೇಕ ಶಾಸನಗಳು ಒಡೆದು ಎರಡು ಮೂರು ತುಂಡಾಗಿ ಬೇರೆ ಬೇರೆಡೆ ಇದ್ದು ಕೆಲವೊಮ್ಮೆ ಪ್ರತ್ಯೇಕ ಶಾಸನಗಳಂತೆ ಪರಿಗಣಿತವಾಗಿರುವುದೂ ಉಂಟು. ಗಂಗರ ಮತ್ತು ಅವರ ಮಾಂಡಲೀಕರ ಸುಮಾರು ೩೫೦ ಶಾಸನಗಳು ಈವರೆಗೆ ರಾಜ್ಯದಲ್ಲಿ ಪತ್ತೆಯಾಗಿವೆ. ಅವುಗಳಲ್ಲಿ ೪೫ ಶಾಸನಗಳು ಜಿಲ್ಲೆಯಲ್ಲಿ ದೊರೆತಿವೆ. ಈ ಭಾಗವು ಗಂಗರ ದಟ್ಟವಾದ ಪ್ರಭಾವಲಯದಲ್ಲಿತ್ತೆಂದು ಇದರಿಂದ ತರ್ಕಿಸಬಹುದು. ಇಲ್ಲಿ ದೊರೆತಿರುವ ಗಂಗರ ಕಾಲದ ಅತಿ ಪ್ರಾಚೀನ ದಾಖಲೆ ಎಂದರೆ ತುಮಕೂರು ನಗರಕ್ಕೆ ಅಂಟಿಕೊಂಡಿರುವ ಮೆಳೇಕೋಟೆಯಲ್ಲಿ ದೊರೆತಿರುವ ತಾಮ್ರಶಾಸನ. ಐದು ಹಲಗೆಗಳಿಂದ ಕೂಡಿದ್ದ ಈ ತಾಮ್ರಶಾಸನದ ಎರಡನೆಯ ಹಲಗೆ ಕಾಣೆಯಾಗಿದೆ. ಗಂಗದೊರೆ ಮಾಧವವರ್ಮನು ಚತುರ್ವೇದಿಗಳ ಸಮ್ಮುಖದಲ್ಲಿ ಮಹಾಪ್ರತಿಹಾರರ ಸಾಕ್ಷಿಯೊಂದಿಗೆ ಬೌದ್ಧ ವಿಹಾರವೊಂದಕ್ಕೆ ರಕ್ತತಟಾಕದ ಕೆಳಭಾಗದಲ್ಲಿದ್ದ ಮೂರು ಖಂಡುಗ ಬಿತ್ತನೆ ಸಾಮರ್ಥ್ಯದ ಭೂಮಿ ಹಾಗೂ ಶ್ಯಾಮಕ ಧಾನ್ಯ ಬೆಳೆಯಲು ಒಟ್ಟು ೩೦ ಖಂಡುಗ ಭೂಮಿಯನ್ನು ಧಾರೆಯೆರೆದು ನೀಡಿದ್ದಾನೆ. ಅಲ್ಲದೆ, ೧೮ ಖಂಡುಗ ಭೂಮಿಯನ್ನು ಶಾಖ್ಯ ಶಿಲೆಯ ಪೂರ್ವಕ್ಕೂ ದಾನ ನೀಡುತ್ತಾನೆ. ಒಟ್ಟಾರೆ ಹೇಳುವುದಾದರೆ ಈ ಶಾಸನದಲ್ಲಿ ಗಂಗ ಎರಡನೇ ಮಾಧವನು ಕ್ರಿ.ಶ.೫ನೇ ಶತಮಾನದಲ್ಲಿ ಬೌದ್ಧವಿಹಾರವೊಂದಕ್ಕೆ ರಕ್ತತಟಾಕ ಮತ್ತು ಶಿಲಾ ತಟಾಕ ಎಂಬ ಎರಡು ಕೆರೆಗಳ ತಳದಲ್ಲಿ ದಾನ ಬಿಟ್ಟ ಗದ್ದೆಯ ವಿವರವಿದೆ. ಈ ಬೌದ್ಧವಿಹಾರವು ಕೋಲಾರ ಜಿಲ್ಲೆಯ ಶ್ರೀನಿವಾಸಪುರ ತಾಲೂಕಿನ ಹರಳಕುಂಟೆಯಲ್ಲಿತ್ತೆಂಬ ಅಂಶವನ್ನು ಎಂ.ಜಿ.ಮಂಜುನಾಥ ಪ್ರತಿಪಾದಿಸುತ್ತಾರಾದರೂ ಈ ಬಗ್ಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯವಿದೆ.

ಗಂಗರಿಗೆ ಸೇರಿದ ಕ್ರಿ.ಶ. ೫೪೫ರ ತಾಮ್ರಪಟ ಶಾಸನವು ಮಧುಗಿರಿ ತಾಲೂಕಿನ ಕಡಗತ್ತೂರಿನಲ್ಲಿ ದೊರೆತಿದೆ. ಐದು ಹಲಗೆಗಳನ್ನುಳ್ಳ ಇದು, ಗಂಗರ ವಂಶಾವಳಿ ಬಿರುದುಗಳ ಬಗ್ಗೆ ಮಾಹಿತಿ ನೀಡುತ್ತದೆ. ಈ ಶಾಸನದಲ್ಲಿ ದುರ್ವಿನೀತನು ತನ್ನ ಆಳ್ವಿಕೆಯ ನಾಲ್ಕನೇ ವರ್ಷದಲ್ಲಿ ಮಧುಗಿರಿ ತಾಲೂಕಿನ ತಿಪ್ಪನೂರ್ ಎಂಬ ಗ್ರಾಮವನ್ನು ಭಾರದ್ವಾಜ ಗೋತ್ರದ ಸ್ಕಂದಶರ್ಮನಿಗೆ ಧರ್ಮಾಚರಣೆಯನ್ನು ಮಾಡಲು ದಾನ ನೀಡಿದ್ದನ್ನು ತಿಳಿಸುತ್ತದೆ. ಗಂಗ ನವಕಾಮನ ಕಾಲಕ್ಕೆ ಸೇರಿದ ಐದು ಹಲಗೆಗಳಿಂದ ಕೂಡಿದ್ದ ಹೆಬ್ಬೂರಿನ ತಾಮ್ರಶಾಸನದಲ್ಲಿ ಎರಡು ಫಲಕಗಳು ಕಾಣೆಯಾಗಿವೆ. ಇನ್ನುಳಿದ ಮೂರರಲ್ಲಿರುವ ಮಾಹಿತಿಯು ಸಾಮಾನ್ಯವಾಗಿ ಗಂಗರ ಎಲ್ಲಾ ಶಾಸನಗಳಲ್ಲಿರುವಂತೆ ಇದ್ದರೂ ಗಂಗರ ಧರ್ಮಗುರು ಹಾಗೂ ಶಬ್ದಾವತಾರ ಗ್ರಂಥದ ಕರ್ತೃವೂ ಆದ ಪೂಜ್ಯಪಾದನಿಂದ ದುರ್ವಿನೀತನು ವಿದ್ಯೆಯನ್ನೂ ಮುಕ್ತಿಮಾರ್ಗವನ್ನೂ ಕಲಿತನೆಂದು ಹೇಳುತ್ತದೆ. ದುರ್ವಿನೀತನ ಮಗನಾದ ಮುಷ್ಕರನನ್ನು ವೈಭವೀಕರಿಸಿರುವ ಈ ತಾಮ್ರಶಾಸನವು ಅವನನ್ನು ಪರಾಕ್ರಮಿಯೆಂದು ಬಣ್ಣಿಸಿದೆ. ಇದರಿಂದ ಮುಷ್ಕರನ ಕಾಲವೂ ಕೂಡ ದುರ್ವಿನೀತನ ಕಾಲದಷ್ಟೇ ಘನಘೋರ ಕದನಗಳಿಂದ ಕೂಡಿತ್ತೆಂದು ಗೊತ್ತಾಗುತ್ತದೆ.

**ಗಂಗರು ಮತ್ತು ರಾಷ್ಟ್ರಕೂಟರು:** ದಕ್ಷಿಣ ಕರ್ನಾಟಕದಲ್ಲಿ ಗಂಗರು ಪ್ರಬಲರಾಗಿದ್ದ ಕಾಲದಲ್ಲಿ ಉತ್ತರ ಕರ್ನಾಟಕದಲ್ಲಿ ಏಳಿಗೆಗೆ ಬಂದಿದ್ದ ರಾಷ್ಟ್ರಕೂಟರು ತಮ್ಮ ರಾಜ್ಯವನ್ನು ವಿಸ್ತರಿಸಿಕೊಳ್ಳುವ ಪ್ರಯತ್ನದಲ್ಲಿದ್ದರು. ಇದೇ ಸಂದರ್ಭದಲ್ಲಿ ಗಂಗರೂ ಕೂಡ ತಮ್ಮ ರಾಜ್ಯವನ್ನು ಉತ್ತರ ದಿಕ್ಕಿನತ್ತ ವಿಸ್ತರಿಸಲು ಯೋಜನೆ ರೂಪಿಸಿದ್ದರು. ಆ ವೇಳೆಗಾಗಲೇ ಈಗಿನ ತುಮಕೂರು ಜಿಲ್ಲಾ ಪ್ರದೇಶವೆಲ್ಲಾ ಗಂಗರ ಅಧೀನದಲ್ಲಿತ್ತು. ಗಂಗ ಸಾಮ್ರಾಜ್ಯದ ಶ್ರೀಪುರುಷ (ಕ್ರಿ.ಶ.೭೨೬-೭೮೮) ರಾಜಕೀಯ ಕಾರಣಗಳಿಂದಾಗಿ ರಾಜಧಾನಿಯನ್ನು ಮಾನ್ಯಪುರಕ್ಕೆ (ಮಣ್ಣೆ) ಬದಲಾಯಿಸಿದನು. ಕ್ರಿ.ಶ. ೭೪೦-೭೪೫ರ ಅವಧಿಯಲ್ಲಿ ಗಂಗ-ರಾಷ್ಟ್ರಕೂಟರ ನಡುವೆ ನಡೆದ ಯುದ್ಧಗಳಲ್ಲಿ ಎರಿಕಲ್ಲು(ನಿಡುಗಲ್) ಅರಸ ಧನಂಜಯವರ್ಮನು ಭಾಗವಹಿಸಿದ್ದಕ್ಕೆ ಶಾಸನಾಧಾರಗಳಿರುವುದು ಗಮನಾರ್ಹ ಅಂಶವಾಗಿದೆ. ಬಾದಾಮಿ ಚಾಲುಕ್ಯರನ್ನು ಕ್ರಿ.ಶ.೭೫೩ರಲ್ಲಿ ಸೋಲಿಸಿ ಬೃಹತ್ ಸಾಮ್ರಾಜ್ಯದ ಸ್ಥಾಪನೆಯ ಕನಸನ್ನು ಕಾಣುತ್ತಿದ್ದ ರಾಷ್ಟ್ರಕೂಟರ ದಾಳಿಯನ್ನು ನಿರ್ಣಾಯಕ ಯುದ್ಧಗಳಲ್ಲಿ ಇವನು ಎದುರಿಸಿದ್ದುದನ್ನು ಈ ಜಿಲ್ಲೆಯ ಹಿರೇಗುಂಡಗಲ್ಲಿನಲ್ಲಿರುವ ವೀರಗಲ್ಲು ಶಾಸನಗಳು ತಿಳಿಸುತ್ತವೆ.

ತುಮಕೂರು ತಾಲ್ಲೂಕಿನ ಹಿರೇಗುಂಡಗಲ್ ಬಳಿ ದೊರೆತಿರುವ ಎಂಟು ವೀರಗಲ್ಲು ಶಾಸನಗಳು ಗಂಗದೊರೆ ಶ್ರೀಪುರುಷ ಮತ್ತು ದಂಡನಾಯಕ ಸಿಯಾಗೆಲ್ಲರ ಕಾಲಕ್ಕೆ ಸೇರಿದ್ದಾಗಿವೆ. ಅವುಗಳಲ್ಲೊಂದು ಶ್ರೀಪುರುಷ ಮಹಾರಾಜ ಈ ಭೂಮಂಡಲದ ಅಧಿಪತಿಯಾಗಿದ್ದು, ಸಿಯಾಗಲ್ಲ ನಾಯಕ ಮನೆತನದವರು ಮರುಗೆರೆನಾಡು-೩೦೦ನ್ನು ಆಳುತ್ತಿದ್ದಾಗ ಮುರ್ಕೊಡೆ ಅಣ್ಣಿಯಾರನು ಕಣ್ಣರಸನ ವಿರುದ್ಧ ಪಿಂಚನೂರು ಬಳಿ ನಡೆದ ಕದನದಲ್ಲಿ ಮರಣ ಹೊಂದಿದನೆಂದು ಹೇಳುತ್ತಾ, ಆತನ ಕುಟುಂಬವರ್ಗದವರಿಗೆ ರಣಮೋದಯ ಬಾಳ್ಗಚ್ಚಾಗಿ ಗದ್ದೆಯನ್ನು ಉಂಬಳಿಯಾಗಿ ನೀಡಿದ್ದನ್ನು ತಿಳಿಸುತ್ತದೆ. ಶಾಸನೋಕ್ತ ಕಣ್ಣರಸನನ್ನ ರಾಷ್ಟ್ರಕೂಟ ಮೊದಲನೇ ಕೃಷ್ಣನೆಂದು ಈಗಾಗಲೇ ವಿದ್ವಾಂಸರು ಗುರ್ತಿಸಿದ್ದಾರೆ. ಅಲ್ಲಿನ ಎರಡನೇ ವೀರಗಲ್ಲು ಸಿಯಾಗಲ್ಲನ ಹೆಸರನ್ನು ಮಾತ್ರ ತಿಳಿಸುತ್ತಾ ಕಣ್ಣರಸನ ವಿರುದ್ಧ ಮತ್ತೊಬ್ಬ ವೀರ ಪಿಂಚನೂರು ಬಳಿ ಕಾದಾಡಿ ಮಡಿದುದ್ದನ್ನು ತಿಳಿಸುತ್ತದೆ. ಮೂರನೇ ವೀರಗಲ್ಲು ಶಾಸನವು ಇರಿಗೇಶಿ ಎಂಬುವನು ಕಣ್ಣರಸನ ವಿರುದ್ಧ ಕಾದಾಡಿ ಮರಣಿಸಿದ ಬಗ್ಗೆ ವಿವರಣೆ ನೀಡುತ್ತದೆ. ಅಲ್ಲಿನ ನಾಲ್ಕನೇ ಶಾಸನವು ಕೊಂಗುಣಿ ಮಹಾರಾಜ ಶ್ರೀಪುರುಷ ಈ ಭೂಮಂಡಲವನ್ನು ಆಳುತ್ತಿರುವಾಗ ಪಂಡಿತರ ಸಿಂಹ ಎಂದೇ ಖ್ಯಾತನಾಗಿದ್ದ ಶ್ರೀರೇವಮ್ಮನು ಬಲ್ಲಹನ ವಿರುದ್ಧ ಬಾಗೆಯೂರು ಬಳಿ ನಡೆದ ಯುದ್ಧದಲ್ಲಿ ಸಾವನ್ನಪ್ಪಿದನ್ನು ತಿಳಿಸುತ್ತದೆ. ಅದೇ ಕಾಲಕ್ಕೆ ಸೇರಿದ ಅಲ್ಲಿನ ಇನ್ನೊಂದು ವೀರಗಲ್ಲು ಶಾಸನವು ಕೂಡಾ ಸಿಯಾಗಲ್ಲ ನಾಯಕ ಮನೆತನಕ್ಕೆ ಸೇರಿದ್ದು ಬಲ್ಲವರಸನ ಜೊತೆ ನಡೆದ ಯುದ್ಧವೊಂದರಲ್ಲಿ ಗುಣದಲ್ಲಿ ರಾಮನೆಂದು ಧೈರ್ಯದಲ್ಲಿ ಪುರಂದರನೆಂದೂ ಶತ್ರುಸೇನೆಯಲ್ಲಿ ಭೀತಿಯನ್ನುಂಟು ಮಾಡುತ್ತಿದ್ದ ವೀರನೊಬ್ಬ ಮರಣಿಸಿದ್ದನ್ನು ದಾಖಲಿಸಿದೆ. ಈ ಶಾಸನಗಳಲ್ಲಿ ಉಲ್ಲೇಖವಾಗಿರುವ ಸಿಯಾಗೆಲ್ಲನು ಗಂಗರ ದೊರೆ ಶ್ರೀಪುರುಷನ ಮಗನೆಂಬ ಅಭಿಪ್ರಾಯವಿದೆಯಾದರೂ ಅದೊಂದು ಸ್ಥಳೀಯ ನಾಯಕ ಮನೆತನವಾಗಿದ್ದು, ಅವರು ಮರುಗರೆನಾಡು-೩೦೦ರಲ್ಲಿ ಆಡಳಿತ ನಡೆಸುತ್ತಿದ್ದರು. ಬಾಗೆಯೂರು ಕದನವು ಮೂರು ಬಾರಿ ಶಾಸನದಲ್ಲಿ ಉಲ್ಲೇಖವಾಗಿದ್ದು ಅದರಲ್ಲಿ **'ಕಡ್ಡಾನೆ'** ಎಂಬುವನು ಈ ಪೃಥ್ವಿಯನ್ನು ಆಳುತ್ತಿರುವಾಗ ಸಿಯಾಗಲ್ಲ ಎಂಬುವನು ಕೆಸುಮಣ್ಣುನಾಡನ್ನು ಆಳುತ್ತಿದ್ದನೆಂದು ಹೇಳಲಾಗಿದೆ. ನಾಗತ್ತರಸನ ಮನೆಯ ಮಗ ಮತ್ತು ಮೂಲ್ತಿ ಅರಸನ ಸೇವಕನಾದ ಮರಿದಾಸ ಕರಿಯತಮ್ಮನು ಬಲ್ಲಹನ ಜೊತೆ ಬಾಗೆಯೂರು ಬಳಿ ನಡೆದ ಯುದ್ಧದಲ್ಲಿ ಸಾವನ್ನಪ್ಪಿದನು. ಈ ಯುದ್ದದಲ್ಲಿ ನಾಗತ್ತರರು ಶ್ರೀಪುರುಷನ ಪಕ್ಷವಾಗಿದ್ದ ಅಂಶ ಗೊತ್ತಾಗುತ್ತದೆ. ಆದುದರಿಂದ ಕಠಾರಿ ವೀರನಾದ ಸಿಯಾಗೆಲ್ಲನು ಸ್ನೇಹದ ಕುರುಹಾಗಿ ಅವನ ಕುಟುಂಬಕ್ಕೆ ಗುಂಡಗಲ್ ಗ್ರಾಮವನ್ನೇ (ಇಂದಿನ ಹಿರೇಗುಂಡಗಲ್) ದಾನವಾಗಿ ನೀಡಿದನು. ಈ ಶಾಸನಗಳಲ್ಲಿ ಉಲ್ಲೇಖಿತವಾದ ಬಲ್ಲಹ ಅಥವಾ ಬಲ್ಲವರಸ ಎಂಬ ಹೆಸರು ಮೊದಲನೇ ಕೃಷ್ಣ ಅಥವಾ ಎರಡನೇ ಗೋವಿಂದನದಾಗಿರಬಹುದು. ಇವರಿಬ್ಬರೂ ವಲ್ಲಭ ಎಂದೇ ಖ್ಯಾತರಾಗಿದ್ದರೆಂದು ಷ.ಶೆಟ್ಟರ್ ಅಭಿಪ್ರಾಯಪಟ್ಟಿದ್ದಾರೆ. ಹಿರೇಗುಂಡಕಲ್ಲಿನ ವೀರಗಲ್ಲು ಶಾಸನಗಳಿಂದ ಪಿಂಚನೂರು, ಕಾಗೆಮೊಗ ಹಾಗೂ ಬಾಗೆಯೂರುಗಳಲ್ಲಿ ನಡೆದ ಗಂಗ-ರಾಷ್ಟ್ರಕೂಟ ಕಾಳಗದ ಸ್ವರೂಪ ಗೊತ್ತಾಗುತ್ತದೆ.

ಮೊದಲನೆ ಕೃಷ್ಣನ ನಂತರ ಅವನ ಮಗ ಎರಡನೇ ಗೋವಿಂದ ಮತ್ತು ಶ್ರೀಪುರುಷನ ಮಗ ಎರಡನೇ ಶಿವಮಾರನ ನಡುವೆ ಯುದ್ಧ ಮುಂದುವರಿಯಿತು. ಕ್ರಿ.ಶ.೭೯೮ರಲ್ಲಿ ಎರಡನೇ ಶಿವಮಾರ ಸೋಲೊಪ್ಪಿಕೊಂಡು ಸೆರೆಮನೆಯಲ್ಲಿರಬೇಕಾಯಿತು. ರಾಜಕೀಯ ಲಾಭಕ್ಕಾಗಿ ಎರಡನೇ ಶಿವಮಾರನ ಬಿಡುಗಡೆ ಮತ್ತು ಬಂಧನಗಳು ಮುಂದುವರಿದುದರಿಂದ, ಎರಡನೇ ಶಿವಮಾರನು ಹೆಚ್ಚುಕಾಲ ಸೆರೆಮನೆಯಲ್ಲಿರಬೇಕಾಯಿತು. ರಾಷ್ಟ್ರಕೂಟ-ಗಂಗರ ಸಂಘರ್ಷಕ್ಕೆ ಗಂಗರ ಎರಡನೇ ರಾಜಧಾನಿ ಮಣ್ಣೆ ಸಾಕ್ಷಿಯಾಯಿತು. ಮಣ್ಣೆಯನ್ನು ವಶಪಡಿಸಿಕೊಳ್ಳಲು ರಾಷ್ಟ್ರಕೂಟರು ಮಾಡಿದ ದಾಳಿ ಪ್ರಯತ್ನಗಳಿಗೆ ನೆಲೆಯಾದದ್ದು ತುಮಕೂರು ಜಿಲ್ಲೆ. ಈ ದಾಖಲೆಗಳು ಶತ್ರುಗಳ ಉಪಟಳಕ್ಕೆ ಸಿಕ್ಕಿದ್ದ ಗಂಗರು ತಮ್ಮ ಸ್ವಾತಂತ್ರ್ಯ ಮತ್ತು ರಾಜ್ಯವನ್ನು ರಕ್ಷಿಸಿಕೊಳ್ಳಲು ಪಟ್ಟ ಪ್ರಯತ್ನಗಳನ್ನು ತಿಳಿಸುತ್ತವೆ.

ಗಂಗ-ರಾಷ್ಟ್ರಕೂಟರ ಹೋರಾಟ ಮುಂದುವರಿದಿದ್ದ ಅವಧಿಗೆ ಸೇರಿದ ಕಡಬ ತಾಮ್ರಪಟದಲ್ಲಿ ನೇರವಾಗಿ ರಾಷ್ಟ್ರಕೂಟ ಮೊದಲನೇ ಗೋವಿಂದನ ಉಲ್ಲೇಖವಿದ್ದು, ಮೊದಲನೇ ಕೃಷ್ಣನ ಕಾಲದ ಕನ್ನೇಶ್ವರ ದೇವಾಲಯದ ವಿವರಣೆ ಇದೆ. ಈ ದೇವಾಲಯವು ಎಲ್ಲೋರದ ಕೈಲಾಸೇಶ್ವರ ದೇವಾಲಯ(?)ವಾಗಿರುವುದು ವಿಶೇಷ ಸಂಗತಿಯಾಗಿದೆ. ಇದೇ ಶಾಸನವು ಮಣ್ಣೆಯ ಪಶ್ಚಿಮಕ್ಕಿದ್ದ ಭೂತಶಿಲಾ ಗ್ರಾಮದ ಬಸದಿಗೆ ಇಡಗೂರು ವಿಷಯದಲ್ಲಿನ ಜಾಲಮಂಗಲ ಗ್ರಾಮವನ್ನು ದಾನವಾಗಿ ನೀಡಿರುವ ವಿಷಯವನ್ನು ತಿಳಿಸುತ್ತದೆ. ಈ ದಾನವನ್ನು ಚಾಲುಕ್ಯ ವಂಶದ ಬಾಲವರ್ಮನ ಮೊಮ್ಮಗ ವಿಮಲಾದಿತ್ಯನಿಗೆ ಹಿಡಿದಿದ್ದ ಶನಿಕಾಟದ ವಿಮುಕ್ತಿಗಾಗಿ ನೀಡಲಾಗಿದೆ. ಈ ವಿಮಲಾದಿತ್ಯನು ಕುಣಿಗಲ್ ಅನ್ನು ಆಳುತ್ತಿದ್ದನು.

ಅವನ ಅಧಿಕಾರಿಯೇ ಚಾಕಿರಾಜ. ಇವನ ಮನವಿಯ ಮೇರೆಗೆ ಯಾಪನೀಯನಂದಿ ಸಂಘ ಮತ್ತು ಪುನ್ನಾಗ ವೃಕ್ಷಮೂಲಗಣದ ಶ್ರೀಕೀರ್ತ್ಯಾಚಾರ್ಯರು ನಿಧನರಾದ ಕಾರಣ, ಅವರ ಶಿಷ್ಯ ವಿಜಯಕೀರ್ತಿಗೆ ಗುರುಪಟ್ಟ ದಾನ ನೀಡಲಾಗಿದೆ. ಈ ಇಡಗೂರು ಗ್ರಾಮವಿಂದು ಕುಣಿಗಲ್ ತಾಲೂಕಿನಲ್ಲಿದೆ. ರಾಷ್ಟ್ರಕೂಟರಿಗೆ ಸೇರಿದ ಮತ್ತೊಂದು ಶಾಸನವು ತುಮಕೂರು ತಾಲೂಕಿನ ಚಿಕ್ಕಸಾರಂಗಿ ಗ್ರಾಮದಲ್ಲಿ ದೊರೆತಿದ್ದು ಕ್ರಿ.ಶ.೯೦೩ರಲ್ಲಿ ಅರಸನ ದಂಡನಾಯಕ ದಾಮಪ್ಪಯ್ಯನು ಮಣ್ಣೆಯಲ್ಲಿ ಇದ್ದಾಗ ಕೆಲವು ವೃತ್ತಿಗಳನ್ನು ದಾನ ನೀಡಿದ ರಾಷ್ಟ್ರಕೂಟ ಎರಡನೇ ಕೃಷ್ಣನ ಉಲ್ಲೇಖದೊಂದಿಗೆ ದಾಖಲಿಸಿದೆ. ಶಿರಾ ತಾಲೂಕಿನ ಗಡಿಯಲ್ಲಿರುವ ಆಂಧ್ರದ ಹೇಮಾವತಿ ಶಾಸನವು ಇರಿಬೆಡಂಗನ ವಿಷಯವನ್ನು ಪ್ರಸ್ತಾಪಿಸುತ್ತಾ ರಾಷ್ಟ್ರಕೂಟ ಇಂದ್ರನ ಸಲ್ಲೇಖನ ಮರಣವನ್ನು ದಾಖಲಿಸಿದೆ. ಈ ಇಂದ್ರರಾಜ, ರಾಷ್ಟ್ರಕೂಟ ವಂಶಾವಳಿಯಲ್ಲಿ ಬರುವ ಮೂರನೇ ಕೃಷ್ಣನ ಮೊಮ್ಮಗ ನಾಲ್ಕನೇ ಇಂದ್ರನಾಗಿದ್ದಾನೆ. ಈ ಜಿಲ್ಲೆಯಲ್ಲಿ ದೊರಕಿರುವ ಗಂಗರ ಕೊನೆಯ ಶಾಸನವು ಕ್ರಿ.ಶ.೯೭೩ರ ಕಾಲಕ್ಕೆ ಸೇರಿದ್ದು, ಬಿಳಿಗೆರೆಗೆ ಗಂಗರ ಮೂರನೇ ಮಾರಸಿಂಹನ ಅಧಿಕಾರಿ ಗಾವರಸ ಭೇಟಿ ನೀಡಿ ಬಿತ್ತುವಟ್ಟ ದತ್ತಿಯನ್ನು ನೀಡಿದ್ದನ್ನು ದಾಖಲಿಸಿದೆ. ಇದರಿಂದ ಈ ಜಿಲ್ಲೆಯ ಕೆಲಪ್ರದೇಶಗಳು ಇನ್ನೂ ಗಂಗರ ನಿಯಂತ್ರಣದಲ್ಲಿದ್ದ ಅಂಶ ವೇದ್ಯವಾಗುತ್ತದೆ.

ಹೀಗೆ ಈ ಜಿಲ್ಲೆಯ ಅನೇಕ ಪ್ರದೇಶಗಳು ಗಂಗ–ರಾಷ್ಟ್ರಕೂಟರ ಸಂಘರ್ಷಗಳಿಗೆ ಸಾಕ್ಷಿಯಾಗಿದ್ದು ಸೋಲು–ಗೆಲುವುಗಳು ನಿರ್ಧಾರವಾಗದೆ ಅನೇಕ ವೀರರು ಮಡಿದುದ್ದನ್ನು ದಾಖಲಿಸಿವೆ. ಗಂಗ ಶ್ರೀಪುರುಷ ಮತ್ತು ರಾಷ್ಟ್ರಕೂಟರ ಎರಡನೆಯ ಇಂದ್ರನ ಕಾಲದಲ್ಲಿ ಆರಂಭವಾದ ಗಂಗ–ರಾಷ್ಟ್ರಕೂಟ ಸಂಘರ್ಷವು ಗಂಗ ಇಮ್ಮಡಿ ಶಿವಮಾರನ ಕಾಲದಲ್ಲಿ ಪರಾಕಾಷ್ಠೆ ತಲುಪಿದ್ದು, ಅದಕ್ಕೆ ಈ ಜಿಲ್ಲೆಯೇ ಪ್ರಮುಖ ಭೂಮಿಕೆಯಾಗಿದ್ದುದನ್ನು ಮೇಲಿನ ಶಾಸನಗಳ ಹಿನ್ನೆಲೆಯಲ್ಲಿ ಗ್ರಹಿಸಬಹುದಾಗಿದೆ.

**ನೊಳಂಬರು:** ದಖ್ಖನ್ ಪ್ರಾಂತದಲ್ಲಿ ಮಳಖೇಡದ ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರೂ ಪ್ರಬಲರಾಗಿದ್ದಾಗ ತುಮಕೂರು ಪ್ರದೇಶದಲ್ಲಿ ಸ್ಥಳೀಯದಾಗಿ ಆಳ್ವಿಕೆ ನಡೆಸುತ್ತಿದ್ದವರೆಂದರೆ ನೊಳಂಬರು. ಇವರು ಪಲ್ಲವ ಮೂಲದವರಾಗಿದ್ದು ಜಿಲ್ಲೆಯ ಉತ್ತರಭಾಗದಲ್ಲಿ ತಮ್ಮ ಆಳ್ವಿಕೆಯ ಕುರುಹಾಗಿ ಕೆಲವು ದಾಖಲೆಗಳನ್ನು ಬಿಟ್ಟು ಹೋಗಿದ್ದಾರೆ. ನೊಳಂಬವಾಡಿ–೩೨೦೦೦ ಎಂದು ಕರೆದುಕೊಳ್ಳುತ್ತಿದ್ದ ತಮ್ಮ ರಾಜ್ಯಕ್ಕೆ ಈ ಜಿಲ್ಲೆಯಲ್ಲಿ ಇಂದು ಗಡಿ ಪ್ರದೇಶವಾಗಿ ಆಂಧ್ರಕ್ಕೆ ಸೇರಿರುವ ಹೆಂಜೇರು ಅಥವಾ ಹೇಮಾವತಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡಿದ್ದರು. ಪಾವಗಡ ತಾಲೂಕಿನಲ್ಲಿರುವ ನಿಡುಗಲ್ಲಿನ ಮೇಲೆ ಪ್ರಭುತ್ವ ಸಾಧಿಸಿದ್ದ ಇವರ ವ್ಯಾಪ್ತಿಗೆ ಮಧುಗಿರಿ, ಶಿರಾ ತಾಲೂಕುಗಳ ಅನೇಕ ಪ್ರದೇಶಗಳು ಒಳಪಟ್ಟಿದುದನ್ನು ಶಾಸನ ಮತ್ತಿತರ ಸ್ಮಾರಕಾವಶೇಷಗಳು ದೃಢೀಕರಿಸುತ್ತವೆ.

ನೊಳಂಬರು ಕೇವಲ ಒಬ್ಬ ಸಾಮಂತರಾಗಿ ಅಸ್ತಿತ್ವಕ್ಕೆ ಬಂದು, ಗಂಗರಸರ ಜೊತೆ ಜೊತೆಯಲ್ಲಿಯೇ ಬೆಳೆದು ಅವರಿಗೆ ಪ್ರತಿರೋಧಿಗಳಾಗಿ ಅಂತಿಮವಾಗಿ ರಾಷ್ಟ್ರಕೂಟರನ್ನು ಆಶ್ರಯಿಸಿ ರಾಜ್ಯವನ್ನು ಕಟ್ಟಿ ಬಾಣರನ್ನು ವೈದುಂಬರನ್ನು ಸೋಲಿಸಿ ಅಧಿಕಾರ ನಡೆಸಿದವರಾಗಿದ್ದಾರೆ. ಜಿಲ್ಲೆಯ ಶಿರಾ ತಾಲೂಕಿನ ಬರಗೂರಿನಲ್ಲಿ ದೊರೆತಿರುವ ಕ್ರಿ.ಶ.೮೭೮ ಶಾಸನ, ಇವರ ಅತಿ ಪ್ರಾಚೀನ ಶಾಸನ. ಈ ಶಾಸನವು ಪಲ್ಲವ ಕುಲದ ಮಹೇಂದ್ರಾಧಿರಾಜನನ್ನು ಹೆಸರಿಸಿದೆ. ಈ ಶಾಸನವು ಹೇಮಾವತಿಯ ನೊಳಂಬರ ವಂಶಾವಳಿಯನ್ನು ತಿಳಿಸುತ್ತಾ ಅವರು ಈಶ್ವರನ ವಂಶದ ತ್ರಿನಯನನ ಮಗ ಕಂಚಿಯ ಪಲ್ಲವ ಮೂಲದವರೆಂದು ದಾಖಲಿಸಿದೆ. ಈತನಿಗಿಂತ ಮೊದಲು ಒಂದನೆಯ ಪೊಳಲ್ಚೋರ, ಚಾರುಪೊನ್ನೇರ, ಸಿಂಹಪೋತರು ಆಳ್ವಿಕೆ ನಡೆಸಿದ್ದನ್ನು ಕ್ರಿ.ಶ.೯೪೩ರ ಹೇಮಾವತಿಯ ಶಾಸನ ತಿಳಿಸಿದ್ದರೂ; ಅವರ ದಾಖಲೆಗಳು ಈ ಜಿಲ್ಲೆಯೊಳಗಡೆ ದೊರಕದೆ ನೆರೆಯ ಚಿತ್ರದುರ್ಗ ಜಿಲ್ಲೆಯಲ್ಲಿ ದೊರೆತಿವೆ. ಇದರಿಂದ ಹೇಮಾವತಿಯನ್ನು (ಹೆಂಜೇರನ್ನು) ಕೇಂದ್ರವಾಗಿಟ್ಟುಕೊಂಡು ಆಳ್ವಿಕೆ ನಡೆಸುತ್ತಿದ್ದ ಇವರ ರಾಜ್ಯವಾಪ್ತಿಗೆ ಇಂದಿನ ತುಮಕೂರು ಹಾಗೂ ನೆರೆಯ ಚಿತ್ರದುರ್ಗ ಜಿಲ್ಲೆಗಳೂ ಸೇರಿದ್ದ ಅಂಶ ವೇದ್ಯವಾಗುತ್ತದೆ. ಕ್ರಿ.ಶ. ೭೩೦ರ ಸುಮಾರಿನಲ್ಲಿ ಆಳ್ವಿಕೆ ಆರಂಭಿಸಿದ್ದ ಇವರು ಮೊದಲಿಗೆ ತಲಕಾಡು ಗಂಗರ ಸಾಮಂತರಾಗಿದ್ದರು. ರಾಷ್ಟ್ರಕೂಟರ ಪ್ರಭಾವ ಈ ಪ್ರದೇಶದಲ್ಲಿ ಹೆಚ್ಚಾದಾಗ ರಾಷ್ಟ್ರಕೂಟ ಎರಡನೆಯ ಗೋವಿಂದನಿಗೆ ಸಿಂಹಪೋತನ ಆಳ್ವಿಕೆಯಲ್ಲಿ ಇವರು ಸಾಮಂತರಾದರು. ಎರಡನೆಯ ಗೋವಿಂದನ ನಂತರ ರಾಷ್ಟ್ರಕೂಟ ಸಾಮ್ರಾಜ್ಯದಲ್ಲಿ ಬಿಕ್ಕಟ್ಟು ತಲೆದೋರಿದಾಗ ಇವನು ತನ್ನ ನಿಷ್ಠೆಯನ್ನು ತಲಕಾಡು ಗಂಗರ ಕಡೆಗೆ ಬದಲಾಯಿಸಿ ಎರಡನೆಯ ರಾಚಮಲ್ಲನ ಮಗಳಾದ ಜಾಯಬ್ಬೆಯನ್ನು ತನ್ನ ಮಗ ಪೊಳಲ್ಚೋರನಿಗೆ ವಿವಾಹ ಮಾಡಿಕೊಂಡು ತನ್ನ ಪ್ರಾಬಲ್ಯವನ್ನು ವೃದ್ಧಿಸಿಕೊಂಡನು.

ಶಾಸನಗಳಲ್ಲಿ ನೊಳಂಬಾಧಿರಾಜ ಎಂದೇ ಉಲ್ಲೇಖಿತವಾಗಿರುವ ಒಂದನೇ ಪೊಳಲ್ಚೋರನು ತನ್ನ ಮಾವ ಎರಡನೆಯ ರಾಚಮಲ್ಲನಿಂದ ಕೋಲಾರ ಪ್ರದೇಶವನ್ನು ಉಂಬಳಿಯಾಗಿ ಪಡೆದುಕೊಂಡು ತನ್ನ ರಾಜ್ಯವನ್ನು ವಿಸ್ತರಿಸಿಕೊಂಡನು. ಆದರೆ ಇದು ಬಾಣರೊಂದಿಗೆ ನಿರಂತರ ವೈಷಮ್ಯಕ್ಕೆ ಕಾರಣವಾಯಿತು. ಈತನು ತನ್ನ ಮಗ ಮಹೇಂದ್ರನಿಗೆ ಗಂಗರಾಜಕುಮಾರಿ ಗಾಮಬ್ಬೆಯನ್ನು ವಿವಾಹ ಮಾಡಿಕೊಂಡು ಅವರೊಂದಿಗಿನ ಸ್ನೇಹವನ್ನು ಬಲಪಡಿಸಿಕೊಂಡನು. ಇವನು ಆಂಧ್ರದ ಅನಂತಪುರ ಜಿಲ್ಲೆಯ ಕಂಬದೂರಿನಲ್ಲಿ ಬೆಳ್ದುಗೊಂಡಯ್ಯನು ಕೆರೆ ಕಟ್ಟಿಸಿದನು. ಅಲ್ಲದೆ ಇವನ ಅಧಿಕಾರಿಯಾದ ಕಿರುಮಯ್ಯಗೌಡನು ನಂದಿಯ ದೇವಾಲಯಕ್ಕೆ ಗೋಪುರವನ್ನು ನಿರ್ಮಿಸಿದನು. ಅಗಳಿ ಶಾಸನದಲ್ಲಿ ಈತನು ವಿಷ್ಣುದೇವಾಲಯವನ್ನು ನಿರ್ಮಿಸಲು ರಾಷ್ಟ್ರಕೂಟ ದಂಡನಾಯಕ ಕೊಂಡಯ್ಯನು ಪೊಳಲ್ಚೋರನಿಂದ ದತ್ತಿ ಪಡೆದ ವಿಷಯವಿದೆ. ಸುಮಾರು ಕ್ರಿ.ಶ. ೮೭೦ರವರೆಗೆ ಇವನು ಆಳ್ವಿಕೆ ನಡೆಸಿದ ಮೇಲೆ ಮಹೇಂದ್ರನ ಆಳ್ವಿಕೆ ಆರಂಭವಾಗುತ್ತದೆ.

**ಮಹೇಂದ್ರ:** ಕ್ರಿ.ಶ. ೮೭೦ರಿಂದ ೮೯೭ರವರೆಗೆ ರಾಜ್ಯಭಾರ ಮಾಡಿದ ಮಹೇಂದ್ರ ತನ್ನ ತಂದೆ ಒಂದನೇ ಪೊಳಲ್ಚೋರನ ನಂತರ ಪಟ್ಟಕ್ಕೆ ಬಂದನು. ಬೆಂಗಳೂರು ಜಿಲ್ಲೆಯಲ್ಲಿ ದೊರೆತಿರುವ ಶಾಸನಗಳು ಈತನು ಗಂಗ ಆರುಸಾಸಿರ ಪ್ರಾಂತವನ್ನು ಆಳುತ್ತಿದ್ದನೆಂದು ದಾಖಲಿಸಿವೆ. ಈ ಜಿಲ್ಲೆಯಲ್ಲಿ ಈತನ ಮೂರು ಶಾಸನಗಳು (ಹೇಮಾವತಿ, ಬರಗೂರು ಹಾಗೂ ನಿಡುಗಲ್) ದೊರೆತಿದ್ದು ಇಲ್ಲಿನ ಸಾಧನೆಗಳನ್ನು ತಿಳಿಸುತ್ತವೆ. ಕರ್ನಾಟಕದ ಗಡಿಯಲ್ಲಿನ ರೇನಾಡು–೭೦೦೦ ಪ್ರಾಂತವನ್ನಾಳುತ್ತಿದ್ದ ತೆಲುಗು ಚೋಳರ ಮೇಲೆ ನೊಳಂಬ ಮಹೇಂದ್ರನು ದಾಳಿ ಮಾಡಿ ಅವರನ್ನು ಸೋಲಿಸಿ ಅವರ ದೊರೆ ಮಹೇಂದ್ರ ವಿಕ್ರಮನನ್ನು ಸ್ನೇಹಿತನನ್ನಾಗಿ ಮಾಡಿಕೊಂಡನು. ಇದರಿಂದ ಮಹಾಬಲಿ ಬಾಣರ ಕಡೆ ಗಮನ ಹರಿಸಿ ಯುದ್ಧಮಾಡಲು ಅವನಿಗೆ ಸಾಧ್ಯವಾಯಿತು. ಇದೇ ಸಂದರ್ಭದಲ್ಲಿ ಪಲ್ಲವ–ಪಾಂಡ್ಯರ ನಡುವೆ ಯುದ್ಧ ಆರಂಭವಾಗಿತ್ತು. ಈ ಅವಕಾಶವನ್ನು ಉಪಯೋಗಿಸಿಕೊಂಡ ವೈದುಂಬರು ಮತ್ತು ಬಾಣರು, ನೊಳಂಬ ಮಹೇಂದ್ರನ ಮೇಲೆರಗಿ ಬಂದು ಹೇಮಾವತಿಗೆ ಮುತ್ತಿಗೆ ಹಾಕಲು ಪ್ರಯತ್ನಿಸಿದರು. ಸೋರೆಮಡಿ, ಮುದಿಮಡವು ಮತ್ತು ಮಂದಾವು ಎಂಬಲ್ಲಿ ಯುದ್ಧ ನಡೆಯಿತು. ಅಲ್ಲಿ ಬಾಣರು ಹಿಮ್ಮೆಟ್ಟಿದರು. ಇದನ್ನು ಕ್ರಿ.ಶ.೮೯೩ರ ಧರ್ಮಪುರಿ ಸ್ತಂಭ ಶಾಸನವು ತಿಳಿಸುತ್ತದೆ. ಬಾಣರನ್ನು ಸೋಲಿಸಿದ ಮೇಲೆ ಸಂಬಂಧಿಗಳಾದ ಗಂಗರ ವಿರುದ್ಧ ಯುದ್ಧ ಘೋಷಿಸಿ ಅವರ ಬಹಳಷ್ಟು ಪ್ರಾಂತಗಳನ್ನು ಇವನು ಗೆದ್ದುಕೊಂಡನು. ಕ್ರಿ.ಶ.೮೭೮ರ ಶಿರಾ ತಾಲೂಕಿನ ಬರಗೂರು ಶಾಸನ, ಗಂಗರ ರಾಚಮಲ್ಲ ಪೆರ್ಮಾಡಿಯ ಮಗಳಾದ ಜಾಯಬ್ಬೆಯ ಮಗ ಪಲ್ಲವ ಕುಲದ ಮಹೇಂದ್ರಾಧಿರಾಜನು ಚೋರ ಮೊದಲಾದ ಶತ್ರುಗಳನ್ನು ಸದೆಬಡಿದು ಬರಗೂರಿನಲ್ಲಿ ಬೀಡು ಬಿಟ್ಟಿದ್ದಾಗ ತನ್ನ ಅರಮನೆಯನ್ನೇ ಮಹಾದೇವನಿಗೆ ಅರ್ಪಿಸಿ ಮಹೇಂದ್ರೇಶ್ವರ ದೇವರನ್ನು ಪ್ರತಿಷ್ಠಾಪಿಸಿ ಆ ದೇವಾಲಯದ ಖಣ್ಡಸ್ಫುಟಿತ ಜೀರ್ಣೋದ್ಧಾರಕ್ಕೆ, ದೇವತಾರ್ಚನೆಗೆ, ದೇವಾಲಯದ ಜೀಣೋದ್ಧಾರಕ್ಕೆ ಹಾಗೂ ಸತ್ರಕ್ಕೆಂದು ಸೀರೆ ನಾಡಿನ ನಾದೂರು ಗ್ರಾಮವನ್ನು ದಾನವಾಗಿ ನೀಡಿದ್ದನು ತಿಳಿಸುತ್ತದೆ. ಪೂರ್ವ ಚಾಳುಕ್ಯರಾಜ ಗುಣಗ ವಿನಯಾದಿತ್ಯನೊಡನೆ ನಡೆದ ಈ ಯುದ್ಧದಲ್ಲಿ ಮಹೇಂದ್ರನ ರಾಣಿ ಬಿಜ್ಜಳದೇವಿಯ ಮಗ ಮಂಗರಾಜನು ಮರಣಿಸಿರಬೇಕು. ಇದರಿಂದ ವೈರಾಗ್ಯ ತಾಳಿದ ರಾಣಿಯು ಬರಗೂರಿನ ತನ್ನ ಅರಮನೆಯನ್ನು ಈಸ್ವರನಿಗೆ ಅರ್ಪಿಸಿ ಹೆಂಜೇರಿಗೆ ಹಿಂತಿರುಗಿರಬೇಕು. ಮಹೇಂದ್ರನ ಅಗ್ರಮಹಿಷಿ ಗಂಗ ವಂಶದ ಗಾಮಬ್ಬೆಗೆ ಜನಿಸಿದವನೇ ಮಗನಾದ ಅಯ್ಯಪ್ಪದೇವ.

**ಅಯ್ಯಪ್ಪದೇವ:** ಅಯ್ಯಪ್ಪದೇವ ಪಟ್ಟಕ್ಕೆ ಬರುವ ವೇಳೆಗೆ ಗಂಗ ಎರೆಯಪ್ಪನು ನೊಳಂಬರ ಆಯಕಟ್ಟಿನ ದುರ್ಗಗಳನ್ನು ಗೆದ್ದುಕೊಂಡಿದ್ದನು. ಇವುಗಳನ್ನು ಬಿಡಿಸಿಕೊಳ್ಳಲು ಗಂಗರ ಮೇಲೆ ಅಯ್ಯಪ್ಪದೇವನು ಯುದ್ಧ ಮಾಡಿದನು. ಕ್ರಿ.ಶ. ೯೦೦ರ ಕಣಕಟ್ಟೆ ಶಾಸನದಲ್ಲಿ ಅಯ್ಯಪ್ಪನು ಗಂಗ ಪಕ್ಷಪಾತಿಯಾದ ಮಾಧಿವರ್ಮನನ್ನು ಕೊಂದ ವಿವರವಿದೆ. ಇದರ ನಂತರ ಗಂಗರೊಂದಿಗೆ ಸ್ನೇಹ ಬೆಳೆಸಿ ನೊಳಂಬವಾಡಿ ೩೨೦೦೦ ಪ್ರಾಂತವನ್ನಾಳಿದನು. ಇವನ ರಾಜ್ಯವು ಉತ್ತರದಲ್ಲಿ ಬಳ್ಳಾರಿಯಿಂದ, ಧಾರವಾಡ ಜಿಲ್ಲೆಯವರೆಗೂ ವ್ಯಾಪಿಸಿತ್ತೆಂಬುದನ್ನು ಅಲ್ಲಿ ದೊರೆತಿರುವ ಈತನ ಶಾಸನಗಳು ದೃಢಪಡಿಸುತ್ತವೆ. ಶಿರಾ ತಾಲೂಕಿನ ೩೯ನೆ ಸಂಖ್ಯೆಯ ಶಾಸನ, ಇವನನ್ನು ನನ್ನಿಗಾಶ್ರಯನೆಂದು ಬಣ್ಣಿಸಿದೆ. ಇವನು ಕ್ರಿ.ಶ .೯೨೦ರಲ್ಲಿ ತನ್ನ ಪತ್ನಿ ನಾಗಿಯಬ್ಬೆಯ ತಾಯಿ ನಾರಣಬ್ಬೆಯು ಕಟ್ಟಿಸಿದ ಬರಗೂರಿನ ಎರಡೂ ಕೆರೆಗಳ ಕೆಳಗಿನ ಭೂಮಿಯನ್ನು ಬರಗೂರಿನ ಮೂಲಸ್ಥಾನದ ಮಹೇಂದ್ರೇಶ್ವರ ದೇವಾಲಯಕ್ಕೆಂದು, ಮೂಡಣಮಟದ ವಿಮಳಮತಿ ಭಟ್ಟಾರರಿಗೆ, ಹೆಂಜೇರಿನ ಪಂಚಮಟ ಮತ್ತು ಮುಖಂಡರ ಸಮ್ಮುಖದಲ್ಲಿ ದಾನ ನೀಡಿದ್ದನ್ನು ದಾಖಲಿಸಿದೆ.

ರಾಷ್ಟ್ರಕೂಟರ ಮೂರನೇ ಇಂದ್ರ (ಕ್ರೀ.ಶ. ೯೧೪–೯೨೨) ಮತ್ತು ನಾಲ್ಕನೆಯ ಗೋವಿಂದ(೯೩೦–೯೩೫) ಜೊತೆ ಮೈತ್ರಿಯನ್ನು ಬೆಳೆಸಿದ ಈತನು ಅವರ ವೈರಿಗಳಾಗಿದ್ದ ಪೂರ್ವದ ವೆಂಗಿ ಚಾಳುಕ್ಯರ ದಾಳಿಯನ್ನು ಎದುರಿಸಬೇಕಾಯಿತು. ಪೂರ್ವ ಚಾಳುಕ್ಯರ ಅರಸ ಅಮ್ಮರಾಯನು ನೊಳಂಬವಾಡಿಯ ಮೇಲೆ ದಂಡೆತ್ತಿ ಬಂದನು. ಅಯ್ಯಪ್ಪದೇವನು ಅವನನ್ನು ತುಂಬೆಪಾಡಿಯಲ್ಲಿ ಎದುರಿಸಿ ಯುದ್ಧದಲ್ಲಿ ಕೊಂದನು. ಮುಂದೆ, ಪೂರ್ವ ಚಾಳುಕ್ಯ ರಾಜ ಭೀಮನು ನೊಳಂಬವಾಡಿಯ ಮೇಲೆ ದಾಳಿ ಮಾಡಿದನು. ಕ್ರಿ.ಶ. ೯೩೪ರ ಬೇಗೂರು ಶಾಸನವು ತುಂಬೆಪಾಡಿಯಲ್ಲಿ ಸಂಭವಿಸಿದ ಘೋರ ಕಾಳಗದಲ್ಲಿ (ಮಧುಗಿರಿ ತಾಲೂಕಿನ ತುಂಬಾಡಿ) ಅಯ್ಯಪ್ಪದೇವನ ಸಹಾಯಕ್ಕೆ ಗಂಗ ಎರೆಯಪ್ಪನು ನಾಗತ್ತರನ ದಂಡನ್ನು ಕಳುಹಿಸಿದನೆಂದೂ ತಿಳಿಸುತ್ತದೆ. ಈ ಯುದ್ಧದಲ್ಲಿ ಅಯ್ಯಪ್ಪದೇವನು ಭೀಮನೊಂದಿಗೆ ಅತೀ ಭಯಂಕರವಾಗಿ ಹೋರಾಡುತ್ತಾ ಮಡಿದನು. ಪೂರ್ವಚಾಲುಕ್ಯರ ಶಾಸನಗಳಲ್ಲಿ ಅಯಪ್ಪನನ್ನು ಅತೀ ಭಯಂಕರನೆಂದು ವರ್ಣಿಸಲಾಗಿದೆ. ಈತನು ಗಂಗ ವಂಶದ ರಾಜಕುಮಾರಿ ಪೊಲ್ಲಬ್ಬರಸಿಯನ್ನು ವಿವಾಹವಾಗಿದ್ದನು. ಇವಳಲ್ಲದೆ ಈತನಿಗೆ ನಾಗಿಯಬ್ಬೆ ಮತ್ತು ಹೆಳೆಯಬ್ಬೆ ಎಂಬ ಮತ್ತಿಬ್ಬರು ಪತ್ನಿಯರೂ ಇದ್ದರು. ನೊಳಂಬಾಧಿರಾಜ, ನುಲಿಪಯ್ಯ, ನನ್ನಿಗಾಶ್ರಯ, ನನ್ನಿಗನೃಪ ಮೊದಲಾದ ಬಿರುದಾಂಕಿತನಾದ ಅಯ್ಯಪ್ಪದೇವನು ಮರಣಹೊಂದಿದ ನಂತರ ಆತನ ಮಗ ವೀರನೊಳಂಬ ಅಣ್ಣಿಗ ಆಳ್ವಿಕೆ ನಡೆಸಿದನು.

**ವೀರನೊಳಂಬ ಅಣ್ಣಿಗ:** ಈತ ತನ್ನ ತಂದೆಯು ಬದುಕಿರುವಾಗಲೇ ನೊಳಂಬವಾಡಿಯ ಕೆಲವು ಪ್ರಾಂತಗಳನ್ನು ಆಳುತ್ತಿದ್ದನು. ಇವನ ಕಾಲದಲ್ಲಿ ಕರ್ನಾಟಕದ ರಾಜಕೀಯ ವೈಪರೀತ್ಯಗಳು ಅಧಿಕಗೊಂಡು ಅಣ್ಣಿಗನು ತುಂಬಾ ಸಂಕಷ್ಟ ಎದುರಿಸಬೇಕಾಯಿತು. ಗಂಗರ ರಾಜ್ಯದಲ್ಲಿ ರಾಜಕೀಯ ಅಂತಃಕಲಹಗಳು ಉದ್ಭವಿಸಿದಾಗ ಅದರ ಲಾಭ ಪಡೆದುಕೊಳ್ಳಲು ಇವನು ಸೇನಾ ಸಮೇತನಾಗಿ ಗಂಗರಾಜ್ಯದ ಹೆಗ್ಗಡದೇವನಕೋಟೆಯ ಕೊತ್ತಮಂಗಲದವರೆಗೆ ನುಗ್ಗಿದನು. ಆರಂಭದಲ್ಲಿ ಜಯಪಡೆದರೂ ಕೊನೆಗೆ ಬರಿಗೈಯಲ್ಲಿ ಹಿಂತಿರುಗಬೇಕಾಯಿತು. ಗಂಗ ಮಾರಸಿಂಹನ ಕೂಡಲೂರು ತಾಮ್ರಶಾಸನವು ಗಂಗರಾಜಮಲ್ಲನು ಅಣ್ಣಿಗನನ್ನು ಕೊತ್ತಮಂಗಲದ ಕಾಳಗದಲ್ಲಿ ಸೋಲಿಸಿ ನಂತರ ಆತನ ಮೇಲೆ ಕರುಣೆ ತೋರಿ ಕ್ಷಮಿಸಿದನೆಂದು ಹೇಳಿದೆ. ಇದರಿಂದಾಗಿ ಅಣ್ಣಿಗ ಆಕ್ರಮಣದಿಂದ ಹಿಂತಿರುಗಿರಬಹುದು. ಮಡಕಶಿರಾದ ಕ್ರಿ.ಶ.೯೩೬ರ ಶಾಸನವು ಅಣ್ಣಿಗನು ನೆಮ್ಮದಿಯಿಂದ ರಾಜ್ಯವಾಳುತ್ತಿದ್ದನೆಂದು ದಾಖಲಿಸಿದೆ. ನಂತರ ಕ್ರಿ.ಶ. ೯೪೦ರ ದಿಯೋಲಿ ತಾಮ್ರಶಾಸನದಲ್ಲಿ ರಾಷ್ಟ್ರಕೂಟ ದೊರೆ ಮೂರನೇ ಕೃಷ್ಣನು ನೊಳಂಬ ಅಣ್ಣಿಗನನ್ನು ಅನೇಕ ಯುದ್ಧಗಳಲ್ಲಿ ಸೋಲಿಸಿ ಅತ್ಯಂತ ಕಷ್ಟಕ್ಕೀಡು ಮಾಡಿದನೆಂದು ಹೇಳಿದೆ. ಇದಾದ ಮೇಲೆ ಅಣ್ಣಿಗನ ಬಗ್ಗೆ ಯಾವುದೇ ದಾಖಲೆಗಳು ಲಭ್ಯವಿಲ್ಲದ ಕಾರಣ ಅವನ ಆಳ್ವಿಕೆ ಕ್ರಿ.ಶ.೯೪೦ರಲ್ಲಿ ಕೊನೆಗೊಂಡಿರಬಹುದು. ಏಕೆಂದರೆ ೯೪೨ರಲ್ಲಿ ಅಣ್ಣಿಗನ ತಮ್ಮನಾದ ಇರಿವನೊಳಂಬ ದಿಲೀಪನು ರಾಜ್ಯವಾಳುತ್ತಿದ್ದ ಬಗ್ಗೆ ಶಾಸನಗಳಿವೆ.

**ಇರಿವನೊಳಂಬ ದಿಲೀಪ:** ವೀರನೊಳಂಬ ಅಣ್ಣಿಗನ ತಮ್ಮನಾದ ಇರಿವನೊಳಂಬ ದಿಲೀಪನ ಆಳ್ವಿಕೆ ಕ್ರಿ.ಶ. ೯೪೧ಕ್ಕೆ ಆರಂಭಗೊಂಡಿತು. ಇವನ ಕಾಲದ ಅತ್ಯಂತ ಪ್ರಾಚೀನ ಶಾಸನವೆಂದರೆ ಶಿರಾ ತಾಲೂಕಿನ ತಡಕಲೂರು ಗ್ರಾಮದ ಕ್ರಿ.ಶ. ೯೪೯ರ ಶಾಸನ. ಏಲವಾಕ್ಯ ದಿಲೀಪನು ತನ್ನ ಪಟ್ಟದ ಸಮಯದಲ್ಲಿ ರಾಣಿ ಅಂಬಲ ಪೊನ್ನಬ್ಬೆಯ ಹೆಸರಿನಲ್ಲಿ ಅಂಬಲಕೆರೆ, ಪೊನ್ನಮ್ಮನಕಟ್ಟೆ ಹಾಗೂ ಪೊನ್ನಸಂದ್ರ ಎಂಬ ಕೆರೆಗಳನ್ನು ನಿರ್ಮಿಸಿದ್ದನ್ನು ಈ ಶಾಸನ ದಾಖಲಿಸಿದೆ ಇದು ಕ್ರಿ.ಶ. ೯೪೩ರ ಹೇಮಾವತಿ ಶಾಸನ, ಶುಭಕೃತು ಸಂವತ್ಸರದಲ್ಲಿ ಹೆಂಜೇರುವಿನ ನನ್ನೀಶ್ವರ ದೇವರಿಗೆ ವಕ್ಕಾಣಿಭಟಾರರ ಶಿಷ್ಯ ಲಕುಲೀಶನ ಅವತಾರವೆಂದು ಪರಿಗಣಿಸಲ್ಪಟ್ಟ ಚಿಲುಕ ಭಟಾರನ ಪಾದವನ್ನು ತೊಳೆದು ಹಿರಿಯ ಬಾಣಗೆರೆಯ ಆದಾಯವನ್ನು ಸರ್ವಭಾದಾಪರಿಹಾರವಾಗಿ ನೀಡಿದ್ದನು ದಾಖಲಿಸಿದೆ. ಇವನು ರಾಷ್ಟ್ರಕೂಟ ಮೂರನೇ ಕೃಷ್ಣನ ಮಿತ್ರನಾಗಿದ್ದು ಚೋಳರ ಮೇಲಿನ ದಂಡಯಾತ್ರೆಯಲ್ಲಿ ಪಾಲ್ಗೊಂಡಿದ್ದನು. ಈ ಯುದ್ಧವನ್ನು ಹೊರತುಪಡಿಸಿದರೆ ಸದ್ಯಕ್ಕೆ ಇವನು ಪಾಲ್ಗೊಂಡ ಯುದ್ಧಗಳ ಬಗ್ಗೆ ಮಾಹಿತಿ ಇಲ್ಲ. ಕ್ರಿ.ಶ. ೯೬೧ರ ಮುಳಬಾಗಿಲು ತಾಲೂಕಿನ ಶಾಸನದಲ್ಲಿ ಮಹಾಬಲಿ ಬಾಣರು ಮತ್ತು ವೈದುಂಬರು ದಿಲೀಪರಸನ ಸಾಮಂತರಾಗಿದ್ದು ಮಹಾಬಲಿ ವಂಶದ ಸಾಂಬಯ್ಯನು ಬಿದಿರೂರನ್ನು ಆಳುತ್ತಿದ್ದನೆಂದು ಹೇಳಿದೆ. ಮಡಕಶಿರಾದ ಶಾಸನವೊಂದು ಮಲ್ಲಣಸಿವರಿ ಎಂಬುವನು ಚಿರಪಿ ೧೨ ಪ್ರಾಂತವನ್ನಾಳುತ್ತಿದ್ದನೆಂದು ಹೇಳಿದರೆ ಅವನಿಯಲ್ಲಿ ದೊರೆತಿರುವ ಶಾಸನವು ತ್ರಿಭುವನ ಕರ್ತಾರ ಭಟಾರ ಅಥವಾ ಕಲಿಯುಗ ರುದ್ರದೇವನು ಪ್ರಖ್ಯಾತ ಧರ್ಮಗುರುವಾಗಿದ್ದು, ಅವನಿ ಸ್ಥಾನವನ್ನು ೪೦ ವರ್ಷಗಳ ಕಾಲ ಆಳಿ ೩೦ ದೇವಾಲಯಗಳನ್ನೂ ಎರಡು ಕೆರೆಗಳನ್ನೂ ಕಟ್ಟಿಸಿ ಕ್ರಿ.ಶ. ೯೬೧ರಲ್ಲಿ ಮೃತನಾದನೆಂದು ಹೇಳುತ್ತದೆ. ಇರಿವನೊಳಂಬ ದಿಲೀಪನು ಕ್ರಿ.ಶ. ೯೬೮ ರ ವರೆಗೆ ಮೂರನೆಯ

ಕೃಷ್ಣನ ಸಾಮಂತನಾಗಿದ್ದು, ಇಬ್ಬರೂ ಯಾವುದೋ ಯುದ್ದದಲ್ಲಿ ಮರಣಿಸಿದಂತೆ ತೋರುತ್ತದೆ. ಇವನ ಮಗನಾದ ನನ್ನಿನೊಳಂಬನು ಗಂಗ ಆರು ಸಾವಿರ ಪ್ರಾಂತದ ಆಳ್ವಿಕೆ ನಡೆಸುತ್ತಿದ್ದು ನನ್ನಿನೊಳಂಬನ ಮಗ ಎರಡನೇ ಪೊಳಲ್ಚೋರನು ಆಂಧ್ರದ ಅನಂತಪುರ ಜಿಲ್ಲೆಯ ಕೆಲ ಭಾಗಗಳನ್ನು ಆಳುತ್ತಿದ್ದನು. ಇನ್ನೊಬ್ಬ ಮಗ ಎರಡನೇ ಅಯ್ಯಪ್ಪದೇವ ಬೆಂಗಳೂರು ಜಿಲ್ಲೆಯ ಕೆಲ ಭಾಗಗಳಿಗೆ ಅಧಿಪತಿಯಾಗಿದ್ದನು. ಹೀಗೆ ದಿಲೀಪರಸನ ಕಾಲದಲ್ಲಿ ರಾಜ್ಯ ಬಹಳ ವಿಶಾಲವಾಗಿದ್ದುದರಿಂದ ತನ್ನ ಜೀವಿತಾವಧಿಯಲ್ಲಿಯೇ ತನ್ನ ಮಕ್ಕಳನ್ನು ರಾಜ್ಯದ ವಿವಿಧೆಡೆ ಆಳ್ವಿಕೆ ನಡೆಸಲು ನೇಮಕ ಮಾಡಿದ್ದನು.

**ನನ್ನೀನೊಳಂಬ:** ರಾಷ್ಟ್ರಕೂಟ ಮೂರನೇ ಕೃಷ್ಣನ ಮರಣದ ನಂತರ ನೊಳಂಬರು ನನ್ನೀನೊಳಂಬನ ಕಾಲದಲ್ಲಿ ಸ್ವತಂತ್ರರಾಗಲು ಯತ್ನಿಸಿದಂತೆ ತೋರುತ್ತದೆ. ದಕ್ಷಿಣದ ರಾಜಕೀಯದಲ್ಲಿ ಇಂತಹ ಬದಲಾವಣೆಯಾದರೂ ಗಂಗರು ಮಾತ್ರ ರಾಷ್ಟ್ರಕೂಟರಿಗೆ ನಿಷ್ಠರಾಗಿದ್ದರು. ಆಗ ಗಂಗರಾಜ್ಯದಲ್ಲಿ ಎರಡನೆಯ ಮಾರಸಿಂಹನ ಆಳ್ವಿಕೆ ಇತ್ತು. ಗಂಗರ ಜೊತೆಯಲ್ಲಿಯೇ ಬೆಳೆದ ನೊಳಂಬರು ರಾಷ್ಟ್ರಕೂಟರ ಸಹಾಯದಿಂದ ಹೆಂಜೇರಿನಲ್ಲಿ ಪ್ರಬಲ ಶಕ್ತಿಯಾಗಿ ಬೆಳೆದಿದ್ದು, ಅವರಿಂದ ತಮಗೆ ತೊಂದರೆ ತಪ್ಪಿದ್ದಲ್ಲ ಎಂಬ ಅಂಜಿಕೆ ಗಂಗ ಮಾರಸಿಂಹನಿಗೆ ಇದ್ದೇ ಇತ್ತು. ಮಾರಸಿಂಹನ ಶ್ರವಣಬೆಳ್ಗೊಳ ಶಾಸನದಲ್ಲಿ "ನೊಳಂಬರು ನೂರಾರು ರಾಜಕುಮಾರರ ಮತ್ತು ಭಾರಿ ಆನೆಗಳ ಸೈನ್ಯಬಲದ ದುರಭಿಮಾನದಿಂದ ಮೆರೆಯುತ್ತಿದ್ದರು" ಎಂದು ವರ್ಣಿಸಿರುವುದನ್ನು ನೋಡಿದರೆ ನೊಳಂಬರ ಅಟ್ಟಹಾಸ ತಿಳಿಯುತ್ತದೆ. ಆದುದರಿಂದ ಅವರ ಶಕ್ತಿಯನ್ನು ದುರ್ಬಲಗೊಳಿಸಲು ಗಂಗ ಮಾರಸಿಂಹನು ನೊಳಂಬವಾಡಿಯ ಮೇಲೆ ಆಕ್ರಮಣ ಮಾಡಿದನು. ನೊಳಂಬರಿಗೆ ಬಹಳ ನಷ್ಟವಾಯಿತು. ಕೊನೆಗೆ ಮಾರಸಿಂಹನೇ ಯುದ್ಧದಲ್ಲಿ ಗೆದ್ದನು. ಈತನ ಕ್ರಿ.ಶ. ೯೭೧ರ ಶಾಸನವು ಮಾರಸಿಂಹನನ್ನು "ನೊಳಂಬಕುಲಾಂತಕ" ಎಂದು ಕರೆದಿರುವುದರಿಂದ ಈ ಯುದ್ಧದಲ್ಲಿ ಮಾರಸಿಂಹನಿಗೇ ವಿಜಯ ಲಭಿಸಿತೆಂದು ಹೇಳಬಹುದು. ಇವನ ಶ್ರವಣಬೆಳ್ಗೊಳ ಶಾಸನವು "ಓ ಪಲ್ಲವ ನೊಳಂಬ ಓಡಿ ಹೋಗದಿರು, ನೊಳಂಬ ಕುಲಾಂತಕ ಮಾರಸಿಂಹ ಸ್ವರ್ಗಾರೋಹಣ ಮಾಡಿದ್ದಾನೆ" ಎಂದು ಹೇಳಿರುವುದರಿಂದ ನೊಳಂಬ ಪಲ್ಲವರೆಲ್ಲ ಪ್ರಾಣರಕ್ಷಣೆಗಾಗಿ ರಾಜ್ಯ ಬಿಟ್ಟು ಓಡಿ ಹೋಗಿರಬಹುದು. ನನ್ನೀ ನೊಳಂಬ ಮತ್ತವನ ಮಗ ಎರಡನೇ ಪೊಳಲ್ಚೋರರಿಬ್ಬರೂ ಈ ಯುದ್ಧದಲ್ಲಿ (ಕ್ರಿ.ಶ, ೯೬೮) ಮರಣಕ್ಕೀಡಾದ ನಂತರ, ಎರಡನೇ ಮಹೇಂದ್ರ ರಾಜ್ಯವಾಳಿದನು.

**ಎರಡನೇ ಮಹೇಂದ್ರ:** ಶಾಸನಗಳು ಈತನನ್ನು ನೊಳಂಬಾಧಿರಾಜ, ವೀರನೊಳಂಬ, ನೊಳಂಬನಾರಾಯಣ, ವೀರಮಹೇಂದ್ರ ಇತ್ಯಾದಿ ಹೆಸರುಗಳಿಂದ ಕರೆಯುತ್ತವೆ. ಕ್ರಿ.ಶ. ೯೭೭ರ ಬಳ್ಳಾರಿ ಜಿಲ್ಲೆಯ ಕಲುಗೋಡು ಶಾಸನವು ಮಹೇಂದ್ರನು ಬರಗೂರಿನಲ್ಲಿ ತಂಗಿದ್ದಾಗ ಗಂಗರ ಎರೆಗಂಗನು ಮರಣ ಹೊಂದಿದ ಸಂದರ್ಭದಲ್ಲಿ, ಮಯ್ದುಮ್ಮನು ಕೀಳ್ಗುಂಟೆಯಾದನೆಂದು ತಿಳಿಸಿದೆ. ಇದರಿಂದ ನನ್ನಿನೊಳಂಬನ ಕಾಲದಲ್ಲಿ ಮಾರಸಿಂಹನಿಂದ ಪರಾಜಿತರಾದ ನೊಳಂಬರು ಬಳ್ಳಾರಿ ಪ್ರದೇಶಕ್ಕೆ ವಲಸೆ ಹೋಗಿದ್ದು, ಮಾರಸಿಂಹನ ಮರಣಾನಂತರ ಪುನಃ ತಮ್ಮ ಮೂಲಸ್ಥಾನ ಹೆಂಜೇರನ್ನು ವಶಪಡಿಸಿಕೊಳ್ಳಲು ನೊಳಂಬರು ಮಹೇಂದ್ರನ ನೇತೃತ್ವದಲ್ಲಿ ಬರಗೂರಿಗೆ ಬಂದಿರಬಹುದೆಂದು ತರ್ಕಿಸಬಹುದಾಗಿದೆ. ಆ ನಂತರ ಮತ್ತೊಮ್ಮೆ ಹೆಂಜೇರು ಪ್ರದೇಶದಲ್ಲಿ ಗಂಗರ ಪ್ರಭುತ್ವವನ್ನು ಅಳಿಸಿ ತಮ್ಮ ಅಧಿಪತ್ಯ ಸ್ಥಾಪಿಸಿರಬೇಕು. ಇವನು ಗಂಗರ ಮೇಲಲ್ಲದೆ ಚೋಳರ ಮೇಲೂ ದಂಡಯಾತ್ರೆ ಕೈಗೊಂಡಿದ್ದನು. ಚಿತ್ತೂರು ಜಿಲ್ಲೆಯ ಕರ್ಷನಪಳ್ಳಿ ಶಾಸನದಲ್ಲಿ ಮಹೇಂದ್ರನು ಚೋಳ್ನಾಡಿನಿಂದ ಹಿಂತಿರುಗುವಾಗ ನೊಳಂಬವಾಡಿಯನ್ನು ಹೊಕ್ಕು ಗಂಗ-೬೦೦೦ ಪ್ರಾಂತದ ಕೋಳಾಲದಲ್ಲಿಳಿದು ಕೀರ್ತಿಗಾಮುಂಡನ ಮಗ ನೊಳಂಬಗಾವುಂಡನಿಗೆ ಪಟ್ಟವನ್ನು ಕಟ್ಟಿ ಪುಲಿನಾಡಿನ ಕೆರೆಯ ಬೆಳಗಟ್ಟೂರನ್ನು ಕೊಡುಗೆಯಾಗಿ ಕೊಟ್ಟನೆಂದು ಹೇಳಿದೆ. ಆದರೆ ಈ ಮಹೇಂದ್ರನು ಚೋಳನಾಡಿಗೆ ಏಕೆ ಹೋದನೆಂಬ ಅಂಶ ಶಾಸನದಲ್ಲಿ ಸ್ಪಷ್ಟವಾಗಿಲ್ಲ. ಕ್ರಿ.ಶ. ೯೮೧ರ ನಂತರ ಇವನ ಶಾಸನಗಳು ದೊರೆತಿಲ್ಲ. ಆದರೆ ಅವನ ತಾಯಿ ತನ್ನ ಮಗ ಮಹೇಂದ್ರನ ಹೆಸರಿನಲ್ಲಿ ಅನೇಕ ದಾನಧರ್ಮಗಳನ್ನು ಮಾಡಿ ತನ್ನ ಕೊನೆಯ ಮಗ ಇರಿವನೊಳಂಬನ ರಾಜ್ಯಭಾರವನ್ನು ವೀಕ್ಷಿಸುತ್ತಿದ್ದಳೆಂದು ಶಾಸನದಲ್ಲಿ ಹೇಳಿದೆ. ಅಲ್ಲದೆ ಕ್ರಿ.ಶ. ೯೯೦ರಲ್ಲಿ ಚೋಳರು ನೊಳಂಬವಾಡಿಯನ್ನು ಆಕ್ರಮಿಸಿಕೊಂಡಿದಕ್ಕೆ ಪೂರಕ ಶಾಸನಗಳಿವೆ. ಕ್ರಿ.ಶ. ೯೮೧–೯೯೦ರ ಅವಧಿಯಲ್ಲಿ ದೀವಬ್ಬರಸಿಯು ನೊಳಂಬ ರಾಜ್ಯವನ್ನು ತನ್ನ ಮಗನ ಹೆಸರಿನಲ್ಲಿ ಆಳುತ್ತಿದ್ದಳೆಂದು ಅವನಿ ಶಾಸನದಲ್ಲಿ ಹೇಳಿದ್ದು, ಮಹೇಂದ್ರನನ್ನು ಕ್ರಿ.ಶ. ೯೮೪ರಲ್ಲಿ ರಕ್ಕಸಗಂಗ ನಾಲ್ಕನೆಯ ರಾಚಮಲ್ಲನು ಯುದ್ಧರಂಗದಲ್ಲಿ ಕೊಂದ ಅಂಶ ಬೇರೆ ಶಾಸನಗಳಿಂದ ವೇದ್ಯವಾಗುತ್ತದೆ.

ಎರಡನೇ ಮಹೇಂದ್ರನ ನಂತರ ಆತನ ತಮ್ಮ ಇರಿವನೊಳಂಬ ಘಟೆಯಂಕಕಾರ ರಾಜ್ಯವನ್ನಾಳಿದನು. ಏತನ್ಮಧ್ಯೆ, ರಾಜರಾಜ ಚೋಳನು ಚೋಳಸಾಮ್ರಾಜ್ಯದ ಚಕ್ರವರ್ತಿಯಾದಾಗ ಕರ್ನಾಟಕದ ಮೇಲಿನ ದಂಡಯಾತ್ರೆಗಳನ್ನು ಮುಂದುವರಿಸಿದನು. ಅವನ ದಾಳಿಗೆ ತುತ್ತಾದ ಮೊದಲ ರಾಜ್ಯವೆಂದರೆ ಗಂಗವಾಡಿ. ತರುವಾಯ ನೊಳಂಬವಾಡಿ. ಚೋಳರು ನೊಳಂಬವಾಡಿಯ ಮೇಲೆ ಆಕ್ರಮಣ ಮಾಡಿ ಕ್ರಿ.ಶ. ೯೯೦ರಲ್ಲಿ ರಾಜ್ಯದ ದಕ್ಷಿಣ ಭಾಗವನ್ನು ವಶಪಡಿಸಿಕೊಂಡರು. ಇದರಿಂದ ದೀವಾಂಬಿಕೆಯು ಇರಿವನೊಳಂಬನನ್ನು ಕರೆದುಕೊಂಡು ಕಲ್ಯಾಣ ಚಾಳುಕ್ಯರ ಆಶ್ರಯ ಪಡೆದಳು. ಹೀಗಾಗಿ ಕ್ರಿ.ಶ. ೧೦೦೦ದ ನಂತರ ನೊಳಂಬರು ತಮ್ಮ ಸ್ವಾತಂತ್ರ್ಯವನ್ನು ಸಂಪೂರ್ಣವಾಗಿ ಕಳೆದುಕೊಂಡು ಕಲ್ಯಾಣದ ಚಾಲುಕ್ಯರ ಸಾಮಂತರಾದರು. ಆ ನಂತರ ಜಗದೇಕಮಲ್ಲ ನೊಳಂಬ ಪಲ್ಲವ ಪೆರ್ಮಾಡಿ ಉದಯಾದಿತ್ಯ (೧೦೧೮–೧೦೩೭)ನ ಕಾಲದಲ್ಲಿ ಕಂಪ್ಲಿಯನ್ನು ತಮ್ಮ ಖಾಯಂ ರಾಜಧಾನಿಯನ್ನಾಗಿ ಮಾಡಿಕೊಂಡರು. ಏಕೆಂದರೆ ನೊಳಂಬವಾಡಿಯ ದಕ್ಷಿಣ ಭಾಗವನ್ನಾಕ್ರಮಿಸಿ ಕೊಂಡಿದ್ದ ಚೋಳರಿಗೆ ಹೇಮಾವತಿಯು ಚೋಳ ರಾಜ್ಯದ ಗಡಿಗೆ ಸಮೀಪದಲ್ಲಿದ್ದುದರಿಂದ ರಾಜಧಾನಿಯನ್ನು ಉತ್ತರಕ್ಕೆ ವರ್ಗಾಯಿಸುವುದು ಅವರಿಗೆ ಅನಿವಾರ್ಯವಾಯಿತು. ಹೀಗೆ ಹೇಮಾವತಿಯನ್ನು ಬಿಟ್ಟು ಹೋದ ನಂತರ ನೊಳಂಬರಿಗೆ ತುಮಕೂರಿನ ಪ್ರದೇಶದೊಂದಿಗಿದ್ದ ಸಂಬಂಧವು ಕಡಿದುಹೋಯಿತು. ಕಂಪ್ಲಿ ಪರಿಸರದಲ್ಲಿ ಅವರು ಕ್ರಿ.ಶ.೧೦೫೪ರವರೆಗೂ ಅಸ್ತಿತ್ವದಲ್ಲಿದ್ದು ಆ ನಂತರ ಪತನ ಹೊಂದಿದರು.

**ಚೋಳರು:** ಕರ್ನಾಟಕದಲ್ಲಿ ಚೋಳರ ಆಳ್ವಿಕೆಗೆ ಸಂಬಂಧಿಸಿದ ಮೊದಲ ದಾಖಲೆ ಚನ್ನಪಟ್ಟಣ ತಾಲೂಕಿನ ಕೂಡಲೂರಿನಲ್ಲಿ ದೊರೆತಿದ್ದು ಅದು ಚೋಳ ಸಾಮ್ರಾಜ್ಯದ ಸ್ಥಾಪಕನಾದ ವಿಜಯಾಲನಿಗೆ ಸೇರಿದ ಶಾಸನವಾಗಿದೆ. ಈ ಜಿಲ್ಲೆಯ ಗಡಿಗೆ ಹೊಂದಿಕೊಂಡಿರುವ ಬೆಂಗಳೂರಿನಲ್ಲಿ ಆಳ್ವಿಕೆ ನಡೆಸುತ್ತಿದ್ದ ಚೋಳರು ಮೊದಲನೇ ರಾಜರಾಜನ ಕಾಲದಲ್ಲಿ ಮೊದಲ ಬಾರಿಗೆ ಜಿಲ್ಲೆಯ ಕುಣಿಗಲ್ ಮತ್ತು ಮಧುಗಿರಿ ತಾಲೂಕಿನ ಕೆಲ ಭಾಗಗಳನ್ನು ಗೆದ್ದುಕೊಂಡರು. ಈ ಭಾಗಗಳು ಒಂದನೇ ರಾಜೇಂದ್ರ ಚೋಳ, ಒಂದನೇ ರಾಜಾಧಿರಾಜ ಚೋಳ, ರಾಜೇಂದ್ರದೇವ ಚೋಳ, ಒಂದನೇ ಕುಲೋತ್ತುಂಗ ಚೋಳನ ಕಾಲದವರೆಗೂ ಚೋಳಸಾಮ್ರಾಜ್ಯದ ಭಾಗವಾಗಿದ್ದವು. ನಂತರ ಚೋಳರಿಂದ ನೇಮಕಗೊಂಡಿದ್ದ ಅಧಿಕಾರಿಗಳು ಆಡಳಿತ ನಡೆಸಿದರು.

ಜಿಲ್ಲೆಯಲ್ಲಿ ಚೋಳರಿಗೆ ಸಂಬಂಧಿಸಿದ ಹನ್ನೊಂದನೇ ಶತಮಾನಕ್ಕೆ ಸೇರಿದ ಎರಡು ತಮಿಳು ಶಾಸನಗಳು ಕುಣಿಗಲ್ ತಾಲೂಕಿನ ಕೊತ್ತಗೆರೆ ಮತ್ತು ಮಧುಗಿರಿ ತಾಲೂಕಿನ ತೆರೆಯೂರಿನಲ್ಲಿ ದೊರೆತಿವೆ. ಅಲ್ಲದೆ, ಅಮರಾಪುರ ಹಾಗೂ ಶಿರಾ ತಾಲೂಕಿನ ದೊಡ್ಡ ಬಾಣಗೆರೆಗಳಲ್ಲೂ ರಾಜೇಂದ್ರ ಚೋಳದ ಕಾಲದ ಶಾಸನಗಳು ದೊರೆತಿದೆ. ಕರ್ನಾಟಕದ ಚೋಳ ಆಳ್ವಿಕೆಯ ಭಾಗಗಳನ್ನು ಆಡಳಿತದ ಅನುಕೂಲಕ್ಕಾಗಿ ಏಳು ಮಂಡಳಗಳನ್ನಾಗಿ ವಿಂಗಡಿಸಲಾಗಿತ್ತು. ಆಡಳಿತಾತ್ಮಕ ವಿಭಾಗಗಳಾಗಿದ್ದ ಈ ಏಳು ಮಂಡಲಗಳಲ್ಲಿ ವಿಕ್ರಮ ಚೋಳಮಂಡಲಂ ಕೂಡಾ ಒಂದಾಗಿದ್ದು, ಇದನ್ನು ಒಂದನೇ ರಾಜೇಂದ್ರ ಚೋಳನು ಸ್ಥಾಪಿಸಿದನು. ಈ ಮಂಡಲಕ್ಕೆ ಇಂದಿನ ತುಮಕೂರು ಜಿಲ್ಲೆಯ "ಕುಣುಂಗಿಲ್‌ನಾಡು" ಸೇರಿತ್ತು. ಈ ನಾಡಿನಲ್ಲಿ ಬೇಗೂರು ಅಂದರೆ ವೆಪ್ಪುರ್ (ಶ್ರೀವಿಕ್ರಮಾದಿತ್ಯ ಚತುರ್ವೇದಿ ಮಂಗಲ) ಎಂಬ ಅಗ್ರಹಾರವು ಅಂತರ್ಗತವಾಗಿತ್ತು. ಎರಡನೇ ರಾಜೇಂದ್ರದೇವನು ಸ್ಥಾಪಿಸಿದ್ದ ವಿಜಯರಾಜೇಂದ್ರ ಮಂಡಲದಲ್ಲಿ ಮಧುಗಿರಿಯೂ ಸೇರಿತ್ತು.

ಕ್ರಿ.ಶ.೧೦೧೮ ರಿಂದ ಕ್ರಿ.ಶ.೧೦೫೪ರವರೆಗೆ ಆಳಿದ ರಾಜಾಧಿರಾಜದೇವ ಚೋಳನು ಕ್ರಿ.ಶ. ೧೦೪೮ರಲ್ಲಿ ಕುಣಿಗಲ್‌ಗೆ ರಾಜೇಂದ್ರ ಚೋಳಪುರವೆಂದು ಮರುನಾಮಕರಣ ಮಾಡಿದ್ದನು. ಅಲ್ಲಿನ ರಾಜೇಂದ್ರ ಚೋಳೇಶ್ವರ ಮುಡೈ ರಾಜಾಧಿರಾಜ ವಿಡಂಗರ್ ದೇವರ (ತನ್ನ ತಂದೆ ಮೊದಲನೇ ರಾಜೇಂದ್ರ ಚೋಳನ ಹೆಸರಿನಲ್ಲಿ ಸ್ಥಾಪನೆಗೊಂಡಿದ್ದ ಶಿವಾಲಯ) ತಿರುನಾಳ ಮತ್ತು ತಿರುವಿಳಾಪ್ಪುರಂ ಮೆರವಣಿಗೆ, ಉತ್ಸವ,ಹಬ್ಬದ ಆಚರಣೆಗೆ ಕೊತ್ತಗೆರೆ ಗ್ರಾಮದ ಕೆಳಗಿನ ಕೆರೆಯ ೩೦ ಕೊಳಗ ಗದ್ದೆ ಭೂಮಿಯನ್ನು ದಾನ ಸುತ್ತಲಿನ ನಾಲ್ಕು ದಿಕ್ಕುಗಳ ೧೫೦೦ ನಕರರು (ವ್ಯಾಪಾರಿಗಳು) ದಾನ ನೀಡಿರುವುದಾಗಿ ತಿಳಿಸುತ್ತದೆ.

ರಾಜಾಧಿರಾಜನ ನಂತರ ಅವನ ಮಗ ರಾಜೇಂದ್ರ ಚೋಳನಿಗೆ (೧೦೫೪–೧೦೬೪) ಸೇರಿದ ಶಾಸನ ಮಧುಗಿರಿ ತಾಲೂಕಿನ ತೆರೆಯೂರಿನಲ್ಲಿ ದೊರೆತಿದೆ. ಕ್ರಿ.ಶ.೧೦೬೧ರ ಈ ಶಾಸನವು ಅವನ ಬಿರುದಾವಳಿಗಳಿಂದ ಕೂಡಿದ್ದು ಕಲ್ಯಾಣದ ಚಾಳುಕ್ಯ ದೊರೆ ಅಹವಮಲ್ಲನನ್ನು ಹಿಮ್ಮೆಟ್ಟಿಸಿ ಅವನಿಂದ 'ಭದ್ರ' ಜಾತಿಯ ೭೫ ಆನೆಗಳನ್ನು ವಶಪಡಿಸಿಕೊಂಡ ಅವನ ಸೇನಾಪತಿಯೊಬ್ಬನು ರಾಜೇಂದ್ರ ಚೋಳ ಮಂಡಲದ ವಿಜಯರಾಜೇಂದ್ರ ಮಂಡಲದಲ್ಲಿ ದಾನ ನೀಡಿರುವುದನ್ನು ದಾಖಲಿಸಿದೆ. ಆದರೆ ದಾನದ ವಿವರವಿರುವ ಭಾಗ ತ್ರುಟಿತವಾಗಿವೆ.

ಹೀಗೆ ಜಿಲ್ಲೆಯ ಕೆಲವು ಭಾಗವು ತಮಿಳುನಾಡಿನ ಚೋಳಸಾಮ್ರಾಟರು ನಿಯಂತ್ರಣಕ್ಕೆ ಸುಮಾರು ೭೦ ವರ್ಷ ಒಳಪಟ್ಟಿತು. ಇದೇ ಸಂದರ್ಭದಲ್ಲಿ ಚೋಳ ವಂಶನಾಮದ ಸ್ಥಳೀಯರು ನಿಡುಗಲ್‌ನಲ್ಲಿ ಏಳಿಗೆಗೆ ಬಂದು ನಿಡುಗಲ್ ಚೋಳರೆಂಬ ಹೆಸರಿನಿಂದ ರಾಜ್ಯವಾಳತೊಡಗಿದರು.

**ನಿಡುಗಲ್ ಚೋಳರು:** ಸುಮಾರು ೧೧ನೇ ಶತಮಾನದ ಉತ್ತರಾರ್ಧದಲ್ಲಿ ಕರ್ನಾಟಕದ ದಕ್ಷಿಣ ಭಾಗದಲ್ಲಿ ತಮಿಳು ಚೋಳರೂ ದ್ವಾರಸಮುದ್ರದ ಹೊಯ್ಸಳರೂ ಉತ್ತರದಲ್ಲಿ ಕಲ್ಯಾಣದ ಚಾಳುಕ್ಯರೂ ಪ್ರಬಲರಾಗುತ್ತಾ ಪರಸ್ಪರ ಯುದ್ಧಗಳಲ್ಲಿ ತೊಡಗಿದ್ದುದರಿಂದ ಶಾಂತಿ ಇಲ್ಲದಂತಾಯಿತು. ಇಂತಹ ಸನ್ನಿವೇಶದಲ್ಲಿ ನಿಡುಗಲ್ಲು ಚೋಳರು ಒಮ್ಮಿಂದೊಮ್ಮೆಗೆ ಕಾಣಿಸಿಕೊಳ್ಳುತ್ತಾರೆ. ಕಾಲಚೋಳರೆಂದು ಕರೆದುಕೊಳ್ಳುತ್ತಿದ್ದ ಇವರು ಕ್ರಿ.ಶ. ೧೧ನೇ ಶತಮಾನದಿಂದ ೧೩ನೇ ಶತಮಾನದ ಅಂತ್ಯದವರೆಗೆ ಸುಮಾರು ಮೂರು ಶತಮಾನ ಕಾಲ ತುಮಕೂರು ಜಿಲ್ಲೆಯ ಉತ್ತರಭಾಗ ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ಪಶ್ಚಿಮ ಭಾಗದಲ್ಲಿ ಪ್ರಭಾವಯುತವಾಗಿ ಆಳ್ವಿಕೆ ನಡೆಸಿದರು. ಇವರನ್ನು ಸಾಮಾನ್ಯವಾಗಿ ನಿಡುಗಲ್ ಚೋಳರೆಂದೇ ಕರೆಯಲಾಗುತ್ತಿದೆ.

ನಿಡುಗಲ್ಲಿನ ಚೋಳರು ಈ ಜಿಲ್ಲೆಯ ಪಾವಗಡ ಮತ್ತು ಶಿರಾ, ಹಾಗೂ ನೆರೆಯ ಚಿತ್ರದುರ್ಗ ಜಿಲ್ಲೆಯ ಹಿರಿಯೂರು, ಚಳ್ಳಕೆರೆ, ಮೊಳಕಾಲ್ಮೂರು ತಾಲೂಕುಗಳ ಶಾಸನಗಳಲ್ಲೂ ಕಾಣಿಸಿಕೊಳ್ಳುತ್ತಾರೆ. ವೀರಪಾಂಡ್ಯ ಇರುಂಗೋಳನು ಕ್ರಿ.ಶ. ೧೧೨೮ರಲ್ಲಿ ಚಾಳುಕ್ಯ ಮೂರನೇ ಸೋಮೇಶ್ವರನ ಕಾಲದಲ್ಲಿ ಕಣಿಯಕಲ್–೩೦೦, ರೊದ್ದ–೩೦೦, ಶಿರಾ–೩೦೦, ಹರವೆ–೩೦೦, ಸಿಂದವಾಡಿ–೧೦೦೦ಕ್ಕೆ ಅಧಿಪತಿಯಾಗಿದ್ದನೆಂದು ಶಿರಾ ತಾಲೂಕಿನ ದೊಡ್ಡಬಾಣಗೆರೆ ಶಾಸನ ತಿಳಿಸುತ್ತದೆ. ಆರನೇ ವಿಕ್ರಮಾದಿತ್ಯನ ಆಳ್ವಿಕೆಯಲ್ಲಿ ಈತನು ಕಣಿಯಕಲ್–೩೦೦ರ ಅಧಿಪತಿ ಎಂದೂ ಇದರ ಕೇಂದ್ರಸ್ಥಳ ಗೋವಿಂದವಾಡಿ ಎಂದು ತಿಳಿಯುತ್ತದೆ. ಇವನಿಗೂ ಮೊದಲು ಆಳ್ವಿಕೆ ನಡೆಸಿದ ಚೋಳರಾಜ ಬೊಮ್ಮೆದೇವನ ಅಮರಾಪುರ ಹೋಬಳಿ ಕ್ವಾರ್‍ಯಾ ಗ್ರಾಮದ ಶಾಸನದಲ್ಲಿ ಅವರನ್ನು ಒರೆಯೂರು ಪುರವರಾಧೀಶ್ವರ, ರೊದ್ದದಗೋವ ಖಡ್ಗ ಸಹದೇವ ಎಂಬ ಬಿರುದುಗಳಿಂದ ಬಣ್ಣಿಸಲಾಗಿದೆ. ಜೊತೆಗೆ "ಬಂಮದೇವ ಚೋಳ ಮಹಾರಾಜರು ಗೋವಿಂದವಾಡಿಯ ರಾಜ್ಯಂಗೈಯುತ್ತಮಿರೆ" ಎಂದಿರುವುದರಿಂದ ಇವರು ಆರಂಭದಲ್ಲಿ ಗೋವಿಂದವಾಡಿಯಿಂದ ಆಳುತ್ತಿದ್ದರೆಂದು ಖಚಿತವಾಗುತ್ತದೆ.

ಆರಂಭದಲ್ಲಿ ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ಗೋವಿಂದವಾಡಿಯಿಂದ ಆಳುತ್ತಿದ್ದ ಚೋಳರ ಜಟಾ, ಬ್ರಹ್ಮದೇವ(ಕ್ರಿ.ಶ. ೧೦೧೩–೪೪) ಮಂಗರಸ ಹಾಗೂ ಗೋವಿಂದರಸರ ನಂತರ ಮೊದಲನೇ ಇರುಂಗೋಳ (ಕ್ರಿ.ಶ. ೧೧೪೪–೫೪) ಚೋಳನು ಅಧಿಕಾರ ನಡೆಸಿದನು. ಇವನ ನಂತರ ಆಳಿದ ಮಲ್ಲಿದೇವನು (ಕ್ರಿ.ಶ.೧೧೫೪–೧೯೬) ರಾಜಧಾನಿಯನ್ನು ಹೆಂಜೇರುವಿಗೆ ಬದಲಾಯಿಸಿದನು. ಈತನ ೧೩ ಶಾಸನಗಳು ದೊರೆತಿದ್ದು ಎಲ್ಲಾ ಶಾಸನಗಳೂ ಅವನು ಹೆಂಜೇರಿನಿಂದ ಆಳುತ್ತಿದ್ದುದಾಗಿ ತಿಳಿಸಿವೆ. ಕ್ರಿ.ಶ.೧೧೫೦ರ ನಿಡುಗಲ್ಲಿನ ಶಾಸನವೊಂದು ಮಲ್ಲಿದೇವನನ್ನು "ಸತ್ಯಾಶ್ರಯ ಕುಲತಿಲಕ ಚಾಲುಕ್ಯಾಭರಣಂ" ಎಂದು ಬಣ್ಣಿಸಿದೆ. ಇವನ ಸೇನಾಧಿಪತಿ ಮಹಾತಂತ್ರಪಾಲನಾದ 'ನಾಮಣ'ನು ನಿಡುಗಲ್ಲಿನಲ್ಲಿ ಶ್ರೀನಾಗೇಶ್ವರ ದೇವರ ನೈವೇದ್ಯಕ್ಕೆ ಅಂಗಭೋಗ, ರಂಗಭೋಗಕ್ಕೆ ನಂದಾದೀವಿಗೆಗೆ ಬ್ರಾಹ್ಮಣರ ತಪೋಧನದ ಆಹಾರಾನ್ನದಾನಕ್ಕೆ ಮತುಕೂರಿನ ಮೂಡಣ ನಾಗಸಮುದ್ರದ ಬಳಿ ಕನ್ನೆಗೆರೆಯನ್ನು ಕಟ್ಟಿಸಿ ದಾನದತ್ತಿಗಳನ್ನು ಕೊಟ್ಟು, ವಿವಿಧ ಸುಂಕಗಳನ್ನು ಆ ದೇವಾಲಯಕ್ಕೆ ಕೊಡಬೇಕೆಂದು ಶಾಸನ ಹಾಕಿಸಿದ್ದಾನೆ. ಪಾವಗಡ ತಾಲೂಕಿನ ಅರಸೀಕೆರೆಯ ಕ್ರಿ.ಶ. ೧೧೬೭ರ ಶಾಸನವೊಂದು ಜಗದೇಕ ಮಲ್ಲಿದೇವ ಚೋಳನನ್ನು, 'ಅರವತ್ತು ನಾಲ್ವರಂ ಮಂಡಳಿಕರ ಗಂಡ', 'ಬಂಟರ ಭಾವ' ಎಂದು ಹೊಗಳಿ ಆತನ ಪತ್ನಿ ಲಕ್ಷ್ಮಿದೇವಿಯು ನಿಡಗಲ್ಲು ಸಮೀಪದ ಅರಸೀಕೆರೆಯ ಶ್ರೀಮಲ್ಲಿಕಾರ್ಜುನ ದೇವರಿಗೆ ದಾನ ನೀಡಿದ್ದನ್ನು ದಾಖಲಿಸಿದೆ. ಈ ಎರಡೂ ಶಾಸನಗಳನ್ನು ಪರಿಶೀಲಿಸಿದರೆ ಹೊಯ್ಸಳ ವಿಷ್ಣುವರ್ಧನನಿಂದ ಗೋವಿಂದವಾಡಿಯು ಆಕ್ರಮಣಕ್ಕೆ ತುತ್ತಾದ ಮೇಲೆ ಚೋಳರು ಹೆಂಜೇರಿಗೆ ರಾಜಧಾನಿ ಬದಲಿಸಿಕೊಂಡಿರಬಹುದೆಂದು ತರ್ಕಿಸಬಹುದಾಗಿದೆ. ಮಲ್ಲಿದೇವ ತನ್ನ ಪಟ್ಟದರಾಣಿ ಲಕ್ಷ್ಮಿದೇವಿ ಜೊತೆಗೂಡಿ ಶಿರಾ ನಾಡಿನ ಮಲೆಯೂರಿನಲ್ಲಿ ನಿರ್ಮಿಸಿದ್ದ ಪಂಚಲಿಂಗ ದೇವಾಲಯದಲ್ಲಿದ್ದ ಮೂರ್ತಿಗಳಲ್ಲಿ ಇರುಂಗೋಳೇಶ್ವರ ದೇವರೂ ಒಂದಾಗಿತ್ತು(ಉಳಿದ ನಾಲ್ಕು–ಮಲ್ಲಿಕಾರ್ಜುನ, ಲಕ್ಷ್ಮಣೇಶ್ವರ, ಮಹಾದೇವೇಶ್ವರ ಮತ್ತು ಸೂರ್ಯದೇವ). ಇವನು ಹೊಯ್ಸಳ ಮೊದಲನೇ ನರಸಿಂಹನ ಸಮಕಾಲೀನನಾಗಿದ್ದು ನರಸಿಂಹನ ಮಗಳಾದ ಸಿರಿಯದೇವಿಯನ್ನು ತನ್ನ ಸೊಸೆಯನ್ನಾಗಿ ಮಾಡಿಕೊಂಡಿದ್ದನು. ಕ್ರಿ.ಶ. ೧೧೭೭ರ ನಂತರ ಮಲ್ಲಿದೇವ ಚೋಳ ಮಹಾರಾಜನ ಶಾಸನಗಳು ದೊರೆಯುವುದಿಲ್ಲ.

ಕ್ರಿ.ಶ.೧೧೮೫ರ ಸುಮಾರಿಗೆ ಹೆಂಜೇರನ್ನು ಭೋಗದೇವ ಚೋಳಮಹಾರಾಜನು ಆಳುತ್ತಿದ್ದನು. ಇವನನ್ನು ಮಲ್ಲಿದೇವನೊಂದಿಗೆ (ಎ.ಕ. ೧೨ರ ಮುನ್ನುಡಿಯಲ್ಲಿ) ಸಮೀಕರಿಸಿ ವಿವರಣೆ ನೀಡಲಾಗಿದೆ. ಐತಿಹಾಸಿಕವಾಗಿ ಈ ಸಮೀಕರಣ ಅಸಾಧ್ಯವಾಗುತ್ತದೆ. ಕ್ರಿ.ಶ.೧೧೮೯ ರಿಂದ ೧೧೯೬ರ ಅವಧಿಯಲ್ಲಿ ದೊರಕುವ ಮೂರು ಶಾಸನಗಳಲ್ಲಿ ಕಾಣಿಸಿಕೊಳ್ಳುವ ಭೋಗದೇವ ಚೋಳ ಮಹಾರಾಜನು ಇರುಂಗೋಳನ ಮಗನಾಗಿದ್ದು ಪ್ರಾಯಶಃ ಮಲ್ಲಿದೇವನ ನಂತರ ಹೆಂಜೇರಿನ ಒಡೆತನ ಪಡೆದಿರಬೇಕು.

ಭೋಗದೇವ ಚೋಳಮಹಾರಾಜ ಹಾಗೂ ಅವನ ರಾಣಿ ಬಿಜ್ಜಲದೇವಿಯರ ಮಗನೇ ಬಮ್ಮದೇವ ಚೋಳಮಹಾರಾಜ. ಇವನು ಹೆಂಜೇರಿನಲ್ಲಿ ಪಟ್ಟಕ್ಕೆ ಬಂದ ಕೂಡಲೇ ರೊದ್ದ, ಕಣಿಕಲ್ಲು ಮತ್ತು ಸೀರ್ಯಾನಾಡುಗಳನ್ನು ತನ್ನ ವಶಕ್ಕೆ ತೆಗೆದುಕೊಂಡು ರಾಜ್ಯವನ್ನು ವಿಸ್ತರಿಸಿದನೆಂದು ಮೊಳಕಾಲ್ಮೂರು ಶಾಸನ ತಿಳಿಸುತ್ತದೆ. ಇವನ ಮಂತ್ರಿಯಾದ ಬೀಚ ಎಂಬುವನು ನಿಡಗಲ್ಲು ಕೋಟೆಯನ್ನು ಬಲಪಡಿಸುತ್ತಾನೆ. ಇದರಿಂದ ಪಲ್ಲವರಿಗೆ ಹೆದರಿಕೆಯಾಯಿತು. ಆಂಧ್ರರಿಗೆ ಕುರುಡಾಯಿತು. ಕರ್ನಾಟಕ ಭೀತವಾಯಿತು, ಪಲ್ಲವನು ಬೆನ್ನು ತೋರಿಸಿ ಬಿಲದೊಳಕ್ಕೆ ಸೇರಿಕೊಂಡನು. ಯಾದವರು ಹೆದರಿದರು. ಹೀಗೆ ಯುದ್ಧ ಮಾಡದೆಯೇ ಶತ್ರುಗಳು ಹೆದರಿ ಹಿಂತೆಗೆಯುವಂತೆ ಬೀಚಮಂತ್ರಿ ಮಾಡಿದನೆಂದು ಉತ್ಪ್ರೇಕ್ಷಿಸಲಾಗಿದೆ. ಇವನ ನಂತರ ಎರಡನೇ ಇರುಂಗೋಳ ಸಿಂಹಾಸನಕ್ಕೆ ಬಂದನು. ಇವನು ಬಮ್ಮದೇವ ಮತ್ತು ಬಾಚಲೆಯರ ಮಗ. ಇವನು 'ಕಾಲಂಜನ' ಎಂಬ ಹೆಸರಿರುವ ಬೆಟ್ಟದ ಮೇಲಿನ (ನಿಡಗಲ್ಲು) ಜೋಗವಟ್ಟಿಗೆ ಬಸದಿಗೆ ದತ್ತಿಯನ್ನು ಕೊಟ್ಟಂತೆ ನಿಡುಗಲ್ಲಿನ ಕ್ರಿ.ಶ.೧೨೩೨ರ ಶಾಸನವೊಂದು ತಿಳಿಸುತ್ತದೆ. ಹೊಯ್ಸಳ ಇಮ್ಮಡಿ ಬಲ್ಲಾಳನ ಶಾಸನವೊಂದು ತಿಳಿಸುವಂತೆ ಇವನು ಚೋಳ ಮತ್ತು ಉಚ್ಚಂಗಿ ಪಾಂಡ್ಯರನ್ನು ಸೋಲಿಸಿದ್ದನು. ಕ್ರಿ.ಶ. ೧೨೨೬ ರ ವೇಳೆಗೆ ಈ ಚೋಳ ಮಹಾರಾಜನು ರಾಜಧಾನಿಯನ್ನು ನಿಡುಗಲ್ಲಿಗೆ ಬದಲಾಯಿಸಿದನು.

ಎರಡನೇ ಇರುಂಗೋಳನ ತರುವಾಯ ಇಮ್ಮಡಿ ಬಮ್ಮದೇವ ಪಟ್ಟಕ್ಕೆ ಬಂದನು. ಈತನು ರೊದ್ದ, ಕಣಿಯಕಲ್, ಸೀರೆನಾಡು, ಮದ್ಯಮ್ಮನಾಡ್, ನೊಳಂಬವಾಡಿ, ರೇಮಾಡಿ ಮೊದಲಾದ ಪ್ರದೇಶಗಳನ್ನು ವಶಪಡಿಸಿಕೊಂಡು ಆಳಿದನೆಂದು ಮೊಳಕಾಲ್ಮೂರು ತಾಲೂಕಿನ ೨೦ನೆಯ ಸಂಖ್ಯೆಯ ಶಾಸನ ತಿಳಿಸುತ್ತದೆ. ಇಮ್ಮಡಿ ಬಲ್ಲಾಳನು ತಮಿಳುನಾಡಿನ ಪಾಂಡ್ಯರೊಂದಿಗೆ ವ್ಯವಹರಿಸುತ್ತಿದ್ದಾಗ ಬಮ್ಮದೇವನು ಈ ಎಲ್ಲಾ ಸಾಧನೆಗಳನ್ನು ಮಾಡಲು ಸಾಧ್ಯವಾಯಿತು. ಇವನ ನಂತರ ಆತನ ಹಿರಿಯ ಮಗನಾದ ಮುಮ್ಮಡಿ ಇರುಂಗೋಳನು ಪಟ್ಟಕ್ಕೆ ಬಂದನು (ಕ್ರಿ.ಶ.೧೨೩೭–೧೨೮೦) ಅಜ್ಜಿನವೊಳೆ, ಕಂಬದೂರು, ನಿಡಗಲ್ಲು ಶಾಸನಗಳು ತಿಳಿಸುವಂತೆ ಈತನು ನಿಡುಗಲ್ಲಿನಲ್ಲಿ ಆಳುತ್ತಿದ್ದು, ಈವರೆಗೆ ಒಟ್ಟು ಹತ್ತು ಶಾಸನಗಳು ದೊರೆತಿವೆ. ಈತನಿಗೆ ಗಾಂಗೇಯನಾಯಕ ಎಂಬ ಸಾಮಂತನಿದ್ದನು. ಚೋಳ ಇರುಂಗೋಳನಿಗೂ ಹೊಯ್ಸಳ ಮುಮ್ಮಡಿ ನರಸಿಂಹನಿಗೂ ನಡೆದ ಎರಡು ಪ್ರತ್ಯೇಕ ಕಾಳಗದ ವಿವರ ತುಮಕೂರು ಮತ್ತು ಕಾಟಿಕೆರೆ ಶಾಸನಗಳಲ್ಲಿದೆ. ಅಲ್ಲದೆ, ದೇವರಾಯನದುರ್ಗವನ್ನು ವಶಪಡಿಸಿಕೊಂಡ ಇರುಂಗೊಳನು ಸೇವುಣರಿಗೆ ಸಹಕರಿಸಿ ಹೊಯ್ಸಳರ ವಿರುದ್ಧ ಕಾದಾಡಿದ ಬಗೆಗೆ ವಿವರ ನೀಡುತ್ತದೆ. ಅಮರಾಪುರದ ಶಾಸನವು ಇರುಂಗೋಳನ ಮಗನಾದ ತ್ರಿಪುರಾಂತಕ ದೇವನು ಹನಿಯದುರ್ಗದಲ್ಲಿ ಆಳುತ್ತಿದ್ದು ಕ್ರಿ.ಶ. ೧೨೬೨ರಲ್ಲಿ ಶಿರಾ ನಾಡಿನ ತೈಲಗೆರೆಯ ಶಿವದೇವಾಲಯಕ್ಕೆ ದಾನ ನೀಡಿದ ಬಗ್ಗೆ ತಿಳಿಸುತ್ತದೆ. ಇದರಿಂದ ಇರುಂಗೋಳನೇ ತನ್ನ ಮಗನಿಗೆ ರಾಜ್ಯದ ಒಂದು ಭಾಗವನ್ನು ಬಿಟ್ಟುಕೊಟ್ಟಿರಬೇಕೆನಿಸುತ್ತದೆ. ಏಕೆಂದರೆ ಕ್ರಿ.ಶ. ೧೨೭೮ರವರೆಗೂ ಮುಮ್ಮಡಿ ಇರುಂಗೊಳನೇ ನಿಡುಗಲ್ಲಿನಲ್ಲಿ ಆಳುತ್ತಿದ್ದನೆಂದು ಶಾಸನಗಳು ತಿಳಿಸುತ್ತವೆ.

ಚೋಳರ ಕಿರುಕುಳವನ್ನು ಸಹಿಸದ ಹೊಯ್ಸಳ ಇಮ್ಮಡಿ ನರಸಿಂಹ ಕ್ರಿ.ಶ.೧೨೮೫ರಲ್ಲಿ ನಿಡುಗಲ್ ಹಾಗೂ ಹನಿಯದುರ್ಗಗಳನ್ನು ಜಯಿಸಿ, ನಿಡುಗಲ್ಲಿಗೆ 'ವಿಜಯದುರ್ಗ' ಎಂದು ಮರುನಾಮಕರಣ ಮಾಡಿಸಿದನು. ಆದರೆ, ಇರುಂಗೋಳಚೋಳ ಬೈಚಪ್ಪದಂಡನಾಯಕನು ಮತ್ತೆ ನಿಡುಗಲ್ ದುರ್ಗವನ್ನು ಆಕ್ರಮಿಸಿಕೊಂಡನು. ಆದರೆ, ದಬ್ಬೇಘಟ್ಟವನ್ನಾಳುತ್ತಿದ್ದ ಹೊಯ್ಸಳ ದಂಡ ನಾಯಕ ಹೊಳಕಲ್ಲ ಬೊಮ್ಮನು ಮುಂದೆ ೧೨೯೨ರಲ್ಲಿ ವೀರ ಗಣೇಶನನ್ನು ಯುದ್ಧದಲ್ಲಿ ಕೊಂದು ನಿಡುಗಲ್ ದುರ್ಗವನ್ನು ವಶಪಡಿಸಿಕೊಂಡನು. ಈ ಚೋಳರ ಕೊನೆಯ ದೊರೆ ಗಣೇಶ್ವರದೇವನ ಕಾಲದ ಕ್ರಿ.ಶ. ೧೨೯೨ರ ಪಾವಗಡ ಶಾಸನವೊಂದು ನಿಡುಗಲ್ ಚೋಳರ ವಂಶಾವಳಿಯನ್ನು ನೀಡಿದ್ದಲ್ಲದೆ ನಿಡುಗಲ್ಲಿನ ಸೋಮನಾಥ ದೇವರಿಗೆ ಕೊಟ್ಟ ದಾನ ದತ್ತಿ, ತೆರಿಗೆಗಳ ಬಗ್ಗೆಯೂ ತಿಳಿಸುತ್ತದೆ.

ವೀರಗಣೇಶನ ಮಗ ಇರುಂಗೋಳನನ್ನು ಕ್ಷಮಿಸಿ, ಪಾವಗಡ ತಾಲೂಕಿನ ಗುಂಡಹಳ್ಳಿಯನ್ನಾಳಲು ನೇಮಿಸಿದನಾದರೂ, ತರುವಾಯ ಮಡಕಸಿರಾ ತಾಲೂಕಿನ ಗುಡಿಕೋಟೆ(ಇಂದಿನ ಗುಡಿಬಂಡೆ)ಯನ್ನಾಳಲು ನಿಯೋಜಿಸಿದನು. ಇವನ ನಂತರ ಅವನ ತಮ್ಮ ಚಿಕ್ಕಬಮ್ಮನಾಯಕನು ೧೩೨೦ರಿಂದ ೧೩೪೪ರವರೆಗೆ ನಿಡುಗಲ್ ಅನ್ನು ಆಳಿದನು.

ಇದರೊಂದಿಗೆ ಈ ಚೋಳ ವಂಶದ ಆಳ್ವಿಕೆಯೂ ಕೊನೆಗೊಂಡಿರಬೇಕು. ಅದೇ ವೇಳೆಗೆ ಸೇವುಣರ ಆಕ್ರಮಣದಿಂದ ರಾಯದುರ್ಗ, ಕಲ್ಯಾಣದುರ್ಗ, ಮಡಕಸಿರಾ, ಶಿರಾ, ಮೊಳಕಾಲ್ಮೂರು ಪ್ರದೇಶಗಳು ಅರಾಜಕತೆಗೆ ಒಳಗಾದ ಸಮಯದಲ್ಲಿ ನಿಡುಗಲ್ಲಿನ ದೊರೆಗಳೂ ಕೂಡ ತಮ್ಮ ಅಸ್ತಿತ್ವವನ್ನು ಕಳೆದುಕೊಂಡಂತೆ ತೋರುತ್ತದೆ.

**ಕಾಕತೀಯರು:** ಕ್ರಿ.ಶ.೧೩೦೪ ರಿಂದ ೧೩೧೬ರ ನಡುವೆ ಕರ್ನಾಟಕದ ಕೆಲವು ಭಾಗಗಳು ಕಾಕತೀಯ ಪ್ರತಾಪರುದ್ರನ ವಶಕ್ಕೆ ಬಂದು ಕ್ರಿ.ಶ.೧೩೨೩ರವರೆಗೂ ಆ ಭಾಗಗಳ ಆಳ್ವಿಕೆಯನ್ನು ನಿಯಂತ್ರಿಸುವಲ್ಲಿ ಅಲ್ಲಿನ ನಾಯಕರನ್ನು ಒಲಿಸಿಕೊಂಡು ಅಧಿಕಾರಿಗಳನ್ನಾಗಿ ಮಾಡಿಕೊಂಡು ಆಳ್ವಿಕೆ ಮಾಡಿರಬೇಕು. ಎಂ.ವಿ.ಕೃಷ್ಣರಾವ್ ಹೇಳುವಂತೆ ಕ್ರಿ.ಶ.೧೨ನೇ ಶತಮಾನದಲ್ಲಿ ಚೋಳರಿಂದ ವಶಪಡಿಸಿಕೊಂಡ ಮಾಗಡಿ ಪ್ರದೇಶವನ್ನು ಹೊಯ್ಸಳರು ಆಳುತ್ತಿದ್ದರು. ಅವರಿಂದ ವಾರಂಗಲ್ಲಿನ ಪ್ರತಾಪರುದ್ರನು ಮಾಗಡಿ ಪ್ರದೇಶವನ್ನು ವಶಪಡಿಸಿಕೊಂಡು ಕೆಲಕಾಲ ಆಳಿದ. ಕಾಕತೀಯರ ಈ ಆಳ್ವಿಕೆಯನ್ನು ತುಮಕೂರು ತಾಲೂಕು ಮುಳುಕುಂಟೆ ತಾಮ್ರಶಾಸನವು ದಾಖಲಿಸುತ್ತದೆ. ಈ ಶಾಸನವು ಕಾಕತೀಯ ವಂಶವನ್ನು ಬ್ರಹ್ಮನು ದೇವತೆಗಳ ಬಿನ್ನಹದ ಮೇರೆಗೆ ಸೃಷ್ಟಿಸಿದನೆಂದೂ ಈ ವಂಶದಲ್ಲಿ ಮಹಾದೇವನೆಂಬ ಅರಸನು ರಾಜಧಾನಿ ಓರಂಗಲ್‌ನಲ್ಲಿ ಆಳುತ್ತಿದ್ದು ವುಮ್ಮಡಾಂಬ ಎಂಬುವಳು ಅವನ ಅರಸಿಯಾಗಿದ್ದಳು ಎಂದು ಹೇಳಿದೆ. ಇವರ ಮಗನಾದ ಪ್ರತಾಪರುದ್ರನು ಮಹಾರಾಷ್ಟ್ರ, ಕಳಿಂಗ, ಸೌರಾಷ್ಟ್ರ, ಗುರ್ಜರ, ಕರ್ನಾಟಕ ಮೊದಲಾದ ದೇಶಗಳನ್ನು ಗೆದ್ದು ತೀರ್ಥಯಾತ್ರೆ ಮಾಡುತ್ತಾ ಕಕುದ್ಗಿರಿಗೆ ಬಂದನು. ಸೈನ್ಯ, ಸಚಿವ ಪುರೋಹಿತರೊಡಗೂಡಿ ಬಂದ ಪ್ರತಾಪರುದ್ರನು ಮಕರ ಸಂಕ್ರಾಂತಿಯಂದು ಕಕುದ್ಗಿರಿಯಲ್ಲಿ ಗಂಗೋದ್ಭವವನ್ನು ಕಂಡನು. ಅದೊಂದು ಪವಿತ್ರ ಸ್ಥಳವೆಂದು ಮನಗಂಡ ಅರಸನು ಗಂಗಾಧರೇಶ್ವರನಿಗೆ ಗಿರಿಜಾಕಲ್ಯಾಣವನ್ನು ಮಾಡಿಸಿದನು. ಹಿಂದೆ, ಶ್ರೀರಾಮಚಂದ್ರನು ಅಲ್ಲಿ ಯಜ್ಞ ಮಾಡಿದ ಸ್ಥಳವನ್ನು ಗುರ್ತಿಸಿ, ಯಜ್ಞದ ಭಸ್ಮವನ್ನು ಹೋಲುವ ಮಣ್ಣನ್ನು ಮತ್ತು ರಾಮೇಶ್ವರ ಹಾಗೂ ಹನುಮಂತ ಲಿಂಗಗಳನ್ನು ನೋಡಿದನು. ನಂತರ ಹೊನ್ನುಡಿಕೆ ಮತ್ತು ಸುತ್ತಲಿನ ಗ್ರಾಮಗಳನ್ನು ಸೇರಿಸಿ ಅಗ್ರಹಾರವನ್ನು ನಿರ್ಮಿಸಿ ಅದನ್ನು ಬ್ರಾಹ್ಮಣರಿಗೆ ದಾನ ನೀಡಿದನೆಂದು ಶಾಸನವು ದಾಖಲಿಸಿದೆ. ಇದು ಗಣಪತಿ ವೀರ ಪ್ರತಾಪರುದ್ರನು ಬರೆಯಿಸಿದ ಶಾಸನದ ಪ್ರತಿ ಎಂಬ ಹೇಳಿಕೆಯೂ ಇದರಲ್ಲಿದೆ. ಆದರೆ ಇದರ ಮೂಲ ಶಾಸನ ಎಲ್ಲಿತ್ತೆಂಬುದು ತಿಳಿದುಬಂದಿಲ್ಲ.

**ಹೊಯ್ಸಳರು:** ತುಮಕೂರು ಜಿಲ್ಲಾ ಪ್ರದೇಶವು ಹೊಯ್ಸಳರ ಆಳ್ವಿಕೆಗೆ ಒಳಪಟ್ಟಿದ್ದು, ಅವರಿಗೆ ಸಂಬಂಧಿಸಿದ ಅನೇಕ ಶಾಸನಗಳು ಜಿಲ್ಲೆಯಲ್ಲಿ ದೊರೆತಿವೆ. ಅವುಗಳಲ್ಲಿ ಮೊದಲನೆಯ ಶಾಸನ ಕ್ರಿ.ಶ. ೧೦೭೮ರ ಕಾಲದ್ದಾಗಿದೆ. ವಿನಯಾದಿತ್ಯ ಮತ್ತು ವಿಷ್ಣುವರ್ಧನನಿಗೆ ಸಂಬಂಧಿಸಿದ ಕೆಲವು ಶಾಸನಗಳು ತಿಪಟೂರು ತಾಲೂಕಿನಲ್ಲಿ ದೊರಕಿವೆ. ಕ್ರಿ.ಶ.೧೧೩೦ರ ತಿಪಟೂರಿನ ೧೦೪ನೇ ಶಾಸನ ಕ್ರಿ.ಶ.೧೧೩೪ರಲ್ಲಿ ರಚಿಸಲ್ಪಟ್ಟ ಗುಬ್ಬಿ ತಾಲೂಕಿನ ೩೪ನೆಯ ಸಂಖ್ಯೆಯ ಶಾಸನಗಳು ವಿಷ್ಣುವರ್ಧನನ ಕಾಲಕ್ಕೆ ಸೇರಿದ್ದವುಗಳು. ಇಡಗೂರಿನ ಸುತ್ತಲ ಪ್ರದೇಶಗಳಲ್ಲಿ ಆಳಿದ ಅಧಿಪತಿಗಳ ವಿಷಯವನ್ನು ಈ ಶಾಸನಗಳು ತಿಳಿಸುತ್ತವೆ. ಗುಬ್ಬಿ ೩೪ ಶಾಸನವು ಗಂಗವಾಡಿ–೯೬೦೦೦ ಮತ್ತು ನೊಳಂಬವಾಡಿ–೩೨೦೦೦ಗಳು ವಿಷ್ಣುವರ್ಧನನ ಆಳ್ವಿಕೆಗೆ ಒಳಪಟ್ಟಿದ್ದವೆಂಬುದನ್ನು ತಿಳಿಸುತ್ತದೆ. ಕೈದಾಳದಲ್ಲಿ ದೊರೆತ ಸುಮಾರು ಒಂಬತ್ತನೆಯ ಶತಮಾನದ ಶಾಸನ, ಗೂಳಿಬಾಚಿಯು ಮಾನ್ಯಖೇಡಪುರದ ಒಡೆಯ ಮತ್ತು ಗಂಗಪುತ್ರನೆಂದು ಪ್ರಸಿದ್ಧಿ ಪಡೆದಿದ್ದನೆಂದು ತಿಳಿಸುತ್ತದೆ. ಈ ಗೂಳಿಬಾಚಿಯು ಬೌದ್ಧ, ಜಿನ, ಶೈವ ಮತ್ತು ವೈಷ್ಣವ ಧರ್ಮಗಳಿಗೆ ಪೋಷಣೆ ನೀಡಿದ್ದನು. ಇವನು ಕೈದಾಳದಲ್ಲಿ ಗಂಗೇಶ್ವರ (ಗಂಗಾಧರೇಶ್ವರ), ನಾರಾಯಣ ಮತ್ತು ಚಲುವೇಶ್ವರ ದೇವಾಲಯಗಳನ್ನು ತನ್ನ ತಂದೆ ತಾತನ ಹೆಸರಿನಲ್ಲಿ ನಿರ್ಮಿಸಿದನು. ತನ್ನ ಮಗಳ ನೆನಪಿಗಾಗಿ ರಾಮೇಶ್ವರ, ತನ್ನ ಹೆಂಡತಿಯ ನೆನಪಿಗಾಗಿ ಜಿನಬಸದಿಗಳನ್ನು ನಿರ್ಮಿಸಿದನೆಂದು ಹೇಳಲಾಗಿದೆ. ಅಲ್ಲದೆ ನಾಲ್ಕು ಸಮಯಗಳನ್ನು ಪಾಲಿಸುತ್ತಿದ್ದರೂ ಇವನು ಶೈವ ಧರ್ಮಾನುಯಾಯಿ ಆಗಿದ್ದು, ಭೀಮಸಮುದ್ರ ಮತ್ತು ಅದಲಸಮುದ್ರ ಎಂಬ ಕೆರೆಗಳನ್ನು ಕಟ್ಟಿಸಿದನು.

ಹೊಯ್ಸಳ ದೊರೆ ಎರಡನೆಯ ಬಲ್ಲಾಳನ ಶಾಸನಗಳು ಈ ಜಿಲ್ಲೆಯಲ್ಲಿ ದೊರಕಿವೆ. ಚಿಕ್ಕನಾಯಕನಹಳ್ಳಿ (೩೬) ಶಾಸನದಲ್ಲಿ ಬಲ್ಲಾಳದೇವನ ದಿಗ್ವಿಜಯಗಳ ವರ್ಣನೆ ಇದೆ. ಇವನು ಪಾಂಡ್ಯರನ್ನು ಸೋಲಿಸಿ ಉಚ್ಚಂಗಿಯನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡನು. ಈ ಶಾಸನದಲ್ಲಿ ಬಲ್ಲಾಳದೇವನನ್ನು ದುಷ್ಟ ಶಿಕ್ಷಕ, ಶಿಷ್ಟಪಾಲಕನೆಂದು ಬಣ್ಣಿಸಲಾಗಿದೆ. ಬಲ್ಲಾಳ ದೊರೆಯ ಸೇನಾಪತಿ ಮಾಧನ ದಂಡಾಧಿಪತಿಯ ಬಗ್ಗೆಯೂ ಉಲ್ಲೇಖವಿದೆ. ಮಾಧವ ದಂಡಾಧಿಪತಿಯು ಶತ್ರುರಾಜರನ್ನು ಸೋಲಿಸಿ ಅವರಿಂದ ವಶಪಡಿಸಿಕೊಂಡ ಆನೆ, ಕುದುರೆ, ಶ್ವೇತ ಛತ್ರಗಳಲ್ಲದೇ ಅಪಾರ ಸಂಪತ್ತನ್ನು ತನ್ನ ದೊರೆಗೆ ತಂದೊಪ್ಪಿಸುತ್ತಿದ್ದನೆಂಬ ವಿಷಯವಿದೆ. ಈ ದಿಗ್ವಿಜಯಗಳಿಂದಾಗಿ ಹೊಯ್ಸಳ ಸಾಮ್ರಾಜ್ಯವು ಭೀಮಾರಥಿ ನದಿ ಅಥವಾ ಇಂದಿನ ಭೀಮಾನದಿಯವರೆಗೂ ವ್ಯಾಪಿಸಿತ್ತೆಂಬ ವಿಷಯವನ್ನು ಕ್ರಿ.ಶ.೧೧೯೯ರಲ್ಲಿ ಬರೆಯಿಸಲ್ಪಟ್ಟ ತಿಪಟೂರು ತಾಲೂಕಿನ ೪೩ನೇ ಸಂಖ್ಯೆಯ ಶಾಸನ ತಿಳಿಸುತ್ತದೆ.

**ಇಮ್ಮಡಿ ಹೊಯ್ಸಳ ನರಸಿಂಹ:** ಕ್ರಿ.ಶ.೧೨೨೦ರಿಂದ ೧೨೩೫ರವರೆಗೆ ಆಳಿದ ಹೊಯ್ಸಳ ಇಮ್ಮಡಿ ನರಸಿಂಹನಿಗೆ ಸೇರಿದ ಕೆಲವೇ ಶಾಸನಗಳು ಈ ಜಿಲ್ಲೆಯಲ್ಲಿ ದೊರೆತಿವೆ. ಕ್ರಿ.ಶ.೧೨೨೬ರಲ್ಲಿ ರಚಿಸಿದ ಗುಬ್ಬಿ ತಾಲೂಕಿನ ನಿಟ್ಟೂರು ಶಾಸನವು ನರಸಿಂಹ ದೊರೆಯ ಹಿರಿಯ ರಾಣಿ ಪದ್ಮಮಹಾದೇವಿಯ ಮಂತ್ರಾಲೋಚನಾ ಸಭೆಯ ವಿಶೇಷಾಧಿಕಾರಿ ನಾಗಣ್ಣನ ಬಗ್ಗೆ ತಿಳಿಸುತ್ತದೆ. ಕ್ರಿ.ಶ.೧೨೨೯ರಲ್ಲಿ ಬರೆಸಿದ ತಿಪಟೂರು ತಾಲೂಕಿನ ೪೨ನೇ ಸಂಖ್ಯೆಯ ಶಾಸನ, ಎರಡನೇ ನರಸಿಂಹನು ಸಮುದ್ರವನ್ನೇ ಸುತ್ತಲ ಮೇರೆಯನ್ನಾಗುಳ್ಳ ರಾಜ್ಯವನ್ನು ರಾಜಧಾನಿ ಕಂಚೀಪುರದಿಂದ ಆಳುತ್ತಿದ್ದನೆಂದು ತಿಳಿಸುತ್ತದೆ. ಆದರೆ ಕ್ರಿ.ಶ. ೧೨೩೫ರ ಗುಬ್ಬಿ ತಾಲೂಕಿನ ೪೫ನೇ ಸಂಖ್ಯೆಯ ಶಾಸನದ ಪ್ರಕಾರ ದೊರೆಯು ದೋರಸಮುದ್ರದಿಂದ ಆಳುತ್ತಿದ್ದು, ಮಹಾದಂಡನಾಯಕರಾದ ಅಪ್ಪಯ್ಯ ಮತ್ತು ಗೋಪಯ್ಯರು ಮಾರಸಿಂಹ ದೊರೆಯ ಅಪ್ಪಣೆಯಂತೆ ಪಲ್ಲವ ದೊರೆಯನ್ನು ಸೋಲಿಸಿ, ಸೆರೆಯಲ್ಲಿದ್ದ ಚೋಳ ದೊರೆಯನ್ನು ಬಿಡಿಸಿ ಅವನಿಗೆ ಮತ್ತೆ ರಾಜ್ಯಾಧಿಕಾರ ದೊರೆಕಿಸಿಕೊಟ್ಟದ್ದನ್ನು ಹೇಳುತ್ತದೆ. ಇದರಿಂದ ಸುಪ್ರೀತನಾದ ನರಸಿಂಹನು ಇಬ್ಬರು ದಂಡನಾಯಕರಿಗೂ ಒಂದೊಂದು ಗ್ರಾಮವನ್ನು ಬಳುವಳಿಯಾಗಿ ನೀಡಿದನು. ರಾಜರಾಜ ಚೋಳನ ೧೨೩೧ರ ತಮಿಳು ಶಾಸನದಲ್ಲಿ ಈ ಘಟನೆಯ ವಿವರಣೆ ಇದೆ. ಎರಡನೇ ನರಸಿಂಹನ ಗುಬ್ಬಿಯ ಶಾಸನ ೧೨೩೮ರಲ್ಲಿ ರಚಿತವಾಗಿದ್ದು, ನಿಟ್ಟೂರಿನ ವ್ಯಾಪಾರಿ 'ಮಹಾವಡ್ಡವ್ಯವಹಾರಿ' ಮತ್ತು ಪಟ್ಟಣಸ್ವಾಮಿಗಳು ನಿರ್ಮಿಸಿದ ಹಿರಿಯಕೆರೆಯ ಕೆಳಗಿನ ಭೂಮಿಯನ್ನು ಸಂಪಿಗೆಯ ಮಲ್ಲಿಕಾರ್ಜುನ ದೇವಾಲಯಕ್ಕೆ ದೇವಾದಾಯ ಮಾನ್ಯವಾಗಿ ನೀಡಿದ್ದನ್ನು ದಾಖಲಿಸಿದೆ.

ಇಮ್ಮಡಿ ನರಸಿಂಹನ ನಂತರ ಸೋಮೇಶ್ವರನು ೧೨೩೨ ರಿಂದ ೧೨೫೪ ರವರೆಗೆ ಆಳಿದನು. ಇವನ ಕಾಲದ ಮೂರು ನಾಲ್ಕು ಶಾಸನಗಳು ಜಿಲ್ಲೆಯಲ್ಲಿ ದೊರಕಿದ್ದರೂ ಅವು ರಾಜಕೀಯ ಮಹತ್ವ ಪಡೆದಿಲ್ಲ. ಬಾಲ್ಯದಿಂದಲೂ ಸೋದರತ್ತೆ ಸೋಮಲಾದೇವಿ(ಚೋಳರಾಣಿ)ಯ ಪೋಷಣೆಯಲ್ಲಿ ಬೆಳೆದ ಇವನು, ತಮಿಳುನಾಡಿನೊಂದಿಗೆ ನಿಕಟ ಸಂಪರ್ಕವನ್ನು ಹೊಂದಿದ್ದು, ಹೊಯ್ಸಳ ರಾಜಧಾನಿಯನ್ನು ಕಣ್ಣಾನೂರು ಕೊಪ್ಪಂಗೆ ವರ್ಗಾಯಿಸಿಕೊಂಡಿದ್ದನು.

ನಂತರ ಹೊಯ್ಸಳ ಸಾಮ್ರಾಜ್ಯವು ಸೋಮೇಶ್ವರನ ಇಬ್ಬರು ಮಕ್ಕಳಾದ **ಮುಮ್ಮಡಿ ನರಸಿಂಹ** (೧೨೫೪-೯೯೧) ಹಾಗೂ **ರಾಮನಾಥ** (೧೨೫೪-೯೯೫)ರ ನಡುವೆ ವಿಭಜಿಸಲ್ಪಟ್ಟಿತು. ಮುಮ್ಮಡಿ ನರಸಿಂಹನು ಹೊಯ್ಸಳ ರಾಜ್ಯದ ತಿರುಳ್ಭಾಗವನ್ನು ದೋರಸಮುದ್ರದಿಂದ ಆಳಿದರೆ, ರಾಮನಾಥನು ಕೋಲಾರ ಜಿಲ್ಲಾ ಪ್ರದೇಶದ ಭಾಗವನ್ನೊಳಗೊಂಡಂತೆ ಹೊಯ್ಸಳ ಸಾಮ್ರಾಜ್ಯದ ತಮಿಳು ಪ್ರದೇಶಗಳನ್ನು ರಾಜಧಾನಿ ಕಣ್ಣಾನೂರಿನಿಂದ ಆಳುವಂತಾಯಿತು. ತತ್ಪರಿಣಾಮವಾಗಿ ಈ ಸೋದರರ ನಡುವೆ ರಾಜಕೀಯ ಘರ್ಷಣೆಯು ಏರ್ಪಟ್ಟ ಅಂಶ ಅವರ ಕಾಲದ ಅನೇಕ ಶಾಸನಗಳಿಂದ ವ್ಯಕ್ತವಾಗುತ್ತದೆ.

**ಮೂರನೆಯ ನರಸಿಂಹ:** ಇವನ (೧೨೫೪-೧೨೯೨) ಕಾಲದ ಅನೇಕ ಶಾಸನಗಳು ಜಿಲ್ಲೆಯಲ್ಲಿ ದೊರಕಿವೆ. ಚಿಕ್ಕನಾಯಕನಹಳ್ಳಿ ತಾಲೂಕಿನ ಶೆಟ್ಟಿಕೆರೆಯ ಕ್ರಿ.ಶ.೧೨೬೧ರ ಶಾಸನ, ಅಸಂದಿನಾಡಿನ ಸೆಟ್ಟಿಯಕೆರೆಯನ್ನು ಅಗ್ರಹಾರವನ್ನಾಗಿಸಿ 'ಶ್ರೀಭರಿತ ಪ್ರಕಾಶಪುರ' ಎಂದು ನಾಮಕರಣ ಮಾಡಿದ ಅಂಶವನ್ನು ತಿಳಿಸುತ್ತದೆ. ಈ ಅಗ್ರಹಾರವನ್ನು ನಿರ್ಮಿಸಿದವನು ಮುಮ್ಮಡಿನರಸಿಂಹದೊರೆಯ ಮಂತ್ರಿ ನಾಚರಸನ ಮಗ ಗೋಪಾಲ ದಣ್ಣಾಯಕ. ಹಾಗೆಯೇ ಕ್ರಿ.ಶ.೧೨೬೩ರ ತಿಪಟೂರು ತಾಲೂಕಿನ ತುರುವೆಕೆರೆ ಚನ್ನಿಗರಾಯ ದೇವಾಲಯದಲ್ಲಿರುವ ಶಾಸನದಿಂದ ಮುಮ್ಮಡಿ ನರಸಿಂಹನ ವಿದೇಶಾಂಗ ಮತ್ತು ರಕ್ಷಣಾ ಮಂತ್ರಿಯಾಗಿದ್ದ ರಾವಣ್ಣ ದಣ್ಣಾಯಕನು, ತುರುವೇಕೆರೆಯನ್ನು ದೊರೆಯಿಂದ ಬಳುವಳಿಯಾಗಿ ಪಡೆದು ಅದನ್ನು ೯೬ ವಿಭಾಗಗಳನ್ನೊಳಗೊಂಡ "ಸರ್ವಜ್ಞ ವಿಜಯ ನರಸಿಂಹಪುರ" ಎಂದು ಅಗ್ರಹಾರವನ್ನಾಗಿ ಮಾರ್ಪಡಿಸಿದ ಅಂಶ ಗೊತ್ತಾಗುತ್ತದೆ.

**ರಾಮನಾಥ ಹೊಯ್ಸಳ:** ರಾಮನಾಥ ಹೊಯ್ಸಳನು ಸೋಮೇಶ್ವರನ ಮಗ ಹಾಗೂ ಮೂರನೆಯ ನರಸಿಂಹನ ಸೋದರ. ರಾಮನಾಥ ಹೊಯ್ಸಳನನ್ನು ಕುರಿತ ಶಾಸನಗಳು ತುಮಕೂರು, ಗುಬ್ಬಿ, ಕುಣಿಗಲ್ ಮತ್ತು ಚಿಕ್ಕನಾಯಕನಹಳ್ಳಿ ತಾಲೂಕುಗಳಲ್ಲಿ ದೊರೆತಿವೆ. ಇವುಗಳ ಪ್ರಕಾರ ತುಮಕೂರು, ಗುಬ್ಬಿ, ಕುಣಿಗಲ್, ಚಿಕ್ಕನಾಯಕನಹಳ್ಳಿಯ ಕೆಲವು ಪ್ರದೇಶಗಳು ರಾಮನಾಥನ ಆಳ್ವಿಕೆಗೆ ಒಳಪಟ್ಟಿದ್ದವೆಂದು ತಿಳಿದು ಬರುತ್ತದೆ. ಇವನು ತನ್ನ ಆಳ್ವಿಕೆಯ ಕೊನೆಯ ವೇಳೆಗೆ ದೇವರಾಯನದುರ್ಗದ ತಪ್ಪಲಿನವರೆಗೂ ರಾಜ್ಯವನ್ನು ವಿಸ್ತರಿಸಿದ್ದನೆಂದು ಲೂಯಿರೈಸ್ ಅಭಿಪ್ರಾಯಪಡುತ್ತಾರೆ. ರಾಮನಾಥನ ನಂತರ ಅವನ ಮಗನಾದ ವಿಶ್ವನಾಥನು ಹೊಯ್ಸಳರ ಕಣ್ಣಾನೂರು ಶಾಖೆಗೆ ಉತ್ತರಾಧಿಕಾರಿಯಾದನು. ಇವನನ್ನು ಮುಮ್ಮಡಿ ಬಲ್ಲಾಳ (೧೨೯೧–೧೩೪೨)ನು ೧೩೦೦ರಲ್ಲಿ ಸೋಲಿಸುವ ಮೂಲಕ ಹೊಯ್ಸಳ ಸಾಮ್ರಾಜ್ಯದ ಕಣ್ಣಾನೂರು ಶಾಖೆಯು ಮೂಲಶಾಖೆಯೊಂದಿಗೆ ವಿಲೀನವಾಗುವಂತೆ ಮಾಡಿದನು.

**ಮುಮ್ಮಡಿ ಬಲ್ಲಾಳ:** ಇವನು ಕ್ರಿ.ಶ.೧೨೯೧ ರಿಂದ ೧೩೪೨ ರವರೆಗೆ ಆಳಿದ ಹೊಯ್ಸಳರ ಪ್ರಸಿದ್ಧ ದೊರೆ. ಮುಮ್ಮಡಿ ಬಲ್ಲಾಳನ ಅನೇಕ ಶಾಸನಗಳು ಜಿಲ್ಲೆಯಲ್ಲಿ ದೊರಕಿವೆ. ಮುಮ್ಮಡಿ ಬಲ್ಲಾಳನು ಪಟ್ಟಕ್ಕೆ ಬಂದ ಕಾಲ ಹೊಯ್ಸಳರಿಗೆ ತುಂಬಾ ಕಷ್ಟದ ದಿವಸಗಳಾಗಿದ್ದವು. ಏಕೆಂದರೆ ಮಹಮ್ಮದೀಯರು ಹೊಯ್ಸಳ ರಾಜ್ಯದ ಮೇಲೆ ಮೇಲಿಂದ ಮೇಲೆ ದಾಳಿ ನಡೆಸುತ್ತಿದ್ದರು. ಮಹಮ್ಮದೀಯರು ರಾಜಧಾನಿ ದೋರಸಮುದ್ರವನ್ನು ಮುತ್ತಿ ಮುಮ್ಮಡಿ ಬಲ್ಲಾಳನನ್ನು ಅಲ್ಲಿಂದ ಓಡಿಸಿದರೆಂದೂ ಪದಚ್ಯುತಿಗೊಂಡ ದೊರೆ ತಾತ್ಕಾಲಿಕವಾಗಿ ಅರುಣಸಮುದ್ರದಲ್ಲಿ ನೆಲೆಸಿದ್ದನೆಂದು ತಿಳಿದುಬರುತ್ತದೆ. ಆದರೆ ಕ್ರಿ.ಶ.೧೩೨೫ರ ತಿಪಟೂರು ತಾಲೂಕಿನ ಕಡಸೂರು ಶಾಸನ, ಹೊಯ್ಸಳ ದೊರೆಯು ದೋರಸಮುದ್ರದಲ್ಲಿದ್ದನೆಂದು ತಿಳಿಸುತ್ತದೆ. ಗುಬ್ಬಿ ತಾಲೂಕಿನ ಸಂಪಿಗೆ ಗ್ರಾಮದ ಕ್ರಿ.ಶ.೧೩೩೧ರ ಶಾಸನದ ಪ್ರಕಾರ ರಾಜಧಾನಿ ದೋರಸಮುದ್ರವು ಮುಸಲ್ಮಾನರ ದಾಳಿಯಿಂದ ನಾಶವಾಯಿತೆಂದೂ, ಮುಮ್ಮಡಿ ಬಲ್ಲಾಳನು ವಿರುಪಾಕ್ಷ ಹೊಸದುರ್ಗ (ಈಗಿನ ಹೊಸದುರ್ಗ) ವನ್ನು ಸೇರಿದನೆಂದು ತಿಳಿಯುತ್ತದೆ. ಶಿರಾ ತಾಲೂಕಿನ ಚಿಕ್ಕಬಾಣಗೆರೆಯ ಕ್ರಿ.ಶ.೧೩೪೧ರ ಶಾಸನ, ದೊರೆಯು ತಿರುವಣ್ಣಾಮಲೈ ಪಟ್ಟಣದಲ್ಲಿದ್ದನೆಂದು ತಿಳಿಸುತ್ತದೆ.

**ಸ್ಥಳೀಯ ನಾಯಕ ಮನೆತನಗಳು:** ಜಿಲ್ಲೆಯಲ್ಲಿ ಹುಳಿಯಾರು ನಾಯಕರು (ಕ್ರಿ.ಶ.೧೦೪೪ ರಿಂದ ೧೩೫೬ ರವರೆಗೆ) ಸುಮಾರು ಹದಿನಾಲ್ಕು ತಲೆಮಾರಿನ ಇತಿಹಾಸವನ್ನು ಹೊಂದಿದ್ದು, ಇವರ ಆಡಳಿತಕ್ಕೆ ಸಂಬಂಧಿಸಿದಂತೆ ೨೪ ಶಾಸನಗಳಿವೆ. ನಿಡುಗಲ್ ದುರ್ಗದಿಂದಾಳಿದ ಹೊಳಕಲ್ (ನಿಡುಗಲ್) ಮನೆತನಕ್ಕೆ ಸಂಬಂಧಿಸಿದಂತೆ ೨೧ ಶಾಸನಗಳಿದ್ದು (ಕ್ರಿ.ಶ.೧೨೯೨–೧೪೮೫)ಅವು ೧೩ ತಲೆಮಾರಿನ ಇತಿಹಾಸವನ್ನು ಅರುಹುತ್ತವೆ. ಈ ಬಗ್ಗೆ ಅಧ್ಯಯನಗಳು ನಡೆದಿವೆಯಾದರೂ ಸಂಶೋಧನೆಗೆ ಹೇರಳ ಅವಕಾಶವಿದೆ.

**ವಿಜಯನಗರದ ಅರಸರು:** ಹೊಯ್ಸಳರ ಕೊನೆಯ ಅರಸು ವಿರೂಪಾಕ್ಷ ಬಲ್ಲಾಳ ಅಥವಾ ನಾಲ್ಕನೇ ಬಲ್ಲಾಳನು ಕ್ರಿ.ಶ. ೧೩೪೩ರಲ್ಲಿ ಪಟ್ಟಕ್ಕೆ ಬಂದನಾದರೂ ಅವನು ಹೆಚ್ಚುಕಾಲ ಸ್ವತಂತ್ರವಾಗಿ ಆಳ್ವಿಕೆ ನಡೆಸಲು ಸಾಧ್ಯವಾಗಲಿಲ್ಲ. ಏಕೆಂದರೆ ಆಗತಾನೆ ಹೊಸದಾಗಿ ಅಭಿವೃದ್ಧಿ ಹೊಂದುತ್ತಿದ್ದ ವಿಜಯನಗರದ ಸಾಮ್ರಾಜ್ಯದಲ್ಲಿ ಹೊಯ್ಸಳ ರಾಜ್ಯವು ವಿಲೀನವಾಯಿತು. ಹೊಯ್ಸಳ ಸೇನೆ ಅಸಮರ್ಥವಾಗಿತ್ತು, ರಾಜ್ಯ ರಕ್ಷಿಸುವಲ್ಲಿ ವಿಫಲವಾಯಿತು. ಬೊಕ್ಕಸ ಬರಿದಾಗಿತ್ತು. ಬಳ್ಳಪ್ಪನಾಯಕನನ್ನೂ ಒಳಗೊಂಡಂತೆ ಹೊಯ್ಸಳ ರಾಜ್ಯದ ಅನೇಕ ಪ್ರಮುಖರು ವಿಜಯನಗರ ಅರಸರೊಂದಿಗೆ ಸೇರಿಕೊಂಡರು. ಕ್ರಿ.ಶ.೧೩೩೬ ರಿಂದ ೧೩೫೬ರವರೆಗೆ ಆಳಿದ ಒಂದನೇ ಹರಿಹರನ ಕಾಲದಲ್ಲಿ ತುಮಕೂರು ಜಿಲ್ಲೆಯೂ ಸೇರಿದಂತೆ ಹೊಯ್ಸಳ ರಾಜ್ಯವು ವಿಜಯನಗರ ಸಾಮ್ರಾಜ್ಯದಲ್ಲಿ ಬೆರೆತು ಹೋಯಿತು.

ಕ್ರಿ.ಶ.೧೩೪೬ ರಲ್ಲಿಯೇ ಜಿಲ್ಲೆಯ ಪ್ರದೇಶಗಳು ವಿಜಯನಗರ ಸಾಮ್ರಾಜ್ಯದಲ್ಲಿ ಸೇರಿ ಹೋಗಿದ್ದರೂ ಒಂದನೇ ಹರಿಹರನು ೧೩೫೬ರ ವರೆಗೂ ಸಿಂಹಾಸನ ರೂಢನಾಗಿದ್ದರೂ ಅವನಿಗೆ ಸಂಬಂಧಿಸಿದ ಯಾವ ಶಾಸನವೂ ಈ ಜಿಲ್ಲೆಯಲ್ಲಿ ದೊರಕಿಲ್ಲ. ಈ ಜಿಲ್ಲೆಯಲ್ಲಿ ದೊರಕಿರುವ ವಿಜಯನಗರದರಸರ ಪ್ರಾಚೀನ ದಾಖಲೆಯೆಂದರೆ ಪಾವಗಡ ತಾಲೂಕಿನ ಕ್ರಿ.ಶ.೧೩೫೪ರ ಪೋತಗಾನಹಳ್ಳಿ ತಾಮ್ರಶಾಸನ. ಇದು ಬುಕ್ಕರಾಯ ಅಥವಾ ಒಂದನೇ ಬುಕ್ಕರಾಯ(ಕ್ರಿ.ಶ. ೧೩೪೪–೧೩೭೭)ನ ಕಾಲದ್ದಾಗಿದ್ದು, ಇವನ ಕಾಲಕ್ಕೆ ಸೇರಿದ ತಿಪಟೂರು ತಾಲೂಕಿನ ಬೆಂಕಿಕೆರೆಯ ೧೩೬೩ ರ ಶಾಸನ, ಮಿಡಿಗೇಶಿಯ ೧೩೭೦ರ ಶಾಸನ, ಶಿರಾ ತಾಲೂಕಿನ ಮಜರೆ ಕಲಿಸೆಟ್ಟಿಹಳ್ಳಿಯ ೧೩೭೬ರ ಶಾಸನ ಮತ್ತು ಹುಂಜಿನಾಳ ಶಾಸನಗಳು ಜಿಲ್ಲೆಯಲ್ಲಿ ದೊರೆತಿವೆ.

ಕ್ರಿ.ಶ.೧೩೭೭ ರಿಂದ ೧೪೦೪ರ ವರೆಗೆ ಆಳಿದ ಎರಡನೇ ಹರಿಹರನ ಕಾಲದ ಶಾಸನಗಳೂ ಈ ಜಿಲ್ಲೆಯಲ್ಲಿ ದೊರೆತಿವೆ. ಕ್ರಿ.ಶ.೧೩೮೦ರ ಕುಣಿಗಲ್ ತಾಲೂಕಿನ ನಾಗಸಂದ್ರದ ತಾಮ್ರಶಾಸನ, ಮಲ್ಲಪ್ಪ ಒಡೆಯರ್ ಮಗ ಚೆನ್ನಪ್ಪ ಒಡೆಯರ(ಹರಿಹರನ ಕಿರಿಯ ಸಹೋದರ) ಸಾಹಸದ ಬಗ್ಗೆ ತಿಳಿಸುತ್ತದೆ. ಚಿಕ್ಕನಾಯಕನಹಳ್ಳಿ ತಾಲೂಕಿನ ದೊಡ್ಡತೇಕಲುವಟ್ಟಿಯ ಕ್ರಿ.ಶ.೧೩೮೪ರ ವೀರಗಲ್ಲು ಶಾಸನವು ಇಮ್ಮಡಿ ಹರಿಹರನ ಮಗ ಬುಕ್ಕರಾಯನು ವಾರಂಗಲ್ ಪ್ರದೇಶಕ್ಕೆ ಸೇನೆ ತೆಗೆದುಕೊಂಡು ಹೋದ ಸಮಯದಲ್ಲಿ ಕೊತ್ತಕೊಂಡಕ್ಕೆ ತುರುಕರ ದಾಳಿ ಸಂಭವಿಸಿ ಹರಿಹರನ ಮನೆಯ ನಾಯಕಾಚಾರ್ಯನಾಗಿದ್ದ ಕಂಪಣನ ಮೇಲೆ ತುರುಕ ಕುದುರೆ ಏರಿ ಬರಲು ಕಾವೇರಿ ತೀರ್ಥದ ವೀರಕ್ಷೇತ್ರವಾದ ತಲಕಾಡಿನವನೂ, ತುರುಕದಳಕ್ಕೆ ಭಯಂಕರನೂ ಆದ ಸಾಳುವೆಯ ರಾಮದೇವನು ವೀರಕಾಳಗಕೊಟ್ಟು ವೀರಸ್ವರ್ಗವೇರಿದ ವಿಷಯವನ್ನು ತಿಳಿಸುತ್ತದೆ. ಇದರಿಂದ ವಿಜಯನಗರ ಬಹಮನಿಯರ ನಡುವೆ ಕದನಗಳು ಸಾಮಾನ್ಯವಾಗಿದ್ದ ಅಂಶ ಗೊತ್ತಾಗುತ್ತದೆ. ಈ ಶಾಸನ ಎರಡನೇ ಹರಿಹರನ ಕಾಲದ್ದಾದರೂ, ಬುಕ್ಕರಾಯನ ಬಗ್ಗೆ ತಿಳಿಸುತ್ತದೆ. ಕ್ರಿ.ಶ.೧೩೮೭ರ ತುಮಕೂರು ತಾಲೂಕಿನ ದೇವರಾಯನದುರ್ಗದ ಶಾಸನ ಮಹಾಮಂಡಲೇಶ್ವರ ವೀರಬುಕ್ಕಣ್ಣ ಒಡೆಯರ ಬಗ್ಗೆ ವಿಷಯ ತಿಳಿಸುತ್ತದೆ. ಶಿರಾ ತಾಲೂಕಿನ ಶಿಬೀ ಅಗ್ರಹಾರದ ಕ್ರಿ.ಶ. ೧೪೦೩ರ ತಾಮ್ರಶಾಸನವು ಚೇಳೂರು ನಾಡಿನ ಸೀಬೂರು ಗ್ರಾಮದ ಬಳಿಯ ಕಾಡಿನಲ್ಲಿ ಆನೆಬಿದ್ದಸರಿ ದೇವರಾಯನ ದುರ್ಗ ಬೆಟ್ಟದ ಪಶ್ಚಿಮಕ್ಕೆ ಒಂದು ಹಳ್ಳಿ ಮತ್ತು ಕೆರೆಯನ್ನು ನಿರ್ಮಿಸಿ ಹರಿಹರರಾಯಪುರವೆಂದು ಕರೆದು, ೮೦ ವೃತ್ತಿಗಳಾಗಿ ವಿಭಜಿಸಿ ಬ್ರಾಹ್ಮಣರಿಗೆ ದಾನ ನೀಡಿದ್ದನ್ನು ತಿಳಿಸುತ್ತದೆ.

ಎರಡನೇ ಹರಿಹರನ ನಂತರ ವಿಜಯನಗರದಲ್ಲಿ ಗೊಂದಲದ ಪರಿಸ್ಥಿತಿ ಇದ್ದು, ಅಧಿಕಾರಕ್ಕಾಗಿ ಆಂತರಿಕ ಕಲಹಗಳು ನಡೆದವು. ನಂತರ ಒಂದನೇ ದೇವರಾಯನು ೧೪೦೯ ರಿಂದ ೧೪೨೨ ರವರೆಗೆ ಅಧಿಕಾರದಲ್ಲಿದ್ದನು. ಪ್ರಾಯಶಃ ೧೪೦೫–೧೪೦೬ರ ಪಾವಗಡ ತಾಲೂಕಿನ ೯೭ನೇ ಸಂಖ್ಯೆಯ ಶಾಸನ ಗೊಪಣ್ಣನೆಂಬುವನು ಪಾವಗಡ ಕೋಟೆಯನ್ನು ನಿರ್ಮಿಸಿದನೆಂದು ತಿಳಿಸುತ್ತದೆ. ಇವನು ಹೊಳಕಲ್ಲು ವಂಶದ ೧೧ ನೆಯ ತಲೆಮಾರಿವನಾಗಿದ್ದು, ಗೋಮ ಚಮೂಪನೆಂದು ಉಲ್ಲೇಖಿತನಾಗಿದ್ದಾನೆ. ಈ ಪಾವಗಡ ಗಿರಿದುರ್ಗವು ವಿಜಯನಗರ ಕಾಲದ ಪ್ರಾಚೀನ ಹಾಗೂ ಸುಭದ್ರ ಕೋಟೆಯಾಗಿ ಈಗಲೂ ಉಳಿದಿರುವುದು ಗಮನಾರ್ಹ.

ನಂತರ ಕ್ರಿ.ಶ.೧೪೨೨ ರಿಂದ ೧೪೪೬ರ ವರೆಗೆ ಆಳಿದ ಎರಡನೇ ದೇವರಾಯನ ಕಾಲಕ್ಕೆ ಸೇರಿದ ಕೆಲವು ಶಾಸನಗಳು ಜಿಲ್ಲೆಯಲ್ಲಿ ದೊರಕಿವೆ. ಇವುಗಳಲ್ಲಿ ೧೪೨೬ರ ತುಮಕೂರಿನ ೧೧ನೇ ಶಾಸನ, ಹುಲ್ಲೇನಹಳ್ಳಿಯನ್ನು ಮಲ್ಲಿಭಟ್ಟ (ಮಲ್ಲಿಕಾರ್ಜುನ ಭಟ್ಟರಿರಬೇಕು)ರಿಗೆ ಜೋಡಿ ಗ್ರಾಮವಾಗಿ ಮಾನ್ಯ ಅಥವಾ ಬಹುಮಾನ ರೂಪವಾಗಿ ನೀಡಿರುವುದನ್ನು ಉಲ್ಲೇಖಿಸಿದೆ. ಈ ಹುಲ್ಲೇನಹಳ್ಳಿಯು (ಈಗಿನ ಹುಲ್ಲೇನಹಳ್ಳಿ) ಆಗಿನ ಗೂಳೂರು ಸೀಮೆಯಲ್ಲಿದ್ದು ಮರುಗಲು ನಾಡಿನ ಆನೆಬಿದ್ದ ಜರಿವೇಂಠೆಗೆ ಸೇರಿದ್ದು, ಪ್ರಸಿದ್ಧ ವ್ಯಾಪಾರ ಕೇಂದ್ರವಾಗಿತ್ತೆಂದು ತಿಳಿಯುತ್ತದೆ. ಗುಬ್ಬಿ ತಾಲೂಕಿನ ಸಂಪಿಗೆಯ ಕ್ರಿ.ಶ.೧೪೭೦ರ ಶಾಸನವು ವಿಜಯನಗರದ ವಿರೂಪಾಕ್ಷ ಮಹಾರಾಯನನ್ನು ಉಲ್ಲೇಖಿಸಿದ್ದು, ಆರಂಭದಲ್ಲಿ ಕಪಿಲಸಿದ್ದ ಮಲ್ಲಿಕಾರ್ಜುನನನ್ನು ಸ್ಮರಿಸಿದೆ. ವಿರೂಪಾಕ್ಷ ಮಹಾರಾಯನ ದಂಡನಾಯಕನಾದ ಸಿಂಗಪ್ಪ ದಂಡನಾಯಕನು ಶ್ರೀರಾಜ್ಯವನ್ನಾಳುತ್ತಿದ್ದ ಸಮಯದಲ್ಲಿ ಅವನ ಮಹಾಸಾಮಂತ ಕಳಶನಾಯಕನ ಪತ್ನಿಯಾದ ಕಲ್ಲರಸಿಯಮ್ಮನು ಸಿದ್ದಮಲ್ಲಿಕಾರ್ಜುನ ಗುಡಿಯ ಜೀರ್ಣೋದ್ಧಾರ ಮಾಡಿಸಿ ಭೋಗಮಂಟಪ, ಗೋಪುರ, ಶಿಖರ, ಸಭಾಂಗಣ, ಪಾಠಶಾಲೆಗಳನ್ನು ಸೇರಿಸಿ, ಅಮೃತಪಡಿಗಾಗಿ ಭೂದಾನವನ್ನು ಮಾಡಿದಳು. ಪತಿ ಕಳಶನಾಯಕನು ಕೋಟ್ಯಾಧಿಪತಿಯಾಗಬೇಕೆಂಬ ಹರಕೆಯೂ ಆ ಮಣಿಹದಲ್ಲಿತ್ತು. ಅಲ್ಲದೆ, ಗಾಯಕಿ ಮಹಾದೇವಿ, ತಾಳದ ಮೂಕಜ್ಜಿ ಎಂಬುವರು ದೇವರ ಬಸವಿಯರಾಗಿದ್ದರು. ಇದನ್ನು ಬರೆದವನು ಬಲ್ಲೆಹದ ಮಲ್ಲನೆಂದೂ ಗೊತ್ತಾಗುತ್ತದೆ.

ಕ್ರಿ.ಶ.೧೪೮೬ ರಿಂದ ೧೪೯೧ರವರೆಗೆ ಆಳಿದ ಸಾಳುವ ನರಸಿಂಹನಿಗೆ ಸೇರಿದ ಎರಡು ಮೂರು ಶಾಸನಗಳು ಜಿಲ್ಲೆಯಲ್ಲಿ ದೊರಕಿವೆ. ಆದರೆ, ತುಮಕೂರಿನ ಕ್ರಿ.ಶ. ೧೪೮೬ರ ೫೪ನೇ ತಾಮ್ರಶಾಸನವು ಗಂಗೇಗೌಡನೆಂಬಾತನು ರಾಜರ ಆದೇಶದಂತೆ ಹೆಜ್ಜಾಜಿ ಮತ್ತು ಸುತ್ತಲ ಗ್ರಾಮಗಳ ಗೌಡಿಕೆ ಪಡೆದಿದ್ದನ್ನು ಉಲ್ಲೇಖಿಸಿದೆ.

ನಂತರ ತುಳುವ ವಂಶದ ತುಳುವ ನರಸನಾಯಕ ಮತ್ತು ಸಾಳುವ ಇಮ್ಮಡಿ ನರಸಿಂಹನಿಗೆ ಸಂಬಂಧಿಸಿದ ಕ್ರಿ.ಶ.೧೪೯೧ ರಿಂದ ೧೫೦೩ರವರೆಗಿನ ಶಾಸನಗಳು ಜಿಲ್ಲೆಯಲ್ಲಿ ದೊರಕಿವೆ. ಕುಣಿಗಲ್ ತಾಲೂಕಿನ ಚಂದ್ರಹಳ್ಳಿಯಲ್ಲಿ ದೊರಕಿರುವ

೧೪೪೪ರ ಶಾಸನದಲ್ಲಿ ತಿಳಿಸಿರುವಂತೆ ದೊರೆಯು ತನ್ನನ್ನು ಮಹಾಮಂಡಲೇಶ್ವರ ಇಮ್ಮಡಿರಾಯ ಮಹಾರಾಯ ಎಂದು ಕರೆದುಕೊಂಡಿದ್ದಾನೆ. ಮಧುಗಿರಿ ತಾಲೂಕಿನ ನಾಗೇನಹಳ್ಳಿಯ ೧೪೯೬ರ ಶಿಲಾ ಶಾಸನ ನಾಗೇನಹಳ್ಳಿಯ ಬಳಿ ದೊರಕಿದೆ. ಇದು ಒಂದು ಧರ್ಮಶಾಸನವಾಗಿದ್ದು, ಕೋರನಾಡ ತುಮಕೂರಿನ ಮಹಾರಾಜಧಾನಿಯಲ್ಲಿ ಸೇರಿರುವ ನಾಗೇನಹಳ್ಳಿಯ ಧರ್ಮಾಧಿಕಾರವು ರಾಜನಿಂದ ನರಸನಾಯಕನಿಗೆ ಬಂದಿರುವ ವಿಷಯ ಉಲ್ಲೇಖಿತವಾಗಿದೆ. ಮಧುಗಿರಿ ತಾಲೂಕಿನ ಹಂದ್ರಾಳು ಗ್ರಾಮದ ಕ್ರಿ.ಶ.೧೫೦೩ರ ಶಾಸನದಲ್ಲಿ ಬೆಲೆಹದ (ಈಗಿನ ಬ್ಯಾಲ್ಯ) ತಿಮ್ಮನಾಯಕನ ಮಗ ತಮ್ಮನಾಯಕನು ಹಂದರಹಾಳ ಗ್ರಾಮವನ್ನು ದೇವಾಲಯದ ಪುರವನ್ನಾಗಿಸಿ, ತಿರುಮಲದೇವರ ಸೇವೆಗೆ ಮಾನ್ಯವಾಗಿ ನೀಡಿದನೆಂದು ಹೇಳಲಾಗಿದೆ.

ವಿಜಯನಗರ ಕಾಲದ ಮಿಕ್ಕ ಶಾಸನಗಳಲ್ಲಿ ಹೆಚ್ಚಿನವು ಕೃಷ್ಣದೇವರಾಯ(೧೫೦೯–೧೫೨೯), ಅಚ್ಯುತರಾಯ(೧೫೨೯–೧೫೪೨) ಹಾಗೂ ಸದಾಶಿವರಾಯ (೧೫೪೨–೧೫೭೬) ರಿಗೆ ಸೇರಿದ್ದಾಗಿವೆ. ಇವುಗಳಲ್ಲಿ ಕೆಲವು ಚಾರಿತ್ರಿಕ ಪ್ರಾಮುಖ್ಯ ಪಡೆದಿದ್ದು. ಉಳಿದೆಲ್ಲವೂ ಭೂಮಿ, ಗ್ರಾಮಗಳನ್ನು ದಾನವಾಗಿ ನೀಡಿದ್ದನ್ನೋ, ಕೆಲವು ಜನಾಂಗದವರಿಗೆ ಮಾನ್ಯ, ಉಂಬಳಿ ಕೊಟ್ಟಿದ್ದನ್ನೋ, ಅಥವಾ ಕೆಲವು ಜಾತಿಯವರಿಗೆ ತೆರಿಗೆ ಕಂದಾಯ ಮಾಫಿ ಮಾಡಿದುದನ್ನೋ ತಿಳಿಸುತ್ತವೆ.

ಕೃಷ್ಣದೇವರಾಯನ ಕಾಲಕ್ಕೆ ಸೇರಿದ ೧೫೧೦ ರಿಂದ ೧೫೧೭ರ ಕಾಲಾವಧಿಯ ಶಾಸನಗಳು ತುಮಕೂರು, ಮಧುಗಿರಿ, ಪಾವಗಡ, ಶಿರಾ, ಕುಣಿಗಲ್ ತಾಲೂಕುಗಳಲ್ಲಿ ದೊರೆತಿವೆ. ಕ್ರಿ.ಶ.೧೫೨೫ರ ಬೂದಿಹಾಳು ತಾಮ್ರಶಾಸನದಲ್ಲಿ ಕಂಚಿ, ಶ್ರೀಶೈಲ, ದೋಣಾಚಲ, ಕನಕಸಭಾ, ವೆಂಕಟಾದ್ರಿ ಹಾಗೂ ಇತರ ದೇಗುಲಗಳ ಸಾನಿಧ್ಯದಲ್ಲಿ ಕನಕ ತುಲಾಪುರುಷ ದಾನವನ್ನು ಆ ದೊರೆ ನೀಡಿದ ಬಗ್ಗೆ ಹೇಳಿದೆ. ಈ ದಾನವು ಶೋಡಷ ಮಹಾದಾನಗಳಲ್ಲಿ ಒಂದಾಗಿದೆ. ಈ ಸಂಸ್ಕೃತ ಶಾಸನದಲ್ಲಿ ದಾನ ಗ್ರಾಮದ ಗಡಿ ವಿವರಗಳನ್ನು ಮಾತ್ರ ಕನ್ನಡದಲ್ಲಿ ಹೇಳಿದ್ದು ಅರಸರ ಬಿರುದುಗಳಾದ ಭಾಷೆಗೆ ತಪ್ಪುವ ರಾಯರಗಂಡ, ಮೂರುರಾಯರಗಂಡ ಎಂಬುದನ್ನು ಕನ್ನಡದಲ್ಲಿಯೇ ಬಳಸಿ ಪಾರಿಭಾಷಿಕ ಸ್ವರೂಪವನ್ನು ಬಿರುದಿಗೆ ತಂದಿರುವುದು ಗಮನಾರ್ಹ.

ಕ್ರಿ.ಶ.೧೫೨೮ರ ಹುಳಿಯಾರು ಗ್ರಾಮದ ಮಲ್ಲೇಶ್ವರ ದೇಗುಲದ ಶಾಸನವು ಕೃಷ್ಣದೇವರಾಯನ ಪ್ರಿಯ ಕುಮಾರ ಸಿಂಗಪ್ಪ ನಾಯಕನು ಹುಳಿಯಾರು ಶ್ರೀ ಮಲ್ಲಿಕಾರ್ಜುನ ದೇವರು, ವಿಘ್ನೇಶ್ವರ ದೇವರು, ಭೀಮೇಶ್ವರ ದೇವರಿಗೆ ಸೂರ್ಯಪ್ರರಾಗ ಪುಣ್ಯಕಾಲದಲ್ಲಿ ಹಿಂದೆ ಕೊಟ್ಟಿದ್ದ ಗದ್ದೆಯ ಭೂಸುಂಕಗಳಾದ ಸಿದ್ದಾಯ, ಕಾಣಿಕೆ, ಬಿರಾಡ, ಬೀಜವರಿ ಇತ್ಯಾದಿಗಳನ್ನು ದೇವರಸೇವೆಗಾಗಿ ಬಿಟ್ಟ ವಿಷಯವನ್ನು ಹೇಳಿದೆ. ಹಾಗೆಯೇ ದಾನ ಕೆಡಿಸಿದವರನ್ನು ಕುರಿತು 'ದಾನ ತಿಂದರೆ ಕತ್ತೆಯ ಉಚ್ಚಿಷ್ಯ ತಿಂದಂತೆ' ಎಂಬ ಶಾಪಾಶಯವನ್ನು ಹೇಳಲಾಗಿದೆ. ಈ ಶಾಸನದಿಂದ ಕೃಷ್ಣದೇವರಾಯನ ಮನೆಮಗನಾಗಿರಬಹುದಾದ ಸಿಂಗಪ್ಪನಾಯಕನ ಅಧಿಕಾರಿ, ತಮ್ಮಡಿಗಳ ಅಸ್ತಿತ್ವ ಮತ್ತು ಸ್ಥಿತಿಗತಿಯ ಬಗೆಗಿನ ಚಿತ್ರಣ ದೊರಕುತ್ತದೆ.

ಕ್ರಿ.ಶ.೧೫೩೩ರ ಕಂದಿಕೆರೆ ಶಾಸನದಲ್ಲಿ ಅಚ್ಯುತದೇವರಾಯನ ಅರಮನೆ ಕೋಶಾಧಿಕಾರಿ ಬಯಕಾರ ರಾಮಪ್ಪನು ಕಂದಿಕೆರೆ ಸೀಮೆಯಲ್ಲಿ ಪಾಲಿಸಿದ ಮದುವೆಯ ಸುಂಕಮಾನ್ಯದ ಜೊತೆಗೆ ಗೌಡ, ತಳವಾರ, ಅಕ್ಕಸಾಲೆ, ಕೆರೆ, ಎತ್ತಿನ ಬಂಡಿ ಸಂಬಂಧದ ಆದಾಯ ಸುಂಕವನ್ನು ಶಿವರಾತ್ರಿಯಂದು ೧೮ ಫಣಕಟ್ಟುಗಳ ಪರವಾಗಿ ತುಂಗಭದ್ರಾತೀರದಲ್ಲಿ ವಿರೂಪಾಕ್ಷ ಸನ್ನಿಧಿಯಲ್ಲಿ ರಾಯನ ಯಶೋಭಿವೃದ್ಧಿಗಾಗಿ ದಾನಕೊಟ್ಟ ಸಂಗತಿ ಇದೆ.

ಕ್ರಿ.ಶ.೧೫೪೧ರ ಬ್ಯಾಡನಕಟ್ಟೆ ಶಾಸನವು ಅಚ್ಯುತರಾಯನು ಚೇಳೂರ ಗೌಡಗಳಿಗೆ ಬ್ಯಾಡನಕಟ್ಟೆ ಗ್ರಾಮವನ್ನು ಹಸಉಂಬಳಿಗಾಗಿ ದಯಪಾಲಿಸಿದ್ದನ್ನು ದಾಖಲಿಸಿದೆ. ಇಲ್ಲಿ ಗೋಸಂಪತ್ತು ವಿಪುಲವಾಗಿದ್ದುದರಿಂದ ಚೇಳೂರಿನ ಗೌಡಗಳು ಹಸಉಂಬಳಿಯನ್ನು ಮೇವಿಗಾಗಿ ಕೇಳಿಕೊಂಡಿರುವುದು ಸ್ಪಷ್ಟ. ಇಲ್ಲಿನ ವೃಷ್ವೇಶ್ವರ ಗುಡಿಯ ಲಿಂಗದ ಮೇಲಿನ ಹೂಮಾಲೆಯನ್ನು ವಿಜಯನಗರದ ರಾಮರಾಯ ಬಂದಾಗ ಅರ್ಚಕ ಹೂಪ್ರಸಾದವಾಗಿ ಕೊಟ್ಟಾಗ ಅದರಲ್ಲಿ ನೀಳಕೂದಲು ಕಂಡುಬಂತು. ಆಗ ಅರ್ಚಕ ಅದನ್ನು ಲಿಂಗಜಟೆಯ ಕೂದಲು ಎಂದಾಗ ಅದರ ಪರೀಕ್ಷೆಯಾಗಿ ಶಿವ ಕರುಣೆಯಿಂದ ಲಿಂಗದ ಜಟೆಯು ಗುಡಿಯ ತುಂಬ ಹರಡಿತ್ತೆಂಬ ಐತಿಹ್ಯ ಜನರಲ್ಲಿದೆ.

ಕ್ರಿ.ಶ.೧೫೭೫ರ ಬೂದಿಹಾಳು ಶಾಸನವು ಶ್ರೀರಂಗರಾಯನ ಪೆನುಗೊಂಡದಿಂದ ಆಳುತ್ತಿದ್ದಾಗ ಬೂದಿಹಾಳು ಸೀಮೆಯ ಪಾಂಚಾಳದಿಂದ ಕೈವಾಡದವರೆಗೆ ಪಾಂಚಾಲ (ಅಕ್ಕಸಾಲೆ, ಕಮ್ಮಾರ, ಬಡಿಗ ಮುಂತಾದವರು ಕೊಡುವ ಕುಟ್ಟುವ ಬಡಿಗಲ್ಲು ಸುಂಕ) ತೆರುತ್ತಿದ್ದ ಅಡೆವಣವನ್ನು ಮಹಾಮಂಡಲೇಶ್ವರ, ಶ್ರೀಪತಿರಾಜ ವಲ್ಲಭರಾಜಯ್ಯ ದೇವನ ಅಮರನಾಯಕತನಕ್ಕೆ ಸಲ್ಲುವ ಬೂದಿಹಾಳು ಸೀಮೆಯಿಂದ ಪಡೆಯುತ್ತಿದ್ದುದಾಗಿದ್ದು ಅವನ ತಂದೆ ರಂಗರಾಜಯ್ಯನವರಿಗೆ ಪುಣ್ಯವಾಗಲೆಂದು ಅದನ್ನು ಬಿಟ್ಟುಕೊಟ್ಟ ಸಂಗತಿಯನ್ನು ಹೇಳಿದೆ.

ಸುಮಾರು ೧೫ ಮತ್ತು ೧೬ನೇ ಶತಮಾನದಲ್ಲಿ ವಿಜಯನಗರದ ಅರಸರು, ತಮ್ಮ ಆಶ್ರಯದಲ್ಲಿದ್ದ ಅಧಿಕಾರಿಗಳಿಗೆ ಮತ್ತು ಸಾಮಂತ ಪಾಳೆಯಗಾರರಿಗೂ, ಗ್ರಾಮಗಳನ್ನು ಉಂಬಳಿ ಹಾಕಿಬಿಟ್ಟಿದ್ದಲ್ಲದೆ ವಿವಿಧ ಬಿರುದು ಬಾವಲಿಗಳನ್ನು ನೀಡಿದರು. ಆಯಾ ಅಧಿಕಾರಿಗಳು, ಪಾಳೆಯಗಾರರು ಸಲ್ಲಿಸಿದ ಸೇವೆಯನ್ನು ಗುರುತಿಸಿ, ಅವರಿಗೆ ಆಯಾ ಪ್ರದೇಶಗಳ ಆಳ್ವಿಕೆಯನ್ನು ನೀಡಿದರು.

ಹಾಗಾಗಿ ಅಂತಹ ಸಾಮಂತ ಸಂಸ್ಥಾನ ಹಾಗೂ ಅಧೀನ ಪಾಳೆಯಪಟ್ಟುಗಳು ತುಮಕೂರು ಜಿಲ್ಲೆಯಲ್ಲಿಯೂ ತಲೆ ಎತ್ತಿದ್ದವು. ಅವುಗಳಲ್ಲಿ ಪ್ರಮುಖವಾದವೆಂದರೆ ನಿಡುಗಲ್, ಹೊಳವನಹಳ್ಳಿ, ಮದ್ದಗಿರಿ (ಮಧುಗಿರಿ) ಹಾಗಲವಾಡಿ, ಹೆಬ್ಬೂರು ಮುಂತಾದವು.

**ಹಾಗಲವಾಡಿ ಅಮರನಾಯಕರು:** ಹಾಗಲವಾಡಿ ಸಂಸ್ಥಾನದ ಸ್ಥಾಪಕನೆಂದು ಹೇಳಲಾಗುವ ಎರಿಮಾದನಾಯಕನು ಸಂಸ್ಥಾನ ಸ್ಥಾಪನೆಗೆ ಮೊದಲು ತುಮ್ಮಳ ಪ್ರಾಂತದಲ್ಲಿ ನೆಲೆಸಿದ್ದು, ನಂತರ ಚಿಕ್ಕನಾಯಕನಹಳ್ಳಿ ಪ್ರದೇಶಕ್ಕೆ ಬಂದು, ಮುಂದೆ ಅಲ್ಲಿಂದಲೂ ವಲಸೆ ಹೋದನೆಂಬ ಅಭಿಪ್ರಾಯವಿದೆ. ಎರಿಮಾದನಾಯಕನು ಹಿರಿಯೂರು, ಹೊಸದುರ್ಗ ಮತ್ತು ಹುಳಿಯಾರು ಮಾರ್ಗವಾಗಿ ಬಂದಾಗ, ಇಂದಿನ ತೀರ್ಥರಾಮೇಶ್ವರ ದೇವರಗುಡಿ ಸಮೀಪದ ವನವಾಸದುರ್ಗದಲ್ಲಿ ಅವನಿಗೆ ಆಕಸ್ಮಿಕವಾಗಿ ಭೂಮಿಯಲ್ಲಿ ನಿಧಿ ದೊರೆಯಿತೆಂದು, ಅದರಿಂದಾಗಿ ಇವನು ರಾಜ್ಯವನ್ನು ಕಟ್ಟಿದನೆಂಬ ಐತಿಹ್ಯವಿದೆ. ಇವನ ನಂತರ ಹಿರಿಯ ಮಗನಾದ ಸಾಲೀನಾಯಕನಿಗೆ ಪಟ್ಟವಾಯಿತು. ಇವನು ವಿಜಯನಗರದ ಪ್ರಖ್ಯಾತ ದೊರೆ ಕೃಷ್ಣದೇವರಾಯನ ಸಮಕಾಲೀನನಾಗಿದ್ದು, ವನವಾಸದುರ್ಗದ ಬಳಿ ಎರೆಕಟ್ಟೆ ಎಂಬ ಗ್ರಾಮವನ್ನು ಸ್ಥಾಪಿಸಿ ಅದನ್ನು ತನ್ನ ಆಡಳಿತ ಕೇಂದ್ರವನ್ನಾಗಿ ಮಾಡಿಕೊಂಡನೆಂದು ಹೇಳಲಾಗುತ್ತದೆ.

ಸಾಲೀನಾಯಕನ ಮರಣಾನಂತರ ಆತನ ಒಂದನೆಯ ಮಗನಾದ ಭೈರಪ್ಪನಾಯಕನು ಹೊಯ್ಸಳರ ಕಾಲದಲ್ಲಿ ಪ್ರಮುಖ ಪಟ್ಟಣವಾಗಿ ಬೆಳೆದಿದ್ದ ಸೆಟ್ಟಿಕೆರೆಯ ಮೇಲೆ ಕ್ರಿ.ಶ. ೧೫೬೧ರಲ್ಲಿ ಆಕ್ರಮಣ ಮಾಡಿ ವಶಪಡಿಸಿಕೊಂಡನು. ಅಲ್ಲಿಂದ ಹಿಂತಿರುಗುವಾಗ ಮಾರ್ಗ ಮಧ್ಯದಲ್ಲಿ ಪ್ರಶಸ್ತವಾದ ಸ್ಥಳವೊಂದರಲ್ಲಿ ಚಿಕ್ಕನಾಯಕನಹಳ್ಳಿ ಎಂಬ ಹೆಸರಿನ ಊರನ್ನು ಸ್ಥಾಪಿಸಿ, ಸುತ್ತ ಕೋಟೆಯನ್ನು ಕಟ್ಟಿಸಿ ಅದನ್ನು ತನ್ನ ಆಡಳಿತ ಕೇಂದ್ರವನ್ನಾಗಿ ಮಾಡಿಕೊಂಡನು ಎಂದು ಹೇಳಲಾಗುತ್ತದೆ. ನಂತರ ಕಂದಿಕೆರೆಯನ್ನು ಗೆದ್ದು ಅಲ್ಲಿಯೂ ಕೋಟೆಯನ್ನು ನಿರ್ಮಿಸಿದನು. ಅವನು ತನ್ನ ಸಂಸ್ಥಾನವನ್ನು ವಿಸ್ತರಿಸುವ ಮಹದಾಕಾಂಕ್ಷೆಯಿಂದ ಹೊನ್ನವಳ್ಳಿ, ನುಗ್ಗೇಹಳ್ಳಿ ಪ್ರದೇಶಗಳ ಮೇಲೆ ದಾಳಿ ಮಾಡಿ ಗೆದ್ದುಕೊಂಡನು.

ಭೈರಪ್ಪನಾಯಕನ ಮರಣಾನಂತರ ಆತನ ಮಗ ಒಂದನೆಯ ಮುದಿಯಪ್ಪನಾಯಕನ ಕಾಲದಲ್ಲಿ ಸಂಸ್ಥಾನವು ವಿಸ್ತಾರಗೊಂಡಿತು. ಚಿಕ್ಕನಾಯಕನಹಳ್ಳಿಯಲ್ಲಿ ಆಳ್ವಿಕೆ ಮಾಡುತ್ತಿದ್ದ ಮುದಿಯಪ್ಪನಾಯಕನು ಭಾರೀ ದಂಡನ್ನು ತೆಗೆದುಕೊಂಡು ಹೋಗಿ ಹಾಗಲದಹಳ್ಳಿ, ಹೊಸಕೆರೆ, ಅಳಿಲುಘಟ್ಟ ಮುಂತಾದ ಪ್ರದೇಶಗಳನ್ನು ಗೆದ್ದುಕೊಂಡನು. ಹಾಗಲದಹಳ್ಳಿಯನ್ನು ವಶಪಡಿಸಿಕೊಂಡ ನಂತರ ಆ ಪ್ರದೇಶದ ವಿಶಿಷ್ಟತೆಯನ್ನು ಗಮನಿಸಿದ ಅವನು ಕ್ರಿ.ಶ. ೧೬೧೮ರಲ್ಲಿ ಕೋಟೆ, ಕೊತ್ತಲಗಳನ್ನು ಕಟ್ಟಿಸಿದನು. ಅಂದಿನಿಂದ ಆ ಊರಿಗೆ ಹೊಸ ವೈಭವ ಬಂದು ಹಾಗಲದಹಳ್ಳಿ ಹಾಗಲವಾಡಿ ಆಯಿತು. ಆದಾಗ್ಯೂ ಮುದಿಯಪ್ಪನಾಯಕನು ಚಿಕ್ಕನಾಯಕನಹಳ್ಳಿಯನ್ನೇ ತನ್ನ ಆಡಳಿತ ಕೇಂದ್ರವನ್ನಾಗಿ ಮಾಡಿಕೊಂಡು ಸುಮಾರು ೪೦ ವರ್ಷ ಬಿಗಿ ಆಡಳಿತ ನಡೆಸಿ ಕ್ರಿ.ಶ. ೧೬೨೬ರಲ್ಲಿ ಮರಣ ಹೊಂದಿದನು.

ಮುದಿಯಪ್ಪನಾಯಕನ ಮರಣಾನಂತರ ಅವನ ಮಗ ಇಮ್ಮಡಿ ಭೈರಪ್ಪನಾಯಕನು ಆಡಳಿತಕ್ಕೆ ಬಂದನು. ಇವನ ಕಾಲದಲ್ಲಿ ಕರ್ನಾಟಕದಲ್ಲಿ ಅನೇಕ ರಾಜಕೀಯ ಬದಲಾವಣೆಗಳಾದವು. ಮೈಸೂರು ಒಡೆಯರು ತಮ್ಮ ರಾಜ್ಯವನ್ನು

ವಿಸ್ತರಿಸುವ ಹಾದಿಯಲ್ಲಿ ಚಿಕ್ಕನಾಯಕನಹಳ್ಳಿಯ ಮೇಲೆ ಆಕ್ರಮಣ ಮಾಡಿದರು. ಪರಮರಾವುತ ಗುರುವಣ್ಣನು ಯುದ್ಧದಲ್ಲಿ ಗಾಯಗೊಂಡು ಚಿಕ್ಕನಾಯಕನಹಳ್ಳಿಗೆ ಪಲಾಯನ ಮಾಡಿದನು. ಮೈಸೂರಿನ ಸೇನೆಯು ಅವರನ್ನು ಬೆನ್ನಟ್ಟಿತು. ಇಮ್ಮಡಿ ಭೈರಪ್ಪನಾಯಕನು ಚಾಮರಾಜ ಒಡೆಯರಿಗೆ ಶರಣಾಗತನಾಗಿ ಬೇಕಾದಷ್ಟು ಹಣದೊಂದಿಗೆ ರಾಮಲಿಂಗ ಎಂಬ ಆನೆಯನ್ನು ಕಾಣಿಕೆ ಕೊಟ್ಟು ಸಂಧಿ ಮಾಡಿಕೊಂಡನು. ನಂತರ ಬಿಜಾಪುರದ ಸುಲ್ತಾನರು ದೆಹಲಿಯ ಮೊಗಲ್ ಚಕ್ರವರ್ತಿಗಳೊಂದಿಗೆ ಒಪ್ಪಂದ ಮಾಡಿಕೊಂಡಿದ್ದು, ದಕ್ಷಿಣದ ಕಡೆಗೆ ತಮ್ಮ ರಾಜ್ಯವನ್ನು ವಿಸ್ತರಿಸಲು ಹೊರಟರು. ಮಹಮದ್ ಆದಿಲ್‌ಷಾನು ತನ್ನ ಸೇನಾಪತಿ ರಣದುಲ್ಲಾಖಾನನನ್ನು ಶ್ರೀಮಂತವಾಗಿದ್ದ ಮೈಸೂರು ರಾಜ್ಯದ ಮೇಲೆ ದಂಡೆತ್ತಿ ಹೋಗಲು ಆದೇಶಿಸಿದನು. ಆದರೆ, ಯುದ್ಧದಲ್ಲಿ ಸೋತು ಬಿಜಾಪುರಕ್ಕೆ ಹಿಂತಿರುಗಿದ ರಣದುಲ್ಲಾಖಾನನು ಭಾರೀ ಸೈನ್ಯದೊಂದಿಗೆ ಬಂದು ಬಸವಾಪಟ್ಟಣವನ್ನು ಗೆದ್ದುಕೊಂಡು,ಆಮೇಲೆ ಚಿಕ್ಕನಾಯಕನಹಳ್ಳಿಯನ್ನು ಆಕ್ರಮಿಸಿಕೊಂಡನು. ಸೋತ ಇಮ್ಮಡಿ ಭೈರಪ್ಪನಾಯಕನು ಖಾನನಿಗೆ ತನ್ನ ಅರ್ಧಭಾಗ ರಾಜ್ಯದೊಂದಿಗೆ ಚಿಕ್ಕನಾಯಕನಹಳ್ಳಿಯನ್ನೂ ಬಿಟ್ಟುಕೊಟ್ಟು ಸಂಧಿ ಮಾಡಿಕೊಂಡನು. ಈ ಪರಾಭವದ ನಂತರ ಇಮ್ಮಡಿ ಭೈರಪ್ಪನಾಯಕನು ತನ್ನ ಕುಟುಂಬ ಮತ್ತು ಮಿತ್ರರೊಂದಿಗೆ ಹಾಗಲವಾಡಿಗೆ ಬಂದು ಅಲ್ಲಿಂದ ಆಡಳಿತವನ್ನು ಆರಂಭಿಸಿದನು. ಇಲ್ಲಿಂದ ಮುಂದಕ್ಕೆ ಹಾಗಲವಾಡಿ ಅವರ ರಾಜಧಾನಿಯಾಯಿತು. ಇವನ ನಂತರ ಚನ್ನಬಸಪ್ಪನಾಯಕ ಹಾಗೂ ರಾಮಪ್ಪನಾಯಕರು ಆಳಿದರು.

ಮುಂದೆ ಕ್ರಿ.ಶ. ೧೭೦೯ರಲ್ಲಿ ಎರಡನೇ ಚನ್ನಬಸಪ್ಪನಾಯಕನು ಹಾಗಲವಾಡಿ ಸಂಸ್ಥಾನದ ದೊರೆಯಾದನು. ನಂತರ ಕ್ರಿ.ಶ. ೧೭೨೮ರಲ್ಲಿ ಅವನ ಮಗ ಇಮ್ಮಡಿ ಮುದಿಯಪ್ಪನಾಯಕನು ಪಟ್ಟಕ್ಕೆ ಬಂದನು. ಕ್ರಿ.ಶ. ೧೭೪೮ರಲ್ಲಿ ಹಾಗಲವಾಡಿ ಸಂಸ್ಥಾನದ ಅಧಿಕಾರ ವಹಿಸಿಕೊಂಡ ಮುದ್ವೀರಪ್ಪನಾಯಕನು ಒಳ್ಳೆಯ ಪರಾಕ್ರಮಿಯಾಗಿದ್ದನು. ಇದೇ ಅವಧಿಯಲ್ಲಿ ದಕ್ಷಿಣ ಕರ್ನಾಟಕದತ್ತ ಮೊಗಲರ ದಾಳಿಗಳು ಆರಂಭವಾದವು. ಈ ದಾಳಿಗೆ ಹಾಗಲವಾಡಿಯು ಸಿಲುಕಿಕೊಂಡಿತು. ಮೊಗಲರ ಸಲಾಬತ್‌ಜಂಗನು ಚಿತ್ರದುರ್ಗದಲ್ಲಿರುವಾಗ ಅಪಾಯದ ಮುನ್ಸೂಚನೆಯನ್ನರಿತ ಮುದ್ವೀರಪ್ಪನು ಅವನೊಂದಿಗೆ ಮಿತ್ರತ್ವ ಸಾಧಿಸಲು ರಾಯಭಾರಿಗಳನ್ನು ಕಳುಹಿಸಿಕೊಟ್ಟನು. ಅದಕ್ಕೆ ಒಪ್ಪಿದರೂ, ಅಂತಿಮವಾಗಿ ಸಲಾಬತ್‌ಜಂಗನು ಹಾಗಲವಾಡಿ ಕೋಟೆಯ ಮೇಲೆ ದಾಳಿಮಾಡಿ ಊರನ್ನು ಸೂರೆಗೈದನು. ನಂತರ ಈ ಸಂಸ್ಥಾನವನ್ನು ಸೀರ್ಯದ ಮೊಗಲ್ ಸುಬೇದಾರನಾದ ದಿಲಾವರ್‌ಖಾನನ ವಶಕ್ಕೆ ಒಪ್ಪಿಸಿ ಹಿಂತಿರುಗಿಸಿದನು.

ಈ ಮಧ್ಯೆ ಮುದ್ವೀರಪ್ಪನು ಶತ್ರುಗಳ ಕೈಗೆ ಸಿಗದಂತೆ ತಪ್ಪಿಸಿಕೊಂಡು ಸೇನೆಯನ್ನು ಪುನರ್ ಸಂಘಟಿಸಿ, ಹಾಗಲವಾಡಿಯಲ್ಲಿದ್ದ ದಿಲಾವರ್‌ಖಾನನ ಮೇಲೆ ದಾಳಿ ಮಾಡಿದನು. ಯುದ್ಧದಲ್ಲಿ ಪರಾಭವಗೊಂಡ ದಿಲಾವರ್‌ಖಾನನು ನಾಯಕನೊಂದಿಗೆ ಒಪ್ಪಂದ ಮಾಡಿಕೊಂಡು ಅವನಿಗೆ 'ರಾಜ ಜಂಗ್ ಬಹದೂರ್' ಎಂಬ ಬಿರುದನ್ನು ನೀಡಿದುದಲ್ಲದೆ ಹನ್ನೆರಡು ಹಳ್ಳಿಗಳನ್ನು ಉಡುಗೊರೆಯಾಗಿ ನೀಡಿದನು. ಹೀಗೆ ಮೊಗಲರಿಗೆ ಕಳೆದುಕೊಂಡಿದ್ದ ತನ್ನ ರಾಜ್ಯವನ್ನು ವೀರಾವೇಶದಿಂದ ಹೋರಾಡಿ ಮತ್ತೆ ಗಳಿಸಿ ಕ್ರಿ.ಶ. ೧೭೬೧ರಲ್ಲಿ ಮರಣ ಹೊಂದಿದನು. ಹೀಗೆ ಏರಿಳಿತಗಳನ್ನು ಅನುಭವಿಸುತ್ತಾ ಸಾಗಿದ್ದ ಈ ಸಂಸ್ಥಾನ ಮೈಸೂರಿನ ಸರ್ವಾಧಿಕಾರಿ ಹೈದರಾಲಿಯ ಕೈಯಲ್ಲಿ ಸಂಪೂರ್ಣ ಪತನ ಹೊಂದಿತು. ಹೈದರಾಲಿ ಕ್ರಿ.ಶ. ೧೭೬೧ರಲ್ಲಿ ಸರ್ವಾಧಿಕಾರಿಯಾದನು. ಅಂದಿನಿಂದ ಕರ್ನಾಟಕದಲ್ಲಿ ರಾಜಕೀಯ ಪರಿಸ್ಥಿತಿಯೇ ಸಂಪೂರ್ಣವಾಗಿ ಬದಲಾಯಿತು. ಅವನ ಗುರಿಯೇ ಮೈಸೂರನ್ನು ವಿಸ್ತರಿಸುವುದಾಗಿತ್ತು. ಆದ್ದರಿಂದ ಒಂದೊಂದಾಗಿ ಚಿಕ್ಕ, ದೊಡ್ಡ ಸಂಸ್ಥಾನಗಳನ್ನು ಜಯಿಸುತ್ತಾ ಬಂದನು. ಇವನ ಆಕ್ರಮಣಕ್ಕೆ ಹಾಗಲವಾಡಿಯೂ ಕೂಡ ಮುಂದೆ ಬಲಿಯಾಯಿತು.

ಮುದ್ವೀರಪ್ಪನಾಯಕನ ನಂತರ ಕರಿಚನ್ನಬಸಪ್ಪನಾಯಕ, ಪ್ರಸನ್ನರಾಯಪ್ಪನಾಯಕ ಹಾಗಲವಾಡಿ ಸಂಸ್ಥಾನವನ್ನು ಆಳಿದರು. ಮೂರನೇ ಚನ್ನಬಸಪ್ಪನಾಯಕನು ಹಾಗಲವಾಡಿ ದೊರೆಯಾದಾಗ ಹೈದರಾಲಿ ಅವನನ್ನು ಮೈಸೂರಿಗೆ ಕರೆಸಿಕೊಂಡು ೫೦ ಸಾವಿರ ರೂ.ಗಳನ್ನು ಕಾಣಿಕೆಯಾಗಿ ನೀಡಬೇಕೆಂದು ಒತ್ತಾಯಪಡಿಸಿದನು. ಅವನು ೧೮ ಸಾವಿರ ರೂ.ಗಳನ್ನು ಕಾಣಿಕೆಯಾಗಿ ಕೊಡಲು ಒಪ್ಪಿ ಹಾಗಲವಾಡಿಗೆ ಹಿಂತಿರುಗಿದನು. ಆಗ ಅವನ ಆಳ್ವಿಕೆಯಲ್ಲಿ ಚೇಳೂರು, ಬಿದರೆ, ತುಮಕೂರು, ಕಡಬ, ಕಂದಿಕೆರೆ, ಚಿಕ್ಕನಾಯಕನಹಳ್ಳಿ, ತುರುವೇಕೆರೆ, ಹೊನ್ನವಳ್ಳಿ, ನುಗ್ಗೇಹಳ್ಳಿ ಮೊದಲಾದ ಪ್ರದೇಶಗಳು ಸೇರಿದ್ದವು. ಆದರೆ ಅಷ್ಟು ಹಣ ಸಂಗ್ರಹವಾಗಲಿಲ್ಲ. ಇದರಿಂದ ಕೋಪಗೊಂಡ ಹೈದರ್ ಚನ್ನಬಸಪ್ಪನಾಯಕನನ್ನು ಬಂಧಿಸಿ ಶ್ರೀರಂಗಪಟ್ಟಣದ ಸೆರೆಮನೆಯಲ್ಲಿಟ್ಟನು. ಅವನು ಕ್ರಿ.ಶ. ೧೭೭೫ರಲ್ಲಿ ಅಲ್ಲಿಯೇ ಮರಣ ಹೊಂದಿದನು.

ಮೂರನೇ ಚನ್ನಬಸಪ್ಪನ ಮರಣಾನಂತರ ಅವನ ಮಗನಾದ ಬಾಲಕ ಮೂರನೇ ಮುದಿಯಪ್ಪನಾಯಕನನ್ನು ಪಟ್ಟಕ್ಕೆ ತರಲಾಯಿತು. ಆದರೆ ಬುದ್ಧಿವಂತನಾಗಿದ್ದ ಹೈದರನು ತನಗೆ ಬರಬೇಕಾಗಿದ್ದ ಬಾಕಿ ಹಣಕ್ಕೆ ಹಾಗಲವಾಡಿ ಸಂಸ್ಥಾನದ ಸೀಮೆಯಲ್ಲಿ ಅರ್ಧಭಾಗವನ್ನು ಶ್ರೀರಂಗಪಟ್ಟಣಕ್ಕೆ ಸೇರಿಸಿಕೊಂಡು ಉಳಿದ ಅರ್ಧಭಾಗವನ್ನು ಬಿಟ್ಟುಕೊಟ್ಟನು. ಈ ಮಧ್ಯೆ ವಕೀಲ ನಾರಾಯಣಪ್ಪ ಹಾಗಲವಾಡಿ ಸಂಸ್ಥಾನದಿಂದ ಬರಬೇಕಾಗಿದ್ದ ಬಾಕಿಯನ್ನು ತಾನೇ ಅಪಹರಿಸಿದ್ದರಿಂದ ಸಮಯ ಸಾಧಕನಾದ ಹೈದರನು ತಾನು ಹಿಂದೆ ಹೊರಡಿಸಿದ ಆಜ್ಞೆಯನ್ನು ಬದಲಾಯಿಸಿ ಈಗ ಪಟ್ಟವಾಗಿರುವ ಮೂರನೇ ಮುದಿಯಪ್ಪನು ಇನ್ನೂ ಬಾಲಕ, ಆತ ದೊಡ್ಡವನಾದ ಮೇಲೆ ಪೂರ್ಣ ಸಂಸ್ಥಾನವನ್ನು ಆತನಿಗೆ ಕೊಡಬಹುದು. ಈಗಿನ ಮಟ್ಟಿಗೆ ಬಾಲಕನ ಜೀವನಕ್ಕೆ ಭೋಗಸಂದ್ರ, ಶಿವಪುರ ಮತ್ತು ಎಕ್ಕಲಕಟ್ಟೆ ಗ್ರಾಮಗಳನ್ನು ಜಹಗೀರಾಗಿ ನಡೆಸತಕ್ಕದ್ದು ಎಂಬುದಾಗಿ ಅಪ್ಪಣೆಕೊಟ್ಟು ಇಡೀ ಹಾಗಲವಾಡಿ ಸಂಸ್ಥಾನವನ್ನು ಮೈಸೂರು ರಾಜ್ಯಕ್ಕೆ ಸೇರಿಸಿಕೊಂಡನು. ಇದರಿಂದ ವೈರಾಗ್ಯ ತಾಳಿದ ಮೂರನೇ ಮುದಿಯಪ್ಪನಾಯಕನು ದೇಶ ಪರ್ಯಟನೆ ಕೈಗೊಂಡು ಸದ್ಗತಿ ಪಡೆದನು.

**ನಿಡಗಲ್ಲು ನಾಯಕರು:** ನಿಡಗಲ್ಲು ನಾಯಕ ಮನೆತನವು ಜಿಲ್ಲೆಯ ಉತ್ತರಭಾಗದಲ್ಲಿ ಆಳಿದ ಒಂದು ಪುಟ್ಟ ರಾಜಮನೆತನ. ಈ ಮನೆತನದ ಮೂಲಪುರುಷ ತಿಪ್ಪನಾಯಕನು ಹರತಿ ಸಾರವಾಡ ಪ್ರಾಂತಕ್ಕೆ ಸೇರಿದವನೆಂದೂ ಹೇಳಲಾಗಿದೆ. ಇವನ ವಂಶವು ಅಬ್ಬಿನಾಯಕನಿಂದ ಆರಂಭವಾಗಿ ಪಾಲಭೂಪಾಲ, ಬೊಮ್ಮನಾಯಕರ ನಂತರ, ಅವನ ಮಗ ಎರಬಾಪನಾಯಕ, ಪತ್ನಿ ಎರವಮ್ಮಾಂಬಿಕೆಯರಿಗೆ ಚಿಕ್ಕತಿಪ್ಪರಾಜೇಂದ್ರ ಜನಿಸಿದನೆಂದು ಪಾವಗಡ ತಾಲೂಕಿನ ೫೪ನೆಯ ಸಂಖ್ಯೆಯ ಶಾಸನವು ಹೇಳುತ್ತದೆ. ಚಿಕ್ಕತಿಪ್ಪರಾಜೇಂದ್ರ ಕ್ರಿ.ಶ. ೧೪೮೬ಕ್ಕಿಂತ ಮೊದಲು ವಿಜಯನಗರವನ್ನು ಬಿಟ್ಟು ದಕ್ಷಿಣದತ್ತ ಪ್ರಯಾಣ ಬೆಳೆಸಿ, ಆಯಕಟ್ಟಿನ ಸ್ಥಳವಾಗಿದ್ದ ನಿಡಗಲ್ಲಿಗೆ ಬಂದು ರಾಜ್ಯವನ್ನು ಕಟ್ಟಿರಬೇಕು.

ಚಿಕ್ಕತಿಪ್ಪರಾಜೇಂದ್ರನ ನಂತರ ಜಕ್ಕನಾಯಕ ಹಾಗೂ ಮಹಾನಾಯಕಾಚಾರ್ಯ ತಿಮ್ಮಣ್ಣ ನಾಯಕರು ನಿಡುಗಲ್ ದುರ್ಗದಿಂದ ರಾಜ್ಯವಾಳಿದರು. ಇವನು ಚಕ್ರವರ್ತಿಯಿಂದ ಮಾಚಸಮುದ್ರ, ಗೋಸೀಕೆರೆ, ಚಳ್ಳಕೆರೆ, ದೊಡ್ಡೇರಿ, ಹರತಿಯಿಂದ ಪೂರ್ವದ ಪಾವಗಡದವರೆಗೆ, ಉತ್ತರದಲ್ಲಿ ಮೊಣಕಾಲ್ಮೂರು ವರೆಗೆ, ದಕ್ಷಿಣಕ್ಕೆ ಶಿರಾದವರೆಗಿನ ಪ್ರದೇಶವನ್ನು ಅಮರಮಾಗಣಿಯಾಗಿ ಪಡೆದುಕೊಂಡು ಕೆಲವು ದಶಕಗಳ ಕಾಲ ಆಳ್ವಿಕೆ ನಡೆಸಿದನು. ಇವನಿಗೆ ಏಳುಜನ ಪುತ್ರರಿದ್ದು, ರಾಜ್ಯವನ್ನು ತನ್ನ ಮಕ್ಕಳಲ್ಲಿ ಹಂಚಿದನು. ತನ್ನ ಹಿರಿಯ ಮಗನಾದ ಈಶ್ವರನಾಯಕನಿಗೆ ದೊಡ್ಡೇರಿ, ನಿಡಗಲ್ಲು ಮತ್ತು ಸುತ್ತಮುತ್ತಲಿನ ಪ್ರದೇಶಗಳನ್ನು ಬಿಟ್ಟುಕೊಟ್ಟನು. ಈಶ್ವರನಾಯಕನ ನಂತರ ಚಿಕ್ಕಣ್ಣನಾಯಕ, ಹೊಟ್ಟೆಣ್ಣನಾಯಕರು ರಾಜ್ಯಭಾರ ಮಾಡಿದರು. ಹೊಟ್ಟೆಣ್ಣ ನಾಯಕನ ಉತ್ತರಾಧಿಕಾರಿಯಾಗಿ ತಿಮ್ಮಣ್ಣನಾಯಕನು ನಿಡಗಲ್ಲಿನಲ್ಲಿ ಆಡಳಿತವನ್ನು ಆರಂಭಿಸಿದನು. ನಿಡಗಲ್ಲು ನಾಯಕನಾದ ತಿಮ್ಮಣ್ಣನು ವಿಜಯನಗರ ಚಕ್ರವರ್ತಿಯ ಮಹಾಮಂಡಲೇಶ್ವರರಿಂದ ನಾಯಕತನವನ್ನು ಪಡೆದುಕೊಂಡು ಆಳ್ವಿಕೆ ನಡೆಸುತ್ತಿದ್ದುದು ಕಂಡುಬರುತ್ತದೆ.

ಇದರಿಂದ ನಿಡಗಲ್ಲು ತಿಮ್ಮಣ್ಣ ನಾಯಕನು ವಿಜಯನಗರದ ಚಕ್ರವರ್ತಿಗಳಾದ ಸದಾಶಿವರಾಯರಿಗಿಂತ ಹೆಚ್ಚಾಗಿ ಮಹಾಮಂಡಲೇಶ್ವರ ಗುತ್ತಿ ತಿರುಮಲರಾಜೈಯದೇವ ಮಹಾ ಅರಸುಗಳಿಗೆ ನಿಷ್ಠೆಯನ್ನು ಇಟ್ಟುಕೊಂಡಿದ್ದುದು ಕಂಡುಬರುತ್ತದೆ. ಅಲ್ಲದೆ ತಿರುಮಲರಾಜೈಯದೇವ ಮಹಾಅರಸುಗಳಿಗೆ ಪುಣ್ಯವಾಗಬೇಕೆಂದು ದೇವರಿಗೆ ತುಮುಕುಂಟೆ ಗ್ರಾಮವನ್ನು ಬಿಟ್ಟಿದ್ದುದು ತನ್ನ ಸ್ಥಾನವನ್ನು ಭದ್ರಪಡಿಸಿಕೊಳ್ಳಲು ಮಾತ್ರವಲ್ಲದೆ ಅವರಿಗೆ ತಾನು ಹತ್ತಿರದವನೆಂದು ತೋರ್ಪಡಿಸಿಕೊಳ್ಳುವ ಉದ್ದೇಶವಾಗಿದ್ದಿರಬಹುದು. ಪ್ರಾಯಶಃ ವಿಜಯನಗರದ ಬದಲಾದ ರಾಜಕೀಯ ವಾತಾವರಣದಲ್ಲಿ ತಿಮ್ಮಣ್ಣನಾಯಕನ ಕ್ರಮ ಸರಿಯೆಂದು ಕಾಣುತ್ತದೆ. ಇವನು ನಿಡುಗಲ್ಲಿನಲ್ಲಿ ಸಾರ್ವಾಡೇಶ್ವರ ದೇವಾಲಯವನ್ನು ನಿರ್ಮಿಸಿದನು. ಕ್ರಿ.ಶ.೧೬೬೧ರಲ್ಲಿ ಕಾಳಾಂಜನ ಗಿರಿಯಲ್ಲಿ ಲಿಂಗ ಪ್ರತಿಷ್ಠಾಪಿಸಿ ಹೊಟ್ಟೇಶ್ವರ ಎಂದು ಕರೆದನು. ಕ್ರಮೇಣ ಹರತಿ ನಾಯಕರು ನಿಡಗಲ್ಲನ್ನು ವಶಪಡಿಸಿಕೊಂಡರು. ಹೀಗೆ ನಿಡಗಲ್ಲಿನಲ್ಲಿ ಹರತಿ ನಾಯಕರ ಆಳ್ವಿಕೆ ಆರಂಭವಾಯಿತು.

**ಹರತಿ ನಾಯಕರು:** ಹರತಿ ನಾಯಕರ ಬಗ್ಗೆ ಸಾಕಷ್ಟು ಸಂಶೋಧನೆಗಳು ನಡೆದಿವೆ. ಆದರೂ ಅವರ ಮೂಲಕ್ಕೆ ಸಂಬಂಧಿಸಿದಂತೆ ಸ್ಪಷ್ಟ ಚಿತ್ರ ಲಭಿಸುತ್ತಿಲ್ಲ. ಈ ಮನೆತನದ ಆರಂಭಿಕ ಅರಸರ ಬಗೆಗೂ ಸಾಕಷ್ಟು ಗೊಂದಲಗಳಿವೆ. ಈ ಹಿನ್ನೆಲೆಯಲ್ಲಿ ಈ ಮನೆತನದ ಇತಿಹಾಸವನ್ನು ವಿವೇಚಿಸಬೇಕಿದೆ.

**ಹರತಿ ವೀರ ಹೊಟ್ಟೆಣ್ಣನಾಯಕ:** ಹರತಿ ತಿಪ್ಪರಾಜನ ವಂಶಕ್ಕೆ ಸೇರಿದ ಹೊಟ್ಟೇಂದ್ರ ಮತ್ತು ಚೆನ್ನಮಾಂಬೆಯ ಪುತ್ರ ವೀರ ಹೊಟ್ಟೆಣ್ಣನಾಯಕನು ಕ್ರಿ.ಶ. ೧೬೫೪ಕ್ಕಿಂತ ಮೊದಲೇ ನಿಡಗಲ್ಲಿನಲ್ಲಿ ಆಳ್ವಿಕೆ ಆರಂಭಿಸಿದನು. ಎರಡನೇ ವೆಂಕಟನು ತನ್ನನ್ನು ರಕ್ಷಿಸಿಕೊಳ್ಳಲು ತನ್ನ ರಾಜಧಾನಿಗೆ ಸಮೀಪದಲ್ಲೇ ಇರುವ ನಿಡಗಲ್ಲನ್ನು ತಡೆಗೋಡೆಯಾಗಿ ಬೆಳೆಸುವ ಉದ್ದೇಶದಿಂದ ನಿಡಗಲ್ಲಿನಲ್ಲಿ ಆಳ್ವಿಕೆ ಮಾಡುತ್ತಿದ್ದ ಹರತಿವೀರ ಹೊಟ್ಟೆಣ್ಣನಾಯಕನಿಗೆ ನಿಡಗಲ್ಲು, ದೊಡ್ಡೇರಿ, ಶಿರಾ, ತಾವರೇಕೆರೆ, ಹಿರಿಯೂರು, ಐಮಂಗಲ ಮತ್ತು ಇದಕ್ಕೆ ಸಲ್ಲುವ ಸೀಮೆಯನ್ನು ಪುತ್ರಪೌತ್ರ ವಂಶಪಾರಂಪರ್ಯವಾಗಿ ಅನುಭವಿಸಿಕೊಂಡು ಹೋಗಬಹುದು ಎಂದು ಆದೇಶ ಹೊತ್ತ ರಾಯಸ ಪತ್ರವನ್ನು ಕಳುಹಿಸಿದನು. ಇದರ ಉದ್ದೇಶ ನಿಡಗಲ್ಲು, ಹರತಿ, ಶಿರಾ, ದೊಡ್ಡೇರಿ, ಹಿರಿಯೂರು ಪ್ರದೇಶಗಳಲ್ಲಿ ನಿಡಗಲ್ಲಿನ ಹರತಿ ನಾಯಕರ ಸಂಬಂಧಿಕರೇ ಆಳ್ವಿಕೆ ಮಾಡುತ್ತಿದ್ದು ಇವರೆಲ್ಲರನ್ನು ಒಟ್ಟುಗೂಡಿಸಿ ತನ್ನ ರಕ್ಷಣೆಯನ್ನು ಮಾಡಿಕೊಳ್ಳುವ ಪ್ರಯತ್ನವಾಗಿರಲೂಬಹುದು. ಅಲ್ಲದೆ ರಣದುಲ್ಲಾಖಾನನ ದಾಳಿಯ ಹೆದ್ದಾರಿ ಸಮೀಪದಲ್ಲೇ ಈ ಪ್ರದೇಶಗಳಿದ್ದು ಅವನನ್ನು ಅಲ್ಲಿಯೇ ತಡೆಯುವ ಉದ್ದೇಶದಿಂದ ಇಮ್ಮಡಿ ವೆಂಕಟನು ಅವರ ಪ್ರದೇಶಗಳನ್ನು ಅವರಿಗೇ ಖಾಯಂ ಮಾಡಿದನು.

**ಹರತಿ ತಿಮ್ಮಣ್ಣನಾಯಕ:** ಹರತಿ ತಿಮ್ಮಣ್ಣನಾಯಕನು ಕ್ರಿ.ಶ. ೧೬೬೨ರಲ್ಲಿ ಹರತಿ ವೀರಹೊಟ್ಟೆಣ್ಣ ನಾಯಕನ ಉತ್ತರಾಧಿಕಾರಿಯಾಗಿ ನಿಡಗಲ್ಲಿನಲ್ಲಿ ಅಧಿಕಾರಕ್ಕೆ ಬಂದನು. ವೀರಹೊಟ್ಟೆಣ್ಣನಾಯಕ ಮತ್ತು ಚಿಕ್ಕಮಾಂಬೆ ಇವನ ತಂದೆ ತಾಯಿ. ಇವನೂ ಕೂಡ ಪೆನುಗೊಂಡೆಯ ಚಕ್ರಾಧಿಪತಿಯಾಗಿದ್ದ ಶ್ರೀರಂಗರಾಯನಲ್ಲಿ ನಿಷ್ಠೆ ಇಟ್ಟುಕೊಂಡಿದ್ದನು. ರಣದುಲ್ಲಾಖಾನನ ದಾಳಿಯ ನಂತರ ದಕ್ಷಿಣ ಕರ್ನಾಟಕದ ಅನೇಕ ಭಾಗಗಳು ಆದಿಲ್ ಷಾಹಿಗಳ ವಶವಾದವು. ಅವರು ಶಿರಾವನ್ನು ಕರ್ನಾಟಕದ ದಕ್ಷಿಣದ ಆಡಳಿತ ಕೇಂದ್ರವನ್ನಾಗಿ ಮಾಡಿಕೊಂಡರು. ಮೊಘಲರ ಚಕ್ರವರ್ತಿ ಔರಂಗಜೇಬನು ದಕ್ಷಿಣಭಾರತದ ಮೇಲೆ ದಾಳಿಮಾಡಿ ಬಿಜಾಪುರ ಮತ್ತು ಗೋಲ್ಕಂಡವನ್ನು ವಶಪಡಿಸಿಕೊಂಡನು. ಅವನು ಕರ್ನಾಟಕದ ದಕ್ಷಿಣದಲ್ಲಿ ಬಿಜಾಪುರಕ್ಕೆ ಅಧೀನವಾಗಿದ್ದ ಪ್ರದೇಶಗಳನ್ನು ಗೆಲ್ಲಲು ಬೂದಿಲಿಂಗಪ್ಪ ಮತ್ತು ಸಿದ್ದಪ್ಪ ಎಂಬ ನಾಯಕರ ಅಧೀನದಲ್ಲಿ ಬೃಹತ್ ಸೈನ್ಯವನ್ನು ಕಳುಹಿಸಿದನು. ಈ ನಾಯಕರು ಆದಿಲ್ ಷಾಹಿಗಳ ಕೇಂದ್ರವಾದ ಶಿರಾವನ್ನು ಲೂಟಿ ಮಾಡಿ ಅಲ್ಲಿದ್ದ ಅವರ ಅಧಿಕಾರಿಗಳನ್ನು ಓಡಿಸಿದರು. ಆಗ ನಿಡಗಲ್ಲಿನ ಹರತಿ ತಿಮ್ಮಣ್ಣನಾಯಕನು ಮೊಗಲರ ಸೈನ್ಯ ತನ್ನ ದುರ್ಗದ ಮೇಲೆ ಎಲ್ಲಿ ದಾಳಿ ಮಾಡುವುದೋ ಎಂಬ ಮುಂದಾಲೋಚನೆಯಿಂದ ರಕ್ಷಣಾ ಕ್ರಮಗಳನ್ನು ಕೈಗೊಂಡು ದಾಳಿಯನ್ನೆದುರಿಸಲು ಸಜ್ಜಾದನು. ಅವನ ಸಂಶಯವು ನಿಜವಾಯಿತು. ಶಿರಾವನ್ನು ಗೆದ್ದ ಮೊಘಲರು ಸಮೀಪದಲ್ಲೇ ಇದ್ದ ನಿಡಗಲ್ಲಿನ ಕೋಟೆಗೆ ಮುತ್ತಿಗೆ ಹಾಕಿದರು. ಮೊದಲೇ ರಕ್ಷಣೆ ಮಾಡಿಕೊಂಡಿದ್ದುದರಿಂದ ಕೋಟೆಯ ಬಾಗಿಲು ತೆರೆಯಲಿಲ್ಲ. ಮೂರು ವರ್ಷಗಳ ಕಾಲ ಮುತ್ತಿಗೆ ಮುಂದುವರಿದರೂ ದುರ್ಗವನ್ನು ವಶಪಡಿಸಿಕೊಳ್ಳಲಾಗಲಿಲ್ಲ. ಕೋಟೆಯೊಳಗಡೆ ಇದ್ದ ಆಹಾರ ಪದಾರ್ಥಗಳು, ಮದ್ದುಗುಂಡುಗಳು ಖಾಲಿಯಾಗತೊಡಗಿದವು. ಬೇರೆ ದಾರಿ ಕಾಣದ ನಿಡಗಲ್ಲು ನಾಯಕನು ಕೋಟೆಯ ನಿರ್ವಹಣೆಯನ್ನು ತನ್ನ ಅಧಿಕಾರಿಗಳಿಗೆ ವಹಿಸಿ, ಬೇರೆ ಕಡೆಯಿಂದ ಸೈನ್ಯವನ್ನು ಕೂಡಿಸಲು ಕೋಟೆಯಿಂದ ರಹಸ್ಯವಾಗಿ ತಪ್ಪಿಸಿಕೊಂಡು ಆನೆಗೊಂದಿಗೆ ಹೋದನು. ಅಲ್ಲಿಂದ ಸೈನ್ಯವನ್ನು ಕೂಡಿಸಿಕೊಂಡು ರಾಯದುರ್ಗಕ್ಕೆ ಹೋದನು. ಅಲ್ಲಿನ ನಾಯಕನು ತಿಮ್ಮಣ್ಣನಾಯಕನಿಗೆ ನಿಡಗಲ್ಲು ಮೊಘಲರ ವಶವಾಯಿತೆಂದು ತಿಳಿಸಿದಾಗ ಬೇಸರಗೊಂಡ ಅವನು ತನ್ನ ಪ್ರಯತ್ನವೆಲ್ಲಾ ವಿಫಲವಾಯಿತೆಂದು ಆನೆಗೊಂದಿಯವರ ಸೈನ್ಯವನ್ನು ವಾಪಸ್ಸು ಕಳುಹಿಸಿದನು. ಕೆಲವು ದಿನಗಳ ನಂತರ ನಿಜವಾದ ಸುದ್ದಿ ತಿಳಿದಾಗ ರಾಯದುರ್ಗದ ನಾಯಕನ ಮೋಸದಿಂದ ಕೋಪಗೊಂಡನು. ಆದರೂ ಕೂಡ ಅವನು ಅಸಹಾಯಕನಂತೆ ಇರಬೇಕಾಯಿತು. ಇಷ್ಟೆಲ್ಲಾ ಕಷ್ಟಗಳ ನಡುವೆಯೂ ಅವನು ನಿಡಗಲ್ಲಿಗೆ ಹಿಂತಿರುಗಿ ಮೊಗಲರೊಂದಿಗೆ ಒಪ್ಪಂದ ಮಾಡಿಕೊಂಡು ಅದರ ಪ್ರಕಾರ ನಿಡುಗಲ್ ದುರ್ಗವನ್ನು ಅವರಿಗೆ ಬಿಟ್ಟುಕೊಟ್ಟು ತಾನು ಕಾಮನದುರ್ಗಕ್ಕೆ ಹೋಗಿ ವಾಸಿಸತೊಡಗಿದನು. ಬೂದಿಲಿಂಗಪ್ಪನು ಕೆಲಕಾಲ ನಿಡಗಲ್ಲಿನಲ್ಲಿ ಮೊಗಲರ ಪ್ರತಿನಿಧಿಯಾಗಿ ಆಳಿ ಪರಿಸ್ಥಿತಿಯನ್ನು ಹತೋಟಿಗೆ ತಂದು ಅಲ್ಲಿ ತನ್ನ ಅಧಿಕಾರಿಗಳನ್ನಿಟ್ಟು ಹೈದರಾಬಾದಿಗೆ ಹಿಂತಿರುಗಿದನು. ಅಲ್ಲಿ ಅವನು ಶತ್ರುಗಳಿಂದ ಕೊಲೆಗೀಡಾದನು. ಬೂದಿಲಿಂಗಪ್ಪನ ಹಿಂತಿರುಗುವಿಕೆ ಹಾಗೂ ಅವನ ಮರಣದ ಸುದ್ದಿಯಿಂದ ಸಂತೋಷಗೊಂಡ ನಿಡಗಲ್ಲು ನಾಯಕನು ಆ ದುರ್ಗದಲ್ಲಿದ್ದ ಅಳಿದುಳಿದ ತನ್ನ ಬೆಂಬಲಿಗರನ್ನು ಒಟ್ಟುಗೂಡಿಸಿ ಅಲ್ಲಿಂದ ಮೊಗಲ್ ಅಧಿಕಾರಿಗಳನ್ನು ಓಡಿಸಿ ಪುನಃ ನಿಡಗಲ್ಲನ್ನು ವಶಪಡಿಸಿಕೊಂಡನು.

**ಮುಮ್ಮಡಿ ಹೊಟ್ಟೆಣ್ಣನಾಯಕ:** ಕ್ರಿ.ಶ. ೧೭೦೦ರಲ್ಲಿ ಮುಮ್ಮಡಿ ಹೊಟ್ಟೆಣ್ಣನಾಯಕನು ನಿಡಗಲ್ಲಿನಲ್ಲಿ ತನ್ನ ಆಡಳಿತವನ್ನು ಆರಂಭಿಸಿದನು. ಆಗ ಶಿರಾದಲ್ಲಿ ನವಾಬರ ಆಳ್ವಿಕೆ ಇದ್ದಿತು. ನವಾಬ ಫಡದುಲ್ಲಾಖಾನನು ಚಿತ್ರದುರ್ಗ ಮತ್ತು ನಿಡಗಲ್

ಅರಸರೊಂದಿಗೆ ಉತ್ತಮ ಸ್ನೇಹವನ್ನಿಟ್ಟುಕೊಂಡಿದ್ದನು. ಆಗ ರಾಯದುರ್ಗದ ನಾಯಕರು ಚಿತ್ರದುರ್ಗದ ನಾಯಕರ ಅಧೀನದ ನಾಯಕನ ಹಟ್ಟಿಯನ್ನು ಆಕ್ರಮಿಸಿಕೊಂಡರು. ಆಗ ಭರಮಣ್ಣನಾಯಕನು ನಿಡಗಲ್ಲು ನಾಯಕರಿಗೆ ತನ್ನ ಸಹಾಯಕ್ಕೆ ಬರುವಂತೆ ಸಂದೇಶವನ್ನು ಕಳಿಸಿದನು. ನಿಡಗಲ್ಲಿನಲ್ಲಿ ಆಡಳಿತ ಮಾಡುತ್ತಿದ್ದ ಮುಮ್ಮಡಿ ಹೊಟ್ಟೆಣ್ಣ ನಾಯಕನು ಶಿರಾ ನವಾಬರ ಜೊತೆಗೂಡಿ ರಾಯದುರ್ಗದಿಂದ ಹಟ್ಟಿಯ ಆಕ್ರಮಣವನ್ನು ತೆರವು ಮಾಡಿಸುವುದರಲ್ಲಿ ಯಶಸ್ವಿಯಾದನು. ಈ ಘಟನೆಯು ಎರಡು ಸಮಕಾಲೀನ ದೊರೆಗಳ ನಡುವಣ ಬಾಂಧವ್ಯವನ್ನು ಮತ್ತಷ್ಟು ಹೆಚ್ಚಿಸಲು ಸಹಕಾರಿಯಾಯಿತು. ಆದರೆ ಇದು ಬಹಳಕಾಲ ಉಳಿಯಲಿಲ್ಲ. ಚಿತ್ರದುರ್ಗದಲ್ಲಿ ಭರಮಪ್ಪನಾಯಕನ ನಂತರ ಹಿರೇಮದಕರಿನಾಯಕನ ಆಳ್ವಿಕೆ ಆರಂಭವಾಯಿತು. ಹಿರೇಮದಕರಿಯು (ಕ್ರಿ.ಶ. ೧೭೨೧-೧೭೪೮) ಅನೇಕ ಯುದ್ಧಗಳಲ್ಲಿ ವಿಜಯ ಪತಾಕೆ ಹಾರಿಸಿದ್ದು ತನ್ನ ತಂದೆಯ ಸ್ನೇಹಿತರು ಹಾಗೂ ಕಷ್ಟಕಾಲದಲ್ಲಿ ನೆರವಾಗಿದ್ದವರು ನಿಡಗಲ್ಲಿನವರು ಎನ್ನುವುದನ್ನು ಲೆಕ್ಕಿಸದೆ, ನಿಡಗಲ್ಲು ರಾಜ್ಯದ ಮೇಲೆ ದಾಳಿ ಮಾಡಿ ನಿಡಗಲ್ಲು ನಾಯಕನನ್ನು ಸೋಲಿಸಿ ಅವನಿಂದ ದೊಡ್ಡೇರಿ, ತಳಕು, ಗೌರಸಮುದ್ರ, ಸಿದ್ಧಪ್ಪನಹಳ್ಳಿ, ಧವಮ್ಮನ ಹಳ್ಳಿ ಮುಂತಾದ ಊರುಗಳನ್ನು ವಶಪಡಿಸಿಕೊಂಡನು.

ಚಿತ್ರದುರ್ಗದೊಂದಿಗಿನ ಯುದ್ಧದಲ್ಲಿ ಪರಾಭವಗೊಂಡರೂ ಧೃತಿಗೆಡದ ಮುಮ್ಮಡಿ ವೀರ ಹೊಟ್ಟೆಣ್ಣನಾಯಕನು ತನ್ನ ಮಗ ಹೊಟ್ಟೆಣ್ಣ ನಾಯಕನ ನೆರವಿನೊಂದಿಗೆ ಆಳ್ವಿಕೆ ಮಾಡತೊಡಗಿದನು. ಆದರೆ ಆತನ ಮಗನು ರೋಗದಿಂದ ಮರಣಹೊಂದಿದನು. ತನ್ನ ಪ್ರೀತಿಪಾತ್ರ ಮಗನ ಸಾವಿನಿಂದ ಮನೋರೋಗ ಪೀಡಿತನಾದ ನಾಯಕನು ಆಡಳಿತದಲ್ಲಿ ಆಸಕ್ತಿಯನ್ನು ಕಳೆದುಕೊಂಡು, ಕೊನೆಗೆ ತನ್ನ ಮೊಮ್ಮಗನಾದ ವೀರ ಮುಮ್ಮಡಿ ಹೊಟ್ಟೆಣ್ಣನಾಯಕನನ್ನು ಮುಂದಿನ ನಾಯಕನೆಂದು ಘೋಷಿಸಿ ಕ್ರಿ.ಶ. ೧೭೫೧ರಲ್ಲಿ ಮರಣ ಹೊಂದಿದನು. ವೀರ ಮುಮ್ಮಡಿ ಹೊಟ್ಟೆಣ್ಣನಾಯಕನು ಕ್ರಿ.ಶ. ೧೭೫೮ರ ವರೆಗೆ ಆಡಳಿತ ಮಾಡಿದನು. ಈ ಅವಧಿಯಲ್ಲಿ ಶಿರಾ ನವಾಬರು ನಿಡಗಲ್ಲು ದುರ್ಗವನ್ನು ಆಕ್ರಮಿಸಿದರು. ನಾಯಕನು ಅವರಿಗೆ ವಾರ್ಷಿಕ ೩೦೦೦ ಪಗೋಡ (ನಾಣ್ಯ) ಗಳ ಪೊಗದಿಯನ್ನು ಕೊಡಲು ಒಪ್ಪಿದನು. ಅಂದಿನಿಂದ ಅವನು ಶಿರಾ ನವಾಬರ ಆಶ್ರಿತರಾಗಿ ಆಡಳಿತ ಮಾಡಲಾರಂಭಿಸಿದನು.

ಇವನ ನಂತರ ವೀರ ತಿಮ್ಮಣ್ಣನಾಯಕನ ಆಳ್ವಿಕೆ ನಿಡಗಲ್ಲಿನಲ್ಲಿ ಆರಂಭವಾಯಿತು. ಆ ವೇಳೆಗೆ ಮೈಸೂರಿನ ರಾಜಕೀಯದಲ್ಲಿ ಹಲವಾರು ಬದಲಾವಣೆಗಳುಂಟಾಗಿದ್ದವು. ದಳವಾಯಿಗಳಿಂದ ಅಧಿಕಾರ ಕಸಿದುಕೊಂಡಿದ್ದ ಹೈದರಾಲಿಯು ಮೈಸೂರಿನ ಸರ್ವಾಧಿಕಾರಿಯಾಗಿದ್ದನು. ಮೈಸೂರು ಅರಸರು ಹೆಸರಿಗೆ ಮಾತ್ರ ರಾಜರಾಗಿದ್ದು ಸಮಸ್ತ ಅಧಿಕಾರವೆಲ್ಲವೂ ಹೈದರಾಲಿಯ ಕೈಯಲ್ಲಿ ಕೇಂದ್ರೀಕೃತವಾಗಿತ್ತು. ಇವನು ಸಣ್ಣಪುಟ್ಟ ರಾಜರ ಕಡುವಿರೋಧಿಯಾಗಿದ್ದನು. ಆ ವೇಳೆಗೆ ಅನೇಕ ದೊಡ್ಡ ರಾಜ ಮನೆತನಗಳೂ ಹೈದರನ ವಶವಾಗಿದ್ದವು. ಬಾಲ್ಯ ಜೀವನವನ್ನು ಈ ಪ್ರಾಂತದಲ್ಲೇ ಕಳೆದಿದ್ದ ಅವನಿಗೆ ಇಲ್ಲಿನ ಭೌಗೋಳಿಕ ಪರಿಸರದ ಜ್ಞಾನ ಚೆನ್ನಾಗಿತ್ತು. ಆದ್ದರಿಂದ ಅವನು ಶಿರಾದ ಮೇಲೆ ಆಕ್ರಮಣ ಮಾಡಿ ಸುಲಭವಾಗಿ ಗೆದ್ದುಕೊಂಡು ಸಮೀಪದಲ್ಲೇ ಇದ್ದ ನಿಡಗಲ್ಲು ಕೋಟೆಗೂ ಮುತ್ತಿಗೆ ಹಾಕಿದನು. ಪ್ರಬಲನಾದ ಹೈದರಾಲಿಯ ಮುಂದೆ ನಿಡಗಲ್ಲಿನ ಆಟ ಸಾಗಲಿಲ್ಲ. ಪರಾಭವ ಗೊಂಡ ವೀರ ತಿಮ್ಮಣ್ಣನಾಯಕನು ಹೈದರಾಲಿಯೊಂದಿಗೆ ಒಪ್ಪಂದ ಮಾಡಿಕೊಳ್ಳಬೇಕಾಯಿತು. ಆ ಪ್ರಕಾರ ಹೈದರಾಲಿಗೆ ವಾರ್ಷಿಕ ೭೦೦೦ ಪಗೋಡಗಳನ್ನು ಕಪ್ಪವಾಗಿ ಕೊಡಲು ಒಪ್ಪಿದನು. ಜೊತೆಗೆ ೩೦೦ ಜನ ಸೈನಿಕರನ್ನು ಅವನ ಯುದ್ಧಗಳಲ್ಲಿ ಪಾಲ್ಗೊಳ್ಳಲು ಕಳುಹಿಸಿಕೊಟ್ಟನು. ಈ ರೀತಿ ಶಿರಾ ನವಾಬರಿಗೆ ಅಧೀನರಾಗಿದ್ದ ನಿಡಗಲ್ಲು ನಾಯಕರು, ನಂತರ ಮೈಸೂರಿನವರಿಗೆ ಕಾಲಕಾಲಕ್ಕೆ ಪೊಗದಿ ಹಣ ನೀಡುತ್ತಾ, ಅವರ ಸಂದೇಶ ಬಂದಾಗ ಯುದ್ಧಗಳಲ್ಲಿ ಪಾಲ್ಗೊಳ್ಳುತ್ತಾ ಆಳ್ವಿಕೆ ಮಾಡತೊಡಗಿದರು. ಈ ವೇಳೆಗೆ ನಿಡಗಲ್ಲು ದುರ್ಗದ ವೈಭವ ಕುಂದುತ್ತಾ ಬಂದಿತ್ತು. ದಿನೇ ದಿನೇ ಪ್ರಬಲವಾಗುತ್ತಾ ಪಾಳೆಯಪಟ್ಟುಗಳನ್ನು ಕಬಳಿಸುತ್ತಾ ಬರುತ್ತಿದ್ದ ಹೈದರ್ ಮತ್ತು ಟಿಪ್ಪೂವಿನ ಕಾಲದಲ್ಲಿ ನಿಡಗಲ್ಲಿನವರು ರಾಜ್ಯ ವಿಸ್ತಾರ ಸಾಹಸಕ್ಕೆ ಕೈಹಾಕಲಿಲ್ಲ. ಇದ್ದುದನ್ನೂ ಕೂಡ ಸ್ವತಂತ್ರವಾಗಿ ಅನುಭವಿಸುವಷ್ಟು ಅವಕಾಶವೂ ಇಲ್ಲದೆ ಪೊಗದಿ ತೆತ್ತು ರಾಜಭಂಡಾರವನ್ನು ಬರಿದು ಮಾಡಿ ಕೊಂಡರು.

ನಿಡಗಲ್ಲು ನಾಯಕನಿಗೆ ಸೈನ್ಯವನ್ನು ತೆಗೆದುಕೊಂಡು ಮಂಗಳೂರಿಗೆ ಬರುವಂತೆ ಟಿಪ್ಪುಸುಲ್ತಾನನು ಆದೇಶ ನೀಡಿದನು. ಅದರಂತೆ ವೀರ ತಿಮ್ಮಣ್ಣನಾಯಕನು ಮಂಗಳೂರು ಕಡೆ ಹೊರಟನು. ಸುಲ್ತಾನನ ಕಟ್ಟಾಜ್ಞೆಯಿಂದ ತಿಮ್ಮಣ್ಣ ತೀವ್ರ ಮನೋರೋಗ ಪೀಡಿತನಾದನಲ್ಲದೆ, ದೇಹಾಲಸ್ಯದಿಂದ ಬಳಲಿ ಮಂಗಳೂರನ್ನು ತಲುಪಿದನು. ಟಿಪ್ಪುವಿಗೆ ಈ ಸಮಯದಲ್ಲಿ ಬ್ರಿಟಿಷರೊಂದಿಗೆ ಹೋರಾಡಲು ಹೆಚ್ಚಿನ ಸೈನ್ಯ ಮತ್ತು ಹಣದ ಆವಶ್ಯಕತೆ ಇದ್ದುದರಿಂದ ಮಂಗಳೂರಿಗೆ

ಸೇನಾಸಮೇತರಾಗಿ ಬಂದಿದ್ದ ತಿಮ್ಮಣ್ಣನಾಯಕನು ಬಲಿಯಾಗಬೇಕಾಯಿತು. ರೋಗಪೀಡಿತನಾಗಿದ್ದ ತಿಮ್ಮಣ್ಣನಾಯಕನಿಂದ ನಿಡಗಲ್ಲಿನಲ್ಲಿದ್ದ ಅವನ ಮಗನಿಗೆ ೫೦೦೦ ಸೈನಿಕರನ್ನು ಸಂಗ್ರಹಿಸಿ ಕಳುಹಿಸುವಂತೆ ಬಲವಂತದ ಪತ್ರವೊಂದನ್ನು ಬರೆಯಿಸಿದನು. ನಿಡಗಲ್ಲಿನ ಸೈನಿಕ ಮತ್ತು ಆರ್ಥಿಕ ಪರಿಸ್ಥಿತಿ ಟಿಪ್ಪುವಿಗೆ ಗೊತ್ತಿದ್ದರೂ ಕೂಡ ಈ ಕ್ರಮದ ಹಿಂದೆ ನಿಡಗಲ್ಲನ್ನು ಕಬಳಿಸುವ ಸಂಚು ಇತ್ತೆಂದು ತೋರುತ್ತದೆ. ಆ ಪತ್ರವನ್ನು ಚಿತ್ರದುರ್ಗದ ಕಿಲ್ಲೇದಾರನಾಗಿದ್ದ ದೌಲತ್‌ಖಾನನಿಗೆ ತಲುಪಿಸಲಾಯಿತು. ಅವನು ಪತ್ರ ಸಮೇತ ನಿಡಗಲ್ಲಿಗೆ ತೆರಳಿ ಅದರ ವಿವರವನ್ನು ತಿಮ್ಮಣ್ಣನಾಯಕನ ಮಗನಾದ ಹೊಟ್ಟೆಣ್ಣನಾಯಕನಿಗೆ ತಿಳಿಸಿದನು. ಇದರಿಂದ ಗಾಬರಿಗೊಂಡ ನಾಯಕನು ೫೦೦೦ ಸೈನಿಕರನ್ನು ಹೊಂದಿಸಲಾಗದೆ ದುರ್ಗವನ್ನೇ ದವಲತ್‌ಖಾನನಿಗೆ ಒಪ್ಪಿಸಿಬಿಟ್ಟನು. ಮಂಗಳೂರು ಯುದ್ಧದಲ್ಲಿ ಭಾಗಿಯಾಗಿದ್ದ ವೀರ ತಿಮ್ಮಣ್ಣನಾಯಕನು ರೋಗಪೀಡಿತನಾಗಿ ಅಲ್ಲಿಯೇ ಮರಣ ಹೊಂದಿದನು.

ನಿಡಗಲ್ಲು ದುರ್ಗವನ್ನು ವಶಪಡಿಸಿಕೊಂಡ ದೌಲತ್‌ಖಾನನು ಅದರ ರಕ್ಷಣೆಗೆ ಬಲವಾದ ಸೇನಾಪಡೆಯನ್ನು ಪುನಾರಚಿಸಿ ವೀರತಿಮ್ಮಣ್ಣನಾಯಕನ ಮಕ್ಕಳಾದ ಹೊಟ್ಟೆಣ್ಣನಾಯಕ ಮತ್ತು ಇಮ್ಮಡಿ ಹೊಟ್ಟೆಣ್ಣನಾಯಕರನ್ನು ತನ್ನ ಜೊತೆಯಲ್ಲಿಯೇ ಸೆರೆಯಾಳಾಗಿ ಚಿತ್ರದುರ್ಗಕ್ಕೆ ಕರೆದುಕೊಂಡು ಹೋದನು. ನಂತರ ಅವರನ್ನು ಶ್ರೀರಂಗಪಟ್ಟಣಕ್ಕೆ ಕಳುಹಿಸಲಾಯಿತು. ಇಲ್ಲಿ ಅವರನ್ನು ಬಂಧನದಲ್ಲಿಟ್ಟು ಹಿರಿಯ ಚೆಲ್ಲೂರು, ಚಿಕ್ಕಚೆಲ್ಲೂರು ಮತ್ತು ಓಬನಹಳ್ಳಿ ಗ್ರಾಮಗಳನ್ನು ಜಾಗೀರಾಗಿ ನೀಡಿದರು. ಕೆಲವರ್ಷಗಳ ನಂತರ ಬ್ರಿಟಿಷ್ ಸೈನ್ಯದ ಆಕ್ರಮಣ ಹೆಚ್ಚಾದಾಗ ಟಿಪ್ಪು ಅನೇಕ ಪಾಳೆಯಗಾರರ ಜೊತೆ ನಿಡಗಲ್ಲಿನ ದುರ್ಗಾಧಿಪತಿಗಳಿಗೆ ಗಲ್ಲು ಶಿಕ್ಷೆ ವಿಧಿಸಿ ಅವರಿಗೆ ನೀಡಿದ್ದ ಜಾಗೀರನ್ನು ಮುಟ್ಟುಗೋಲು ಹಾಕಿಕೊಂಡನು. ಟಿಪ್ಪುವಿನ ಈ ಕ್ರಮದಿಂದ ರಾಜಮನೆತನದವರು ಹಾಗೂ ಅರಮನೆಗೆ ನಿಷ್ಠರಾಗಿದ್ದವರು ನಿಡಗಲ್ಲಿನಲ್ಲಿ ದಂಗೆ ಎದ್ದರು. ಕೆಲವರನ್ನು ಸೆರೆಹಿಡಿದು ಶ್ರೀರಂಗಪಟ್ಟಣಕ್ಕೆ ರವಾನಿಸಲಾಯಿತು. ಮತ್ತೆ ಕೆಲವರು ತಪ್ಪಿಸಿಕೊಂಡರು. ಕ್ರಿ.ಶ. ೧೭೯೯ರಲ್ಲಿ ಟಿಪ್ಪುಸುಲ್ತಾನನು ನಾಲ್ಕನೇ ಮೈಸೂರು ಯುದ್ಧದಲ್ಲಿ ಮೃತನಾಗಿ ಮೈಸೂರು ಇಂಗ್ಲಿಷರ ವಶವಾಯಿತು. ಅವರು ಸೆರೆಯಲ್ಲಿದ್ದವರನ್ನು ಬಿಡುಗಡೆ ಮಾಡಿದರು. ಮೈಸೂರು ಸಂಸ್ಥಾನವನ್ನು ವಿಭಜನೆ ಮಾಡಿದಾಗ ನಿಡಗಲ್ಲು ಮೈಸೂರು ರಾಜಮನೆತನದ ಮುಮ್ಮಡಿ ಕೃಷ್ಣರಾಜಒಡೆಯರಿಗೆ ಸೇರಿತು. ಇಲ್ಲಿಗೆ ನಿಡಗಲ್ಲಿನ ವೈಭವ ಕೊನೆಗೊಂಡಿತು. ನಗರದಿಂದ ಅನೇಕ ಜನ ವಲಸೆ ಹೋದರು. ಮೈಸೂರು ರಾಜ್ಯಾಂಗ ವ್ಯವಸ್ಥೆಯಾದಾಗ ನಿಡಗಲ್ಲಿಗೆ ತಾಲೂಕಿನ ಸ್ಥಾನಮಾನವನ್ನು ನೀಡಿದರೂ ಅದು ಬಹಳ ಕಾಲ ಉಳಿಯಲಿಲ್ಲ.

### ಮಹಾನಾಡ ಪ್ರಭುಗಳು

ಜಿಲ್ಲೆಯ ತುಮಕೂರು, ಮಧುಗಿರಿ, ಕೊರಟಗೆರೆ ಹಾಗೂ ಗುಬ್ಬಿ ತಾಲೂಕಿನ ಕೆಲವು ಪ್ರದೇಶಗಳನ್ನು ಒಳಗೊಂಡ 'ಮಹಾ ನಾಡು' ರಾಜ್ಯವನ್ನು ಮಧ್ಯಕಾಲೀನ ಅವಧಿಯಲ್ಲಿ ಸುಮಾರು ನಾಲ್ಕುಶತಮಾನಗಳಿಗೂ ಅಧಿಕಾವಧಿ ಆಳಿದ "ಮಹಾನಾಡ ಪ್ರಭು"ಗಳ ಇತಿಹಾಸ ಗಮನಾರ್ಹವಾಗಿದೆ. ಇವರ ಇತಿಹಾಸಕ್ಕೆ ಸಂಬಂಧಿಸಿದಂತೆ ಈವರೆಗೆ ನಡೆದಿರುವ ಅಧ್ಯಯನಗಳು ಪ್ರಧಾನವಾಗಿ ಈ ಮನೆತನದ ವಂಶಸ್ಥರೆಂದು ಹೇಳಲಾಗುವ ಶಂಭೋನಹಳ್ಳಿಯ ಕುಟುಂಬವೊಂದರ ಬಳಿಯಿರುವ ರಾಯರೇಖಾ ಕಾಗದ ಸುರುಳಿ ದಾಖಲೆಯನ್ನಾಧರಿಸಿದ್ದಾಗಿವೆ. ಈ ನಿಟ್ಟಿನಲ್ಲಿ ಕೆ.ನಾರಾಯಣಚಾರ್ಯ ಅವರ "ಮಧುಗಿರಿ ಚರಿತ್ರೆ"; ಎಂ.ಡಿ.ಶ್ರೀನಿವಾಸ್ ಅವರ "ಮಧುಗಿರಿ ಇತಿಹಾಸ"; ಡಾ.ಆರ್.ಕಾವಲಮ್ಮ ಅವರ "ಮಧುಗಿರಿ ಮಹಾನಾಡ ಪ್ರಭುಗಳು"; ಹಾಗೂ ಡಾ.ಎಂ.ಎಂ.ಕಲ್ಬುರ್ಗಿ ಸಂಪಾದಿತ "ಮಹಾನಾಡ ಪ್ರಭುಗಳು" ಗ್ರಂಥಗಳು ಉಲ್ಲೇಖಾರ್ಹವಾಗಿವೆ. ಈ ಹಿನ್ನೆಲೆಯಲ್ಲಿ ಅವರು ರಚಿಸಿಕೊಟ್ಟಿರುವ ಮಹಾನಾಡ ಪ್ರಭುಗಳ ಇತಿಹಾಸವನ್ನು ಇಲ್ಲಿ ಸಂಗ್ರಹಿಸಿ ನೀಡಲಾಗಿದೆ.

ಈ ಮನೆತನಕ್ಕೆ ಸೇರಿದವರೆನ್ನಲಾದ "ವೀರಪ್ಪಗೌಡ ಮತ್ತು ಆತನ ಆರುಜನ ಸೋದರರು ತುಂಗೋಟಿ ಗ್ರಾಮದ ಮೂಲಕ ಆಯಕಟ್ಟಿನ ಸ್ಥಳಕ್ಕೆ ಬಂದು ಕ್ರಿ.ಶ. ೧೩೪೭ರಲ್ಲಿ ಕೋರಾ ಗ್ರಾಮದ ಸುತ್ತ ಕೋಟೆ ನಿರ್ಮಾಣ ಮಾಡಿ ಕೆಲಕಾಲ ನಿಂತರೆಂಬ ಐತಿಹ್ಯವಿದೆ. ಕಾಲಕ್ರಮೇಣ ತಮ್ಮ ಶೌರ್ಯ ಸಾಹಸಗಳಿಂದ ರಾಜ್ಯಕಟ್ಟುವ ಉದ್ದೇಶದಿಂದ ಇವರೆಲ್ಲರೂ ಬೇರೆ ಬೇರೆ ಕಡೆ ಹೋಗಿ ಹೊಸ ಊರುಗಳನ್ನು ಸ್ಥಾಪಿಸಿರೆಂದು ಹೇಳಲಾಗುತ್ತದೆ. ಅವರಲ್ಲಿ ಚನ್ನಪ್ಪಗೌಡ ತೆರೆಯೂರನ್ನು, ಸಂಗಪ್ಪಗೌಡ ಚೇಳೂರನ್ನು, ಕಾಳಚಿಕ್ಕಪ್ಪಗೌಡ ಗುಬ್ಬಿಹೊಸಹಳ್ಳಿಯನ್ನು, ಹಿರೇಚಿಕ್ಕಪ್ಪಗೌಡ ಬಿದರೆಯನ್ನು ರಾಮಪ್ಪಗೌಡ ಎಣ್ಣೆಗೆರೆಯನ್ನು ಕಟ್ಟಿದರೆ, ಕಾಳಣ್ಣಗೌಡ ಕೋರಾದಲ್ಲಿಯೇ ಉಳಿದನೆಂದು ಹೇಳಲಾಗುತ್ತದೆ. ಹಿರಿಯನಾದ ವೀರಪ್ಪಗೌಡನು

ಕ್ರಿ.ಶ. ೧೩೬೨ರಲ್ಲಿ ನಗರ ನಿರ್ಮಾಣಕ್ಕೆ ಮುಂದಾಗಿ ಪಟ್ಟಣ ನಿರ್ಮಿಸಿ ಅದಕ್ಕೆ ಮುಮ್ಮಡಿ ಪಟ್ಟಣ ಎಂಬ ಹೆಸರಿಟ್ಟನೆಂದು ಹೇಳಲಾಗುತ್ತದೆಯಾದರೂ, ಅದನ್ನು ಉಲ್ಲೇಖಿಸುವ ಶಾಸನಾಧಾರಗಳಿಲ್ಲ. ಹೀಗೆ ಈ ಏಳು ಜನ ಸೋದರರಿಂದ ಸ್ಥಾಪಿತವಾದ ಊರು–ನಾಡುಗಳಿಗೆ ಮಹಾನಾಡು ಎಂದೂ ಅವುಗಳ ಒಡೆಯರಿಗೆ ಮಹಾನಾಡ ಪ್ರಭುಗಳು ಎಂದೂ ಹೆಸರಾಯಿತೆಂದು ಹೇಳಲಾಗುತ್ತದೆ.

ಪ್ರಭು ವೀರಪ್ಪಗೌಡನ ಮರಣಾನಂತರ ಅವನ ಮಗ ದೊಡ್ಡೇಗೌಡ ಅಧಿಕಾರಕ್ಕೆ ಬಂದನು. ಈ ಸಂದರ್ಭದಲ್ಲಿ ದೊಡ್ಡೇಗೌಡ ಇನ್ನೂ ಅಪ್ರಾಪ್ತ ವಯಸ್ಕನಿದ್ದು ಸಂಸ್ಥಾನದ ವ್ಯವಹಾರವನ್ನೆಲ್ಲಾ ದಳವಾಯಿ ದೊಡ್ಡನಂಜಪ್ಪನೇ ನಿರ್ವಹಿಸುತ್ತಿದ್ದನಂತೆ. ಇದೇ ಸಂದರ್ಭದಲ್ಲಿ ಬಹಮನಿ ಸುಲ್ತಾನರ ದಾಳಿಗೆ ಸಿಕ್ಕಿದ ಈ ನಾಡಿನ ರಾಜಧಾನಿ ಮತ್ತು ಅದರ ಒಡೆಯರು ಮರಣ ಹೊಂದಿದುದನ್ನು ಅವರ ವಂಶಾವಳಿ ತಿಳಿಸುತ್ತದೆ. ಮುಮ್ಮಡಿ ಪಟ್ಟಣ ನಾಶವಾಗಿ ದೊಡ್ಡೇಗೌಡ ಗತಿಸಿದನೆಂಬ ಅಭಿಪ್ರಾಯವಿದೆ. ಆನಂತರದ ಇತಿಹಾಸ ಅಸ್ಪಷ್ಟವಿದ್ದು ಮುಂದೆ ಕ್ರಿ.ಶ. ೧೫೨೫ರಲ್ಲಿ ಇವರು ಬಿಜ್ಜಾವರ ಎಂಬ ಹೊಸ ಪಟ್ಟಣ ನಿರ್ಮಿಸಿ ಅಲ್ಲಿಗೆ ರಾಜಧಾನಿಯನ್ನು ಸ್ಥಳಾಂತರಿಸಿದರೆಂದು ಹೇಳಲಾಗುತ್ತದೆ.

ನಂತರ ನಾಡಪ್ರಭು ಕರಿತಿಮ್ಮ ಚಿಕ್ಕಪ್ಪಗೌಡನು, ಪೆನುಗೊಂಡೆಯಿಂದ ಆಳ್ವಿಕೆ ನಡೆಸುತ್ತಿದ್ದ, ವಿಜಯನಗರದ ರಾಯರಿಗೆ ನಿಷ್ಠೆಯನ್ನು ಮುಂದುವರಿಸಿದನು.. ನಂತರ ಇವನ ಮಗ ಇಮ್ಮಡಿ ಚಿಕ್ಕಭೂಪಾಲನು ಅಧಿಕಾರಕ್ಕೆ ಬಂದನು. ತೋಂಟದ ಸಿದ್ಧಲಿಂಗ ಶಿವಯೋಗಿಗಳ ಆಶೀರ್ವಾದದ ಫಲವಾಗಿ ಕರಿತಿಮ್ಮ ಚಿಕ್ಕಪ್ಪಗೌಡನ ಸತಿ ಸೋಮಾಂಬೆಯ ಗರ್ಭದಲ್ಲಿ ಇಮ್ಮಡಿ ಚಿಕ್ಕಭೂಪಾಲ ಬಿಜ್ಜಾವರದಲ್ಲಿ ಜನಿಸಿದನು. ಅತೀ ಪರಾಕ್ರಮಿಯೂ ಆದ ಇವನು ಬಿಜ್ಜಾವರದ ನಾಡಪ್ರಭುಗಳಲ್ಲೇ ಅತ್ಯಂತ ಪ್ರಸಿದ್ಧನಾದವನು.

**ಇಮ್ಮಡಿ ಚಿಕ್ಕಭೂಪಾಲ:** ಆಡಳಿತ ಸೂತ್ರಗಳನ್ನು ವಹಿಸಿಕೊಂಡ ಕೂಡಲೇ ಚಿಕ್ಕಭೂಪಾಲನು ತನ್ನ ರಾಜ್ಯದ ಗಡಿಗಳನ್ನು ಬಲಪಡಿಸುತ್ತಾ ಕೋಟೆಗಳನ್ನು ನಿರ್ಮಿಸಲಾರಂಭಿಸಿದನು. ಕ್ರಿ.ಶ.೧೫೯೪ರಲ್ಲಿ ತಮ್ಮ ಕುಟುಂಬದ ಆರಾಧ್ಯ ಗುರುಗಳಾದ ತೋಂಟದ ಸಿದ್ಧೇಶ್ವರರ ಹೆಸರಿನಲ್ಲಿ ಸಿದ್ಧಾಪುರ ಗ್ರಾಮವನ್ನು ನಿರ್ಮಾಣ ಮಾಡಿ ಅದಕ್ಕೆ ಭದ್ರವಾದ ಕೋಟೆ, ಕೆರೆ ಮತ್ತು ವಿಘ್ನೇಶ್ವರ, ಭೈರವ ಮೊದಲಾದ ಐದು ದೇವಾಲಯಗಳನ್ನು ಕಟ್ಟಿಸಿದನು. ಕ್ರಿ.ಶ.೧೬೦೧ರಲ್ಲಿ ಮಧುಗಿರಿಯ ಕಡಿದಾದ ಬೆಟ್ಟದಲ್ಲಿ ಬಲವಾದ ಕೋಟೆಯನ್ನು ಮತ್ತು ಕುಂಬಿಯಲ್ಲಿ ಗೋಪಾಲಕೃಷ್ಣ ದೇವಾಲಯವನ್ನು ನಿರ್ಮಿಸಿದನೆಂದು ಹೇಳಲಾಗುತ್ತದೆ.

ಇಮ್ಮಡಿ ಚಿಕ್ಕಭೂಪಾಲನು ಅಳಿಯ ಎಲ್ಲೇಂದ್ರನೊಂದಿಗೆ ಹೋರಾಡಿದನೆಂದು ಹೇಳಲಾಗುತ್ತದೆ. ಹಾಗೂ ಹಾವಳಿ ಭೈರೇಂದ್ರನೊಡನೆ ಮಾಡಿದ ಹರುವೆಕೋಟೆ ಕಾಳಗ ಬಹಳ ಪ್ರಮುಖವಾದುದು. ಚಿಕ್ಕಭೂಪಾಲನು ಸತಿಯರಾದ ಚನ್ನಮ್ಮ ಲಿಂಗಾಜಮ್ಮರೊಡನೆ ಕೆಲವೇ ದಿನಗಳಲ್ಲಿ ಮರಣ ಹೊಂದಿದನು.ಇಮ್ಮಡಿ ಚಿಕ್ಕಭೂಪಾಲನಿಗೆ ಮೂವರು ಗಂಡುಮಕ್ಕಳು ಮತ್ತು ಇಬ್ಬರು ಹೆಣ್ಣುಮಕ್ಕಳು ಇದ್ದಂತೆ ಚಿಕ್ಕಭೂಪಾಲ ಸಾಂಗತ್ಯದಿಂದ ಗೊತ್ತಾಗುತ್ತದೆ. ಆದರೆ ಇದಕ್ಕೆ ಪೂರಕವಾದ ಶಾಸನಾಧಾರಗಳಿದ್ದಂತೆ ತೋರುತ್ತಿಲ್ಲ. ಹಿರಿಯಮಗ ತೋಂಟೇಂದ್ರ ಹರುವೆಕೋಟೆ ಕಾಳಗದಲ್ಲಿ ಮಡಿದರೆ. ಎರಡನೇ ಮಗ ಚನ್ನಪ್ಪಗೌಡ ಬಾಲ್ಯದಲ್ಲೇ ಅಕಾಲ ಮರಣಕ್ಕೆ ತುತ್ತಾಗಿದ್ದನು. ಇವನ ಮತ್ತೊಬ್ಬ ಮಗನೇ ಸಪ್ಪೇಂದ್ರ; ಪುತ್ರಿಯರೆಂದರೆ ಸಿದ್ದಾಂಬೆ ಮತ್ತು ಸಪ್ಪಕ್ಕ. ಇಮ್ಮಡಿ ಚಿಕ್ಕಪ್ಪಗೌಡನು ಸಮರ್ಥ ಆಡಳಿತಗಾರನಾಗಿದ್ದುದರ ಜೊತೆಗೆ 'ಅಭಿನವ ಭರತಸಾರ ಸಂಗ್ರಹ' ಮತ್ತು 'ವೀರಶೈವ ವಿರೋಧಿ ಗಜಾಂಕುಶ' ಎಂಬ ಕೃತಿಗಳನ್ನು ರಚಿಸಿದ್ದಾನೆ.

ಇಮ್ಮಡಿ ಚಿಕ್ಕಭೂಪಾಲನ ಕಿರಿಯ ಮಗ ಸಪ್ಪೇಂದ್ರನಿಗೆ ಗುರು ಬೋಳೇಶ್ವರರು ಬಿಜ್ಜಾವರದಲ್ಲಿ ಪಟ್ಟವನ್ನು ಕಟ್ಟಿದರು. ತಂದೆ ಚಿಕ್ಕಭೂಪಾಲ ಆರಂಭಿಸಿದ ಕಾರ್ಯಗಳನ್ನು ಬಿಡದೆ ನಿರ್ವಹಿಸಿ ಮುಮ್ಮಡಿ ಚಿಕ್ಕೇಂದ್ರನೆನಿಸಿಕೊಂಡನು. ತಾನು ಜೀವಂತವಿದ್ದಾಗಲೇ ತನ್ನ ಮೂರು ಮಕ್ಕಳಾದ ಸಂಗಪ್ಪಗೌಡ, ಹಿರಿತೋಂಟದಪ್ಪಗೌಡ ಮತ್ತು ಕಾಳಚಿಕ್ಕಪ್ಪಗೌಡರಿಗೆ ಕ್ರಮವಾಗಿ ಮಹಾನಾಡಿನ ಚನ್ನರಾಯದುರ್ಗ, ಮಿಡಿಗೇಶಿ ಮತ್ತು ಮಧುಗಿರಿಗಳನ್ನು ಹಂಚಿಕೊಟ್ಟನು. ಆ ನಂತರ ಇವನ ಮಗ ಕಾಳಚಿಕ್ಕಪ್ಪಗೌಡ ಮಧುಗಿರಿಯನ್ನಾಳಲು ಆರಂಭಿಸಿದನು.

ಕಾಳಚಿಕ್ಕಪ್ಪಗೌಡನ ನಂತರ ಆತನ ಮಕ್ಕಳಾದ ರಾಮಪ್ಪಗೌಡ ಮತ್ತು ತಿಮ್ಮಪ್ಪಗೌಡರಲ್ಲಿ ಅಧಿಕಾರಕ್ಕಾಗಿ ಅಂತಃಕಲಹ ಉಂಟಾಗಿ ತಿಮ್ಮಪ್ಪಗೌಡನು ಮೈಸೂರಿನ ಚಿಕ್ಕದೇವರಾಜ ಒಡೆಯರ ಸಹಾಯವನ್ನು ಕೋರಿದನು. ಇದೇ

ಅವಕಾಶವನ್ನುಪಯೋಗಿಸಿಕೊಂಡ ದಳವಾಯಿ ದೇವರಾಜಯ್ಯನ ನಾಯಕತ್ವದ ಮೈಸೂರು ಸೇನೆ, ಆಕ್ರಮಣ ಮಾಡಿ ಬಿಜ್ಜಾವರ, ಮಧುಗಿರಿ, ಚನ್ನರಾಯದುರ್ಗ ಮೊದಲಾದ ಕೋಟೆಗಳನ್ನು ಗೆದ್ದುಕೊಂಡಿತು. ಈ ಪ್ರದೇಶಗಳ ದಿಗ್ವಿಜಯವನ್ನು ಚಿಕ್ಕದೇವರಾಜ ಒಡೆಯರ ಕಾಲದ 'ಗೀತಗೋಪಾಲ' ಗ್ರಂಥ ಹಾಗೂ ಮಧುಗಿರಿಯ ಶಾಸನಗಳು ಈ ವಿಜಯವನ್ನು ದೃಢೀಕರಿಸುತ್ತದೆ. ಹೀಗೆ ಸಹೋದರರಲ್ಲಿ ಉಂಟಾದ ಯಾದವೀ ಕಲಹದಿಂದಾಗಿ ಮಹಾನಾಡ ಪ್ರಭುಗಳು ಅಧಿಕಾರ ಕಳೆದುಕೊಂಡುದಲ್ಲದೆ ಸಕಲ ಸಂಪತ್ತನ್ನೂ ಮೈಸೂರು ಅರಸರಿಗೆ ಒಪ್ಪಿಸಿ ಸೆರೆಯಾಳಾಗಿ ಶ್ರೀರಂಗಪಟ್ಟಣದ ಸೆರೆಮನೆ ಸೇರುವಂತಾಯಿತು. ಚಿಕ್ಕದೇವರಾಜ ಒಡೆಯರ ಅಪ್ಪಣೆಯ ಮೇರೆಗೆ ಮಧುಗಿರಿಯ ಉಸ್ತುವಾರಿಯನ್ನು ದೊಡ್ಡಯ್ಯ ಎಂಬ ಅಧಿಕಾರಿ ನೋಡಿಕೊಳ್ಳುತ್ತಿದ್ದ ಅಂಶ ಗೊತ್ತಾಗುತ್ತದೆ.

ಚಿಕ್ಕದೇವರಾಜ ಒಡೆಯರಿಂದ ಸೆರೆಯಾದ ರಾಮಪ್ಪ ಮತ್ತು ತಿಮ್ಮಪ್ಪ ಅನೇಕ ವರ್ಷ ಶ್ರೀರಂಗಪಟ್ಟಣದ ಸೆರೆಮನೆಯಲ್ಲಿ ಉಳಿಯಬೇಕಾಯಿತು. ರಾಮಪ್ಪನ ಮಗ ಕಾಳಪ್ಪಗೌಡ ಶ್ರೀರಂಗಪಟ್ಟಣಕ್ಕೆ ಹೋಗಿ ಮೈಸೂ ರು ಅರಸರನ್ನು ಕಂಡು ಮೊರೆಹೋದಾಗ ಅವರಿಗೆ ಮಿಡಿಗೇಶಿಯನ್ನು ಜಹಗೀರಾಗಿ ನೀಡಿದರೆಂದು ಹೇಳಲಾಗುತ್ತದೆ. ನಂತರ ಹೈದರಾಲಿ ಮತ್ತು ಟಿಪ್ಪುಸುಲ್ತಾನರ ಕಾಲದಲ್ಲಿ ಮಧುಗಿರಿಯನ್ನು ಅವರು ಪೂರ್ಣವಾಗಿ ಆಕ್ರಮಿಸಿದರು. ಹೀಗೆ ವಿವಿಧ ಮೈಸೂರು ಅರಸರ ಆಡಳಿತಕ್ಕೆ ಒಳಪಟ್ಟ ಮಧುಗಿರಿ ಹಲವಾರು ಬದಲಾವಣೆಗಳನ್ನು ಕ್ರಮೇಣ ಮೈಗೂಡಿಸಿಕೊಂಡಿತು.ಇವರ ಆಡಳಿತಾವಧಿಯಲ್ಲಿ ಕೋರಾ, ಮುಮ್ಮಡಿಪಟ್ಟಣ ಮತ್ತು ಬಿಜ್ಜಾವರ ಅವರ ರಾಜಧಾನಿ ಪಟ್ಟಣಗಳಾಗಿದ್ದು, ಮಧುಗಿರಿಯ ಕೋಟೆಯನ್ನು ಮಹಾನಾಡ ಪ್ರಭುಗಳೇ ನಿರ್ಮಿಸಿದರೆಂದು ದಾಖಲಿಸಿಲಾಗಿದೆ.

ಆದರೆ ಈ ಮಹಾನಾಡ ಪ್ರಭುಗಳ ಬಗ್ಗೆ ವಿಶೇಷ ಅಧ್ಯಯನ ನಡೆಸಿರುವ ಕೆಂಕೆರೆ ಹನುಮಂತೇಗೌಡರು, ಈ ಸ್ಥಳೀಯ ಮನೆತನದ ಇತಿಹಾಸಕ್ಕೆ ಸಂಬಂಧಿಸಿದಂತೆ ಈವರೆವಿಗೆ ನಡೆದಿರುವ ಅಧ್ಯಯನಗಳು ಪ್ರಧಾನವಾಗಿ ಐತಿಹ್ಯ, ಸಾಹಿತ್ಯ ಹಾಗೂ ಕಾಗದ ಸುರಳಿ ದಾಖಲೆಗಳನ್ನು ಆಧರಿಸಿದವಾಗಿರುವುದರಿಂದ ಅದನ್ನು ಪರಿಷ್ಕರಿಸುವ ಅಗತ್ಯವಿದೆ ಎಂದು ಹೇಳುತ್ತಾರೆ. ಮಿಗಿಲಾಗಿ ಈ ಮಹಾನಾಡ ಪ್ರಭು ಗಳಿಗೆ ಸಂಬಂಧಿಸಿದಂತೆ ಈಗಾಗಲೇ ಬೆಳಕು ಕಂಡಿರುವ ೨೦ ಪ್ರಕಟಿತ ಶಾಸನಗಳನ್ನು ಆಧರಿಸಿ, ಈ ಮನೆತನದ ಇತಿಹಾಸವನ್ನು ಪುನಾರಚಿಸಿ ತಮ್ಮ "ದೇವಗುಂದ ಮಹಾನಾಡ ಪ್ರಭುಗಳು" ಗ್ರಂಥದಲ್ಲಿ ನೀಡಿದ್ದಾರೆ. ಆ ಪ್ರಕಾರ ಸುಮಾರು ೪೬೦ ವರುಷ ಆಳಿದ ಈ ವಂಶದ ೨೧ ಮಂದಿ ಪ್ರಭುಗಳು ೧೯ ತಲೆಮಾರುಗಳ ಅವಧಿಯಲ್ಲಿ ಸುಮಾರು ಕ್ರಿ.ಶ. ೧೨೨೬ ರಿಂದ ಕ್ರಿ.ಶ.೧೬೮೭ರವರೆಗೆ ಆಡಳಿತ ನಡೆಸಿದ ಅಂಶವನ್ನು ಹೊರಗೆಡವಿದ್ದಾರೆ. ಇವರು ನೀಡಿರುವ ವಂಶಾವಳಿ ಹಾಗೂ ಕಾಲಾನುಕ್ರಮಣಿಕೆಯನ್ನು ಇಲ್ಲಿ ನೀಡಲಾಗಿದೆ. ಆ ಪ್ರಕಾರ ಈ ವಂಶದ ಸಂಸ್ಥಾಪಕ ಒಂದನೆಯ ಮಸಣಗೌಡ (೧೨೨೬–೧೨೪೬), ಕಾಳೇಗೌಡ (೧೨೪೬–೧೨೭೩), ಇಮ್ಮಡಿ ಮಸಣಗೌಡ (೧೨೭೩–೧೩೦೬), ಮಾರೇಗೌಡ (೧೩೦೬–೧೩೩೬), ಇವನ ಸೋದರ ರಾಮೇಗೌಡ (೧೩೩೬–೧೩೬೧), ಅವನ ಮಗ ಕೆಂಪು ವೀರೇಗೌಡ (೧೩೬೨–೧೩೮೨), ಮುದ್ದಣವೊಡೆಯ (೧೩೮೨–೧೪೦೭), ಸೋಮಣ್ಣವೊಡೆಯ (೧೪೦೭–೧೪೧೮), ಅಹೋಬಳವೊಡೆಯ(೧೪೧೮–೧೪೩೭), ತಿಮ್ಮೇಗೌಡ(೧೪೩೭–೧೪೬೭), ಸೋಮಣ್ಣಗೌಡ (೧೪೬೭–೧೪೯೫), ಸೋದರ ಕಲಿಯ ತಮ್ಮಯ್ಯಗೌಡ (೧೪೯೫–೧೫೦೮), ಮಹಾಮಂಡಲೇಶ್ವರ ಹಿರಿಯ ಮಲ್ಲಯ್ಯ ವೊಡೆಯ ( ೧೫೦೮ ? ೧೫೨೯), ಇಮ್ಮಡಿ ಚಿಕ್ಕಪ್ಪಗೌಡ (೧೫೨೯–೧೫೫೨),ಇಮ್ಮಡಿ ಚಿಕ್ಕಪ್ಪಗೌಡ(೧೫೨೯–೧೫೫೨),ಬಿಜ್ಜಾವರದ ಮುಮ್ಮಡಿ ಚಿಕ್ಕಪ್ಪಗೌಡ(೧೫೫೨–೧೪೯೨), ಬಿಜ್ಜಾವರದ ಇಮ್ಮಡಿ ಚಿಕ್ಕಪ್ಪಗಡ (೪೯೨–೧೬೨೩). ವೀರಚಿಕ್ಕಪ್ಪವೊಡೆಯ (೧೬೨೩–೧೬೪೮), ಇಮ್ಮಡಿ ಚಿಕ್ಕಪ್ಪವೊಡೆಯ (೧೬೪೮–೧೬೭೮),ಹಾಗೂ ಹಿರೇಗೌಡ(೧೬೭೮–೧೬೮೭). ಇವರ ಆಡಳಿತಾವಧಿಯಲ್ಲಿ ಕೋರಾ, ತುಮಕೂರು, ಬಿಜ್ಜಾವರ, ಹಾಗೂ ತರೂರು ಕ್ರಮವಾಗಿ ಇವರ ರಾಜಧಾನಿಗಳಾಗಿದ್ದವು ಎಂದೂ ಅಭಿಪ್ರಾಯಪಡುತ್ತಾರೆ.ಇವರ ಪ್ರಕಾರ ಮುಮ್ಮಡಿ ಪಟ್ಟಣ ನಿರ್ಮಾಣವಾಗಲೇ ಇಲ್ಲ. ಅಲ್ಲದೆ, ಮಧುಗಿರಿಯ ಕೋಟೆಯನ್ನು ಮೊಘಲರು ಕಟ್ಟಿಸಿದರೆಂದು ನಿರೂಪಿಸಲು ಯತ್ನಿಸಿದ್ದಾರೆ. ಆದರೆ ಮಧುಗಿರಿ ಕೋಟೆಯನ್ನು ಮೊಘಲರು ನಿರ್ಮಿಸಿದರೆಂಬ ಇವರ ಅಭಿಪ್ರಾಯವನ್ನು ಪುಷ್ಠೀಕರಿಸಲು ಸಾಕ್ಷಾಧಾರಗಳು ಸಾಲದು.

ಈ ಎಲ್ಲಾ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡು ಲಭ್ಯವಿರುವ ಶಾಸನ,ಸಾಹಿತ್ಯ,ಕಡತ,ಕಾಗದದ ಸುರುಳಿ ದಾಖಲೆ, ಜನಪದ ಹಾಗೂ ಮೌಖಿಕ ಕಥನ ಮುಂತಾದವುಗಳನ್ನಾಧರಿಸಿ, ಮಹಾನಾಡ ಪ್ರಭುಗಳ ಇತಿಹಾಸವನ್ನು ಪುನಾರಚಿಸುವ ಅಗತ್ಯವಿದೆ.

**ಮಿಡಿಗೇಶಿ ಪಾಳೆಯಗಾರರು:** ಮಿಡಿಗೇಶಿಯಲ್ಲಿ ಯಾವುದೇ ಒಂದು ಮನೆತನದವರು ಆಳ್ವಿಕೆ ನಡೆಸಿಲ್ಲ. ಇದು ಹಲವು ಮನೆತನಗಳ ಆಳ್ವಿಕೆಗೆ ಒಳಪಟ್ಟಿತ್ತು. ಇಲ್ಲಿ ಮಹಾನಾಡ ಪ್ರಭುಗಳು, ನಾಗಿರೆಡ್ಡಿ, ಹರತಿ ವಂಶಜರು, ಮೈಸೂರು ಒಡೆಯರು, ಹೈದರಾಲಿ ಮತ್ತು ಟಿಪ್ಪೂಸುಲ್ತಾನ್ ಆಳ್ವಿಕೆ ನಡೆಸಿದ್ದರು. ಮಿಡಿಗೇಶಿಯನ್ನಾಳಿದವರಲ್ಲಿ ಮೊದಲನೆಯವನೇ ನಲ್ಲೋಬನಾಯಕ. ಈತ ಬೇಡ ಕುಲಕ್ಕೆ ಸೇರಿದ್ದು ಬಲಾಢ್ಯ ಕೋಟೆ ನಿರ್ಮಿಸಿಕೊಂಡು ಪ್ರಬಲನಾಗಿದ್ದ ಸುದ್ದಿಯನ್ನು ಕೇಳಿದ ಸಾಳುವ ನರಸಿಂಹ ಆತನನ್ನು ಹತ್ತಿಕ್ಕಲು ನಿರ್ಧರಿಸಿದನು. ಇದರಿಂದ ಆತನು ವಿಚಲಿತನಾಗಲಿಲ್ಲ. ರಾಯನಿಗೆ ಶರಣಾಗಿ ದುರ್ಗವನ್ನು ಕಳೆದುಕೊಳ್ಳುವುದಕ್ಕಿಂತ ಹೋರಾಡಲೇಬೇಕೆಂದು ನಿರ್ಧರಿಸಿದ ನಲ್ಲೋಬನಾಯಕ ಅಶ್ವಬಲವನ್ನು ಕೂಡಿಸಿಕೊಂಡು ಸಿದ್ಧನಾದನು. ವಿಜಯನಗರದ ಬೃಹತ್ ಸೈನ್ಯವನ್ನು ಕಂಡರೂ ಮಿಡಿಗೇಶಿಯನ್ನು ಬಿಡಲು ಒಪ್ಪದ ನಲ್ಲೋಬ ಕಾಳಗ ಮಾಡತೊಡಗಿದನು. ಈ ಸುದ್ದಿ ಸಾಳುವ ನರಸಿಂಗರಾಯನಿಗೆ ತಲುಪಲು ಅವನು ಕ್ರೋಧದಿಂದ ತನ್ನ ದಳಪತಿಯಾದ ಈಶ್ವರನಾಯಕನಿಗೆ ಮಿಡಿಗೇಶಿಯ ಬೇಡರಪಡೆಯ ನಾಯಕ ನಲ್ಲೋಬನ ತಲೆಯನ್ನು ಕಡಿದು ತರಬೇಕೆಂದು ಆಜ್ಞೆ ಮಾಡಿದನು. ಇದರಿಂದ ತಮ್ಮ ಸೈನ್ಯಬಲವನ್ನು ಹೆಚ್ಚಿಸಿಕೊಂಡ ವಿಜಯನಗರದವರು ಮಿಡಿಗೇಶಿಯ ಮೇಲೆ ಆಕ್ರಮಣ ಮಾಡಿದರು. ವಿಜಯನಗರದವರ ಎದುರು ಬೇಡರಪಡೆ ಮುಗ್ಗರಿಸಿತು. ಮಿಡಿಗೇಶಿದುರ್ಗ ವಶವಾಯಿತು. ನಲ್ಲೋಬನಾಯಕ ಮತ್ತವನ ಪತ್ನಿ, ಮಕ್ಕಳನ್ನು ಸೆರೆಹಿಡಿದು ಸಾಳುವ ನರಸಿಂಹನ ಎದುರು ನಿಲ್ಲಿಸಲಾಯಿತು. ಕೊನೆಗೆ ಶರಣಾಗತನಾದ ನಲ್ಲೋಬನಾಯಕನನ್ನು ಕೊಂದು ಮಿಡಿಗೇಶಿದುರ್ಗದ ಉಸ್ತುವಾರಿಗೆ ತನ್ನ ಅಧಿಕಾರಿಯನ್ನು ನೇಮಕ ಮಾಡಿದನು.

**ಪರಶು ರಾಹುತನ ಆಳ್ವಿಕೆ:** ಮಿಡಿಗೇಶಿಯು ನಲ್ಲೋಬನಾಯಕನ ನಂತರ ನೇರವಾಗಿ ವಿಜಯನಗರ ಚಕ್ರವರ್ತಿಗಳು ಅಧೀನಕ್ಕೆ ಒಳಪಟ್ಟಿತು. ಸಾಳ್ವ ನರಸಿಂಹನ ಮರಣಾನಂತರ ಇಮ್ಮಡಿ ನರಸಿಂಹನು ವಿಜಯನಗರ ಸಾಮ್ರಾಜ್ಯದ ಚಕ್ರವರ್ತಿಯಾದನು. ಬಲಾಢ್ಯ ಕೋಟೆಯಿಂದ ಕೂಡಿದ್ದ ಮಿಡಿಗೇಶಿ ಸೀಮೆಗೆ ತನ್ನ ಬೆಂಬಲಿಗನಾದ ಪರಶುರಾಹುತನನ್ನು ಅಧಿಕಾರಕ್ಕೆ ತಂದನು.

ಸಾಳ್ವರ ನಂತರ ವಿಜಯನಗರದಲ್ಲಿ ತುಳುವರ ಆಳ್ವಿಕೆ ಆರಂಭವಾಯಿತು. ಇವರ ಅಧೀನದಲ್ಲಿ ಮಿಡಿಗೇಶಿಯಲ್ಲಿ ಯಾರು ಅಧಿಕಾರಿಗಳಾಗಿದ್ದರು ಎಂದು ಹೇಳಲು ಯಾವುದೇ ಆಧಾರಗಳಿಲ್ಲ. ಆದರೂ ಮಿಡಿಗೇಶಿಯಲ್ಲಿ ದೊರೆತಿರುವ ಶಾಸನವೊಂದು ಸದಾಶಿವರಾಯನ ಕಾಲಕ್ಕೆ ಸೇರಿದ್ದು, ಅದು ಕ್ರಿ.ಶ. ೧೫೪೫ರಲ್ಲಿ ಮಹಾಮಂಡಲೇಶ್ವರ ಕನ್ನರಸ ರಾಜಯ್ಯ ವಿಠಲೇಶ್ವರನ ಅಧೀನದಲ್ಲಿತ್ತೆಂಬುದನ್ನು ಸ್ಪಷ್ಟಪಡಿಸುತ್ತದೆ.

ಮಿಡಿಗೇಶಿಯು ಮಹಾನಾಡ ಪ್ರಭುಗಳ ರಾಜಧಾನಿ ಬಿಜ್ಜಾವರಕ್ಕೆ ಕೇವಲ ೨೦ ಕಿ.ಮೀ. ಅಂತರದಲ್ಲಿದೆ. ರಾಜಧಾನಿಗೆ ಇಷ್ಟೊಂದು ಹತ್ತಿರದಲ್ಲಿ ವೈರಿಪಡೆ ಇರುವುದು ಬಿಜ್ಜಾವರದಲ್ಲಿ ಆಗ ಆಳ್ವಿಕೆ ಮಾಡುತ್ತಿದ್ದ ಇಮ್ಮಡಿ ಚಿಕ್ಕಭೂಪಾಲನಿಗೆ ಸರಿಕಾಣಲಿಲ್ಲ. ಇದೇ ಸಮಯದಲ್ಲಿ ಹಾವಳಿ ಬೈರೇಗೌಡನು ವಿಜಯನಗರದವರ ಪೆನುಗೊಂಡೆಯನ್ನು ಆಕ್ರಮಿಸಿ ಲೂಟಿಗೈದಿದ್ದನು. ನಿಷ್ಠಾವಂತ ಸಾಮಂತನಾಗಿದ್ದ ಇಮ್ಮಡಿ ಚಿಕ್ಕಪ್ಪಗೌಡ ಇದನ್ನು ಸಹಿಸದೆ ಹಾವಳಿ ಬೈರೇಗೌಡನ ಮೇಲೆ ಯುದ್ಧ ಸಾರಿದನು. ಯುದ್ಧಕ್ಕೆ ಹೊರಟ ಸಂದರ್ಭದಲ್ಲಿ ಬಿಜ್ಜಾವರದವರ ಸಹಾಯಕ್ಕೆ ಬಂದವರಲ್ಲಿ ಮಿಡಿಗೇಶಿಯ ಚನ್ನಪ್ಪನಾಯಕನೂ ಒಬ್ಬನಾಗಿದ್ದಾನೆ. ಇವನು ಪ್ರಾಯಶಃ ಹಾವಳಿ ಬೈರೇಗೌಡ ನೇಮಕ ಮಾಡಿದ ಪ್ರತಿನಿಧಿಯೇ ಇರಬೇಕು. ಆದಾಗ್ಯೂ ಹಾವಳಿ ಬೈರೇಗೌಡನನ್ನು ಧಿಕ್ಕರಿಸಿ ಬಿಜ್ಜಾವರದವರ ಕಡೆ ಸೇರಿಕೊಂಡನು. ಯುದ್ಧ ಸಾಗುತ್ತಿದ್ದಾಗ ಬೈರೇಗೌಡನಿಗೆ ಸೋಲು ಖಚಿತವೆನಿಸಿತು. ಅವನ ಮಂತ್ರಿ ಸಂಧಾನಕ್ಕೆ ಗುಪ್ತವಾಗಿ ಚಿಕ್ಕಭೂಪಾಲನ ಬಳಿಗೆ ಬಂದು ಮಾತನಾಡಿದನೆಂದು ಹೇಳಲಾಗುತ್ತದೆ.

"ನೀವು ಆಳುತ್ತಿರುವ ಮಿಡಿಗೇಶಿಯನ್ನು ಕೊಡದಿದ್ದರೆ ನನಗೆ ಅದನ್ನು ತೆಗೆದುಕೊಳ್ಳುವುದು ಕಷ್ಟವೇನೂ ಆಗುವುದಿಲ್ಲ. ಮೊದಲು ನೀವು ಪೆನುಗೊಂಡೆ ಬಿಟ್ಟು ಮಿಡಿಗೇಶಿಯನ್ನು ನೀಡಿದರೆ ಸಂಧಾನ ಸಾಧ್ಯ; ಇಲ್ಲದಿದ್ದರೆ ಯುದ್ಧ ಮುಂದುವರಿಸಿ" ಎಂದು ಹೇಳಿದನು. ಕೊನೆಗೆ ಹೆಚ್ಚೇನು ಕಷ್ಟವಿಲ್ಲದೆ ಹಾವಳಿ ಬೈರೇಗೌಡನೊಂದಿಗೆ ಯುದ್ಧ ಮಾಡಿಯೇ ಮಿಡಿಗೇಶಿಯನ್ನು ಬಿಜ್ಜಾವರದ ಇಮ್ಮಡಿ ಚಿಕ್ಕಭೂಪಾಲ ಗೆದ್ದುಕೊಂಡನು. ಇದರಿಂದ ಮಿಡಿಗೇಶಿಯಲ್ಲಿ ಬಿಜ್ಜಾವರ ಮಹಾನಾಡ ಪ್ರಭುಗಳ ಆಳ್ವಿಕೆ ಆರಂಭವಾಯಿತು.

**ನಾಗಿರೆಡ್ಡಿಯ ಆಳ್ವಿಕೆ:** ಮಿಡಿಗೇಶಿಯನ್ನಾಳಿದವರಲ್ಲಿ ಅತ್ಯಂತ ಪ್ರಚಲಿತವಿರುವ ವ್ಯಕ್ತಿ ಎಂದರೆ ನಾಗಿರೆಡ್ಡಿ. ಮೆಕೆಂಜಿಯ ಕೈಫಿಯತ್ ನಾಗಿರೆಡ್ಡಿ ಹೇಗೆ ಮಿಡಿಗೇಶಿಯಲ್ಲಿ ನೆಲೆಸಿದನು ಎಂಬ ವಿವರವನ್ನು ನೀಡುತ್ತದೆ. ನಾಡಗೌಡ ನಾಗಿರೆಡ್ಡಿ ಹೊರಗಿನಿಂದ ಮಿಡಿಗೇಶಿ ಸ್ಥಳಕ್ಕೆ ಆಗಮಿಸಿ ಅದಾಗಲೇ ಆ ಸ್ಥಳದಲ್ಲಿದ್ದ ಮಿಡಿಗೇಶಿ ಎಂಬ ಮಹಿಳೆಯ ಜೊತೆ ಸ್ನೇಹ ಸಂಪಾದಿಸಿದನು. ಕ್ರಮೇಣ ಆ ಮಹಿಳೆಯನ್ನು ಅವಳ ಪ್ರಿಯಕರನಾದ ಸಿದ್ದಪ್ಪ ಎಂಬುವನಿಂದ ಬೇರ್ಪಡಿಸಿ, ತನ್ನ ಸವಿಮಾತುಗಳಿಂದ ಅವಳಲ್ಲಿದ್ದ ಎಲ್ಲಾ ಐಶ್ವರ್ಯವನ್ನು ಕಬಳಿಸಿ ಅದರ ಸಹಾಯದಿಂದ ಬೆಟ್ಟದ ಮೇಲಿನ ಕೋಟೆಯನ್ನು ಕಟ್ಟಿಸಿದನು. ಇದರ ಜೊತೆಗೆ ಜೀರಿಗೆಹಳ್ಳಿ ಮತ್ತು ನಲ್ಲೆಕಾಮನಹಳ್ಳಿ ಎಂಬ ಊರುಗಳನ್ನು ನಿರ್ಮಿಸಿದನು.

ಮೆಕಂಜಿಯ ಕೈಫಿಯತ್ತಿನಲ್ಲಿ "ಮಧುಗಿರಿಯ ಪಾಳೆಗಾರ ಹಿರೇಚಿಕ್ಕಪ್ಪಗೌಡ ನಾಗಿರೆಡ್ಡಿಯನ್ನು ಭೇಟಿ ಮಾಡಲು ಬಂದಾಗ ಇಬ್ಬರೂ ಪರಸ್ಪರ ಆಲಂಗಿಸಿಕೊಂಡು ಬಹಳಷ್ಟು ಸಮಯ ಸೌಹಾರ್ದಯುತವಾಗಿ ಚರ್ಚಿಸಿದರು. ನಂತರ ಇಬ್ಬರೂ ಬೇರ್ಪಟ್ಟು ನಾಗಿರೆಡ್ಡಿ ತನ್ನ ಊರಿಗೆ ಹಿಂತಿರುಗಿದ ನಂತರ ಮಧುಗಿರಿಯ ಪಾಳೆಯಗಾರ ಚರ್ಚೆಯ ಸಂದರ್ಭದಲ್ಲಿ ಅವನನ್ನು ಮುಟ್ಟಿದ್ದರಿಂದ ತನ್ನ ದೇಹವನ್ನು ನೀರಿನಿಂದ ತೊಳೆದು ಶುದ್ಧಿಮಾಡಿಕೊಂಡನಂತೆ. ಈ ಸುದ್ದಿ ಹಿರೇಚಿಕ್ಕಪ್ಪಗೌಡನಿಗೆ ತಲುಪಿತು. ಇದರಿಂದ ಕೋಪಗೊಂಡ ಅವನು ಸೇನಾಸಮೇತನಾಗಿ ಮಧ್ಯರಾತ್ರಿಯಲ್ಲಿ ಮಿಡಿಗೇಶಿಯ ಮೇಲೆ ಆಕ್ರಮಣ ಮಾಡಿ ನಾಗಿರೆಡ್ಡಿಯನ್ನು ಸೆರೆಹಿಡಿದು ಕೊಂದುಹಾಕಿ, ೪೦ ವರ್ಷ ಕಾಲ ಮಿಡಿಗೇಶಿಯನ್ನಾಳಿದನು" ಎಂದು ವಿವರಿಸಲಾಗಿದೆ. ಮಿಡಿಗೇಶಿಯನ್ನು ಕೆಲವರ್ಷಗಳ ಕಾಲ ಆಳಿದ ನಾಗಿರೆಡ್ಡಿಯು ಅಲ್ಲಿ ವೆಂಕಟರಮಣ ದೇವಾಲಯ ಹಾಗೂ ನಾರಾಯಣಸ್ವಾಮಿ ದೇವಾಲಯಗಳನ್ನು ನಿರ್ಮಿಸಿದನು. ಅಲ್ಲದೆ, ದಟ್ಟವಾಗಿದ್ದ ಅರಣ್ಯವನ್ನು ಕಡಿದು ವಾಸಯೋಗ್ಯ ಸ್ಥಳವನ್ನಾಗಿ ಮಾಡಿ, ಹೊಸಕೆರೆ ಎಂಬ ಕೆರೆಯನ್ನು ನಿರ್ಮಿಸಿದನು. ಅನೇಕ ಗ್ರಾಮಗಳನ್ನು ನಿರ್ಮಿಸಿದ ಇವನು ಗುರುಗಳಾಗಿದ್ದ ವೆಂಕಟಚಾರ್ಯರಿಗೆ ಗ್ರಾಮವೊಂದನ್ನು ದಾನವಾಗಿ ಕೊಟ್ಟು ಅದಕ್ಕೆ ರೆಡ್ಡಿಪಾಳ್ಯವೆಂದು ಹೆಸರಿಟ್ಟನು. ಇವನಿಗೆ ಕಾವಲಮ್ಮ ಮತ್ತು ತಿಮ್ಮಮ್ಮ ಎಂಬ ಇಬ್ಬರು ಪತ್ನಿಯರಿದ್ದರು.

**ತೋಂಟದಪ್ಪಗೌಡ:** ಮಿಡಿಗೇಶಿಯಲ್ಲಿ ನಾಗಿರೆಡ್ಡಿ ಪತನ ಹೊಂದಿದ ಮೇಲೆ ಬಿಜ್ಜಾವರದಲ್ಲಿ ಆಳುತ್ತಿದ್ದ ಮುಮ್ಮಡಿ ಚಿಕ್ಕಪ್ಪಗೌಡ ಮಿಡಿಗೇಶಿಯಲ್ಲಿ ಸೇನಾಬಲವನ್ನಿರಿಸಿ ದುರ್ಗವನ್ನು ಜೀರ್ಣೋದ್ಧಾರ ಮಾಡಿಸಿದನು. ಅಲ್ಲದೆ ಅಲ್ಲಿ ನೆಲಸುವ ಜನರಿಗೆ ಎಲ್ಲಾ ಅನುಕೂಲಗಳನ್ನು ಕಲ್ಪಿಸಿಕೊಡುವುದರ ಮೂಲಕ ಜನಸಂಖ್ಯೆಯನ್ನು ಹೆಚ್ಚಿಸಿ ಅದನ್ನು ಎರಡನೇ ಮಗನಾದ ತೋಂಟದಪ್ಪಗೌಡನಿಗೆ ನೀಡಿದನು. ತೋಂಟದಪ್ಪಗೌಡನಿಗೆ ದೊಡ್ಡಕಲ್ಲಯ್ಯ ಮತ್ತು ಚನ್ನಬಸವಪ್ಪ ಎಂಬ ಪುತ್ರರಿದ್ದು, ಅವರಿನ್ನೂ ಚಿಕ್ಕವರಿದ್ದಾಗಲೇ ತೋಂಟದಪ್ಪಗೌಡ ಮರಣ ಹೊಂದಿದರು. ರಾಜ್ಯಭಾರದ ಹೊಣೆ ಅವನ ಪತ್ನಿ ಅಜ್ಜಮ್ಮನ ಮೇಲೆ ಬಿದ್ದಿತು. ಆಗ ಮಧುಗಿರಿಯಲ್ಲಿ ಮೈಸೂರಿನ ಅಧಿಕಾರಿಗಳಾಗಿದ್ದ ಮಲ್ಲರಾಜಯ್ಯ ಮತ್ತು ಅವನ ಸೋದರ ತಿಮ್ಮರಾಜಯ್ಯನ ಇದ್ದರು. ಮಿಡಿಗೇಶಿಯಲ್ಲಿ ರಾಣಿ ಅಜ್ಜಮ್ಮ ಬಾಲಕ ದೊಡ್ಡಕಣ್ಣಯ್ಯನ ಪರವಾಗಿ ರಾಜ್ಯಭಾರ ಮಾಡುತ್ತಿದ್ದರು. ಇದೇ ಅವಕಾಶವನ್ನು ಉಪಯೋಗಿಸಿಕೊಂಡ ಮೈಸೂರು ಅರಸರ ದಳವಾಯಿ ವೀರನಂಜರಾಜಯ್ಯ (ಕ್ರಿ.ಶ. ೧೭೧೪–೧೭೨೫) ಮಧುಗಿರಿಯಿಂದ ಸೇನೆಯನ್ನು ತರಿಸಿಕೊಂಡು ಮಿಡಿಗೇಶಿಯ ಮೇಲೆ ಆಕ್ರಮಣ ಮಾಡಿ ವಶಪಡಿಸಿಕೊಂಡನು. ಮಹಾರಾಣಿ ಅಜ್ಜಮ್ಮ ಮಿಡಿಗೇಶಿ ಕೋಟೆಯಿಂದ ತನ್ನ ಇಬ್ಬರು ಮಕ್ಕಳೊಡನೆ ತಪ್ಪಿಸಿಕೊಂಡು ಹೋದಳು. ದಳವಾಯಿಯು ೧೧ ವರ್ಷಗಳ ಕಾಲ ಮಿಡಿಗೇಶಿಯನ್ನು ತನ್ನ ನಿಯಂತ್ರಣದಲ್ಲಿಟ್ಟುಕೊಂಡು ಕೊನೆಗೆ ಮಧುಗಿರಿಗೆ ಸೇರಿಸಿದನು. ಈ ಮಧ್ಯೆ ರಾಜ್ಯ ಕಳೆದುಕೊಂಡ ಅಜ್ಜಮ್ಮ ಅದನ್ನು ಪಡೆಯಲು ಶ್ರೀರಂಗಪಟ್ಟಣಕ್ಕೆ ತನ್ನ ಕೆಲವು ಅಧಿಕಾರಿಗಳೊಂದಿಗೆ ಹೋಗಿ ಮಹಾರಾಜ ದೊಡ್ಡಕೃಷ್ಣರಾಜ ಒಡೆಯರನ್ನು (ಕ್ರಿ.ಶ. ೧೭೧೪–೧೭೩೨) ಭೇಟಿಯಾಗಿ ಪರಿಸ್ಥಿತಿಯನ್ನು ವಿವರಿಸಿದಳು. ಕೊನೆಗೆ ವಾರ್ಷಿಕ ೧೬೦೦೦ ಪಗೋಡಗಳನ್ನು ಮೈಸೂರು ಅರಸರಿಗೆ ನೀಡುವ ಒಪ್ಪಂದದಂತೆ ಮಿಡಿಗೇಶಿ ಪ್ರದೇಶವನ್ನು ಮಹಾರಾಜರು ಅವಳಿಗೆ ಬಿಟ್ಟುಕೊಟ್ಟರು. ಈ ಆದೇಶದ ಪ್ರತಿಯನ್ನು ತೆಗೆದುಕೊಂಡ ಮಹಾರಾಣಿ ತೆರೆಯೂರಿಗೆ ಬಂದು ಆ ಪತ್ರವನ್ನು ತನ್ನ ಮಧ್ಯವರ್ತಿಗಳ ಮುಖೇನ ವೀರನಂಜರಾಜಯ್ಯನಿಗೆ ಕಳುಹಿಸಿಕೊಟ್ಟಳು. ಆದರೆ ದಳವಾಯಿಯು ಆ ಪತ್ರಕ್ಕೆ ಮಾನ್ಯತೆ ನೀಡದೇ ಇದ್ದುದರಿಂದ ನಿರಾಶಳಾದ ರಾಣಿ ಪುನಃ ಶ್ರೀರಂಗಪಟ್ಟಣಕ್ಕೆ ತೆರಳಿ ದಳವಾಯಿಯ ವರ್ತನೆಯನ್ನು ತಿಳಿಸಿದಳು. ಈ ಸಂದರ್ಭದಲ್ಲಿ ಅಸಹಾಯಕತೆ ವ್ಯಕ್ತಪಡಿಸಿದ ಮಹಾರಾಜರು "ನನ್ನ ಆದೇಶವನ್ನು ಪಾಲಿಸದ ಅಧಿಕಾರಿಯನ್ನು ಶಿಕ್ಷಿಸಲು ಸಾಧ್ಯವಿಲ್ಲ, ನಿನ್ನಲ್ಲಿ ಬಲವಿದ್ದರೆ ಆ ಕೋಟೆಯನ್ನು ವಶಪಡಿಸಿಕೊಳ್ಳಲು ನಮ್ಮ ಕಡೆಯಿಂದ ಯಾವುದೇ ಅಭ್ಯಂತರವಿಲ್ಲ" ಎಂದು ಹೇಳಿದರು. ಇದೇ ವೇಳೆಗೆ ಮಿಡಿಗೇಶಿಯ ಜನರು ಕೋಟೆಯ ಕೆಲಭಾಗಗಳನ್ನು ಒಡೆದು ಹಾಕಿದ್ದರು. ಮಹಾರಾಣಿ ಅಜ್ಜಮ್ಮಳು ಶ್ರೀರಂಗಪಟ್ಟಣದಿಂದ

ಹಿಂತಿರುಗಿ ಅಳಿದುಳಿದ ನಿಷ್ಠರ ಸೇನಾಪಡೆಯನ್ನು ಸಂಗ್ರಹಿಸಿ ಮಿಡಿಗೇಶಿಯ ಮೇಲೆ (ಕ್ರಿ.ಶ. ೧೭೨೦ರಲ್ಲಿ) ಆಕ್ರಮಣ ಮಾಡಿದಳು. ವೀರನಂಜಯ್ಯರಾಜಯ್ಯನು ಪರಾಭವಗೊಂಡು ಕೋಟೆಯನ್ನು ಬಿಟ್ಟು ಹೋದನು. ಹೀಗೆ ಮಿಡಿಗೇಶಿಯು ಮಹಾರಾಣಿ ಅಜ್ಜಮ್ಮನ ಪ್ರಯತ್ನದಿಂದ ಪುನಃ ಮಹಾನಾಡಪ್ರಭುಗಳ ವಂಶಸ್ಥರಿಗೆ ಸೇರಿತು. ಅವಳು ಶತ್ರುಗಳಿಂದ ಮುಕ್ತಳಾಗಿ ರಾಜ್ಯಭಾರ ಮಾಡುತ್ತಾ ಒಡೆದುಹೋಗಿದ್ದ ಕೋಟೆಯನ್ನು ದುರಸ್ತಿ ಮಾಡಿಸಿದಳು.

**ದೊಡ್ಡಕಣ್ಣಯ್ಯ:** ಮಹಾರಾಣಿ ಅಜ್ಜಮ್ಮ, ಪ್ರಾಪ್ತವಯಸ್ಕನಾದ ಹಿರಿಯ ಮಗ ದೊಡ್ಡಕಣ್ಣಯ್ಯನಿಗೆ ಮಿಡಿಗೇಶಿಯ ಜವಾಬ್ದಾರಿಯನ್ನು ವಹಿಸಿದಳು. ಅವನು ಮಹಾನಾಡಿಗೆ ನಿಷ್ಠರಾಗಿದ್ದ ವ್ಯಕ್ತಿಗಳನ್ನು ಅಧಿಕಾರಿಗಳನ್ನಾಗಿ ನೇಮಕ ಮಾಡಿಕೊಂಡು ತನ್ನ ತಂದೆ ತಾತಂದಿರ ಕಾಲದ ಸಂಪ್ರದಾಯಗಳನ್ನು ಪುನರ್‌ಸ್ಥಾಪಿಸಿ ಜನಪ್ರಿಯನಾಗಿ ಆಳ್ವಿಕೆ ಮಾಡತೊಡಗಿದನು. ಬೆಡತ್ತೂರಿನಲ್ಲಿ ಗಿರಿದುರ್ಗವನ್ನು ನಿರ್ಮಾಣ ಮಾಡಿ ತನ್ನ ಕುಟುಂಬದವರೊಂದಿಗೆ ಅಲ್ಲಿ ವಾಸಿಸುತ್ತಾ ಅದನ್ನು ಕೆಲಕಾಲ ತನ್ನ ಆಡಳಿತ ಕೇಂದ್ರವನ್ನಾಗಿ ಮಾಡಿಕೊಂಡನು. ಅಲ್ಲದೆ ರಂಗಾಪುರದಲ್ಲಿ ಮತ್ತೊಂದು ಕೋಟೆಯನ್ನು ಕೂಡಾ ನಿರ್ಮಾಣ ಮಾಡಿದನು. ಇದೇ ಸಂದರ್ಭದಲ್ಲಿ ಮರಾಠರ ಅಧಿಕಾರಿ ಬಾಬೂರಾವ್ ಎಂಬುವನು ಬೇಡತ್ತೂರಿನ ಮೇಲೆ ಆಕ್ರಮಣ ಮಾಡಿ ಹತ್ತುದಿನಗಳ ಕಾಲ ಮಿಡಿಗೇಶಿ ಪ್ರಭುವಾದ ದೊಡ್ಡಕಣ್ಣಯ್ಯ ಮತ್ತು ಅವರ ಕುಟುಂಬದವರನ್ನು ತನ್ನ ವಶದಲ್ಲಿಟ್ಟುಕೊಂಡಿದ್ದನು. ಕೊನೆಗೆ ಅವರಿಂದ ಅಪಾರ ಪ್ರಮಾಣದ ಹಣವನ್ನು ಪಡೆದುಕೊಂಡು ಬಿಡುಗಡೆಗೊಳಿಸಿ ಹಿಂತಿರುಗಿದನು. ಹೀಗೆ ಪದೇ ಪದೇ ಮಿಡಿಗೇಶಿ ಪ್ರದೇಶ ಶತ್ರುಗಳ ದಾಳಿಗೆ ಒಳಗಾಗುತ್ತಿತ್ತು. ಅವರನ್ನು ಎದುರಿಸಲು ಸಾಕಷ್ಟು ಸೇನಾಬಲವಿಲ್ಲದೆ ಇದ್ದುದರಿಂದ ಅವರು ಶತ್ರುಗಳಿಗೆ ಹಣಕೊಟ್ಟು ಮಿಡಿಗೇಶಿಯನ್ನು ಕಾಪಾಡಿಕೊಂಡಿದ್ದರು.

ಮರಾಠರ ಮುರಾರಿರಾವ್ ಘೋರ್‌ಪುರನು ಫ್ರೆಂಚರಿಗೆ ಕರ್ನಾಟಕ ಯುದ್ಧಗಳಲ್ಲಿ ಸಹಾಯ ಮಾಡಲು ಒಪ್ಪಿ ೪೦೦೦ ಸೈನಿಕರೊಂದಿಗೆ ಗುತ್ತಿಯಿಂದ ತಿರುಚಿನಾಪಳ್ಳಿಯ ಕಡೆಗೆ ಹೊರಟನು. ಲೂಟಿಕೋರನಾಗಿದ್ದ ಈತ ಮಾರ್ಗಮಧ್ಯದಲ್ಲಿ ಸಿಕ್ಕಿದ ಕೋಟೆಗಳ ಮೇಲೆ ಆಕ್ರಮಣ ಮಾಡಿ ಹಣ ಸೂರೆಗೈಯತೊಡಗಿದನು. ಅವನ ಆಕ್ರಮಣಕ್ಕೆ ಮಿಡಿಗೇಶಿಯೂ ಬಲಿಯಾಯಿತು. ಸೇನಾ ಸಮೇತನಾಗಿ ಆಗಮಿಸಿದ ಮುರಾರಿರಾಯನು ಮಡಕಶಿರಾದಿಂದ ಆಗಮಿಸಿ ಮಿಡಿಗೇಶಿಯ ಸಮೀಪ ತೋಟದಲ್ಲಿ ಠಾಣ್ಯ ಹಾಕಿ ರಾತ್ರಿ ಕಳೆದು ನಂತರ ಮಿಡಿಗೇಶಿಯನ್ನು ಆಕ್ರಮಿಸಲು ಯೋಜಿಸಿದನು. ಅವನು ಆಗಮಿಸಿದ ಸುದ್ದಿ ತಿಳಿದ ದೊಡ್ಡಕಣ್ಣಯ್ಯನು ಅವನಿಗೆ ಹಣ ನೀಡಿ ಸಂಧಾನ ಮಾಡಿಕೊಂಡು ಮಿಡಿಗೇಶಿಯನ್ನು ದಾಳಿಯಿಂದ ಮುಕ್ತಗೊಳಿಸಿ ಕಾಪಾಡಿದನು.

### ಮೀರ್‌ಸಾಹೇಬನ ಆಕ್ರಮಣ

ರಾಜಕೀಯ ಪ್ರಭುತ್ವವೆನ್ನುವುದು ಬಹಳ ಕಷ್ಟಕರವಾದ ಕ್ಷೇತ್ರ. ಯಾವುದೇ ಬೆದರಿಕೆ ಬರದೆ ಇರುವವರೆಗೆ ಶಾಂತಿ ಸಮಾಧಾನಗಳು ನೆಲೆಗೊಂಡಿರುತ್ತವೆ. ಸ್ವಲ್ಪ ಕದಡಿದರೂ ಯಾವುದೇ ಒಂದು ಭಾಗದಲ್ಲಿ ಒಬ್ಬನು ಸೆಟೆದು ನಿಂತರೂ ಇತರರೂ ಬಂಡಾಯದ ಬಾವುಟ ಹಾರಿಸಲು ಅವಕಾಶ ಉಪಯೋಗಿಸಿಕೊಳ್ಳುತ್ತಾರೆ. ಯಾವಾಗ ಹೈದರಾಲಿಯು ೧೭೬೪ರಲ್ಲಿ ಮರಾಠಿಗರಿಗೆ ಸೋತು ಶಾಂತಿ ಒಪ್ಪಂದ ಮಾಡಿಕೊಂಡನೋ ಆ ವೇಳೆಗೆ ಹೈದರಾಲಿಯಿಂದ ತೊಂದರೆಗೀಡಾಗಿದ್ದ ಅನೇಕ ಪಾಳೆಯಪಟ್ಟುಗಳು ದಂಗೆ ಎದ್ದವು. ಇಂತಹವರಲ್ಲಿ ಮಿಡಿಗೇಶಿಯ ದೊಡ್ಡಕಣ್ಣಯ್ಯನೂ ಒಬ್ಬನಾಗಿದ್ದಾನೆ. ಈ ದಂಗೆಗಳನ್ನು ಹತ್ತಿಕ್ಕಲು ಹೈದರಾಲಿ ತನ್ನ ಭಾವ ಆಲಿರಾಜ ಮತ್ತು ಸಮರ್ಥ ದಳಪತಿ ಮೀರ್‌ಸಾಹೇಬನನ್ನು ನೇಮಕ ಮಾಡಿದನು. ಈ ಸನ್ನಿವೇಶದಲ್ಲಿ ಮೀರ್‌ಸಾಹೇಬನು ಮಿಡಿಗೇಶಿಯ ಮೇಲೆ ಆಕ್ರಮಣ ಮಾಡಿದನು. ಈ ಆಕ್ರಮಣ ಒಂದು ತಿಂಗಳವರೆಗೆ ಮುಂದುವರಿಯಿತು. ಒತ್ತಡವನ್ನು ತಾಳಲಾರದೆ ಮಿಡಿಗೇಶಿ ಪ್ರಭು ದೊಡ್ಡಕಣ್ಣಯ್ಯನು ಕೋಟೆಯಿಂದ ಹೊರಬಂದು ಶ್ರೀರಂಗಪಟ್ಟಣಕ್ಕೆ ಪಲಾಯನ ಮಾಡಿದನು. ಅಲ್ಲಿ ಹೈದರಾಲಿಯು ಅವನನ್ನು ತನ್ನ ಸೇನೆಗೆ ಅಧಿಕಾರಿಯನ್ನಾಗಿ ನೇಮಕ ಮಾಡಿಕೊಂಡು ಶ್ರೀರಂಗಪಟ್ಟಣದಲ್ಲಿಯೇ ಇಟ್ಟುಕೊಂಡನು ಮೀರ್‌ಸಾಹೇಬನು ಇಡೀ ಮಿಡಿಗೇಶಿ ಪ್ರದೇಶವನ್ನು ಗೆದ್ದು ಅದನ್ನು ಹೈದರಾಲಿಗೆ ಒಪ್ಪಿಸಿದನು. ಮೈಸೂರು ಅರಸ ಬೆಟ್ಟದ ಚಾಮರಾಜ ಒಡೆಯರ್ (ಕ್ರಿ.ಶ. ೧೭೭೦-೧೭೭೬) ಆದೇಶದ ಮೇರೆಗೆ ಮಿಡಿಗೇಶಿಯನ್ನು ಅವರ ಅಧಿಕಾರಿಯಾಗಿದ್ದ ಮದ್ದಗಿರಿ ಪ್ರಧಾನ ವೆಂಕಪ್ಪಯ್ಯನಿಗೆ ಜಾಗೀರಾಗಿ ನೀಡಲಾಯಿತು. ಇದು ಸುಮಾರು ೧೬ ವರ್ಷಗಳ ಕಾಲ ಅವರ ಜಾಗವಾಗಿತ್ತು.

**ಹೈದರಾಲಿ ಮತ್ತು ವೆಂಕಪ್ಪಯ್ಯನ ನಡುವೆ ಭಿನ್ನಾಭಿಪ್ರಾಯ**

ಪ್ರಧಾನ ವೆಂಕಪ್ಪಯ್ಯನಿಗೆ ಮಿಡಿಗೇಶಿಯ ಜೊತೆಗೆ ಶಿರಾ, ಮಧುಗಿರಿ, ಚನ್ನರಾಯದುರ್ಗಗಳ ಜವಾಬ್ದಾರಿಯನ್ನು ಹೈದರಾಲಿಯು ನೀಡಿದನು. ಇಷ್ಟೊಂದು ವಿಶಾಲ ಪ್ರದೇಶದ ಆಡಳಿತ ನಿರ್ವಹಣೆ ಮಾಡುತ್ತಿದ್ದ ಪ್ರಧಾನನು ಸೋದರ ಸಂಬಂಧಿ ರಘುಪತಯ್ಯನನ್ನು ಶಿರಾದ ಪ್ರಧಾನನನ್ನಾಗಿ ಮಾಡಿದನು. ಈ ಸಂದರ್ಭದಲ್ಲಿ ಹೈದರಾಲಿ ಚಿತ್ರದುರ್ಗದ ಮೇಲೆ ದಾಳಿ ಮಾಡುವ ಸಲುವಾಗಿ ಶಿರಾ ಮಾರ್ಗದಲ್ಲಿ ಹೋಗುತ್ತಿದ್ದಾಗ ಶಿರಾದ ಪ್ರಧಾನ ಹುದ್ದೆಯಲ್ಲಿದ್ದ ರಘುಪತಯ್ಯ ಹೈದರಾಲಿಯನ್ನು ಸೂಕ್ತ ರೀತಿಯಲ್ಲಿ ಸ್ವಾಗತಿಸಲಿಲ್ಲವೆಂದೂ, ಗಡಿಯ ಅಂತ್ಯದವರೆಗೆ ತನ್ನೊಂದಿಗೆ ಬರಲಿಲ್ಲವೆಂದೂ ಕುಪಿತಗೊಂಡು ಅವನನ್ನು ಪ್ರಧಾನ ಹುದ್ದೆಯಿಂದ ಕೆಳಗಿಳಿಸಿ, ಅವನ ಸ್ಥಾನಕ್ಕೆ ಖಾಜಿ ಅಬ್ದುಲ್ಲಾನನ್ನು ನೇಮಕ ಮಾಡಿದನು. ಈ ಘಟನೆ ಪ್ರಧಾನ ವೆಂಕಪ್ಪಯ್ಯ ಮತ್ತು ಹೈದರಾಲಿ ಮಧ್ಯೆ ಭಿನ್ನಾಭಿಪ್ರಾಯ ಮೂಡಿಸಿತು. ಹೈದರನು ಕೊನೆಗೆ ಪ್ರಧಾನನನ್ನು ಅನುಮಾನದಿಂದ ನೋಡಲಾರಂಭಿಸಿ, ಅವನನ್ನು ಮಿಡಿಗೇಶಿಯಿಂದ ಕಿತ್ತುಹಾಕಿ ಹಣ ಮತ್ತು ಅಧಿಕಾರದ ದುರುಪಯೋಗದ ಆರೋಪ ಹೊರಿಸಿ ೬೦ ಸಾವಿರ ವರಹಗಳನ್ನು ದಂಡವಾಗಿ ಪಡೆದುಕೊಂಡನು. ಕ್ರಿ.ಶ. ೧೭೭೯ರಲ್ಲಿ ಮಿಡಿಗೇಶಿಯಿಂದ ಅವನನ್ನು ಶ್ರೀರಂಗಪಟ್ಟಣಕ್ಕೆ ಕರೆಸಿಕೊಂಡು ಸೆರೆಮನೆಗೆ ದೂಡಿದನು. ಕೊನೆಗೆ ಅಪ್ಪಾಜಿರಾವ್ ಸಂಧಾನ ನಡೆಸಿ ಹೈದರಾಲಿಯ ಮನವೊಲಿಸಿ ಪ್ರಧಾನ ವೆಂಕಪ್ಪಯ್ಯನನ್ನು ಸೆರೆಯಿಂದ ಬಿಡುಗಡೆಗೊಳಿಸಿ ಅವನ ಎಲ್ಲಾ ಆಸ್ತಿಪಾಸ್ತಿಯನ್ನು ಸರ್ಕಾರಕ್ಕೆ ಸೇರಿಸಿಕೊಂಡು ಕೇವಲ ಒಂದು ಸಾವಿರ ರೂ.ಗಳ ಮಾಸಾಸನ ನೀಡಲಾಯಿತು ಅವನು ಕ್ರಿ.ಶ. ೧೭೮೨ರಲ್ಲಿ ಮರಣ ಹೊಂದಿದನು. ಹೀಗೆ ಮಿಡಿಗೇಶಿಯಲ್ಲಿ ಕ್ರಿ.ಶ. ೧೭೭೯ರಲ್ಲಿಯೇ ಪ್ರಧಾನ ವೆಂಕಪ್ಪಯ್ಯನ ಆಳ್ವಿಕೆ ಅಂತ್ಯಗೊಂಡಿತು.

**ಚನ್ನಬಸವಪ್ಪನ ಆಳ್ವಿಕೆ:** ಇದೇ ವೇಳೆಗೆ ಇಮ್ಮಡಿ ತೋಂಟದಪ್ಪಗೌಡನ ಹಿರಿಯ ಪುತ್ರ ದೊಡ್ಡಕಣ್ಣಯ್ಯನು ರಾಜ್ಯ ಪಡೆದುಕೊಳ್ಳಲು ಹೋರಾಟ ಮಾಡಿ ಮರಣ ಹೊಂದಿದ್ದನು. ಅವನ ಸ್ಥಾನಕ್ಕೆ ಕ್ರಿ.ಶ. ೧೭೭೦ರಲ್ಲಿಯೇ ಅವನ ಸೋದರ ಚನ್ನಬಸವಪ್ಪನು ಅಧಿಕಾರಕ್ಕೆ ಬಂದಿದ್ದನು. ಆದರೂ ಅವನಿಗೆ ಯಾವುದೇ ಅಧಿಕಾರವಿರಲಿಲ್ಲ. ಏಕೆಂದರೆ ಆ ವೇಳೆಗೆ ಮಿಡಿಗೇಶಿಯ ಅಧಿಕಾರವು ಮರಾಠರಿಂದ ಮೈಸೂರಿನವರಿಗೂ, ಮೈಸೂರಿನವರಿಂದ ಮರಾಠರ ಕೈಗೂ ಬದಲಾಗುತ್ತಿತ್ತು. ಹೈದರಾಲಿ ಮರಣ ಹೊಂದಿದ ಮೇಲೆ (೧೭೮೨ ಕ್ರಿ.ಶ.) ಮಿಡಿಗೇಶಿಯಲ್ಲಿ ಟಿಪ್ಪುಸುಲ್ತಾನನ ಅಧಿಕಾರಿಗಳು ಅಧಿಕಾರ ನಡೆಸುತ್ತಿದ್ದರು. ಇದೇ ವೇಳೆಗೆ ಕ್ರಿ.ಶ. ೧೭೮೧ರಲ್ಲಿ ಟಿಪ್ಪುಸುಲ್ತಾನನು ಬೆಂಗಳೂರು ಬಳಿ ಲಾರ್ಡ್ ಕಾರ್ನ್‌ವಾಲೀಸ್ ಮತ್ತು ಜನರಲ್ ಮಿಡೋಸ್‌ನ ವಿರುದ್ಧ ಯುದ್ಧ ಮಾಡುತ್ತಿದ್ದನು. ಯುದ್ಧದಲ್ಲಿ ಟಿಪ್ಪು ಮಿಡಿಗೇಶಿ ಬಳಿ ಇಟ್ಟಿದ್ದ ಸೈನ್ಯದ ಒಂದು ಭಾಗವನ್ನು ಬೆಂಗಳೂರಿಗೆ ಕರೆಸಿಕೊಂಡಿದ್ದನು. ಈ ಅವಕಾಶವನ್ನುಪಯೋಗಿಸಿಕೊಂಡ ಚನ್ನಬಸವಪ್ಪನು ತನ್ನ ಜನರೊಂದಿಗೆ ಮಿಡಿಗೇಶಿ ಮೇಲೆ ಆಕ್ರಮಣ ಮಾಡಿದನು. ಆದರೆ ಅಲ್ಲಿದ್ದ ಟಿಪ್ಪುವಿನ ಅಧಿಕಾರಿಗಳು ರಾಜನೊಂದಿಗೆ ಒಪ್ಪಂದ ಮಾಡಿಕೊಂಡು ಮಿಡಿಗೇಶಿಯನ್ನು ಬಿಟ್ಟುಕೊಟ್ಟರು.

ಮೂರನೇ ಮೈಸೂರು ಯುದ್ಧವು ಕ್ರಿ.ಶ. ೧೭೯೨ರಲ್ಲಿ ಟಿಪ್ಪುವಿನ ಸೋಲಿನೊಂದಿಗೆ ಅಂತ್ಯವಾಯಿತು. ಟಿಪ್ಪುಸುಲ್ತಾನ್ ಬ್ರಿಟಿಷರೊಂದಿಗೆ 'ಶ್ರೀರಂಗಪಟ್ಟಣ' ಒಪ್ಪಂದ ಮಾಡಿಕೊಂಡನು. ಆ ಪ್ರಕಾರ ಅವನು ಬ್ರಿಟಿಷರಿಗೆ ಅಧಿಕ ಕಪ್ಪ ನೀಡಬೇಕಾಯಿತು. ಆ ಹಣವನ್ನು ಹೊಂದಿಸಲು ಸುಲ್ತಾನನು ಮಿಡಿಗೇಶಿ ಕೋಟೆಯ ಮೇಲೆ ಆಕ್ರಮಣ ಮಾಡಬೇಕಾಯಿತು. ಆಗ ಮಿಡಿಗೇಶಿಯಲ್ಲಿ ರಾಜಾ ಚನ್ನಬಸವಪ್ಪನು ಆಳ್ವಿಕೆ ಮಾಡುತ್ತಿದ್ದನು. ಹೈದರನ ಕಾಲದಿಂದಲೂ ಮಿಡಿಗೇಶಿ, ಮಧುಗಿರಿ, ಚನ್ನರಾಯದುರ್ಗ ಅವರ ಅಧೀನದಲ್ಲಿದ್ದವು. ಈ ಕೋಟೆಗಳನ್ನು ಆಕ್ರಮಿಸಿದರೆ ಹಣ ದೊರೆಯಬಹುದು ಎಂಬ ಅಭಿಲಾಷೆಯಿಂದ ಟಿಪ್ಪುವಿನ ಸೈನ್ಯ ಮಿಡಿಗೇಶಿ ಮೇಲೆ ಆಕ್ರಮಣ ಮಾಡಿತು. ಆಗತಾನೆ ಮಿಡಿಗೇಶಿಯಲ್ಲಿ ಆಳ್ವಿಕೆ ಆರಂಭಿಸಿದ್ದ ರಾಜ ಚನ್ನಬಸವಪ್ಪನು ಟಿಪ್ಪುವಿನ ಪ್ರಬಲ ಸೈನ್ಯದ ಎದುರು ನಿಲ್ಲಲಾರದೆ ಕೋಟೆಯನ್ನು ಬಿಟ್ಟು ಪಲಾಯನ ಮಾಡಿದನು. ಟಿಪ್ಪು ಮಿಡಿಗೇಶಿ ಕೋಟೆಗೆ ಮಹಮ್ಮದಾಲಿ ಎಂಬುವನನ್ನು ಅಮಲ್ದಾರ(ಕಂದಾಯಾಧಿಕಾರಿ)ಯನ್ನಾಗಿ ನೇಮಿಸಿದನು. ಏತನ್ಮಧ್ಯೆ ರಾಜ ಚನ್ನಬಸವಪ್ಪನು ಗುಪ್ತವಾಗಿ ಬ್ರಿಟೀಷರ ಕರ್ನಲ್ ರೀಡನನ್ನು ಭೇಟಿಯಾಗಿ ಟಿಪ್ಪೂವಿನ ವಿರುದ್ಧ ಸಂಧಿ ಮಾಡಿಕೊಂಡನು.

ಕ್ರಿ.ಶ. ೧೭೯೯ರಲ್ಲಿ ಟಿಪ್ಪುಸುಲ್ತಾನನು ನಾಲ್ಕನೇ ಮೈಸೂರು ಯುದ್ಧದಲ್ಲಿ ಬ್ರಿಟೀಷರಿಗೆ ಸೋತು ಶ್ರೀರಂಗಪಟ್ಟಣದಲ್ಲಿ ಹತನಾದನು. ಟಿಪ್ಪು ನೇಮಕ ಮಾಡಿದ್ದ ಎಲ್ಲಾ ಅಧಿಕಾರಿಗಳನ್ನು ತೆಗೆದು ಹಾಕಲಾಯಿತು. ಆಗ ಮಿಡಿಗೇಶಿಯಲ್ಲಿದ್ದ ಮಹಮದಾಲಿಯೂ ಅಧಿಕಾರ ಕಳೆದುಕೊಂಡನು. ಮೈಸೂರು ರಾಜ್ಯದ ದಿವಾನ ಪೂರ್ಣಯ್ಯನಿಂದಾಗಿ ಮಿಡಿಗೇಶಿಯು ಮೈಸೂರು ರಾಜ್ಯದ ಆಡಳಿತಕ್ಕೆ ಒಳಪಟ್ಟಿತು.

ಟಿಪ್ಪುಸುಲ್ತಾನನು ಮರಣ ಹೊಂದಿದ ಮೇಲೆ ಚನ್ನಬಸವಪ್ಪನು ಮಿಡಿಗೇಶಿಯನ್ನು ಪಡೆಯುವ ಉದ್ದೇಶದಿಂದ ಕರ್ನಲ್ ರೀಡ್‌ನನ್ನು ಬೆಂಗಳೂರಿನಲ್ಲಿ ಭೇಟಿಯಾದನು. ಆತನಿಗೆ ಮದ್ರಾಸಿ (ಚನ್ನೈಗೆ) ವಕೀಲರ ಸಮೇತ ಬರುವಂತೆ ತಿಳಿಸಲಾಯಿತು. ಅದರಂತೆ ಚನ್ನಬಸವಪ್ಪನು ವಕೀಲರೊಂದಿಗೆ ಮದ್ರಾಸಿಗೆ ಹೋದನು. ಆ ವೇಳೆಗಾಗಲೇ ರೀಡ್ ಇಂಗ್ಲೆಂಡಿಗೆ ತೆರಳಿದ್ದನು. ನಿರಾಶನಾದ ಚನ್ನಬಸವಪ್ಪನು ಮೈಸೂರು ದಿವಾನ ಪೂರ್ಣಯ್ಯನ ಬಳಿ ಹೋಗಿ ಪ್ರಾರ್ಥಿಸಿದರೂ ಫಲ ಸಿಗಲಿಲ್ಲ. ಕೊನೆಗೆ ಶಂಭೋನಹಳ್ಳಿಗೆ ಬಂದು ನೆಲಸಿ ಅಲ್ಲೇ ಮರಣ ಹೊಂದಿದನು.

**ಪಾವಗಡದ ನಾಯಕರು:** ಪಾವಗಡದ ನಾಯಕ ಮನೆತನದ ಮೂಲಪುರುಷನಾದ ಬಲ್ಲಪ್ಪನಾಯಕನು ರಾಜ್ಯ ಸ್ಥಾಪನೆಗೆ ಮೊದಲು ಗುತ್ತಿಯಲ್ಲಿ ನೆಲಸಿದ್ದನು. ಇವನಿಗೆ ಅಜ್ಜಪ್ಪನಾಯಕ ಮತ್ತು ತಿಮ್ಮಪ್ಪನಾಯಕ ಎಂಬ ಸೋದರರಿದ್ದರು. ಈ ಸೋದರರು ಗುತ್ತಿಯಿಂದ ಇಂದಿನ ಚಿಕ್ಕಬಳ್ಳಾಪುರ ಪ್ರಾಂತಕ್ಕೆ ವಲಸೆ ಬಂದರಂತೆ. ಮೆಕಂಜಿ ನೀಡಿರುವ ಮಾಹಿತಿಯ ಪ್ರಕಾರ ಬಲ್ಲಪ್ಪನಾಯಕನು ಯರ‍್ರಗೊಲ್ಲ ಜನಾಂಗಕ್ಕೆ ಸೇರಿದವನಾಗಿದ್ದು ಕುಲಕಸುಬಾದ ಪಶುಪಾಲನಾ ವೃತಿಯನ್ನನುಸರಿಸಿದ್ದನು. ಕ್ರಮೇಣ ಈ ಕುಟುಂಬ ತಮ್ಮ ಗೋವುಗಳ ಜೊತೆ ಗುತ್ತಿಯಂತಹ ಬಯಲು ಪ್ರದೇಶದಿಂದ ಪ್ರಶಸ್ತವಾದ ಸ್ಥಳಕ್ಕೆ ವಲಸೆ ಹೊರಟಿರಬಹುದು. ಏಕೆಂದರೆ ೧೫–೧೬ನೇ ಶತಮಾನದಲ್ಲಿ ಆಂಧ್ರ ಮತ್ತು ತಮಿಳುನಾಡಿನಿಂದ ಕರ್ನಾಟಕದ ಕಡೆಗೆ ಅನೇಕ ವಲಸೆಗಳಾಗಿರುವುದನ್ನು ಇತಿಹಾಸದಲ್ಲಿ ಈಗಾಗಲೇ ಗುರ್ತಿಸಲಾಗಿದೆ. ಆಗ ಅಲ್ಲಿ ಹಾವಳಿ ಬೈರೇಗೌಡನ ಆಳ್ವಿಕೆ ಇತ್ತು ಎನ್ನಲಾಗಿದೆ. ಹಾವಳಿ ಬೈರೆಗೌಡನು ಆವತಿ ನಾಡಪ್ರಭುಗಳಾದ ಬೈರೇಗೌಡರ ಮೊಮ್ಮಗ ಮತ್ತು ಹಾವಳಿ ಬಯಪ್ಪಗೌಡರ ಮಗನೆಂದು ಶಾಸನಾಧಾರಗಳಿಂದ ತಿಳಿದು ಬರುತ್ತದೆ. ಅಲ್ಲಿದ್ದ ಸಂದರ್ಭದಲ್ಲಿ ಬಲ್ಲಪ್ಪನಾಯಕನಿಗೆ ಹಾವಳಿ ಬೈರೇಗೌಡನನ್ನು ಭೇಟಿಯಾಗುವ ಅವಕಾಶ ದೊರೆಯಿತು. ಮಕ್ಕಳಿಲ್ಲದೆ ಕೊರಗುತ್ತಿದ್ದ ಹಾವಳಿ ಬೈರೇಗೌಡನು ಇವನನ್ನು ದತ್ತು ಪುತ್ರನನ್ನಾಗಿ ಸ್ವೀಕರಿಸಿದ, ಅವನ ಸೋದರರನ್ನು ತನ್ನ ಸೈನ್ಯದಲ್ಲಿ ಮುಖ್ಯಾಧಿಕಾರಿಗಳನ್ನಾಗಿ ಮಾಡಿ ಅವರಿಗೆ ಶಸ್ತ್ರ ವಿದ್ಯೆಯಲ್ಲಿ ತರಬೇತಿ ನೀಡಿದನೆಂದು ಮೆಕೆಂಜಿಯ ಆಂಗ್ಲ ಕೈಫಿಯತ್ತಿ ದಾಖಲಿಸಿದೆ.

“ಪೆನುಗೊಂಡೆ ದುರ್ಗದ ಚಕ್ರವರ್ತಿ ವೆಂಕಟಪತಿರಾಯನು ಗುತ್ತಿಯನ್ನು ಆಳುತ್ತಿದ್ದ ಮುಸಲ್ಮಾನರ ವಿರುದ್ಧ ದಂಡೆತ್ತಿ ಹೋಗಲು ಚಿಕ್ಕಬಳ್ಳಾಪುರದ ಪಾಳೆಯಗಾರ ಹಾವಳಿ ಬೈರೇಗೌಡನಿಗೆ ಸೈನ್ಯವನ್ನು ತೆಗೆದುಕೊಂಡು ಬರಲು ಆಜ್ಞಾಪಿಸಿದನು. ಅದರಂತೆ ಹಾವಳಿ ಬೈರೇಗೌಡನು ತನ್ನ ಸೈನ್ಯ ಹಾಗೂ ಮುಖ್ಯ ಅಧಿಕಾರಿಗಳನ್ನು ಬಲ್ಲಪ್ಪನಾಯಕನ ನೇತೃತ್ವದಲ್ಲಿ ಕಳುಹಿಸಲು ತೀರ್ಮಾನಿಸಿದನು. ತನ್ನ ಸಾಕು ತಂದೆಯ ಇಚ್ಛೆಯಂತೆ ಬಲ್ಲಪ್ಪನಾಯಕ ಸೇನಾ ಸಮೇತನಾಗಿ ಪೆನುಗೊಂಡೆಯ ಕಡೆಗೆ ಹೊರಟನು. ಒಂದನೇ ವೆಂಕಟಪತಿಯು (೧೫೮೬–೧೬೧೪ಕ್ರಿ.ಶ) ಅಧಿಕಾರಕ್ಕೆ ಬಂದಾಗ ಮಹ್ಮದ್ ಕುತುಬ್ ಶಾಹನು ಪೆನುಗೊಂಡೆಯ ಮೇಲೆ ಆಕ್ರಮಣ ಮಾಡಿ ಸೋತು ಹಿಂತಿರುಗಿದ್ದರೂ ಗುತ್ತಿ, ಆದವಾನಿ, ಕೊಂಡವೀಡು ಕೋಟೆಗಳು ಇನ್ನು ಅವರ ಅಧೀನದಲ್ಲಿದ್ದವು. ಆದ್ದರಿಂದ ಒಂದನೇ ವೆಂಕಟಪತಿರಾಯನು ಗುತ್ತಿಯ ಕೋಟೆಯನ್ನು ವಶಪಡಿಸಿಕೊಳ್ಳಲು ತನ್ನೆಲ್ಲಾ ನಾಯಕರ ಸೈನ್ಯವನ್ನು ಸಂಗ್ರಹಿಸಿ ಚಿಕ್ಕಬಳ್ಳಾಪುರದ ಹಾವಳಿ ಬೈರೇಗೌಡನ ದತ್ತುಪುತ್ರ ಬಲ್ಲಪ್ಪ ನಾಯಕನಿಗೆ ನಾಯಕತ್ವ ನೀಡಿದನು. ಇವನಿಗೆ ನಾಯಕತ್ವ ವಹಿಸಲು ಬಲ್ಲಪ್ಪನಾಯಕನು ಗುತ್ತಿಯವನಾಗಿದ್ದು ಅಲ್ಲಿನ ಭೂಭಾಗಗಳ, ಕೋಟೆಯ ಸೂಕ್ಷ್ಮ ಪರಿಚಯ ಅವನಿಗೆ ಇದ್ದುದು ಹಾಗೂ ಅವನ ಸಂಬಂಧಿಕರೆಲ್ಲರೂ ಗುತ್ತಿಯಲ್ಲೇ ವಾಸಿಸುತ್ತಿದ್ದುದು ಕಾರಣವಾಗಿರಬಹುದು. ಆದ್ದರಿಂದಲೇ ಬಲ್ಲಪ್ಪನಾಯಕನೂ ಕೂಡಾ ಈ ಅವಕಾಶವನ್ನು ನಿರಾಕರಿಸಿದೆ ಒಪ್ಪಿಕೊಂಡನೆಂದು ಹೇಳಬಹುದು.

ಹೀಗೆ ನಾಯಕತ್ವವನ್ನು ವಹಿಸಿಕೊಂಡ ಬಲ್ಲಪ್ಪನಾಯಕನು ಗುತ್ತಿ ಕೋಟೆಯ ಆಕ್ರಮಣದ ಬಗ್ಗೆ ಯೋಜನೆ ರೂಪಿಸಲಾರಂಭಿಸಿದನು. ಈ ವಿಚಾರವನ್ನು ಅವನು ಇನ್ನುಳಿದ ತನ್ನ ನಾಯಕರ ಜೊತೆ ಚರ್ಚಿಸಿ ತನ್ನ ತಂಡದೊಡನೆ ಮಧ್ಯರಾತ್ರಿ ಕೋಟೆಯೊಳಗೆ ನುಗ್ಗಿ ಎಲ್ಲರೂ ಚಕಿತಗೊಳ್ಳುವಂತೆ ವಶಪಡಿಸಿಕೊಂಡನು. ಗುತ್ತಿಯನ್ನು ಗೆದ್ದು ಕೊಟ್ಟ

ಮಾತಿನಂತೆ ಅದನ್ನು ಚಕ್ರವರ್ತಿ ವೆಂಕಟಪತಿ ರಾಯನಿಗೆ ಅರ್ಪಿಸಿದನು. ಇದರಿಂದ ಸಂತೋಷಗೊಂಡ ಚಕ್ರವರ್ತಿಯು ಅವನ ಧೈರ್ಯಸಾಹಸಗಳನ್ನು ಕೊಂಡಾಡಿ ಅದಕ್ಕೆ ಪ್ರತಿಫಲವಾಗಿ ಪಳವೊಳಲು (ಪಳವಳ್ಳಿ), ಕಾಮದೂರು, ಹೈಯಸಮುದ್ರ ಎಂಬ ಊರುಗಳನ್ನು ಕೊಡುಗೆಯಾಗಿ ನೀಡಿದ್ದೇ ಅಲ್ಲದೆ ಬೆಲೆಬಾಳುವ ಆಭರಣಗಳನ್ನು ನೀಡಿ ಅವನನ್ನು ತನ್ನ ಮುಖ್ಯ ಖಜಾನಾಧಿಕಾರಿಯನ್ನಾಗಿ ಮಾಡಿಕೊಂಡನೆಂದು ಹೇಳಲಾಗಿದೆ. ಈ ರೀತಿ ಬಲ್ಲಪ್ಪನಾಯಕನು ವಿಜಯನಗರದ ಚಕ್ರವರ್ತಿ ವೆಂಕಟಪತಿರಾಯನಿಂದ ಸನ್ಮಾನಿತನಾಗಿ ಚಿಕ್ಕಬಳ್ಳಾಪುರಕ್ಕೆ ಹಿಂತಿರುಗಿದನು. ನಂತರ ಅವನು ವಿಜಯನಗರದ ಚಕ್ರವರ್ತಿಯಿಂದ ಕೊಡುಗೆಯಾಗಿ ಪಡೆದುಕೊಂಡಿದ್ದ ಪಳವೊಳಲುವಿಗೆ (ಪಳವಳ್ಳಿ) ಬಂದು ವಾಸಿಸಲಾರಂಭಿಸಿದನು. ನಂತರ ಬಲ್ಲಪ್ಪನಾಯಕ ಪಾವಗಡ ಬೆಟ್ಟದ ಮೇಲೆ ನೆಲೆಸಿದ್ದ ವೀರನಾಗಪ್ಪ ಮತ್ತು ಆತನ ತಂಡದವರನ್ನು ಹೊರಹಾಕಿ ಬೆಟ್ಟದ ಮೇಲೊಂದು ಕೋಟೆಯನ್ನು ಕಟ್ಟಿಸಿ ನೆಲೆನಿಂತನು.

ಹೀಗೆ ಪಾವಗಡದಲ್ಲಿ ಕೋಟೆಯನ್ನು ಕಟ್ಟಿ ಆಳ್ವಿಕೆ ನಡೆಸುತ್ತಿದ್ದ ಸಂದರ್ಭದಲ್ಲಿ ಪೆನುಗೊಂಡೆ ರಾಜ್ಯವನ್ನು ರಕ್ಷಿಸುವ ಅವಕಾಶ ಬಲ್ಲಪ್ಪನಾಯಕನಿಗೆ ಒದಗಿಬಂದಿತು. ಅದು ಅವನ ಅದೃಷ್ಟದ ಬಾಗಿಲನ್ನೇ ತೆರೆಯಿತು. ಪೆನುಗೊಂಡೆಯಲ್ಲಿದ್ದ ಚಕ್ರವರ್ತಿ ವೆಂಕಟಪತಿರಾಯನು ಗುತ್ತಿಯನ್ನು ಆಕ್ರಮಿಸಿ ಆದವಾನಿಯ ಕಡೆ ಹೊರಟಿದ್ದನು. ಆ ಸಂದರ್ಭದಲ್ಲಿ ಪೆನುಗೊಂಡೆಯಲ್ಲಿನ ಚಕ್ರವರ್ತಿಯ ಶಸ್ತ್ರಾಗಾರಕ್ಕೆ ಸಿಡಿಲು ಬಡಿದು ಬೆಂಕಿ ಹತ್ತಿ ಅನೇಕ ಜನ ಮರಣ ಹೊಂದಿದರು. ಬೆಂಕಿಯ ಜ್ವಾಲೆಗಳು ಹರಡತೊಡಗಿದವು. ಈ ಸುದ್ದಿ ಪಾವಗಡದಲ್ಲಿದ್ದ ಬಲ್ಲಪ್ಪನಾಯಕನಿಗೆ ಮುಟ್ಟಿತು. ತಕ್ಷಣ ಕಾರ್ಯೋನ್ಮುಖನಾದ ಅವನು ಪೆನುಗೊಂಡೆಗೆ ಧಾವಿಸಿ ಕೋಟೆಯ ರಕ್ಷಣೆಯ ಜವಾಬ್ದಾರಿಯನ್ನು ವಹಿಸಿಕೊಂಡು ಕೋಟೆಯನ್ನು ಕಾಪಾಡಿದನು. ನಂತರ ಈ ವಿಷಯವನ್ನು ಚಿಕ್ಕಬಳ್ಳಾಪುರದಲ್ಲಿದ್ದ ತನ್ನ ಸಾಕುತಂದೆ ಹಾವಳಿ ಬೈರೇಗೌಡನಿಗೂ ಗುತ್ತಿಯಲ್ಲಿದ್ದ ಚಕ್ರವರ್ತಿ ವೆಂಕಟಪತಿರಾಯನಿಗೂ ತಿಳಿಸಿದನು. ಚಕ್ರವರ್ತಿಯು ಗುತ್ತಿಯಿಂದ ತಕ್ಷಣ ಪೆನುಗೊಂಡೆಗೆ ಧಾವಿಸಿ ಬಲ್ಲಪ್ಪನಾಯಕ ಮಾಡಿದ ಕಾರ್ಯಗಳನ್ನು ವೀಕ್ಷಿಸಿ ಕೊಂಡಾಡಿದರು. ಅವನ ನಿಷ್ಠೆಗೆ ಪ್ರತಿಯಾಗಿ ಚಕ್ರವರ್ತಿ ವೆಂಕಟಪತಿರಾಯನು ೧. ಬ್ಯಾಡನೂರು ೨. ಗುಂಡ್ಲಪಳ್ಳಿ ೩.ಗೌರಸಮುದ್ರ ೪. ನಲಿಗೇನಹಳ್ಳಿ ೫. ಜಾಜೂರಾಯನ ಪಳ್ಳಿ ೬. ಕಡಪಾಲಕೆರೆ ೭. ಕಾಮನಕೊಂಡ ೮. ಕ್ಯಾತಗಾನ ಚೆರ್ಲು ೯. ನೇರಳಕುಂಟೆ ೧೦. ಜಾಲಪಳ್ಳಿ ೧೧. ವಿರೂಪಸಮುದ್ರ ೧೨. ಬುಗಡೂರು ೧೩. ರಾಗಿಗುಂಟೆ ೧೪. ಗುಮ್ಮನಕೊಂಡ ೧೫. ವಡ್ರೇವು ೧೬. ನಾಗಲಮಡಿಕೆ ೧೭. ಗ್ಯಾದಿಕುಂಟೆ ೧೮. ಪೆಂಡ್ಲಿಜೀವಿ ೧೯. ದೊಮ್ಮತುಮರಿ ೨೦. ಗಂಗಾವರಂ, ೨೧. ಗೌಡೇಟಿ ೨೨. ಮಾರಾಜನಹಳ್ಳಿ ೨೩. ಗುಮ್ಮಗಟ್ಟ ೨೪. ಕನ್ನಮೇಡಿ ಎಂಬ ೨೪ ಗ್ರಾಮಗಳನ್ನು ದಾನವಾಗಿ ನೀಡಿದನು. ಪೆನುಗೊಂಡೆಯ ಚಕ್ರವರ್ತಿಯಿಂದ ಸನ್ಮಾನಿತನಾಗಿ ಅಮರನಾಯಕ ಹುದ್ದೆ ಪಡೆದುಕೊಂಡು ಪಾವಗಡಕ್ಕೆ ಹಿಂತಿರುಗಿದ ಬಲ್ಲಪ್ಪನಾಯಕನಿಗೆ ಚಿಕ್ಕಬಳ್ಳಾಪುರದಲ್ಲಿದ್ದ ತನ್ನ ಸಾಕು ತಂದೆ ಹಾವಳಿ ಬೈರೇಗೌಡನ ಮರಣದ ವಾರ್ತೆ ತಲುಪಿತು. ತಕ್ಷಣ ಅಲ್ಲಿಗೆ ತೆರಳಿ ತನ್ನ ತಂದೆಯ ಕ್ರಿಯಾಕಾರ್ಯಗಳನ್ನು ಮುಗಿಸಿ ಪಾವಗಡಕ್ಕೆ ಹಿಂತಿರುಗಿದನು.

ಬಲ್ಲಪ್ಪನಾಯಕನಿಗೆ ತಾಳಪ್ಪನಾಯಕ, ವೀರಬಲ್ಲಪ್ಪನಾಯಕ, ತಿಮ್ಮಪ್ಪನಾಯಕ ಎಂಬ ಮೂರುಜನ ಪುತ್ರರಿದ್ದರು. ಅವರಲ್ಲಿ ಹಿರಿಯನಾದ ತಾಳಪ್ಪನಾಯಕ ತನ್ನ ೧೦ನೇ ವಯಸ್ಸಿನಲ್ಲಿಯೇ ಮರಣ ಹೊಂದಿದ್ದನು. ಆದ್ದರಿಂದ ಹಿರಿಯಬಲ್ಲಪ್ಪನಾಯಕ ಮರಣ ಹೊಂದಿದ ನಂತರ ಅವನ ಎರಡನೇ ಪುತ್ರ ವೀರಬಲ್ಲಪ್ಪನಾಯಕ ಅಧಿಕಾರಕ್ಕೆ ಬಂದನು. ಇವನು ಬಹಳ ಬುದ್ಧಿವಂತನಾಗಿದ್ದು ಬಿಲ್ಲುಗಾರಿಕೆಯಲ್ಲಿ ಪ್ರಾವೀಣ್ಯತೆ ಸಂಪಾದಿಸಿದ್ದು ಎಲ್ಲಾ ಭಾಷೆಗಳಲ್ಲೂ ಮಾತನಾಡುವ ಸಾಮರ್ಥ್ಯ ಹೊಂದಿದ್ದನೆಂದೂ ಮೆಕಂಜಿಯ ಕೈಫಿಯತ್ತು ಅವನ ಗುಣಗಾನ ಮಾಡುತ್ತದೆ. ಗೊಲ್ಲಜಾತಿಯ ನಿಯಮದಂತೆ ತನ್ನ ತಂದೆಯ ಅಂತ್ಯಸಂಸ್ಕಾರಗಳನ್ನು ನೆರವೇರಿಸಿದ ಬಳಿಕ ವೀರಬಲ್ಲಪ್ಪನಾಯಕನು ರಾಜ್ಯಭಾರ ಆರಂಭಿಸಿದನು. ಇದೇ ಸಂದರ್ಭದಲ್ಲಿ ರತ್ನಗಿರಿಯಲ್ಲಿ ಆಳ್ವಿಕೆ ಮಾಡುತ್ತಿದ್ದ ಬೇಡಕುಲದ ಪಾಳೆಯಗಾರರೊಂದಿಗೆ ಸಂಘರ್ಷಕ್ಕೆ ಇಳಿಯಬೇಕಾದ ಸನ್ನಿವೇಶ ನಿರ್ಮಾಣವಾಯಿತು. ರತ್ನಗಿರಿಯವರು ರಣದುಲ್ಲಾಖಾನನ ದಾಳಿಗೆ ಸಿಕ್ಕಿ ಶಿರಾವನ್ನು ಕಳೆದುಕೊಂಡಿದ್ದರು. ಕಳೆದುಕೊಂಡಿದ್ದ ಪ್ರದೇಶಕ್ಕೆ ಬದಲಾಗಿ ಬೇರೆ ಭೂಭಾಗವನ್ನು ಆಕ್ರಮಿಸುವ ಯೋಜನೆಯನ್ನು ರೂಪಿಸಿದ ಅವರು ತಮ್ಮ ರಾಜ್ಯದ ಸನಿಹದಲ್ಲೇ ಇದ್ದ ಪಾವಗಡದ ಮೇಲೆ ದಾಳಿ ಮಾಡಿದರು. ರತ್ನಗಿರಿಯ ಸರ್ಜಾರಂಗಪ್ಪನಾಯಕ ಪಾವಗಡಕ್ಕೆ ಸೇರಿದ ಪ್ರದೇಶಗಳನ್ನು ಆಕ್ರಮಿಸಿಕೊಳ್ಳುತ್ತಾ ಲೂಟಿ ಹೊಡೆಯುತ್ತಿದ್ದನು. ಈ ಆಕ್ರಮಣವನ್ನು ಹಿಮ್ಮೆಟ್ಟಿಸಲು ವೀರಬಲ್ಲಪ್ಪ ನಾಯಕನು ಸೇನೆ ತೆಗೆದುಕೊಂಡು ಬಂದನು. ಯುದ್ಧ ಹರವೇಸಮುದ್ರದ ಬಳಿ ನಡೆದು ಪಾವಗಡ ನಾಯಕ ಸೋತು ಹಿಮ್ಮೆಟ್ಟಿದನು. ಹರವೇಸಮುದ್ರ ರತ್ನಗಿರಿ ನಾಯಕರ ವಶವಾಗುತ್ತದೆ. ರತ್ನಗಿರಿಯವರಿಗೆ ಶಿರಾ ಕಳೆದುಕೊಂಡಿದ್ದಕ್ಕೆ

ಬದಲಾಗಿ ಹರವೇಸಮುದ್ರ ಸುಲಭವಾಗಿ ಪರಿಹಾರ ರೂಪದಲ್ಲಿ ಸಿಕ್ಕಿತು. ಈ ಘಟನೆಯನ್ನು ಹೊರತುಪಡಿಸಿದರೆ ಇವನ ಕಾಲದಲ್ಲಿ ಬೇರೇನೂ ಜರುಗಲಿಲ್ಲ. ವೀರಬಲ್ಲಪ್ಪನಾಯಕ ಮರಣ ಹೊಂದಿದ ನಂತರ ಅವನ ಸೋದರ ತಿಮ್ಮಪ್ಪನಾಯಕ ಪಾವಗಡದ ಪಾಳೆಯಗಾರನಾದನು.

ತಿಮ್ಮಪ್ಪನಾಯಕನ ಕಾಲದಲ್ಲಿ ಪಾವಗಡ ನಾಯಕರು ರಾಯದುರ್ಗದವರ ಜೊತೆ ಕದನಕ್ಕಿಳಿಯಬೇಕಾದ ಪ್ರಸಂಗ ಒದಗಿಬಂತು. ರಾಯದುರ್ಗದ ಪಾಳೆಯಗಾರ ಪೆದ್ದವೆಂಕಟಪತಿನಾಯ್ಡು ಪಾವಗಡ ನಾಯಕರಿಗೆ ಸೇರಿದ್ದ ಕಂಬದೂರಿನ ಮೇಲೆ ಆಕ್ರಮಣ ಮಾಡಿದನು. ಅಲ್ಲಿದ್ದ ಪಾವಗಡದ ಅಧಿಕಾರಿಗಳನ್ನು ಓಡಿಸಿ ಕಂಬದೂರನ್ನು ತನ್ನ ರಾಜ್ಯಕ್ಕೆ ಸೇರಿಸಿಕೊಂಡನು. ಹೀಗೆ ಕಂಬದೂರು ಪಾವಗಡದವರಿಂದ ಕೈಬಿಟ್ಟು ಹೋಯಿತು. ಪಾವಗಡವನ್ನು ರಕ್ಷಣಾತ್ಮಕ ದೃಷ್ಟಿಯಿಂದ ಅಭಿವೃದ್ಧಿಪಡಿಸಲು ಕ್ರಮ ಕೈಗೊಂಡನು. ಪಾವಗಡ ಕೋಟೆಯನ್ನು ಬಲಪಡಿಸಿ ಮತ್ತೊಂದು ಚಿಕ್ಕಕೋಟೆಯನ್ನು ಬೆಟ್ಟದ ಮೇಲೆ ನಿರ್ಮಿಸಿದನು. ಬೆಟ್ಟದ ಬುಡದಲ್ಲಿ ನಾಯಕರಿಗೆ ಸುಂದರವಾದ ಅರಮನೆಯೊಂದನ್ನು ನಿರ್ಮಿಸಿ ಪಟ್ಟಣದ ಸುತ್ತ ಕೋಟೆ ಮತ್ತು ಕಂದಕವನ್ನು ನಿರ್ಮಿಸಿದನು.

ತಿಮ್ಮಪ್ಪನಾಯಕನ ಕಾಲದಲ್ಲಿ ಮರಾಠರು ಆಕ್ರಮಣ ಮಾಡಿ ಪಾವಗಡ ಪಾಳೆಯಪಟ್ಟಿನ ಕೆಲವು ಪ್ರಾಂತ್ಯಗಳನ್ನು ವಶಪಡಿಸಿಕೊಂಡಿದ್ದರು. ಅವುಗಳನ್ನು ಪುನಃ ಪಡೆದುಕೊಳ್ಳಲು ಪ್ರಯತ್ನಿಸಿದ ದೊಡ್ಡ (ಪೆದ್ದ) ತಿಮ್ಮಪ್ಪನಾಯಕನು ಸೇನೆಯನ್ನು ಸಂಗ್ರಹಿಸಿ ಹಠಾತ್ತನೆ ದಾಳಿ ಮಾಡಿದನು. ಆ ಪ್ರಾಂತದಲ್ಲಿದ್ದ ಮರಾಠ ಅಧಿಕಾರಿಗಳನ್ನು ಸೋಲಿಸಿ ಅವರಿಂದ ಗುಮ್ಮಗಟ್ಟ, ವಿರೂಪಸಂದ್ರ, ಮಾದೇರಾಜೊಂಡಪಳ್ಳಿ, ದೊಮ್ಮತುಮರಿ, ನೇರಳೆಕುಂಟೆ, ಚೇಲಾಪುರಂ ಎಂಬ ಊರುಗಳನ್ನು ವಶಪಡಿಸಿಕೊಂಡನು.

ತಿಮ್ಮಪ್ಪನಾಯಕನ ಮರಣದ ನಂತರ ಅವನ ಹಿರಿಯಪುತ್ರ ಪೆದ್ದತಿಮ್ಮಪ್ಪ ನಾಯಕ ಕ್ರಿ.ಶ. ೧೭೪೫ರ ರಕ್ತಾಕ್ಷಿ ಸಂವತ್ಸರದಲ್ಲಿ ಅಧಿಕಾರಕ್ಕೆ ಬಂದನು. ಪಾವಗಡವನ್ನಾಳಿದ ನಾಯಕರುಗಳಲ್ಲಿ ಅಗ್ರಗಣ್ಯನಾದ ಈತನು ಅನೇಕ ಜನೋಪಯೋಗಿ ಕೆಲಸಗಳಿಂದ ಪ್ರಸಿದ್ಧನಾದನು. ನೀರಾವರಿಗೆ ಪ್ರೋತ್ಸಾಹ ನೀಡಿ ಬೊಮ್ಮನಹಳ್ಳಿ ಬಳಿ ಗೌರಸಮಮೇಟಿ ಮತ್ತು ನಲಿಗೇನಪಳ್ಳಿ ಬಳಿ ಕೆರೆಗಳನ್ನು ನಿರ್ಮಿಸಿ ಕೃಷಿಯನ್ನು ವಿಸ್ತಾರ ಮಾಡಿದನು. ಗೌರಸಮಮೇಟಿ ಕೆರೆಯ ಬಳಿ ಹೊಸ ಗ್ರಾಮವನ್ನು ಸ್ಥಾಪಿಸಿ ಅದಕ್ಕೆ ತಿಮ್ಮಪ್ಪನಾಯಕನಹಳ್ಳಿ ಎಂದು ನಾಮಕರಣ ಮಾಡಿದನು.

ಪಾವಗಡ ಪಾಳೆಯಪಟ್ಟಿನ ನಾಯಕರು ದೊಡ್ಡತಿಮ್ಮಪ್ಪನಾಯಕನ ಕಾಲದಲ್ಲಿ ಹೈದರಾಲಿಯೊಂದಿಗೆ ಉತ್ತಮ ಬಾಂಧವ್ಯವನ್ನು ಇಟ್ಟುಕೊಂಡು ವಾರ್ಷಿಕ ೧೦ ಸಾವಿರ ರೂಗಳ ಕಾಣಿಕೆ ನೀಡುತ್ತಿದ್ದರು. ಆದರೆ ಅವನ ಮರಣಾನಂತರ ಅವನ ಹಿರಿಯ ಮಗ ಪೆದ್ದತಿಮ್ಮಪ್ಪನಾಯಕನ ಕಾಲದಲ್ಲಿ ಆ ಸ್ನೇಹ ಬಾಂಧವ್ಯ ಮುರಿದು ಬಿದ್ದುದೇ ಅಲ್ಲದೆ, ಹೈದರಾಲಿ ಪಾವಗಡವನ್ನು ಹೊರತುಪಡಿಸಿ ಶಿರಾ, ಮಿಡಿಗೇಶಿ, ಮಧುಗಿರಿ, ನಿಡುಗಲ್ ಮುಂತಾದ ಬಲಾಢ್ಯ ಕೋಟೆಗಳನ್ನು ವಶಪಡಿಸಿಕೊಂಡಿದ್ದನು. ಪಾವಗಡವನ್ನು ಗೆದ್ದುಕೊಂಡರೆ ಇಡೀ ಪ್ರದೇಶವೇ ತನ್ನ ವಶವಾಗುತ್ತದೆ ಎಂದು ಆಲೋಚಿಸಿ ತನ್ನ ನಿಯೋಜಿತ ಅಧಿಕಾರಿ ಪ್ರಧಾನಿ ವೆಂಕಪ್ಪಯ್ಯನಿಗೆ ಪಾವಗಡ ಕೋಟೆಯ ಮೇಲೆ ಆಕ್ರಮಣ ಮಾಡಲು ಆದೇಶಿಸಿದನು. ವೆಂಕಪ್ಪಯ್ಯನು ಸೇನೆಯೊಂದಿಗೆ ಬಲಾಢ್ಯ ಪಾವಗಡದ ಮೇಲೆ ಆಕ್ರಮಣ ಮಾಡಿದನು. ಐದು ತಿಂಗಳ ಕಾಲ ಮುತ್ತಿಗೆ ಮುಂದುವರಿಯಿತು. ಕೋಟೆಯ ಬಾಗಿಲು ತೆರೆಯಲಿಲ್ಲ. ಸತತ ಆಕ್ರಮಣದ ಫಲವಾಗಿ ವೆಂಕಪ್ಪಯ್ಯನ ಸೈನ್ಯ ಕೋಟೆಯೊಳಗೆ ಪ್ರವೇಶಿಸಿತು. ಪಾವಗಡದ ರಕ್ಷಣಾ ಸೈನ್ಯ ದಿಟ್ಟವಾಗಿ ದಾಳಿಯನ್ನೆದುರಿಸಿದರೂ ಫಲ ನೀಡಲಿಲ್ಲ. ಪಾವಗಡದ ಸೈನಿಕರು ಪಲಾಯನಗೈದರು. ಆಕ್ರಮಣಕಾರರು ಅರಮನೆ ಪ್ರವೇಶಿಸಿ ಪೆದ್ದತಿಮ್ಮಪ್ಪ ನಾಯಕ ಮತ್ತು ಅವನ ತಮ್ಮ ಚಿಕ್ಕಪ್ಪಗೌಡ ಚಿಕ್ಕವೆಂಕಟಪತಿ ನಾಯಕನನ್ನು ಸೆರೆಯಾಳಾಗಿ ಬಂಧಿಸಿದರು. ಅವರ ಇಡೀ ಕುಟುಂಬವರ್ಗವನ್ನು ಮಧುಗಿರಿಗೆ ಕರೆದೊಯ್ದು ಅಲ್ಲಿನ ಸೆರೆಮನೆಯಲ್ಲಿ ಇಡಲಾಯಿತು. ನಾಯಕ ಕುಟುಂಬ ವರ್ಗದವರ ಜೀವನಕ್ಕೆ ಪ್ರಧಾನಿ ವೆಂಕಪ್ಪಯ್ಯನು ಗ್ರಾಮವೊಂದನ್ನು ಬಿಟ್ಟುಕೊಟ್ಟನೆಂದು ಮೆಕಂಜಿಯ ಕೈಫಿಯತ್ತು ತಿಳಿಸುತ್ತದೆ.

ಪ್ರಧಾನಿ ವೆಂಕಪ್ಪಯ್ಯನು ಪಾವಗಡಕ್ಕೆ ತೆರಳಿ ಅದರ ಸಂಪೂರ್ಣ ವಿವರವನ್ನು ಸಂಗ್ರಹಿಸ ತೊಡಗಿದನು. ಆ ವೇಳೆಗೆ ಪಾವಗಡಕ್ಕೆ ಸೇರಿದ್ದ ಅನೇಕ ಹಳ್ಳಿಗಳು ನೆರೆಯ ಸಂಸ್ಥಾನಕ್ಕೆ ಸೇರಿದ್ದವು. ಆ ಹಳ್ಳಿಗಳನ್ನು ಬೇರ್ಪಡಿಸಿ ಪುನಃ ಪಾವಗಡಕ್ಕೆ ಸೇರಿಸಿ ಆ ಭೂಪ್ರದೇಶಗಳ ವ್ಯವಹಾರವನ್ನು ನೋಡಿಕೊಳ್ಳಲು ಸುಬ್ಬರಾಯನನ್ನು ಕ್ರಿ.ಶ. ೧೭೭೫ರಲ್ಲಿ ಅಮಲ್ದಾರನನ್ನಾಗಿ ನೇಮಕ ಮಾಡಲಾಯಿತು.

ಹೈದರಾಲಿಯು ಮದಕರಿನಾಯಕನನ್ನು ಸದೆಬಡಿಯುವ ಉದ್ದೇಶದಿಂದ ಕ್ರಿ.ಶ. ೧೭೭೭ರಲ್ಲಿ ಮೂರನೆ ಬಾರಿಗೆ ಚಿತ್ರದುರ್ಗದ ಕಡೆ ಹೊರಟನು. ಮಾರ್ಗಮಧ್ಯದಲ್ಲಿ ಹೈದರಾಲಿಯ ಸೈನ್ಯ ಪಾವಗಡದ ಬಳಿ ಬೀಡುಬಿಟ್ಟಿತು. ಆ ಸಂದರ್ಭದಲ್ಲಿ ಹೈದರನು ತನ್ನ ಸೈನ್ಯದೊಂದಿಗೆ ಪಾವಗಡ ಬೆಟ್ಟವನ್ನು ಏರಿ ಅದರಿಂದ ಆಕರ್ಷಿತನಾಗಿ ತನ್ನ ಅಧಿಕಾರಿಗಳನ್ನು ಕರೆಸಿ ಈ ದುರ್ಗದ ಮೇಲೆ ಬಲಾಢ್ಯ ಗೋಡೆಗಳನ್ನು ನಿರ್ಮಿಸುವ ಕಾಮಗಾರಿಯನ್ನು ಕೈಗೆತ್ತಿಕೊಳ್ಳುವಂತೆ ಆದೇಶಿಸಿದನು. ಪ್ರಧಾನಿ ವೆಂಕಪ್ಪಯ್ಯನು ತಕ್ಷಣ ಈ ಕಾರ್ಯವನ್ನು ಆರಂಭಿಸಿ ಪಾವಗಡ ಕೋಟೆ ಮತ್ತು ಪೇಟೆಯನ್ನು ಬಲಪಡಿಸಿ ಪಾವಗಡವನ್ನು ಜನಭರಿತ ಪಟ್ಟಣವನ್ನಾಗಿ ಮಾಡಿದನು.

ಕ್ರಿ.ಶ. ೧೭೭೮ರಲ್ಲಿ ಪಾವಗಡವನ್ನು ವಿಸ್ತರಿಸುವ ಉದ್ದೇಶದಿಂದ ಪ್ರಧಾನಿ ವೆಂಕಪ್ಪಯ್ಯನು ರಾಯಚೆರ್ಲುವಿನ ಮೇಲೆ ದಾಳಿ ಮಾಡಿದನು. ಅಲ್ಲಿನ ನಾಯಕನಾದ ಯರ್ರ ಚನ್ನಪ್ಪನಾಯ್ಡುವು ಪರಾಭವಗೊಂಡನು. ಅವನನ್ನು ಸೆರೆಹಿಡಿದು ಪೆನುಗೊಂಡೆಯ ದುರ್ಗದಲ್ಲಿಟ್ಟು ಇಡೀ ರಾಯಚೆರ್ಲು ಪ್ರದೇಶವನ್ನು ಪಾವಗಡಕ್ಕೆ ಸೇರಿಸಿಕೊಂಡನು. ಹೀಗೆ ಪಾವಗಡ ರಾಜ್ಯ ಮತ್ತಷ್ಟು ವಿಸ್ತಾರಗೊಂಡಿತು. ಕ್ರಿ.ಶ. ೧೭೭೯ರಲ್ಲಿ ಹೈದರಾಲಿಯ ಆದೇಶದ ಮೇರೆಗೆ ಚೇಕ್ರಮಾಯನೆಂಬುವನು ಹೊಸ ಅಮಲ್ದಾರನಾಗಿ ಪಾವಗಡಕ್ಕೆ ಸುಬ್ಬರಾವ್‌ನ ಸ್ಥಾನಕ್ಕೆ ಆಗಮಿಸಿದನು. ಅವನ ಆಡಳಿತಾವಧಿಯಲ್ಲಿ ನಿಡುಗಲ್ಲಿಗೆ ಸೇರಿದ್ದ ಪೊನ್ನಸಮುದ್ರ ಮತ್ತು ಸೂಲನಾಯಕನಪಳ್ಳಿಗಳನ್ನು ಒತ್ತಾಯದಿಂದ ಪಡೆದು ಪಾವಗಡಕ್ಕೆ ಸೇರಿಸಿಕೊಂಡನು. ಆಗ ನಿಡುಗಲ್ಲಿನಲ್ಲಿದ್ದ ಪಾಳೇಗಾರ ವೀರತಿಮ್ಮಣ್ಣನಾಯಕನು ದುರ್ಬಲನಾಗಿದ್ದು ಹೈದರಾಲಿಯಿಂದ ಪರಾಭವಗೊಂಡಿದ್ದು, ಆದ್ದರಿಂದ ನಿಡುಗಲ್ಲಿನವರು ಯಾವುದೇ ಪ್ರತಿರೋಧ ತೋರದೆ ಹೈದರಾಲಿಯ ಭಯದಿಂದ ಕೆಲವು ಪ್ರದೇಶಗಳನ್ನು ಪಾವಗಡಕ್ಕೆ ಬಿಟ್ಟುಕೊಟ್ಟರು. ಇದರಿಂದ ಪಾವಗಡ ಮತ್ತಷ್ಟು ವಿಸ್ತಾರವಾಗಿ ಆದಾಯವೂ ಹೆಚ್ಚಾಯಿತು. ಕ್ರಿ.ಶ. ೧೭೮೨ರಲ್ಲಿ ಹೈದರಾಲಿಯು ಮರಣ ಹೊಂದಿದ ಮೇಲೆ ಮೈಸೂರಿನಲ್ಲಿ ಟಿಪ್ಪುಸುಲ್ತಾನನು ಅಧಿಕಾರಕ್ಕೆ ಬಂದನು. ಆಗ ಅವನು ಅನೇಕ ಅಧಿಕಾರಿಗಳನ್ನು ಬದಲಾಯಿಸಿ, ತನಗೆ ನಿಷ್ಠರಾದವರನ್ನು ನೇಮಕ ಮಾಡತೊಡಗಿದನು. ಆ ಸಂದರ್ಭದಲ್ಲಿ ಪಾವಗಡಕ್ಕೆ ಕ್ರಿ.ಶ. ೧೭೮೨ರಲ್ಲಿ ರುಸ್ತುಂಖಾನನು ಅಮಲ್ದಾರನಾಗಿ ಆಡಳಿತ ವಹಿಸಿಕೊಂಡನು.

ಪಾವಗಡವು ಸೀಮಿತ ಆದಾಯವನ್ನು ಹೊಂದಿದ್ದು ಚಿಕ್ಕ ಪ್ರದೇಶವಾಗಿತ್ತು. ಹೆಚ್ಚು ವಿಸ್ತಾರವಾಗಿದ್ದ ಪ್ರದೇಶಗಳಿಂದ ಕೆಲವಾರು ಹಳ್ಳಿಗಳನ್ನು ಬೇರ್ಪಡಿಸಿ ಚಿಕ್ಕಪ್ರದೇಶಗಳಿಗೆ ಸೇರಿಸುವ ನೀತಿಯನ್ನು ಹೈದರನು ಅನುಸರಿಸುತ್ತಿದ್ದನು. ಹೈದರಾಲಿಯ ಕಾಲದಲ್ಲಿ ನಿಡುಗಲ್ಲಿನಿಂದ ಕೆಲವಾರು ಹಳ್ಳಿಗಳನ್ನು ಪಾವಗಡ ರಾಜ್ಯಕ್ಕೆ ಸೇರಿಸಿ ವಿಸ್ತರಿಸಲಾಗಿತ್ತು. ಟಿಪ್ಪು ಸುಲ್ತಾನನು ಕೂಡಾ ಇದೇ ನೀತಿಯನ್ನು ಮುಂದುವರೆಸಿ ಪಾವಗಡವನ್ನು ಮತ್ತಷ್ಟು ವಿಸ್ತರಿಸಿ ಅದರ ಆದಾಯವನ್ನು ಹೆಚ್ಚಿಸುವ ಕೆಲಸಕ್ಕೆ ಕೈಹಾಕಿದನು. ಆ ಪ್ರಕಾರ ಟಿಪ್ಪು ಸುಲ್ತಾನನು ಪಾವಗಡಕ್ಕೆ ಆಗಮಿಸಿ ಅದರ ಆದಾಯವನ್ನು ಪರಿಶೀಲಿಸಿ ಪಾವಗಡದ ನೆರೆಯ ದೊಡ್ಡ ಪ್ರದೇಶಗಳಾದ ರಾಯದುರ್ಗ ಮತ್ತು ಪೆನುಗೊಂಡೆಗಳಿಂದ ಕೆಲವು ಭೂಪ್ರದೇಶವನ್ನು ಪಾವಗಡಕ್ಕೆ ಸೇರಿಸಬೇಕೆಂಬ ಆದೇಶವನ್ನು ಹೊರಡಿಸಿದನು. ಈ ವೇಳೆಗಾಗಲೇ ರಾಯದುರ್ಗ ಮತ್ತು ಪೆನುಗೊಂಡೆ ಟಿಪ್ಪು ಸುಲ್ತಾನನ ವಶದಲ್ಲಿದ್ದವು. ಆ ಆದೇಶದ ಪ್ರಕಾರ "ಪೆನುಗೊಂಡ (ಸೀಮೆ) ಪ್ರದೇಶದಿಂದ ರೊದ್ದಂ ತರಫ್ ಅನ್ನು, ರಾಯದುರ್ಗ ಪ್ರದೇಶದಿಂದ (ಸೀಮೆ) ತಿರುಮಣಿ ತರಫ್ ಅನ್ನು ಪಾವಗಡ ಸೀಮೆಗೆ ಸೇರಿಸಲಾಯಿತು." ಪಾವಗಡ ನಾಯಕರಿಂದ ದುರ್ಗದ ಮೇಲೆ ನಿರ್ಮಾಣಗೊಂಡಿದ್ದ ಗೋಪಾಲಸ್ವಾಮಿ ದೇವಾಲಯವನ್ನು ಜೀರ್ಣೋದ್ಧಾರದ ನೆಪದಲ್ಲಿ ನಾಶಪಡಿಸಲಾಯಿತು. ಈ ಘಟನೆ ಕ್ರಿ.ಶ. ೧೭೮೭ರಲ್ಲಿ ನಡೆಯಿತೆಂದು ಮೆಕೆಂಜಿ ಕೈಫಿಯತ್ತು ದಾಖಲಿಸಿದೆ.

ಕ್ರಿ.ಶ. ೧೭೮೭ರ ನಂತರ ಅಲ್ಪಕಾಲ ಈ ಮೂರೂ ತರಫ್‌ಗಳ ಜವಾಬ್ದಾರಿಯನ್ನು ರುಸ್ತುಂಖಾನನು ನಿರ್ವಹಿಸಿದನು. ಆಗ ಪುನಃ ಪಾವಗಡದಿಂದ ರೊದ್ದಂ ತರಫ್‌ನ್ನು ಬೇರ್ಪಡಿಸಿ ಅಲ್ಲಿಗೆ ಪ್ರತ್ಯೇಕವಾದ ಅಧಿಕಾರಿಯನ್ನು ನೇಮಿಸಲಾಯಿತು. ಆದರೆ ರೊದ್ದಂ ತರಫ್‌ನಲ್ಲಿದ್ದ ರ್‍ಯಾಪ್ಟೆ ಮತ್ತು ಹೊನ್ನಾಪುರ ಎಂಬ ಗ್ರಾಮಗಳನ್ನು ಪಾವಗಡ ಸೀಮೆಯಲ್ಲಿಯೇ ಉಳಿಸಿಕೊಳ್ಳಲಾಯಿತು.ಈ ನಡುವೆ ಬ್ರಿಟಿಷರ ಒಕ್ಕೂಟ ಸೈನ್ಯ ಲಾರ್ಡ್ ಕಾರ್ನ್‌ವಾಲೀಸನ ನಾಯಕತ್ವದಲ್ಲಿ ಟಿಪ್ಪೂವಿನ ವಿರುದ್ಧ ಯುದ್ಧ ಮಾಡಲು ಕ್ರಿ.ಶ. ೧೭೯೦ರಲ್ಲಿ ಬೆಂಗಳೂರಿಗೆ ಬಂದಿಳಿಯಿತು. ಕಾರನ್‌ವಾಲೀಸನ ಜೊತೆ ಜನರಲ್ ಮಿಡೋನೋ ಆಗಮಿಸಿದ್ದನು. ಟಿಪ್ಪೂ ಮತ್ತು ಅವನ ಅಧಿಕಾರಿಗಳು ದುರ್ಗದ ಬಂಧಿಖಾನೆಯಲ್ಲಿದ್ದ ಪಾವಗಡದ ಪಾಳೇಗಾರ ಪೆದ್ದತಿಮ್ಮಪ್ಪನಾಯಕನು (ಪ್ರಧಾನಿ ವೆಂಕಪ್ಪಯ್ಯನು ಬಂಧಿಸಿ ಮಧುಗಿರಿಯಲ್ಲಿಟ್ಟಿದ್ದನು). ಜೈಲಿನಿಂದ ಬಿಡುಗಡೆಯಾಗಿ ಪಾವಗಡಕ್ಕೆ ಬಂದು ಕೋಟೆಯನ್ನು ಬಿಟ್ಟು ಇನ್ನುಳಿದ ಪ್ರದೇಶಗಳನ್ನು ಆಳತೊಡಗಿದನು. ಸುಮಾರು

ಒಂದು ವರ್ಷಕಾಲ ಅಧಿಕಾರ ಮಾಡಿ ಇನ್ನೇನು ಕೋಟೆಯನ್ನು ಆಕ್ರಮಿಸಿಕೊಳ್ಳುವ ಸನಿಹದಲ್ಲಿರುವಾಗಲೇ ಟಿಪ್ಪೂಸುಲ್ತಾನ್ ಸೋತು ಬ್ರಿಟಿಷರೊಂದಿಗೆ ಶಾಂತಿ ಒಪ್ಪಂದ ಮಾಡಿಕೊಂಡಿದ್ದನು. ಎರಡೂ ಕಡೆಯ ಸೈನ್ಯ ತಮ್ಮ ತಮ್ಮ ಸ್ಥಾನಗಳಿಗೆ ಹಿಂತಿರುಗಿದ ನಂತರ ಟಿಪ್ಪುಸುಲ್ತಾನನಿಗೆ ಪಾವಗಡ ಕೈಬಿಟ್ಟುಹೋಗಿರುವ ಸುದ್ದಿ ತಿಳಿಯಿತು. ಬ್ರಿಟಿಷರಿಗೆ ಕೊಡಬೇಕಾಗಿದ್ದ ಹಣವನ್ನು ಕ್ರೋಢಿಕರಿಸಲು ಪುನಃ ಸಣ್ಣಪುಟ್ಟ ಪಾಳೇಗಾರರ ಮೇಲೆ ಆಕ್ರಮಣ ಮಾಡಬೇಕಾಯಿತು. ಆದ್ದರಿಂದ ಕೈಬಿಟ್ಟುಹೋಗಿದ್ದ ಪಾವಡಗವನ್ನು ಆಕ್ರಮಿಸಲು ಸೈನ್ಯವನ್ನು ಕಳುಹಿಸಿದನು. ಟಿಪ್ಪು ಸುಲ್ತಾನನ ಸೇನೆ ಬರುತ್ತಿರುವ ಸುದ್ದಿಯನ್ನು ಕೇಳಿದ ಪಾವಗಡದ ಪೆದ್ದತಿಮ್ಮಪ್ಪನಾಯಕನು ಪಾವಗಡ ಪ್ರದೇಶವನ್ನು ಬಿಟ್ಟು ಪಲಾಯನ ಮಾಡಿದನು. ಟಿಪ್ಪು ಸೈನ್ಯ ಪಾವಗಡವನ್ನು ಪ್ರವೇಶಿಸಿ ವಶಪಡಿಸಿಕೊಂಡಿತು. ಅವನ ಅಧಿಕಾರಿಗಳು ಯಶಸ್ವಿಯಾಗಿ ಪಾವಗಡ ಪ್ರದೇಶದ ಆಡಳಿತವನ್ನು ೧೭೯೯ರವರೆಗೆ ನಿರ್ವಹಣೆ ಮಾಡಿದರು. ಈ ಮಧ್ಯೆ ಟಿಪ್ಪು ಸುಲ್ತಾನನು ಪಾವಗಡ ಕೋಟೆಯ ವೀಕ್ಷಣೆಗೆ ಕ್ರಿ.ಶ. ೧೭೯೫ರಲ್ಲಿ ಆಗಮಿಸಿದನು. ಕೋಟೆಯ ಬಲಾಢ್ಯತೆಯನ್ನು ನೋಡಿ ಸಂತೋಷಗೊಂಡ ಅವನು ಆ ದುರ್ಗಕ್ಕೆ 'ಫತೇಹಬಾದ್' ಎಂದು ನಾಮಕರಣ ಮಾಡಿದನು.

ಕ್ರಿ.ಶ. ೧೭೯೯ರಲ್ಲಿ ಬ್ರಿಟಿಷರೊಂದಿಗೆ ನಡೆದ ಯುದ್ಧದಲ್ಲಿ ಟಿಪ್ಪು ಸುಲ್ತಾನನು ಸೋತು ಮರಣ ಹೊಂದಿದನು. ಟಿಪ್ಪುವಿನ ಮರಣದ ವಾರ್ತೆಯಿಂದ ಎಚ್ಚೆತ್ತುಕೊಂಡ ಪಾವಗಡ ಪಾಳೇಗಾರ ಪೆದ್ದತಿಮ್ಮಪ್ಪನಾಯಕನು ಕರ್ನಲ್ ಅಲೆಕ್ಸಾಂಡರ್ ರೀಡ್‌ನನ್ನು ಭೇಟಿಯಾಗಿ ಅವನ ಅನುಮತಿಯನ್ನು ಪಡೆದುಕೊಂಡು ಪಾವಗಡ ಪ್ರದೇಶದ ಆಡಳಿತವನ್ನು ವಹಿಸಿಕೊಂಡು ಎರಡು ತಿಂಗಳ ಕಾಲ ನಿರ್ವಹಿಸಿದನು. ಟಿಪ್ಪುವನ್ನು ಸೋಲಿಸಿದ ಬ್ರಿಟಿಷರು ಮೈಸೂರು ಮಹಾರಾಜರಿಗೆ ತಾವು ಗೆದ್ದ ಪ್ರದೇಶಗಳನ್ನು ಬಿಟ್ಟುಕೊಟ್ಟು, ಉಸ್ತುವಾರಿಗೆ ಮೈಸೂರಿನಲ್ಲಿ ರೀಜೆಂಟನನ್ನು ನೇಮಿಸಿದರು. ಮಹಾರಾಜರಿಗೆ ಅಧಿಕಾರ ಬಂದ ನಂತರ ಪೂರ್ಣಯ್ಯ ಪುನಃ ಸಂಸ್ಥಾನದ ದಿವಾನರಾದರು. ಅವರು ತಮ್ಮ ಹರಿಕಾರರ ಮೂಲಕ ಪಾವಗಡ ಪ್ರದೇಶದ ಅಧಿಕಾರವನ್ನು ತಮ್ಮ ಅಧಿಕಾರಿಗಳಿಗೆ ಬಿಟ್ಟುಕೊಡುವಂತೆ ಪಾಳೇಗಾರರಿಗೆ ಆದೇಶ ಪತ್ರವನ್ನು ಕಳುಹಿಸಿದರು. ಈ ಆದೇಶವನ್ನು ಜಾರಿಗೊಳಿಸಲು ಪೂರ್ಣಯ್ಯ ಕರ್ನಲ್ ಟಾಲ್‌ಫ್ರೆ ಜೊತೆ ತಿಮ್ಮಾಜಿ ಪಂತಲುವಿನ ನೇತೃತ್ವದಲ್ಲಿ ಚಿಕ್ಕಸೈನ್ಯವನ್ನು ಕೂಡಾ ಕಳುಹಿಸಿದನು. ನಿರಾಶನಾದ ಪಾಳೇಗಾರ ಪೂರ್ಣಯ್ಯನವರ ಬಳಿ ಹೋದರೂ ಪ್ರಯೋಜನವಾಗಲಿಲ್ಲ. ಕೊನೆಗೆ ಅವನಿಗೆ ವಿಶ್ರಾಂತಿ ವೇತನ ನೀಡಲಾಯಿತು. ಮುಮ್ಮಡಿ ಕೃಷ್ಣರಾಜ ಒಡೆಯರ ಆದೇಶದಂತೆ ದಿವಾನ ಪೂರ್ಣಯ ಪಾವಗಡಕ್ಕೆ ಅಮಲ್ದಾರರನ್ನು ನೇಮಕ ಮಾಡುವುದರೊಂದಿಗೆ ಪಾವಗಡ ಸೀಮೆ ಮೈಸೂರು ಮಹಾರಾಜರ ಆಡಳಿತಕ್ಕೆ ಒಳಪಟ್ಟಿತು.

**ಇತರೆ ಸ್ಥಳೀಯ ನಾಯಕ ಮನೆತನಗಳು:** ಗುಬ್ಬಿ ತಾಲೂಕಿನ ಇಡುಗೂರನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳಿದ ಅಗ್ನಿವಣಿ ಕ್ಷತ್ರಿಯ ತಿಗುಳ ವಂಶಜರ ಇತಿಹಾಸವನ್ನು ಅರಿಯಬೇಕಿದೆ. ಇದೇ ರೀತಿ ವೈ.ಎನ್.ಹೊಸಕೋಟೆಯ ಯಲ್ಲಪ್ಪನಾಯಕನ ಇತಿಹಾಸ, ಪಾವಗಡ ತಾಲೂಕಿನ ಗುಜ್ಜನಾಡಿನ ನಾಯಕರ ಇತಿಹಾಸ, ಆನೆಬಿದ್ದಸರಿಯನ್ನಾಳುತ್ತಿದ್ದ ಚಿಕ್ಕವೀರಕೇತಯ್ಯನ ಇತಿಹಾಸ, ಮೂಗನಾಯಕನಕೋಟೆಯ ಇತಿಹಾಸ, ಭಸ್ಮಾಂಗಿ ಬೂದಿಬಸಪ್ಪನ ಇತಿಹಾಸ, ನಿಜಗಲ್ ಇತಿಹಾಸ, ಪುರವರ, ಕೊಡಗೇನಹಳ್ಳಿ, ತೆರಿಯೂರು, ಇಟಕೆ ದಿಬ್ಬನಹಳ್ಳಿ ಹೋಬಳಿಗಳನ್ನಾಳಿದ ತೆಲುಗು ಚೋಡರು ಮುಂತಾದ ಸಣ್ಣ ಪುಟ್ಟ ಸ್ಥಳೀಯ ನಾಯಕ ಮನೆತನಗಳ ಇತಿಹಾಸವಿನ್ನು ತಿಳಿಯಬೇಕಿದೆ.

**ಶಿರಾ ನವಾಬರು:** ಶಿರಾ ಪಟ್ಟಣ ಸ್ಥಾಪನೆಯಾಗುವುದಕ್ಕೆ ಮೊದಲು ಆ ಸ್ಥಳ ಸಂಪೂರ್ಣ ದಟ್ಟ ಅರಣ್ಯವಾಗಿತ್ತು. ಇದು ರತ್ನಗಿರಿ ಪಾಳೆಯಗಾರನಾಗಿದ್ದ ರಂಗಪ್ಪರಾಜನ ಅಧೀನದಲ್ಲಿತ್ತು. ಇವನು ಬೆಳೆಯುತ್ತಿದ್ದ ಜನಸಂಖ್ಯೆಗೆ ಅನುಗುಣವಾಗಿ ವಸತಿ ಕಲ್ಪಿಸಲು ಅರಣ್ಯವನ್ನು ಸಮತಟ್ಟು ಮಾಡಲು ಆದೇಶಿಸಿದನು. ನಂತರದಲ್ಲಿ ಅನೇಕ ಕುಟುಂಬಗಳು ಅಲ್ಲಿಗೆ ಸ್ಥಳಾಂತರಗೊಂಡು ತಾವರೆಕೆರೆ ಮತ್ತು ಬುಕ್ಕಾಪಟ್ಟಣ ಎಂಬ ಊರುಗಳು ನಿರ್ಮಾಣವಾದವು. ಆ ಸಮಯದಲ್ಲಿ ಗೌಳಿಗ ಜನಾಂಗಕ್ಕೆ ಸೇರಿದ ದೇವಣ ಮತ್ತು ಸಿರಿಯಪ್ಪ ಸೋದರರು ತಮ್ಮ ಆಕಳುಗಳ ಸಮೇತ ಈ ಪ್ರದೇಶಕ್ಕೆ ಬಂದರಂತೆ. ಇಲ್ಲಿ ತಮಗೆ ಸಾಕಷ್ಟು ಅನುಕೂಲವಿದ್ದುದರಿಂದ ಈಗಿನ ತೋಟ ಇರುವ ಎತ್ತರವಾದ ಪ್ರದೇಶವೆನಿಸಿದ ಬೂದಿದಿಬ್ಬ ಎಂದು ಕರೆಯುವ ಸ್ಥಳದಲ್ಲಿ ರೊಪ್ಪವನ್ನು ಹಾಕಿಕೊಂಡು ನೆಲೆನಿಂತರಂತೆ. ಕ್ರಮೇಣ ರತ್ನಗಿರಿ ಪಾಳೆಯಗಾರನ ಅಪ್ಪಣೆಯನ್ನು ಪಡೆದುಕೊಂಡು ದೇವಣಸಿರಾ ಎಂಬ ಹೆಸರಿನ ಗ್ರಾಮವನ್ನು ಸ್ಥಾಪಿಸಿದನಂತೆ. ತನಗೆ ಸೇರಿದ್ದ ಈ ಅರಣ್ಯಪ್ರದೇಶಕ್ಕೆ ಬೇಟೆಯಾಡಲು ಬಂದ ರತ್ನಗಿರಿ ಪಾಳೆಯಗಾರ ರಂಗಪ್ಪನಾಯಕನು "ದೇವಣಸಿರಾ"ದ ರಕ್ಷಣೆಯ ದೃಷ್ಟಿಯಿಂದ

ಆಯಕಟ್ಟಾದ ಸ್ಥಳದಲ್ಲಿ ಕೋಟೆ ಕಟ್ಟುವ ಮನಸ್ಸು ಮಾಡಿದನು. ಈ ಸೋದರರ ಸಹಾಯವನ್ನು ಪಡೆದುಕೊಂಡು ಕೋಟೆಯ ಕೆಲಸ ಆರಂಭಿಸಿದನು. ಕೋಟೆಯ ನಿರ್ಮಾಣ ಪ್ರಗತಿಯಲ್ಲಿದ್ದು ಸಮಯದಲ್ಲಿಯೇ ಕೋಟೆಯು ಬಿಜಾಪುರದ ದಾಳಿಗೆ ಒಳಗಾಗಬೇಕಾದ ಪರಿಸ್ಥಿತಿ ನಿರ್ಮಾಣವಾಯಿತು.

**ರಣದುಲ್ಲಾಖಾನನ ದಾಳಿ ಕ್ರಿ.ಶ. ೧೬೩೮:** ಇಕ್ಕೇರಿಯಿಂದ ಕೆಳದಿಯ ನಾಯಕರು, ಶ್ರೀರಂಗಪಟ್ಟದಿಂದ ಮೈಸೂರು ಒಡೆಯರು, ಬಿಜಾಪುರದಿಂದ ಆದಿಲ್ ಶಾಹಿಗಳು ಆಳ್ವಿಕೆ ನಡೆಸುತ್ತಿದ್ದರು. ಶಿರಾವು ಮೈಸೂರು ಮತ್ತು ವಿಜಾಪುರ ರಾಜ್ಯಗಳ ಮಧ್ಯಭಾಗದಲ್ಲಿದ್ದು ಆಯಕಟ್ಟಿನ ಪ್ರದೇಶವಾಗಿತ್ತು. ಬಿಜಾಪುರವನ್ನು ಕ್ರಿ.ಶ. ೧೬೨೬ ರಿಂದ ೧೬೫೬ರ ವರೆವಿಗೆ ಆಳಿದ ಮಹ್ಮದ್ ಆದಿಲ್‌ಶಾನ ದಂಡನಾಯಕನೇ ರಣದುಲ್ಲಾಖಾನ್. ಇವನ ದಾಳಿಗೆ ಬಲಿಯಾದುದು ಇಕ್ಕೇರಿ. ಇದರಿಂದ ಉತ್ತೇಜಿತನಾದ ಸುಲ್ತಾನ ಮೈಸೂರನ್ನು ಗೆಲ್ಲಲು ಖಾನನನ್ನು ಕ್ರಿ.ಶ. ೧೬೩೮ರಲ್ಲಿ ಕಳುಹಿಸಿದನೆಂದು ತಿಳಿದುಬರುತ್ತದೆ. ಈ ದಂಡಯಾತ್ರೆಗೆ ರಣದುಲ್ಲಾಖಾನನ ಜೊತೆಗೆ ಶಿವಾಜಿಯ ತಂದೆ ಷಹಾಜಿಯನ್ನು ದ್ವಿತೀಯ ಸೇನಾಧಿಪತಿಯಾಗಿ ಕಳುಹಿಸಿದ್ದು ಗೆದ್ದ ಪ್ರದೇಶಗಳಲ್ಲೊಂದನ್ನು ಜಾಗೀರು ಕೊಡುವ ವಾಗ್ದಾನದ ಮೇಲೆ ಎಂದು ಹೇಳಲಾಗಿದೆ. ಇದರಿಂದ ಷಹಾಜಿಯು ಖಾನನ ಜೊತೆಗೂಡಿ ೫೦ ಸಾವಿರ ಕುದುರೆ, ೫೦೦ ಆನೆ, ನಾಲ್ಕು ಲಕ್ಷ ಕಾಲಾಳು ಸಮೇತ ದಕ್ಷಿಣದತ್ತ ಹೊರಟನು. ಶಿರಾಕ್ಕೆ ಉತ್ತರದಲ್ಲಿದ್ದ ರಾಜ್ಯಗಳನ್ನು ಧೂಳೀಪಟ ಮಾಡಿದ ಖಾನನು ಅತ್ಯುತ್ಸಾಹದಿಂದ ಮುನ್ನುಗ್ಗಿದನು. ಹನುಮನು, ಖಾನನಿಗೆ ಶಿರಾದ ಮೇಲೆ ದಾಳಿ ಮಾಡುವಂತೆ ಪ್ರೇರೇಪಿಸಿದನು. ಕೆಂಗಹನುಮ ಬಸವಾಪಟ್ಟಣದ ಹನುಮಪ್ಪ ನಾಯಕ ಆಗಿರಬಹುದು. ಇವನು ರತ್ನಗಿರಿ ಪಾಳೆಗಾರರಿಂದ ತನಗಾದ ಅವಮಾನದ ಸೇಡನ್ನು ತೀರಿಸಿಕೊಳ್ಳಲು ಖಾನನನ್ನು ಶಿರಾದ ಮೇಲೆ ದಾಳಿ ಮಾಡಲು ಆಹ್ವಾನಿಸಿದನು ಎಂದು ಬಿ.ಎಲ್.ರೈಸ್ ಮತ್ತು ಹಯವದನ ರಾಯರು ಅಭಿಪ್ರಾಯಪಡುತ್ತಾರೆ. ಕಾರಣವೇನೇ ಇರಲಿ ಸೇನಾಪತಿ ರಣದುಲ್ಲಾಖಾನನು ಕೆಂಗಹನುಮನೊಡನೆ ಶಿರಾ ಕೋಟೆಗೆ ಮುತ್ತಿಗೆ ಹಾಕಿದನು. ಆ ಕೋಟೆಯನ್ನು ಸ್ವಾಧೀನದಲ್ಲಿಟ್ಟುಕೊಂಡಿದ್ದ ರತ್ನಗಿರಿಯ ಪಾಳೆಯಗಾರ ರಂಗಪ್ಪರಾಜನು ಬಲವಾಗಿ ಪ್ರತಿಭಟಿಸಿದನು. ಯುದ್ಧ ಬಹಳ ದಿನಗಳ ಕಾಲ ಮುಂದುವರಿದು, ಖಾನನು ಶಿರಾವನ್ನು ಲೂಟಿ ಮಾಡಿ ರಂಗಪ್ಪನನ್ನು ಕೊಂದು ಹಾಕಿದನು. ಶಿರಾ ಮತ್ತು ಅದರ ಅವಲಂಬಿ ಪ್ರಾಂತವನ್ನು ಗೆದ್ದು 'ಮಲ್ಲೀಕ್ ರಿಹಾನ್ ಹುಸೇನ್' ಎಂಬುವನನ್ನು ಈ ಭಾಗಕ್ಕೆ ಸುಬೇದಾರನನ್ನಾಗಿ ನೇಮಕ ಮಾಡಿದನು.

**ಮಲ್ಲಿಕ್ ರಿಹಾನ್ (೧೬೩೮–೧೬೫೨):** ಶಿರಾವನ್ನು ಪೂರ್ಣ ಹತೋಟಿಗೆ ತೆಗೆದುಕೊಂಡು ಮಲ್ಲಿಕ್ ರಿಹಾನ್‌ನನ್ನು ಅದರ ಸುಬೇದಾರನನ್ನಾಗಿ ನೇಮಿಸಲಾಯಿತು. ಬಿಜಾಪುರದ ಹಿಡಿತವನ್ನು ಈ ಪ್ರದೇಶದಲ್ಲಿ ಭದ್ರಪಡಿಸುವ ಜವಾಬ್ದಾರಿಯನ್ನು ಆತನಿಗೆ ನೀಡಲಾಯಿತು. ಅಲ್ಲದೇ, ಸ್ಥಳೀಯ ಸಾಮಂತರಿಂದ ಕಪ್ಪಕಾಣಿಕೆಗಳನ್ನು ಸರಿಯಾಗಿ ವಸೂಲಿ ಮಾಡುವುದರ ಜೊತೆಗೆ ಅವಿಧೇಯರನ್ನು ಬಗ್ಗುಬಡಿಯುವ ಹೊಣೆಗಾರಿಕೆಯನ್ನೂ ನೀಡಲಾಯಿತು.

ಮಲ್ಲಿಕ್ ರಿಹಾನ್‌ನ ಸುಬೇದಾರಿಕೆಯಲ್ಲಿ ಶಿರಾ ವೈಭವದಿಂದ ಕೂಡಿತ್ತು. ದಕ್ಷಿಣ ಕರ್ನಾಟಕದ ಪಾಳೆಯಗಾರರು ಯಾರೂ ತಮ್ಮ ಸ್ವಾತಂತ್ರ್ಯವನ್ನು ಕಳೆದುಕೊಂಡು ಆದಿಲ್ ಷಾಹಿ ಆಡಳಿತವನ್ನು ಸ್ವೀಕರಿಸಲು ಸಿದ್ಧರಾಗಿರಲಿಲ್ಲ. ಕೆಲವರು ಅವನ ವಿರುದ್ಧ ಬಹಿರಂಗವಾಗಿಯೇ ಕತ್ತಿಯನ್ನು ಹಿಡಿದರು. ಕೆಲವರು ದಕ್ಷಿಣ ಕರ್ನಾಟಕದ ಅವನ ಆಕ್ರಮಣಗಳಲ್ಲಿ ಅವನ ಜೊತೆಗೂಡಿದ್ದರೂ ಆಂತರಿಕವಾಗಿ ಹಗೆತನವನ್ನು ಹೊಂದಿದ್ದು ಬಿಜಾಪುರದ ಹಿಡಿತದಿಂದ ತಪ್ಪಿಸಿಕೊಳ್ಳಲು ಅವಕಾಶಕ್ಕಾಗಿ ಸದಾ ಕಾಯುತ್ತಿದ್ದರು. ಮಲ್ಲಿಕ್ ರಿಹಾನನು ಸದಾಕಾಲ ದಂಗೆಯೆದ್ದ, ಪಿತೂರಿ ಮಾಡುತ್ತಿದ್ದ ನಾಯಕರು ಮತ್ತು ಪಾಳೆಯಗಾರರನ್ನು ಬಗ್ಗುಬಡಿಯುವಲ್ಲಿ ತನ್ನ ಸಾಹಸವನ್ನು ಮೆರೆದನು. ಈ ಯುದ್ಧಗಳಿಂದಾಗಿ ತುಮಕೂರು, ಚಿಕ್ಕನಾಯಕಹಳ್ಳಿ, ಶಿವಗಂಗಾ, ಕುಣಿಗಲ್, ಬೆಂಗಳೂರು, ದೊಡ್ಡಬಳ್ಳಾಪುರ, ಹೊಸಕೋಟೆ, ಕೋಲಾರ ಮತ್ತು ಚನ್ನಪಟ್ಟಣಗಳನ್ನು ಒಳಗೊಂಡ ವಿಶಾಲ ಪ್ರದೇಶವನ್ನು ಬಿಜಾಪುರಕ್ಕೆ ಸೇರಿಸುವಲ್ಲಿ ಸಮರ್ಥನಾದನು. ರಣದುಲ್ಲಾಖಾನನು ಶ್ರೀರಂಗಪಟ್ಟಣವನ್ನು ಆಕ್ರಮಿಸಿದಾಗ ಈತನೂ ಸಹ ಹೋರಾಡಿದನು. ದಕ್ಷಿಣ ಕರ್ನಾಟಕದ ಎಲ್ಲಾ ರಾಜರಿಗಿಂತ ಕಂಠೀರವ ನರಸಿಂಹರಾಜ ಒಡೆಯರು ಹೆಚ್ಚು ಪ್ರಬಲರಾಗಿದ್ದು ನೆರೆಹೊರೆಯ ರಾಜ್ಯಗಳಿಗೆ ಮೈಸೂರಿನ ಸೈನ್ಯ ಸಿಂಹಸ್ವಪ್ನವಾಗಿತ್ತು. ಬಿಜಾಪುರ ಸೈನ್ಯದ ಯಾವ ತಂತ್ರಗಳಿಗೂ ಬಗ್ಗದೆ ಬಲವಾಗಿ ಎದುರಿಸಿತು. ಮೈಸೂರು ಸೈನ್ಯದ ರಾತ್ರಿ ಆಕ್ರಮಣಗಳಿಂದ ಬಿಜಾಪುರದ ಸೇನಾನಾಯಕರು ಚಕಿತರಾಗಿ ಒಪ್ಪಂದಕ್ಕೆ ಬರಬೇಕಾಯಿತು. ಒಡೆಯರಿಂದ ಸಣ್ಣ ಮೊತ್ತವನ್ನು ಸ್ವೀಕರಿಸಿ ತೃಪ್ತರಾಗಬೇಕಾಯಿತು. ಹಯವದನರಾವ್ ಪ್ರಕಾರ ಮೈಸೂರು ರಾಜನು ಇಪ್ಪತ್ತು ಲಕ್ಷ ಹಣವನ್ನು

ನೀಡಬೇಕಾಯಿತು. ಅಂದಿನ ಮೈಸೂರು ರಾಜ್ಯದ ವಿಸ್ತಾರವನ್ನಾಗಲೀ, ಅಲ್ಪಸಂಪನ್ಮೂಲವನ್ನಾಗಲೀ ಗಮನಿಸಿದಾಗ ಇದು ಕಹಿಯಾಗಿಯೇ ಇತ್ತೆಂದು ಭಾವಿಸಬೇಕಾಗುತ್ತದೆ. ಕಾವೇರಿ ನದಿಯಿಂದ ಉತ್ತರಕ್ಕಿದ್ದ ಭಾಗವನ್ನು ಬಿಜಾಪುರಕ್ಕೆ ಸೇರಿದ್ದೆಂದು ಒಪ್ಪಿಕೊಳ್ಳಲೇಬೇಕಾಯಿತು. ಇದಾದ ಕೂಡಲೆ ಷಾಹಜಿಯನ್ನು ಬೆಂಗಳೂರಿಗೆ ರಾಜ್ಯಪಾಲನನ್ನಾಗಿ ನೇಮಿಸಿ, ಶಿರಾವನ್ನು ಮಲ್ಲಿಕ್ ರಿಹಾನನ ಸುಬೇದಾರಿಕೆಗೆ ಬಿಟ್ಟು ರಣದುಲ್ಲಾಖಾನನು ಬಿಜಾಪುರಕ್ಕೆ ಮರಳಿದನು.

ರಣದುಲ್ಲಾಖಾನನು ಹಿಂತಿರುಗುತ್ತಿದ್ದಂತೆ ಮೈಸೂರಿನ ರಾಜನು ಒಪ್ಪಂದವನ್ನು ಮುರಿದು ಬಿಜಾಪುರಕ್ಕೆ ಕಪ್ಪವನ್ನು ಕೊಡಲು ನಿರಾಕರಿಸಿ, ಕಾವೇರಿಯ ಉತ್ತರಕ್ಕಿದ್ದ ನೊಣವಿನಕೆರೆ ಮತ್ತು ತುರುವೇಕೆರೆಯನ್ನು ವಶಪಡಿಸಿಕೊಳ್ಳುವ ಮೂಲಕ ಸ್ಪಷ್ಟವಾಗಿ ಒಪ್ಪಂದವನ್ನು ಅಲ್ಲಗಳೆದನು. ಇದು ತಮ್ಮ ಪ್ರದೇಶವನ್ನು ವಶಪಡಿಸಿಕೊಂಡಂತೆ ಎಂದು ವಿವರಿಸಿ ಮಲ್ಲಿಕ್ ರಿಹಾನ್‌ನ ನೇತೃತ್ವದಲ್ಲಿ ಬಿಜಾಪುರದ ಸೈನ್ಯ ದಕ್ಷಿಣದಲ್ಲಿ ಪುನಃ ಕಾಣಿಸಿಕೊಂಡಿತು. ಈ ಬಾರಿ ಶ್ರೀರಂಗಪಟ್ಟಣವನ್ನು ಪೂರ್ಣವಾಗಿ ವಶಪಡಿಸಿಕೊಳ್ಳಲು ನಿರ್ಧರಿಸಿತು. ಬಿಜಾಪುರದ ಮತ್ತೊಬ್ಬ ದಂಡನಾಯಕ ಮುಸ್ತಾಫಖಾನ್ ಕ್ರಿ.ಶ. ೧೬೪೦ರಲ್ಲಿ ದಂಡಯಾತ್ರೆಯನ್ನು ಕೈಗೊಂಡನು. ಆದರೆ ಎಲ್ಲವೂ ವ್ಯರ್ಥವಾಗಿ ಬಿಜಾಪುರದ ಸೈನ್ಯ ಸಾಕಷ್ಟು ನಷ್ಟವನ್ನನುಭವಿಸಿತು ಎಂಬ ಅಭಿಪ್ರಾಯವಿದೆ. ಆದರೆ ಪರ್ಷಿಯನ್ ಮತ್ತು ಇಂಗ್ಲೀಷ್ ದಾಖಲೆಗಳಲ್ಲಿ ಖಾನ್ ಸೋಲಿಸಲಿಲ್ಲವೆಂದು ಉಲ್ಲೇಖವಿದೆ. ಕಂಠೀರವ ನರಸಿಂಹರಾಜ ಒಡೆಯರ್ ಇದನ್ನೇ ಬಳಸಿಕೊಂಡು ಮೇ, ೧೬೪೨ರಲ್ಲಿ ತುರುವೇಕೆರೆಯನ್ನು ಅಫಸಲ್‌ಖಾನನಿಂದ ವಶಪಡಿಸಿಕೊಂಡರು. ದಕ್ಷಿಣ ಕರ್ನಾಟಕದಲ್ಲಿ ಬಿಜಾಪುರದ ಅಸ್ತಿತ್ವಕ್ಕೆ ಬಲವಾದ ಪೆಟ್ಟು ಬಿದ್ದಂತಾಯಿತು. ಅವರು ಮೈಸೂರಿನ ಸೈನ್ಯಕ್ಕಿಂತ ರಾಜಕೀಯವಾಗಿ, ಸೈನಿಕವಾಗಿ ಪ್ರಬಲರೆಂದು ಸಾಬೀತುಪಡಿಸದೆ ಅವರಿಗೆ ಅಲ್ಲಿ ಉಳಿಗಾಲವಿಲ್ಲದಂತಾಯಿತು. ಆದ್ದರಿಂದ ೧೬೪೪ರಲ್ಲಿ ಹೊಳೇನರಸೀಪುರದ ಆಡಳಿತಗಾರನಿಗೆ ಮೈಸೂರಿಗೆ ಕಪ್ಪ ಕೊಡದಂತೆ ಕುಮ್ಮಕ್ಕು ನೀಡಿದನು. ಮೈಸೂರು ಸೈನ್ಯ ಬಾಕಿ ವಸೂಲಿಗೆ ಹೋದಾಗ ಮಲ್ಲಿಕ್ ರಿಹಾನ್ ಇತರ ಬಿಜಾಪುರದ ಸೈನ್ಯದೊಂದಿಗೆ ಹೊಳೇನರಸೀಪುರದ ರಕ್ಷಣೆಗೆ ಹೋದನು. ಹೀಗೆಯೇ ಪಿರಿಯಾಪಟ್ಟಣದ ಪಾಳೆಯಗಾರನ ಬೆಂಬಲಕ್ಕೂ ೮೦೦೦ ಕುದುರೆ, ೧೫೦೦೦ ಕಾಲಾಳುಗಳೊಂದಿಗೆ ಹೋಗಿ ಕಂಠೀರವ ನರಸಿಂಹರಾಜ ಒಡೆಯರನ್ನು ಎದುರಿಸಿದನು. ಹೀಗೆ ದಕ್ಷಿಣ ಕರ್ನಾಟಕದ ಪಾಳೆಯಗಾರರನ್ನು ಎತ್ತಿಕಟ್ಟುವ ಕುತಂತ್ರದಿಂದ ಯಾವ ಲಾಭವೂ ದೊರೆಯಲಿಲ್ಲ. ಈ ಎಲ್ಲಾ ಹೋರಾಟಗಳಲ್ಲಿ ಮೈಸೂರಿನ ರಾಜನಿಗೆ ಜಯ ಲಭಿಸಿತು. ಬಿಜಾಪುರ ಸೈನ್ಯದ ಗೌರವವೂ ಮಣ್ಣುಪಾಲಾಯಿತು. ತತ್ಪರಿಣಾಮವಾಗಿ, ಮಹಮದ್ ಆದಿಲ್‌ಷಾನು ಶ್ರೀರಂಗಪಟ್ಟಣವನ್ನು ದುರ್ಬಲಗೊಳಿಸಿ ನೊಣವಿನಕೆರೆ ಮತ್ತು ತುರುವೇಕೆರೆಗಳನ್ನು ವಶಪಡಿಸಿಕೊಳ್ಳಲು ಆದೇಶಿಸಿ ಮುಸ್ತಾಫ ಖಾನನನ್ನು ಕಳುಹಿಸಿದನು. ಕಂಠೀರವ ನರಸಿಂಹರಾಜ ಒಡೆಯರ್ ತನ್ನ ಸೈನ್ಯವನ್ನು ಒಗ್ಗೂಡಿಸಿ ಸ್ವತಃ ಯುದ್ಧಕ್ಕೆ ಎಲ್ಲ ಸಿದ್ಧತೆಗಳನ್ನು ನಡೆಸಿ, ಬಿಜಾಪುರದ ಸೈನ್ಯವನ್ನು ಎದುರಿಸಿ ಮುಸ್ತಾಫನಿಗೆ ವಹಿಸಿದ ಕಾರ್ಯವನ್ನು ನಿರ್ವಹಿಸಲು ಸಾಧ್ಯವಾಗಲಿಲ್ಲ. ತನ್ನ ಮರ್ಯಾದೆ ಕಾಯ್ದುಕೊಳ್ಳಲು ಸೈನ್ಯವನ್ನು ಪೂರ್ವದ ಕಡೆ ತಿರುಗಿಸಿ ಪೆನುಗೊಂಡದ ಶ್ರೀರಂಗ, ಮಧುರೆಯ ನಾಯಕ, ತಂಜಾವೂರು ಮತ್ತು ಜಿಂಜಿಗಳ ಮೇಲೆ ಹೋರಾಡಿದನು. ಈ ಹೋರಾಟಗಳಲ್ಲಿ ಮಲ್ಲಿಕ್ ರಿಹಾನ್ ತನ್ನ ಶೌರ್ಯವನ್ನು ಮೆರೆದನು. ಆದರೆ ಮೈಸೂರಿನ ವಿರುದ್ಧ ಯುದ್ಧ ವ್ಯರ್ಥವೆಂದು ಸಾಬೀತಾಗಿದ್ದರಿಂದ ಸಂಧಾನ ಮಾರ್ಗಗಳನ್ನು ಹಿಡಿಯಲು ನಿರ್ಧರಿಸಲಾಯಿತು.

ಮಲ್ಲಿಕ್ ರಿಹಾನನು ತಿರುಪತ್ತೂರು ಕೋಟೆ, ಕಾವೇರಿ ಪಟ್ಟಣಂ, ರಾಯದುರ್ಗ, ಕನಕಗಿರಿ, ರತ್ನಗಿರಿ, ಅರ್ಜುನಕೋಟೆ, ಡಾಲಿನ ಕೋಟೆಗಳ ಆಕ್ರಮಣದಲ್ಲಿ ಪ್ರಮುಖ ಪಾತ್ರ ವಹಿಸಿದನು. ಅಷ್ಟೇ ಅಲ್ಲದೆ ೧೬೪೮ರ ಅಕ್ಟೋಬರ್, ನವೆಂಬರ್ ಮಾಹೆಯಲ್ಲಿ ನಡೆದ ಜಿಂಜಿಯ ಆಕ್ರಮಣದಲ್ಲೂ ಅವನ ಕಾರ್ಯಾಚರಣೆ ಎದ್ದು ಕಾಣುವಂತಿತ್ತು. ಆಕ್ರಮಣ ಮುಂದುವರಿದಿದ್ದಂತೆಯೇ ಸೇನಾದಂಡನಾಯಕ ಮುಸ್ತಾಫಖಾನನು ಇದ್ದಕ್ಕಿದ್ದಂತೆ ಮರಣ ಹೊಂದಿದ್ದರಿಂದ ಬಿಜಾಪುರದ ಸೈನ್ಯ ದಿಕ್ಕೆಟ್ಟಿತು. ಕುತುಬ್ ಷಾಹಿಗಳು ಈ ಹಿಂದೆಯೇ ಮುಸ್ತಾಫನೊಡನೆ ಜಿಂಜಿಯ ಆಕ್ರಮಣದಲ್ಲಿ ದೊರೆತ ಫಲವನ್ನು ಹಂಚಿಕೊಳ್ಳಲು ನಿರ್ಧರಿಸಿದ್ದರು. ಆದರೆ ಈಗ ಪೂರ್ಣ ಲಾಭವನ್ನು ತಾವೇ ಪಡೆಯುವ ಹಂಚಿಕೆ ಹೂಡಿದ್ದು ಸೈನ್ಯಕ್ಕೆ ಅಸಮಾಧಾನವಾಗಿತ್ತು. ಮಲ್ಲಿಕ್ ರಿಹಾನನು ಈ ಯೋಜನೆ ಮುಂದುವರಿಯಲು ಅವಕಾಶ ನೀಡಲಿಲ್ಲ. ನಾಯಕನಿಲ್ಲದ ಸೈನ್ಯದ ನಾಯಕತ್ವವನ್ನು ತನ್ನ ಕೈಗೆತ್ತಿಕೊಂಡ ಮೀರ್ ಸಮ್ರಾನು ಹಿಂತಿರುಗುವಂತೆ ಮಾಡಿದನು. ಮಹಮದ್ ಆದಿಲ್ ಷಾಹನು ಖಾನ್ ಮಹಮದ್‌ನನ್ನು ದಂಡನಾಯಕನಾಗಿ ನೇಮಿಸಿದನು. ತದನಂತರದಲ್ಲಿ ಬಿಜಾಪುರದ ಸೈನ್ಯ ೧೬೪೯ರಲ್ಲಿ ಜಿಂಜಿಯನ್ನು ಪೂರ್ಣವಾಗಿ ವಶಪಡಿಸಿಕೊಂಡಿತು.

ಆದಿಲ್‌ಷಾನ ದಕ್ಷಿಣ ಕರ್ನಾಟಕದ ಆಕ್ರಮಣದಲ್ಲಿ ಅಷ್ಟೆಲ್ಲಾ ಸೇವೆಯನ್ನು ಸಲ್ಲಿಸಿದ ಮಲ್ಲಿಕ್ ರಿಹಾನ್ ಜೀವನದ ಕಡೆಯಲ್ಲಿ ಬಿಜಾಪುರದ ವಿರುದ್ಧ ದಂಗೆಯೆದ್ದನು. ಇದಕ್ಕೆ ಕೆಲವು ತಾತ್ಕಾಲಿಕ ಕಾರಣಗಳನ್ನು ಊಹಿಸುವುದಾದರೆ, ಮೊದಲನೆಯದಾಗಿ ಮೈಸೂರಿನೊಡನೆ ಅವನ ವ್ಯವಹಾರ, ಮೈಸೂರನ್ನು ಬಗ್ಗುಬಡಿಯುವ ಎಲ್ಲಾ ಯೋಜನೆಗಳ ವಿಫಲತೆ ಅನುಮಾನವನ್ನು ಮೂಡಿಸಿರಬೇಕು. ಆದಿಲ್‌ಷಾನು ಅವನ ನಿಷ್ಠೆಯನ್ನು ಅನುಮಾನಿಸಿರಬೇಕು. ಎರಡನೆಯದಾಗಿ ಮಹಮದ್‌ನನ್ನು ಸೇನಾಧಿಪತಿಯನ್ನಾಗಿ ನೇಮಿಸಿದಾಗ, ತನ್ನನ್ನೇ ಏಕೆ ಮಾಡಬಾರದಿತ್ತೆಂದು ಮಲ್ಲಿಕ್ ರಿಹಾನನಿಗೆ ಬೇಸರವಾಗಿರಬೇಕು. ಮೂರನೆಯದಾಗಿ ಆಂಬರ್ ಕಾಲಾ ಎಂಬ ರಿಹಾನನ ನಂಬಿಕೆಯ ಅಧಿಕಾರಿಯ ಕೊಲೆಯ ಹಿಂದೆ ಮಹಮದ್ ಆದಿಲಾಷಾನ ಕೈವಾಡವಿರಬೇಕೆಂಬ ಅನುಮಾನ ಮತ್ತು ಅಸಮಾಧಾನ ರಿಹಾನನಲ್ಲಿ ತುಂಬಿತ್ತು. ಈ ಮೂರು ಕಾರಣಗಳಲ್ಲದೆ ಕೆಲವು ಆಂತರಿಕ ಬೆಳವಣಿಗೆಗಳಿಂದ ಅಸಮಾಧಾನಗೊಂಡ ರಿಹಾನನು ದಂಗೆಯೆದ್ದಿರಬೇಕು. ಜಿಂಜಿಯ ಆಕ್ರಮಣ ಮುಂದುವರಿದಿದ್ದಾಗಲೇ ಈತನು ಶಿರಾಗೆ ಹಿಂತಿರುಗಿರಬೇಕು. ಇದೇ ಸಂದರ್ಭದಲ್ಲಿ ಆಂಬರ್ ಕಾಳ ತನ್ನ ಒಡೆಯನೊಡನೆ ಹಿಂತಿರುಗಲು ಅನುಮತಿಯನ್ನು ಕೇಳಲು ಹೋದಾಗ ಕೊಲೆಗೀಡಾದನು. ಮಲ್ಲಿಕ್ ರಿಹಾನನು ದಂಗೆಯೆದ್ದಾಗ ಅವನ ಗಂಡುಮಕ್ಕಳು ಮತ್ತು ಅತೃಪ್ತರಾದ ಬಿಜಾಪುರದ ಅಧಿಕಾರಿಗಳು ಅವನೊಡನೆ ಸೇರಿಕೊಂಡರು. ಮಹಮದ್ ಆದಿಲ್‌ಷಾನು ಖಾನ್ ಮಹಮದನಿಗೆ ದಂಗೆಯನ್ನು ಹತ್ತಿಕ್ಕಲು ಸೂಚಿಸಿದನು. ಈ ನಡುವೆ ಮಲ್ಲಿಕ್ ರಿಹಾನನು ಮೈಸೂರು ರಾಜರೊಡನೆ ಸ್ನೇಹ ಬೆಳೆಸಿಕೊಂಡು ಮತ್ತಷ್ಟು ಪ್ರಬಲನಾದನು. ಈತನು ಬಿಜಾಪುರಕ್ಕೆ ಶರಣಾಗದೆ ೧೬೫೧ರಲ್ಲಿ ಮರಣ ಹೊಂದಿದನು. ಶಿರಾದಲ್ಲಿ ಕಲ್ಲಿನ ಸಮಾಧಿಯನ್ನು ನಿರ್ಮಿಸಿ ಅವನನ್ನು ಅದರಲ್ಲಿ ಹೂಳಲಾಯಿತು. ಅದರ ಮೇಲೆ ಈತನು ಶಿರಾಕ್ಕೆ ಸೌಂದರ್ಯ ಮತ್ತು ವೈಭವವನ್ನು ತಂದನೆಂದು ತಿಳಿಸುವ ಶಾಸನವನ್ನು ಕೆತ್ತಲಾಗಿದೆ. ೧೬೫೩ರವರೆಗೆ ಆತನ ಮಕ್ಕಳು ಬಿಜಾಪುರದ ಶಕ್ತಿಯನ್ನು ತಡೆಹಿಡಿದಿದ್ದರು. ಮುಂದೆ ಶಿರಾ ೧೬೮೬ರಲ್ಲಿ ಮೊಘಲರ ವಶವಾಗಿ ಅವರ ಸಾಮ್ರಾಜ್ಯದಲ್ಲೊಂದು ಪ್ರಾಂತವಾಗಿ ಮಾರ್ಪಟ್ಟಿತು.

ಹೀಗೆ ಶಿರಾ ಮತ್ತು ರತ್ನಗಿರಿಗಳನ್ನು ಸ್ವಾಧೀನಪಡಿಸಿಕೊಂಡು ಆಡಳಿತ ನಡೆಸುತ್ತಿದ್ದ ಕಾಲದಲ್ಲಿ ಸುಬೇದಾರನಾದ ಖಾಸಿಂಖಾನನಿಗೂ ರತ್ನಗಿರಿಯವರಿಗೂ ರಾಜಿ ಮಾಡಿಸಿ ರಾಜ್ಯವನ್ನು ಮೂರು ಭಾಗ ಮಾಡಿ ಎರಡು ಭಾಗ ಶಿರಾದವರಿಗೂ ಉಳಿದುದನ್ನು ರತ್ನಗಿರಿಯವರಿಗೂ ಹಂಚಿಕೊಟ್ಟು ಶಿರಾದಲ್ಲಿ ಮುಸಲ್ಮಾನರ ಆಡಳಿತವನ್ನು ಭದ್ರಗೊಳಿಸಿದನು. ರತ್ನಗಿರಿಯ ಪಾಳೆಯಗಾರ ಅಪೂರ್ಣಗೊಳಿಸಿದ್ದ ಕೋಟೆಯನ್ನು ಪೂರ್ಣಗೊಳಿಸಿ ಪಟ್ಟಣದ ಸುತ್ತ ಕೋಟೆಯನ್ನು ಕಟ್ಟಿಸಿ, ಈ ಎಲ್ಲಾ ಪ್ರದೇಶಕ್ಕೆ ಶಿವಾಜಿಯ ತಂದೆ ಷಹಾಜಿಯನ್ನು ಜಾಗೀರ್‌ದಾರನನ್ನಾಗಿ ಮಾಡಿದಂತೆ ತೋರುತ್ತದೆ.

**ಖಾಸಿಂಖಾನ್ (೧೬೮೭–೯೮):** ಮೊಗಲ್ ಚಕ್ರವರ್ತಿ ಔರಂಗಜೇಬನು ದಕ್ಷಿಣ ಭಾರತದ ಮೇಲೆ ದಾಳಿ ನಡೆಸಿದಂತಹ ಸಮಯದಲ್ಲಿ ಗೋಲ್ಕಂಡ ಮತ್ತು ಬಿಜಾಪುರಗಳು ಮೊಘಲರಿಗೆ ಕೈವಶವಾದವು. ಬಿಜಾಪುರಕ್ಕೆ ಅಧೀನವಾಗಿದ್ದ ಪ್ರದೇಶಗಳೆಲ್ಲವೂ ಮೊಗಲ್ ಸಾಮ್ರಾಟನ ಅಧೀನಕ್ಕೆ ಬಂದವು. ಈ ಪ್ರದೇಶಗಳ ಆಡಳಿತ ನಿರ್ವಹಣೆಗೆ ಕಿಲ್ಲೆದಾರರು, ಭಕ್ಷಿಗಳು, ಮನ್‌ಸಬ್‌ದಾರರು, ಸುಬೇದಾರರು, ದೇಸಾಯರು ಎಂಬ ಹೊಸ ಅಧಿಕಾರಿಗಳನ್ನು ನೇಮಿಸಲಾಯಿತು. ಇಂತಹ ಸಮಯದಲ್ಲಿ ಬಸವಾಪಟ್ಟಣ, ಬೂದಿಹಾಳು, ಶಿರಾ, ಪೆನುಗೊಂಡ, ಕೋಲಾರ, ಹೊಸಕೋಟೆ, ದೊಡ್ಡಬಳ್ಳಾಪುರ ಮುಂತಾದ ಏಳು ಪರಗಣಗಳಿಗೆ ಶಿರಾವನ್ನು ಆಡಳಿತ ಕೇಂದ್ರವನ್ನಾಗಿ ಮಾಡಿ ಖಾಸಿಂಖಾನ್ ಎಂಬುವವನನ್ನು ಸುಬೇದಾರನನ್ನಾಗಿ ನೇಮಿಸಲಾಯಿತು. ಹರಪನಹಳ್ಳಿ, ಕುಂದುರ್ಪಿ, ಆನೆಗೊಂದಿ, ಬಿದನೂರು, ಚಿತ್ರದುರ್ಗ, ಮೈಸೂರು ಎಂಬ ಆಶ್ರಿತ ರಾಜ್ಯಗಳಿಂದ ಶಿರಾವು ಬೆಳಗುತ್ತಾ ಪ್ರಸಿದ್ಧಿಗೆ ಬಂದಿತು. ದಕ್ಷ ಆಡಳಿತಗಾರನಾಗಿದ್ದ ಖಾಸಿಂಖಾನನು ಶಿರಾವನ್ನು ಮೊಗಲರ ಒಂದು ಪ್ರಮುಖ ಕೇಂದ್ರ ಹಾಗೂ ಮಿಲಿಟರಿ ನೆಲೆಯನ್ನಾಗಿ ಪರಿವರ್ತಿಸಲು ಶ್ರಮಪಟ್ಟನು. 'ಫೌಜುದಾರಿ ದಿವಾನ್' ಎಂಬ ಬಿರುದು ಗಳಿಸಿದ್ದ ಅವನು ರಾಜ್ಯದಲ್ಲಿ ಮೊಗಲ್ ಕಂದಾಯ ಪದ್ಧತಿಯನ್ನು ಜಾರಿಗೆ ತಂದು, ಜಾಮಿಯಾ ಮಸೀದಿಯನ್ನು ನಿರ್ಮಿಸಿದನು. ಇದೇ ಸಂದರ್ಭದಲ್ಲಿ ಮರಾಠರ ಸಂತೋಜಿ ಘೋರ್ಪಡೆಯು ೨೦ ಸಾವಿರ ಅಶ್ವದಳದೊಡನೆ ಚಿತ್ರದುರ್ಗದ ಕಡೆ ಬಂದನು. ಶಿರಾದ ಖಾಸಿಂಖಾನನೂ ಕೂಡಾ ತನ್ನ ಪ್ರಾಂತವನ್ನು ವಿಸ್ತರಿಸಲು ಚಾಲಕಿನಿಂದ ದೊಡ್ಡೇರಿ ತನಕ ಮುನ್ನುಗ್ಗಿ ದೊಡ್ಡೇರಿ ಕೋಟೆಯಲ್ಲಿ ತಂಗಿದ್ದನು. ಅಲ್ಲಿಗೆ ಆಗಮಿಸಿದ ಮರಾಠರ ಸೇನೆ ಚಿತ್ರದುರ್ಗದ ಭರಮಪ್ಪನಾಯಕನ ಸಹಾಯವನ್ನು ಪಡೆದುಕೊಂಡು ದೊಡ್ಡೇರಿ ಮೇಲೆ ಆಕ್ರಮಣ ಮಾಡಿತು. ಈ ದಾಳಿಯಿಂದ ಧೃತಿಗೆಡದ ಖಾನನು ವೀರಾವೇಶದಿಂದ ಹೋರಾಡಿದರೂ ಕೂಡ ಫಲನೀಡದೆ ದೊಡ್ಡೇರಿ ಶತ್ರುಗಳ ವಶವಾಯಿತು. ಯುದ್ಧದಲ್ಲಿ ಖಾಸಿಂಖಾನ್ ಮೃತಪಟ್ಟನು.

**ಜುಲ್ಫೀಕರ್ ಖಾನ್:** ಖಾಸಿಂ ಖಾನನ ಮರಣಾನಂತರ ಜುಲ್ಫೀಕರ್ ಖಾನ್ ಶಿರಾದ ನವಾಬನಾದನು. ಈತ ಮೊಘಲರಿಗೆ ಸೇರಿದ್ದ ದಕ್ಷಿಣದ ಪ್ರದೇಶಗಳ ಮೇಲೆ ಅಧಿಕಾರ ಸ್ಥಾಪಿಸಿದನು. ಕರ್ನಾಟಕ–ಬಿಜಾಪುರ–ಪಾಲ್ಘಾಟ್ ಪ್ರದೇಶದಲ್ಲಿ ಮೊಗಲರ ಪ್ರಾಬಲ್ಯವನ್ನು ಎತ್ತಿಹಿಡಿಯುವುದು ಅವನ ಉದ್ದೇಶವಾಗಿತ್ತು. ಜೊತೆಗೆ ಮೊಗಲರ ಸ್ನೇಹ ಬಯಸಿ ಕಪ್ಪಕಾಣಿಕೆ ನೀಡಲು ಬಯಸಿದ್ದ ಪಾಳೆಯಗಾರರಿಂದ ವಸೂಲಿ ಮಾಡುವ ಗುರುತರ ಜವಾಬ್ದಾರಿ ಈತನ ಮೇಲಿತ್ತು. ವ್ಯಾಪಾರಕ್ಕಾಗಿ ಸೌಲಭ್ಯಗಳನ್ನು ಯಾಚಿಸಲು ಬಂದಿದ್ದ ಐರೋಪ್ಯರಿಂದ ಹಣ ವಸೂಲಿ ಮಾಡುವ ಕೆಲಸವೂ ಇವನದಾಗಿತ್ತು. ಇಷ್ಟೆಲ್ಲಾ ಅಧಿಕ ಕೆಲಸಗಳು ಇದ್ದುದರಿಂದ ಅವನು ತನ್ನ ಸಹಾಯಕ್ಕೆ ರುಸ್ತುಂಜಂಗ್ ಎಂಬುವನನ್ನು ನೇಮಕ ಮಾಡಿಕೊಂಡನು. ಜುಲ್ಫೀಕರ್‌ಖಾನನು ಆರ್ಕಾಟಿಗೆ ತೆರಳಿದ ನಂತರ, ರುಸ್ತುಂಜಂಗನು ಪಾಳೆಯಗಾರರು, ದೇಸಾಯಿಗಳನ್ನು ವಿರೋಧ ಮಾಡಿಕೊಳ್ಳದೆ ಉಪಾಯದಿಂದ ಮೊಗಲರಿಗೆ ಬರಬೇಕಾಗಿದ್ದ ಕಪ್ಪದ ಹಣವನ್ನು ಅವರಿಂದ ವಸೂಲಿ ಮಾಡಿ, ಶಿರಾದ ಖಜಾನೆಯನ್ನು ಭರ್ತಿ ಮಾಡಿದನು. ಇದರಿಂದ ಸಂತೋಷಗೊಂಡ ಔರಂಗಜೇಬನು ಅವನಿಗೆ 'ಬಹದ್ದೂರ್' ಎಂಬ ಬಿರುದನ್ನೂ, 'ಕೈಫಿಯತ್‌ಖಾನ್' ಎಂಬ ಗೌರವಯುತ ಹೆಸರನ್ನು ನೀಡಿ ಸನ್ಮಾನಿಸಿ ಕಳುಹಿಸಿದನು. ಶಿರಾದ ಬಳಿಯಲ್ಲಿಯೇ 'ರುಸ್ತುಂಬಾದ್' ಎಂಬ ಮತ್ತೊಂದು ಪೇಟೆಯನ್ನು ನಿರ್ಮಿಸಲಾಯಿತು. ಮಿಗಿಲಾಗಿ ಪ್ರತಿ ವರ್ಷವೂ ರಾಜ್ಯದ ಲೆಕ್ಕಪತ್ರಗಳನ್ನು ದಾಖಲೆಗಳ ಸಮೇತ ಚಕ್ರವರ್ತಿಯ ಆಸ್ಥಾನಕ್ಕೆ ಇವನು ಕಳುಹಿಸುತ್ತಿದ್ದನು.

**ಫಡದುಲ್ಲಾಖಾನ್:** ಮೊಗಲ್ ಚಕ್ರವರ್ತಿ ಔರಂಗಜೇಬನ ಕೊನೆಯಕಾಲದಲ್ಲಿ ಮೊಗಲರ ಸ್ಥಾನಮಾನಗಳು ಕುಗ್ಗತೊಡಗಿದವು. ಆ ವೇಳೆಗಾಗಲೇ ಮೈಸೂರು ಸಂಸ್ಥಾನವು ಪ್ರಬಲವಾಗಿತ್ತು. ಮೊಗಲರ ದುರ್ಬಲ ಸ್ಥಿತಿಯನ್ನು ಉಪಯೋಗಿಸಿಕೊಂಡ ಮೈಸೂರಿನ ಚಿಕ್ಕದೇವರಾಜ ಒಡೆಯರ್ ಶಿರಾದ ಮೇಲೆ ಆಕ್ರಮಣ ಮಾಡಿ ಮೊಗಲ್ ಸರ್ಕಾರಕ್ಕೆ ಸಲ್ಲಿಸಬೇಕೆಂದು ಇಟ್ಟುಕೊಂಡಿದ್ದ ಕಪ್ಪಕಾಣಿಕೆಯ ಹಣವನ್ನು ಲೂಟಿ ಮಾಡಿದನು. ಏತನ್ಮಧ್ಯೆ ಕ್ರಿ.ಶ. ೧೭೦೬ರಲ್ಲಿ ಫಡದುಲ್ಲಾಖಾನನು ಶಿರಾದ ನವಾಬನಾದನು. ಇವನು ನೆರೆಹೊರೆಯ ಪಾಳೆಯಪಟ್ಟುಗಳೊಂದಿಗೆ ಉತ್ತಮ ಸ್ನೇಹವನ್ನಿಟ್ಟುಕೊಂಡಿದ್ದು, ಚಿತ್ರದುರ್ಗದವರೊಂದಿಗೆ ವಿಶೇಷ ಬಾಂಧವ್ಯವನ್ನು ಹೊಂದಿದ್ದನು. ಅದೇ ಸಮಯದಲ್ಲಿ ರಾಯದುರ್ಗದವರು ಚಿತ್ರದುರ್ಗದವರ ಅಧೀನದಲ್ಲಿದ್ದ ಹಟ್ಟಿಕೋಟೆಗೆ ಮುತ್ತಿಗೆ ಹಾಕಿದರು. ಆಗ ದುರ್ಗದ ಪಾಳೇಗಾರ ಭರಮಪ್ಪ ನಾಯಕನು ಮುತ್ತಿಗೆಯನ್ನು ತೆರವುಗೊಳಿಸಲು ಹಾವನೂರು, ಗುಡ್ಡೇಕೋಟೆ, ನಿಡಗಲ್ಲು, ರತ್ನಗಿರಿ, ಜರಿಮಲೆ ಪಾಳೇಗಾರರುಗಳನ್ನು ಒಂದುಗೂಡಿಸಿಕೊಳ್ಳುವುದರ ಜೊತೆಗೆ ಶಿರಾದ ನವಾಬನ ಸಹಾಯವನ್ನೂ ಕೇಳಿದನು. ಶಿರಾದ ಸೇನೆಯು ಒಕ್ಕೂಟ ಸೇನೆಯನ್ನು ಸೇರಿಕೊಂಡು ಹಟ್ಟಿಯ ಕಡೆಗೆ ಹೊರಟಿತು. ಈ ಸುದ್ದಿ ತಿಳಿಯುತ್ತಲೇ ರಾಯದುರ್ಗದವರು ಪಲಾಯನ ಮಾಡಿದರು. ಅವರನ್ನು ಬೆನ್ನತ್ತಿ ಕೊಟ್ಟೂರು ಬಳಿ ನಡೆದ ಭೀಕರ ಕದನದಲ್ಲಿ ಅವರನ್ನು ಪರಾಭವಗೊಳಿಸಿತು. ನಂತರ ಶಿರಾದ ಸೇನೆ ಹೊಳೆಹೊನ್ನೂರಿಗೆ ಮುತ್ತಿಗೆ ಹಾಕಿತು. ರಾಯದುರ್ಗದವರ ವಿರುದ್ಧದ ಹೋರಾಟದಲ್ಲಿ ಸಹಾಯ ಮಾಡಿದ್ದಕ್ಕೆ ಪ್ರತಿಯಾಗಿ ಚಿತ್ರದುರ್ಗದ ಭರಮಪ್ಪನಾಯಕನು ಸ್ವತಃ ತಾನೇ ಸೇನಾ ಸಮೇತನಾಗಿ ಹೋಗಿ ಹೊಳೆಹೊನ್ನೂರನ್ನು ಗೆದ್ದು ನವಾಬನಿಗೆ ಅರ್ಪಿಸಿದನು. ಇದರಿಂದ ಸಂತೋಷಗೊಂಡ ಅವನು ಚಿತ್ರದುರ್ಗದ ಪಾಳೇಗಾರನಿಗೆ ದೊಡ್ಡೇರಿಸೀಮೆ, ಜಾಜೂರುಸೀಮೆಗಳನ್ನು ಉಂಬಳಿಯಾಗಿ ನೀಡಿದನು. ಇವನ ನಂತರ ದಾವೂದ್ ಖಾನನು ಶಿರಾದ ನವಾಬನಾಗಿ ಕೆಲಕಾಲ ಸ್ವತಂತ್ರನಾಗಿ ಮೆರೆದು ನಿವೃತ್ತನಾದನು.

**ಅಮೀನ್ ಖಾನ್:** ಕ್ರಿ.ಶ. ೧೭೧೩ರಲ್ಲಿ ನಿಜಾಮ್ ಉಲ್ ಮುಲ್ಕ್ (ಒಂದನೇ ಅಸಫ್ ಜಾಹೀ) ನಿಜಾಮನಾಗಿ ಅಧಿಕಾರ ವಹಿಸಿಕೊಂಡನು. ಈತನು ಮೊಗಲರ ದಕ್ಷಿಣದ ಎಲ್ಲಾ ಪ್ರದೇಶಗಳ ಮೇಲೆ ಅಧಿಪತ್ಯ ಗಳಿಸಿದನು. ಮೊಗಲರ ನಿಯಂತ್ರಣದಲ್ಲಿದ್ದ ಆಡಳಿತ ಪ್ರದೇಶಗಳ ಪರಿಸ್ಥಿತಿಯನ್ನು ಕೂಲಂಕಷವಾಗಿ ವಿವೇಚಿಸಿ ಆಡಳಿತ ಸುಧಾರಿಸಿದನು. ಆರ್ಕಾಟಿನ ಸಾದತ್‌ಖಾನನ ದರ್ಪವನ್ನು ಅಡಗಿಸಿ ಕ್ರಿ.ಶ. ೧೭೧೭ರಲ್ಲಿ ಶಿರಾವನ್ನು ಆರ್ಕಾಟಿನ ನಿಯಂತ್ರಣದಿಂದ ಬೇರ್ಪಡಿಸಿದನು. ಸವಣೂರು ಕಡಪಾ, ಕರ್ನೂಲುಗಳಿಗೆ ಹೊಸ ನವಾಬರನ್ನು ನೇಮಿಸಿದನು. ಇದೇ ಸಮಯದಲ್ಲಿಯೇ ಶಿರಾಕ್ಕೂ ಕೂಡಾ ಕ್ರಿ.ಶ. ೧೭೧೭ರಲ್ಲಿ ಅಮೀನ್‌ಖಾನ್ ಎಂಬುವನನ್ನು ನವಾಬನನ್ನಾಗಿ ನೇಮಿಸಿದನು. ಈತ ನಿಜಾಮನ ನೇರ ನಿಯಂತ್ರಣದಲ್ಲಿ ಆಡಳಿತ ನಡೆಸಬೇಕಾಗಿತ್ತು. ಈ ಏರ್ಪಾಡನ್ನು ಒಪ್ಪದ ಸಾದತ್ ಖಾನನು ಸವಣೂರು, ಕಡಪಾ, ಕರ್ನೂಲು ನವಾಬರುಗಳೊಂದಿಗೆ ರಹಸ್ಯ ಒಪ್ಪಂದ ಮಾಡಿಕೊಂಡು ಶಿರಾದ ಮೇಲೆ ಬೀಳಲು ಅವಕಾಶಕ್ಕೋಸ್ಕರ ಕಾಯುತ್ತಿದ್ದನು. ಹೀಗೆ ಶಿರಾವು ಆರ್ಕಾಟ್ ನವಾಬರ ಹಿಡಿತದಿಂದ ಮತ್ತೊಮ್ಮೆ ಮೊಗಲರ ಅಧೀನಕ್ಕೆ ಒಳಪಟ್ಟಿತು. ಇದಾದ ಕೆಲವೇ ದಿನಗಳಲ್ಲಿ ಅಮೀನ್‌ಖಾನನ ಸ್ಥಾನದಲ್ಲಿ ಎರಡನೇ ದರ್ಗಾಕೂಲಿ ಖಾನ್ ಶಿರಾದ ನವಾಬನಾದನು.

**ದರ್ಗಾ ಕೂಲಿಖಾನ್ (೧೭೧೫–೧೭೨೦):** ಅಧಿಕಾರ ಸ್ವೀಕರಿಸುತ್ತಿದ್ದಂತೆ ಇವನು ಬಾಗೂರಿನವರ ವಿರೋಧವನ್ನು ಎದುರಿಸಬೇಕಾಯಿತು. ಅಂದಿನ ರಾಜಕೀಯ ವಾತಾವರಣವನ್ನು ಅರ್ಥಮಾಡಿಕೊಂಡ ಖಾನನು ಚಿತ್ರದುರ್ಗದವರ ಸ್ನೇಹ ಸಂಪಾದಿಸಿ ಅವರ ಸಹಾಯವನ್ನು ಕೇಳಿದನು. ಭರಮಪ್ಪ ನಾಯಕನು ಒಪ್ಪಿ ಬಾಗೂರಿನ ಮೇಲೆ ಆಕ್ರಮಣ ಮಾಡಿ ಗೆದ್ದು ಅದನ್ನು ಶಿರಾದವರಿಗೆ ಒಪ್ಪಿಸಿದನು. ಈ ಉಪಕಾರಕ್ಕೆ ಪ್ರತಿಯಾಗಿ ನವಾಬನು ಮಾವಿನಕಟ್ಟೆ ಗ್ರಾಮವನ್ನು ಭರಮಪ್ಪ ನಾಯಕನಿಗೆ ಬಿಟ್ಟುಕೊಟ್ಟನು. ಭರಮಪ್ಪನಾಯಕನ ನಂತರ ಚಿತ್ರದುರ್ಗದಲ್ಲಿ ಹಿರಿಮದಕರಿನಾಯಕನ ಆಳ್ವಿಕೆ ಆರಂಭವಾದಾಗ ಅವನು ನವಾಬನ ಸ್ನೇಹವನ್ನು ಧಿಕ್ಕರಿಸಿ ಶಿರಾದವರಿಗೆ ಸೇರಿದ್ದ ಅಜ್ಜಂಪುರ, ದೋಳೆ–ಕೋಟೆಗಳನ್ನು ಗೆದ್ದುಕೊಂಡನು. ಆದರೆ ನವಾಬ ದರ್ಗಾಕೂಲಿಖಾನನು ತನ್ನ ಪ್ರಾಂತಗಳನ್ನು ರಕ್ಷಿಸಿಕೊಳ್ಳುವ ಸಲುವಾಗಿ ಚಿತ್ರದುರ್ಗದವರ ಮೇಲೆ ಯುದ್ಧ ಮಾಡಬೇಕಾದ ಪ್ರಸಂಗ ಒದಗಿ ಬಂದಿತು. ಕಳೆದುಕೊಂಡಿದ್ದ ಪ್ರದೇಶಗಳನ್ನು ಗೆಲ್ಲಲು ನವಾಬನು ಅಜ್ಜಂಪುರ ಕೋಟೆಗೆ ಮುತ್ತಿಗೆ ಹಾಕಿ ಅಲ್ಲಿದ್ದ ಚಿತ್ರದುರ್ಗದವರ ಅಧಿಕಾರಿಗಳನ್ನು ಓಡಿಸಿ ಕೋಟೆಯನ್ನು ಗೆದ್ದುಕೊಂಡನು.

**ತಾಹಿರ್ ಖಾನ್ (೧೭೨೪–೧೭೪೨):** ಶಿರಾವನ್ನು ಆರ್ಕಾಟಿನ ಅಧಿಪತ್ಯಕ್ಕೆ ಒಳಪಡಿಸಿಕೊಳ್ಳುವ ಉದ್ದೇಶ ಹೊಂದಿದ್ದ ನವಾಬ ಸಾದತ್‌ಖಾನನು ಕ್ರಿ.ಶ. ೧೭೨೪ರಲ್ಲಿ ಶಿರಾದ ಮೇಲೆ ಆಕ್ರಮಣ ಮಾಡಿ ಅದನ್ನು ವಶಪಡಿಸಿಕೊಂಡು ತನಗೆ ನಿಷ್ಠನಾದ ಅಬ್ದುಲ್ ನಭೀ ತಾಹರ್‌ಖಾನನನ್ನು ನವಾಬನನ್ನಾಗಿ ನೇಮಿಸಿದನು. ಹೀಗೆ ಮತ್ತೊಮ್ಮೆ ಶಿರಾದಲ್ಲಿ ಆರ್ಕಾಟಿನವರ ಅಧಿಪತ್ಯ ಸ್ಥಾಪಿತವಾಯಿತು. ತಾಹರ್‌ಖಾನನು (ಕ್ರಿ.ಶ. ೧೭೨೪–೧೭೪೨) ಆರ್ಕಾಟಿನ ನವಾಬನಿಗೆ ಪೂರ್ಣ ನಿಷ್ಠೆಯಿಂದಿದ್ದ ಕಾಲದಲ್ಲಿ ಮಹತ್ವಪೂರ್ಣ ರಾಜಕೀಯ ಘಟನೆಗಳು ಜರುಗಿದವು. ಮೊದಲಿಗೆ ಮೈಸೂರಿನತ್ತ ನುಗ್ಗಲು ಒಳ್ಳೆಯ ಅವಕಾಶ ದೊರೆಯಿತು. ಇದೇ ಸಮಯದಲ್ಲಿಯೇ, ಸವಣೂರು, ಕಡಪಾ, ಕರ್ನೂಲ್‌ಗಳ ನವಾಬರು ಮೈಸೂರಿನವರ ವಿರುದ್ಧ ಒಕ್ಕೂಟ ರಚಿಸಿಕೊಂಡಿದ್ದರು. ಈ ಒಕ್ಕೂಟಕ್ಕೆ ಶಿರಾದ ನವಾಬ ಬೆಂಬಲ ಘೋಷಿಸಿ ಶ್ರೀರಂಗಪಟ್ಟಣದ ಮುತ್ತಿಗೆಯಲ್ಲಿ ಪ್ರಧಾನ ಪಾತ್ರವಹಿಸಿ ಮೈಸೂರಿನವರನ್ನು ಪರಾಭವಗೊಳಿಸುವಲ್ಲಿ ಯಶಸ್ವಿಯಾದನು.

**ದಿಲಾವರ್ ಖಾನ್ (೧೭೪೨–೫೬):** ಕ್ರಿ.ಶ.೧೭೪೨ರಲ್ಲಿ ದಿಲಾವರ್ ಖಾನನು ಶಿರಾದ ನವಾಬನಾದನು. ಈತನು ಈ ನಾಡನ್ನಾಳಿದ ನವಾಬರಲ್ಲೇ ಅತ್ಯಂತ ದಕ್ಷನೂ, ಶ್ರೇಷ್ಠನೂ ಎಂದು ಪ್ರಖ್ಯಾತಿಯಾಗಿದ್ದಾನೆ. ಈತನ ಕಾಲದಲ್ಲಿ ರಾಜಕೀಯ ಶಾಂತಿ, ಆರ್ಥಿಕ ಪ್ರಗತಿ ಮತ್ತು ಸಾಂಸ್ಕೃತಿಕ ಬೆಳವಣಿಗೆಗಳಾದವು. ಇವನ ಆಡಳಿತಾವಧಿಯಲ್ಲಿ ಮೊಗಲರ ದಂಡನಾಯಕ ಸಲಾಬತ್ ಜಂಗನು ಮೈಸೂರು ಪ್ರಾಂತಗಳಿಂದ ಖಂಡಣಿ ಹಣವನ್ನು ತೆಗೆದುಕೊಂಡು ಹೋಗಲು ಬಂದನು. ಶಿರಾದ ಸನಿಹದಲ್ಲಿಯೇ ಇದ್ದ ಹಾಗಲವಾಡಿಯ ದೊರೆ ಮುದ್ವೀರಪ್ಪನಾಯಕನು ಅವನೊಂದಿಗೆ ಸ್ನೇಹ ಸಂಪಾದಿಸಲು ತನ್ನ ರಾಯಭಾರಿಗಳನ್ನು ಕಳುಹಿಸಿದನು. ಇದಕ್ಕೆ ಒಪ್ಪಿದ ಅವನು ಹಾಗಲವಾಡಿಗೆ ಬಂದು ತನ್ನ ಸ್ವಾಗತಕ್ಕೆ ಏರ್ಪಾಟು ಮಾಡುತ್ತಿದ್ದ ಮುದ್ವೀರಪ್ಪನಾಯಕನ ಮೇಲೆ ಆಕ್ರಮಣ ಮಾಡಿದನು. ಪಾಳೆಯಗಾರನು ಹಾಗಲವಾಡಿ ಬಿಟ್ಟು ಪಲಾಯನ ಮಾಡಿದನು. ನಂತರ ಹಾಗಲವಾಡಿಯನ್ನು ಸಲಾಬತ್ತನು ಕ್ರಿ.ಶ. ೧೭೫೫ರಲ್ಲಿ ಶಿರಾದ ನವಾಬನಾಗಿದ್ದ ದಿಲಾವರ್‌ಖಾನನಿಗೆ ನೀಡಿದನು. ಹಾಗಲವಾಡಿಯನ್ನು ಕಳೆದುಕೊಂಡ ಮುದ್ವೀರಪ್ಪನಾಯಕನು ಸುಮ್ಮನೆ ಕೂರಲಿಲ್ಲ. ಅವನು ಮೂಗನಾಯ್ಕನಕೋಟೆಗೆ ಹೋಗಿ ಅಲ್ಲಿ ತನ್ನ ಹಳೆಯದಂಡನ್ನು ಕರೆಸಿಕೊಂಡು ನವಾಬನ ಮೇಲೆ ಆಕ್ರಮಣ ಮಾಡಿದನು. ಕದನದಲ್ಲಿ ಪಾಳೆಯಗಾರನ ಕೈ ಮೇಲಾಯಿತು. ನವಾಬನಿಗೆ ಸೋಲಾಯಿತು. ಕೊನೆಗೆ ನವಾಬ ಪಾಳೆಯಗಾರನೊಂದಿಗೆ ಒಪ್ಪಂದ ಮಾಡಿಕೊಂಡು ಅವನಿಗೆ "ರಾಜಾ ಜಂಗ್ ಬಹದ್ದೂರ್' ಎಂಬ ಬಿರುದನ್ನು ನೀಡಿ ಹಾಗಲವಾಡಿ ಮತ್ತು ತನ್ನ ಅಧೀನದಲ್ಲಿದ್ದ ಹನ್ನೆರಡು ಹಳ್ಳಿಗಳನ್ನು ಉಂಬಳಿಯಾಗಿ ನೀಡಿದನು. ನೆರೆಯ ರಾಜ್ಯಗಳೊಂದಿಗೆ ಶಾಂತಿಯಿಂದಿದ್ದ ಈ ನವಾಬನ ಕಾಲದಲ್ಲಿ ಶಿರಾದಲ್ಲಿ ೫೦ ಸಾವಿರ ಮನೆಗಳಿದ್ದವು. ಅಲ್ಲಿ ಸುಂದರವಾದ ಅರಮನೆಯನ್ನು ಕೂಡಾ ನಿರ್ಮಿಸಿದ್ದನು. ಈ ಅರಮನೆಯ ಸೌಂದರ್ಯವನ್ನು ನೋಡಿದ ಹೈದರಾಲಿ, ಟಿಪ್ಪೂ ಅದರಿಂದ ಪ್ರಭಾವಿತರಾಗಿ ಅದೇ ಮಾದರಿಯ ಅರಮನೆಯನ್ನು ಬೆಂಗಳೂರು ಮತ್ತು ಶ್ರೀರಂಗಪಟ್ಟಣಗಳಲ್ಲಿ ನಿರ್ಮಿಸಿದರು. ಇದರಿಂದ ಶಿರಾ ಪಟ್ಟಣ ಅಂದಿನ ಸಾಮಾಜಿಕ ಆರ್ಥಿಕ ಕ್ಷೇತ್ರದಲ್ಲಿ ಎಷ್ಟು ಮುಂದುವರಿದಿತ್ತೆಂದು ತಿಳಿಯುತ್ತದೆ. ಇದೇ ಸಮಯದಲ್ಲಿಯೇ ಪೂನಾದ ಶ್ರೀಮಂತ ಪೇಶ್ವೆ ಬಾಲಾಜಿ ಬಾಜಿರಾವ್ ಮೈಸೂರು ರಾಜ್ಯದ ಮೇಲೆ ದಾಳಿ ಮಾಡಲಾರಂಭಿಸಿದನು. ಶಿರಾದ ಮೇಲೆ ನಡೆದ ಯುದ್ಧದಲ್ಲಿ ದಿಲಾವರ್‌ಖಾನನು ಪರಾಭವ ಹೊಂದಿದನು. ಹೀಗೆ ಶಿರಾವು ಮರಾಠರ ಅಧೀನಕ್ಕೆ ಒಳಗಾಯಿತು. ಕ್ರಿ.ಶ. ೧೭೫೬ ರಿಂದ ೧೭೬೧ರವರೆಗೆ ಇಲ್ಲಿ ಮರಾಠರು ಆಳ್ವಿಕೆ ನಡೆಸಿದರು. ಅದೇ ವರ್ಷ ಮೈಸೂರಿನ ಹೈದರಾಲಿಯು

ಹೊಸಕೋಟೆಯಲ್ಲಿ ಬಸಾಲತ್‌ಜಂಗ್‌ನೊಡನೆ ಒಪ್ಪಂದ ಮಾಡಿಕೊಂಡು ಶಿರಾದ ಮೇಲೆ ದಾಳಿ ಮಾಡಿ ಅಲ್ಲಿಂದ ಮರಾಠರನ್ನು ಹೊಡೆದೋಡಿಸಿದನು. ಹೈದರಾಲಿಯು ಶಿರಾದ ನವಾಬನೆಂದು ಬಿರುದು ಧರಿಸಿ ಅಲ್ಲಿಂದ ಉತ್ತರಕ್ಕೆ ಇರುವ ಪ್ರದೇಶಗಳ ಮೇಲೆ ದಾಳಿ ಮಾಡಿ ಗೆದ್ದು ಮೈಸೂರು ಪ್ರಾಂತಕ್ಕೆ ಸೇರಿಸಿಕೊಂಡನು. ಪುನಃ ಕ್ರಿ.ಶ. ೧೭೬೭ರಲ್ಲಿ ಮರಾಠರು ಮತ್ತೊಮ್ಮೆ ಶಿರಾವನ್ನು ಆಕ್ರಮಿಸಿಕೊಂಡರು. ಹೀಗೆ ಇದು ಮೈಸೂರು ಮತ್ತು ಮರಾಠರ ದಾಳಿಗೆ ತುತ್ತಾಗಿ ಸಾಕಷ್ಟು ಸಂಕಷ್ಟವನ್ನು ಅನುಭವಿಸಿತು. ಪುನಃ ಕ್ರಿ.ಶ. ೧೭೭೪ರಲ್ಲಿ ಟಿಪ್ಪು ಸುಲ್ತಾನನು ಶಿರಾವನ್ನು ಗೆದ್ದು ಮೈಸೂರಿನ ರಾಜ್ಯಕ್ಕೆ ಸೇರಿಸಿಕೊಂಡನು. ಈ ಸಂದರ್ಭದಲ್ಲಿ ಗಂಜಾಂ ನಗರವನ್ನು ವಿಸ್ತಾರಗೊಳಿಸುವ ಉದ್ದೇಶದಿಂದ ಶಿರಾದಿಂದ ೧೨ ಸಾವಿರ ಸಂಸಾರಗಳನ್ನು ಬಲವಂತವಾಗಿ ಅಲ್ಲಿಗೆ ಸಾಗಿಸಿದನಂತೆ. ಈ ಗಲಭೆಗಳಿಂದ ಮತ್ತು ಮರಾಠರ ದಾಳಿಗೆ ಸಿಕ್ಕಿದ ಶಿರಾವು ೫೦ ಸಾವಿರ ಮನೆಗಳಿಂದ ಕೇವಲ ಮೂರು ಸಾವಿರ ಮನೆಗಳಿಗಿಳಿಯಿತು. ಕ್ರಿ.ಶ. ೧೭೯೯ರ ನಾಲ್ಕನೇ ಮೈಸೂರು ಯುದ್ಧದಲ್ಲಿ ಟಿಪ್ಪೂ ಹತನಾದಾಗ ಶಿರಾವು ಮೈಸೂರಿನ ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ಸೇರಿತು.

**ಹೊಳವನಹಳ್ಳಿ – ಕೊರಟಗೆರೆ ಸ್ಥಾನಿಕ ಪ್ರಭುಗಳು:** ಇವರು ವಿಜಯನಗರೋತ್ತರ ಕಾಲದಲ್ಲಿ ರಾಜಕೀಯವಾಗಿ ಏಳಿಗೆಗೆ ಬಂದು ವಂಶಪಾರಂಪರ್ಯ ಆಳ್ವಿಕೆ ನಡೆಸಿ ಕ್ರಿ.ಶ.೧೭೯೯ರಲ್ಲಿ ಪತನ ಹೊಂದಿದರು. ಈ ರಾಜ್ಯದ ಸ್ಥಾಪನೆ ಬೈರೇಗೌಡನಿಂದ ಆಯಿತು. ಈತ ಆವತಿ ರಾಜಮನೆತನದವರ ಸಂಬಂಧಿ. ಆವತಿಯ ರಣಭೈರೇಗೌಡನ ಸಂಬಂಧಿಯಾದ ಭೈರೇಗೌಡನು ನದಿತೀರದಲ್ಲಿ ದಣಿವಾರಿಸಿಕೊಳ್ಳುತ್ತಿದ್ದಾಗ ಕೊರಮಪುರದ (ಇಂದಿನ ಹೊಳವನಹಳ್ಳಿ) ಹೊಳವೇಗೌಡನೆಂಬುವನು ಅಲ್ಲಿಗೆ ಬಂದನಂತೆ. ಮೌಖಿಕ ಸಂಪ್ರದಾಯದ ಪ್ರಕಾರ ಹೊಳವೇಗೌಡನು ಅಸ್ಪೃಶ್ಯ ಜನಾಂಗದ ಜನರಿಗೆ ಅಧಿಪತಿಯಾಗಿ ಕೊರಮಪುರವನ್ನು ತನ್ನ ಸ್ವಾಧೀನದಲ್ಲಿಟ್ಟುಕೊಂಡಿದ್ದನು. ಹೊಳವೇಗೌಡನು ಭೈರೇಗೌಡನನ್ನು ತನ್ನ ಹಳ್ಳಿಗೆ ಕರೆದುಕೊಂಡು ಹೋಗಿ ಸತ್ಕರಿಸಿದನು. ಅಲ್ಲಿನ ಪ್ರಕೃತಿ ಸೌಂದರ್ಯಕ್ಕೆ ಮಾರುಹೋದ ಅವನು ಅಲ್ಲಿಯೇ ನೆಲೆಸಲು ತೀರ್ಮಾನಿಸಿದನು. ಹೊಳವೇಗೌಡನು ಮರಣ ಹೊಂದಿದ ಮೇಲೆ ಭೈರೇಗೌಡನು ಮನನೊಂದು ಅಲ್ಲಿಂದ ಹೊರಡಲು ಸಿದ್ಧನಾದನು. ಆದರೆ ಹೊಳವೇಗೌಡನ ಮಕ್ಕಳು ಮತ್ತವನ ಸಂಬಂಧಿಕರು ಈ ಅತಿಥಿಯನ್ನು ತಮ್ಮ ಗ್ರಾಮದಲ್ಲಿಯೇ ನೆಲೆಸುವಂತೆ ಪ್ರಾರ್ಥಿಸಿದರಂತೆ. ಭೈರೇಗೌಡ ಜನರ ಸಹಕಾರದಿಂದ ಕೊರಮಪುರದ ಸುತ್ತ ಕೋಟೆ ನಿರ್ಮಾಣ ಮಾಡಿಸಿ ತಮ್ಮಿಬ್ಬರ ಸ್ನೇಹದ ಕುರುಹಾಗಿ ಆ ಊರಿಗೆ ಹೊಳವನಹಳ್ಳಿ ಎಂಬ ಹೆಸರಿಟ್ಟನು. ಹೀಗೆ ಕೊರಮಪುರ ಹೊಳವನಹಳ್ಳಿಯಾಗಿ ಪರಿವರ್ತನೆಯಾಗಿ ಅಭಿವೃದ್ಧಿ ಹೊಂದತೊಡಗಿತು. ಕೆಲವೇ ದಿನಗಳಲ್ಲಿ ಪ್ರಬುದ್ಧಮಾನಕ್ಕೆ ಬಂದ ಭೈರೇಗೌಡನು ಅಲ್ಲಿನ ಸುತ್ತಮುತ್ತಲ ಗ್ರಾಮಗಳನ್ನು ಗೆದ್ದುಕೊಂಡು ರಾಜ್ಯ ಸ್ಥಾಪಿಸಿದನು. ಇದರಿಂದ ಇವನ ಖ್ಯಾತಿ ಹೆಚ್ಚಿತು.

ಈ ರೀತಿ ರಾಜ್ಯ ಸ್ಥಾಪಿಸಿದ ಭೈರೇಗೌಡನು ಪೆನುಗೊಂಡೆಯಿಂದ ಆಳುತ್ತಿದ್ದ ವಿಜಯನಗರದ ಅರವೀಡು ಸಂತತಿಯವರಿಗೆ ಸಮಕಾಲೀನನಾಗಿದ್ದನು. ಆಗ ವಿಜಯನಗರದ ಆಡಳಿತ ವ್ಯವಸ್ಥೆಯಲ್ಲಿ ಸಾಹಸಿ ನಾಯಕರಿಗೆ ಭೂ ಪ್ರದೇಶ ನೀಡಿ ಗೌರವಿಸುವ ಪದ್ಧತಿ ಇತ್ತು. ಇಂತಹ ಸಮಯದಲ್ಲಿ ಭೈರೇಗೌಡನು ವಿಜಯನಗರದವರ ಕೃಪೆಗೆ ಪಾತ್ರನಾಗಿ ವರ್ಷಕ್ಕೆ ೬೦೦೦ ವರಹಗಳ ಉತ್ಪತ್ತಿಯುಳ್ಳ ಕೊಲಹಳ್ಳಿ (ಕೊಡ್ಲಹಳ್ಳಿ) ಮತ್ತದರ ಸುತ್ತಮುತ್ತ ಇರುವ ೩೩ ಹಳ್ಳಿಗಳ ಜಹಗೀರಿಯನ್ನು ಪಡೆದುಕೊಂಡನು.

ಹೀಗೆ ಇಮ್ಮಡಿ ರಣಭೈರೇಗೌಡ ಹೊಳವನಹಳ್ಳಿಯಲ್ಲಿ ಆಳುತ್ತಿದ್ದ ಸಂದರ್ಭದಲ್ಲಿ ಸ್ವಜಾತಿ ಬಂಧು ಹಾಗೂ ಸಂಬಂಧಿಕನಾಗಿದ್ದು ಮಾಗಡಿಯಲ್ಲಿ ಆಳ್ವಿಕೆ ನಡೆಸುತ್ತಿದ್ದ (ಕ್ರಿ.ಶ. ೧೬೫೮–೧೬೭೮) ಮುಮ್ಮಡಿ ಕೆಂಪೇಗೌಡನು ದಂಡೆತ್ತಿ ಬಂದು ಹೊಳವನಹಳ್ಳಿಗೆ ಮುತ್ತಿಗೆ ಹಾಕಿದನು. ಯುದ್ಧದಲ್ಲಿ ರಣಭೈರೇಗೌಡನು ಪರಾಭವ ಹೊಂದಿದನು. ಮುಮ್ಮಡಿ ಕೆಂಪೇಗೌಡನು ತನ್ನ ಸೋದರನಾದ ಅಂಕೇಗೌಡನನ್ನು ಹೊಳವನಹಳ್ಳಿಯ ಸಾಮಂತನನ್ನಾಗಿ ಮಾಡಿ ಮಾಗಡಿಗೆ ಹಿಂತಿರುಗಿದನು. ಇದರಿಂದ ಬಹಳವಾಗಿ ನೊಂದ ರಣಭೈರೇಗೌಡ ಹಾಗೂ ಅವನ ಮಗನಾದ ದೊಡ್ಡಬೈಚೀಗೌಡ ಶಿರಾದ ನವಾಬರ ಬಳಿ ಸಹಾಯಕ್ಕಾಗಿ ಹೋದರು. ಹೊಳವನಹಳ್ಳಿ ಪಾಳೇಗಾರರ ಈ ಸ್ಥಿತಿಯನ್ನು ಕಂಡು ಮರುಗಿದ ಶಿರಾದ ನವಾಬರು ಅವರನ್ನು ಬಹಳ ಮರ್ಯಾದೆಯಿಂದ ಕಂಡು ಸಹಾಯ ಮಾಡಲು ಒಪ್ಪಿ ರಣಭೈರೇಗೌಡನಿಗೆ "ಸರ್ವಾಧಿಕಾರಿ" ಎಂಬ ಬಿರುದನ್ನು ನೀಡಿ ಸತ್ಕರಿಸಿದರು. ಇದೇ ಸಮಯದಲ್ಲಿ ರಣಭೈರೇಗೌಡನ ಕಿರಿಯ ಮಗನಾದ ಸಣ್ಣಭೈರೇಗೌಡನು ಕೂಡ ಸಹಾಯಕ್ಕಾಗಿ ಬಂಧುಗಳಾದ ದೊಡ್ಡಬಳ್ಳಾಪುರದ ಪಾಳೇಗಾರರ ಬಳಿಗೆ ಹೋದನು. ಹೀಗೆ ತಮ್ಮ ಶಕ್ತಿಯನ್ನು ಹೆಚ್ಚಿಸಿಕೊಂಡು ಪೂರ್ವದ ಕಡೆಯಿಂದ ದೊಡ್ಡಬಳ್ಳಾಪುರ ಪಾಳೇಗಾರರ ಸೇನೆಯೂ ಪಶ್ಚಿಮದ

ಕಡೆಯಿಂದ ಶಿರಾದ ನವಾಬರ (ಜುಲ್ಫೀಕರ್ ಖಾನ್?) ಸೇನೆಯೂ ಹೊಳವನಹಳ್ಳಿಯ ಮೇಲೆ ಮುತ್ತಿಗೆ ಹಾಕಿತು. ಶಿರಾದ ನವಾಬನ ಜೊತೆ ಸೇರಿ ಯುದ್ಧ ಮಾಡುತ್ತಿದ್ದ ರಣಭೈರೇಗೌಡನು ಮೃತನಾದನು. ಆದರೂ ಯುದ್ಧ ಮುಂದುವರಿಯಿತು. ಅಂತಿಮವಾಗಿ ಅಂಕೇಗೌಡ ಯುದ್ಧದಲ್ಲಿ ಸೋತು ಪಲಾಯನ ಮಾಡಿದನು. ಶತ್ರುವನ್ನು ಬೆನ್ನಟ್ಟಿದ ಹೊಳವನಹಳ್ಳಿಯವರು ಅಂಕೇಗೌಡನನ್ನು ಹುಲಿಯೂರುದುರ್ಗದ ಬಳಿ ನಡೆದ ಕದನದಲ್ಲಿ ಸೋಲಿಸಿ ಸೆರೆಹಿಡಿದರು. ನಂತರ ಅವನನ್ನು ಹುಲಿಕಲ್ಲಿನ ಸೆರೆಮನೆಯಲ್ಲಿಟ್ಟು ಹಿಂತಿರುಗಿದರು. ಯುದ್ಧದಲ್ಲಿ ಸಹಾಯ ಮಾಡಿದ ದೊಡ್ಡಬಳ್ಳಾಪುರದ ಪಾಳೇಗಾರರನ್ನು ಸತ್ಕರಿಸಿ ಅವರಿಗೆ ಅಪಾರವಾದ ದ್ರವ್ಯ ನೀಡಲಾಯಿತು. ರಣಭೈರೇಗೌಡನ ಮರಣಾನಂತರ ಅವನ ಮಗನಾದ ದೊಡ್ಡಬೈಚೇಗೌಡನು ಹೊಳವನಹಳ್ಳಿಯ ನಾಡಪ್ರಭುವಾಗಿ ಅಧಿಕಾರ ಸ್ವೀಕರಿಸಿದನು. ಹೊಳವನಹಳ್ಳಿಯನ್ನು ಆಳಿದ ರಣಭೈರೇಗೌಡನು ಕೊರಟಗೆರೆ ಪಟ್ಟಣವನ್ನು ನಿರ್ಮಾಣ ಮಾಡಿ ಅಲ್ಲಿನ ಬೆಟ್ಟದ ಮೇಲೆ ಕೋಟೆಯನ್ನು ಕಟ್ಟಿಸಿ ಇದನ್ನು ತನ್ನ ಮತ್ತೊಂದು ಆಡಳಿತ ಕೇಂದ್ರವನ್ನಾಗಿ ಮಾಡಿಕೊಂಡನು. ಗುಂಡಗಲ್, ಇರಕಸಂದ್ರ, ಸಾಗ್ಗೆರೆ, ಕೋಳಾಲ ಮತ್ತು ದಾಸರಹಳ್ಳಿ ಪ್ರಾಂತಗಳು ಇವನ ಸಂಸ್ಥಾನದ ವ್ಯಾಪ್ತಿಗೆ ಒಳಪಟ್ಟವು.

**ದೊಡ್ಡಬೈಚೇಗೌಡ:** ರಣಭೈರೇಗೌಡನ ಮರಣದ ತರುವಾಯ, ಹಿರಿಯ ಮಗನಾದ ದೊಡ್ಡಬೈಚೇಗೌಡನಿಗೆ ಶಿರಾದ ನವಾಬರು ಹೊಳವನಹಳ್ಳಿಗೆ ಮತ್ತಷ್ಟು ಸೀಮೆಯನ್ನು ಸೇರಿಸಿ ಪಟ್ಟಾಭಿಷೇಕ ಮಾಡಿದರು. ಅಲ್ಲದೆ ಪ್ರತಿವರ್ಷವೂ ಪೊಗದಿ ಹಣ ನೀಡುವಂತೆ ಒಪ್ಪಂದ ಮಾಡಿಕೊಂಡರು. ಒಪ್ಪಂದದ ಅನ್ವಯ ಶಿರಾದ ನವಾಬರಿಗೆ ನೀಡಬೇಕಿದ್ದ ಪೊಗದಿ ಹಣವನ್ನು ನೀಡದೆ ಬಾಕಿ ಉಳಿಸಿಕೊಂಡಿದ್ದನು. ಆದ್ದರಿಂದ ಶಿರಾದ ನವಾಬರು ಹೊಳವನಹಳ್ಳಿಯ ಸಂಸ್ಥಾನವನ್ನು ಬಲವಂತದಿಂದ ಕಿತ್ತುಕೊಂಡರು. ಹೀಗೆ ಸಂಸ್ಥಾನ ಕಳೆದುಕೊಂಡು ದೊಡ್ಡಬೈಚೇಗೌಡ ಅಲೆದಾಡಬೇಕಾಯಿತು. ಆ ಕೊರಗಿನಲ್ಲಿಯೇ ಅವನು ಮೃತನಾದನು.

**ಇಮ್ಮಡಿ ರಣಭೈರೇಗೌಡ:** ಇಮ್ಮಡಿ ರಣಭೈರೇಗೌಡ ತನ್ನ ಪೂರ್ವಜರಿಂದ ಪಡೆದುಕೊಂಡಿದ್ದ ಸಂಸ್ಥಾನಕ್ಕೆ ಹೆಚ್ಚಿಗೆ ಏನನ್ನೂ ಸೇರಿಸದಿದ್ದರೂ ಆಂತರಿಕ ಸುಧಾರಣೆಯ ಕಡೆ ಗಮನ ಹರಿಸಿದನು. ಇವನು ಕ್ರಿ.ಶ. ೧೭೨೭ರಲ್ಲಿ ವಳೆಭೂಪಾಲರಾಯನು ಕೊರಟಗೆರೆಯಲ್ಲಿ ನಿರ್ಮಿಸಿದಂತಹ ಪ್ರಸನ್ನ ವೆಂಕಟರಮಣ ಸ್ವಾಮಿ ದೇವಾಲಯವನ್ನು ಜೀರ್ಣೋದ್ಧಾರ ಮಾಡಿಸಿ ಆ ದೇವಾಲಯದ ಪುಷ್ಕರಣಿಯನ್ನು ನಿರ್ಮಿಸಿದನೆಂದು ಮಧುಗಿರಿ ತಾಲೂಕಿನ ೩೦ನೆಯ ಸಂಖ್ಯೆಯ ಶಾಸನ ತಿಳಿಸುತ್ತದೆ.

**ಮುಮ್ಮಡಿ ರಣಭೈರೇಗೌಡ:** ಹೊಳವನಹಳ್ಳಿ ಪ್ರಭುಗಳು ಶಿರಾದವರಿಗೆ ನೀಡಬೇಕಿದ್ದ ಖಂಡನಿ ಹಣವನ್ನು ನೀಡಲಾಗದ ರಾಜ್ಯ ಕಳೆದುಕೊಂಡಿದ್ದರು. ಫಡದುಲ್ಲಾಖಾನನು ಶಿರಾದ ನವಾಬನಾಗಿದ್ದ ಸಮಯದಲ್ಲಿ ಚಿಕ್ಕದೇವರಾಜ ಒಡೆಯರ್‌ರವರು ಶಿರಾದ ಮೇಲೆ ದಾಳಿ ಮಾಡಿ ಖಜಾನೆ ಲೂಟಿಗೈದು ಅಲ್ಲೋಲ ಕಲ್ಲೋಲವನ್ನುಂಟು ಮಾಡಿದರು. ಈ ಸನ್ನಿವೇಶವನ್ನು ಉಪಯೋಗಿಸಿಕೊಂಡು ಹೊಳವನಹಳ್ಳಿಯವರು ಪುನಃ ರಾಜ್ಯ ಪಡೆದುಕೊಂಡು ಆಳ್ವಿಕೆ ಮಾಡುತ್ತಿರುವ ಸಂದರ್ಭದಲ್ಲಿಯೇ ಕ್ರಿ.ಶ. ೧೬೭೮ರಲ್ಲಿ ಮದ್ದಗಿರಿಯ ಮೇಲೆ ಆಕ್ರಮಣ ಮಾಡಿದ ಒಡೆಯರು ಅದನ್ನು ಗೆದ್ದು ಅಲ್ಲಿನ ಚಿಕ್ಕಪ್ಪಗೌಡನಿಂದ ಅಧಿಕ ದ್ರವ್ಯ ಸಕಲ ಪದಾರ್ಥಗಳನ್ನು ದೋಚಿಕೊಂಡು ಮೈಸೂರಿಗೆ ಬರುವ ಮಾರ್ಗದಲ್ಲಿ ಚನ್ನರಾಯದುರ್ಗ, ಮಿಡಿಗೇಶಿ, ಕೊರಟಗೆರೆ, ಕೋಳಾಲ ಮೊದಲಾದ ಪ್ರದೇಶಗಳನ್ನು ಗೆದ್ದು ಪೊಗದಿ ಹಣ ನಿಷ್ಕರ್ಷೆ ಮಾಡಿಕೊಂಡು ಹಿಂತಿರುಗಿದನು. ಹೀಗೆ ಹೊಳವನಹಳ್ಳಿ ಕೊರಟಗೆರೆ ಪ್ರದೇಶವು ಮೈಸೂರು ಒಡೆಯರ ಅಧೀನಕ್ಕೆ ಹೋಯಿತು. ಇಮ್ಮಡಿ ಕೃಷ್ಣರಾಜ ಒಡೆಯರ್‌ರವರ ಕಾಲದಲ್ಲಿ ಮದ್ದಗಿರಿ ಅದರ ಗಡಿ ಪ್ರಾಂತ್ಯವಾಗಿದ್ದು, ಅದನ್ನು ಮಲ್ಲರಾಜಯ್ಯನು ನೋಡಿಕೊಳ್ಳುತ್ತಿದ್ದನು. ಈ ಗಡಿ ಪ್ರಾಂತ್ಯದ ಹೊಳವನಹಳ್ಳಿ ಕೊರಟಗೆರೆಗಳೂ ಕೂಡ ಸೇರಿದ್ದವು. ಆಗ ಇಮ್ಮಡಿ ರಣಭೈರೇಗೌಡನು ಹೊಳವನಹಳ್ಳಿ ಕೊರಟಗೆರೆಯಲ್ಲಿ ಆಳ್ವಿಕೆ ನಡೆಸುತ್ತಿದ್ದನು. ಅವನು ಇಮ್ಮಡಿ ಕೃಷ್ಣರಾಜ ಒಡೆಯರಿಗೆ (ಕ್ರಿ.ಶ. ೧೭೩೪–೧೭೬೬) ಅತ್ಯಂತ ನಿಷ್ಠೆಯಿಂದ ಇದ್ದು ಅರಮನೆಗೆ ಸಲ್ಲಿಸುವ ಪೊಗದಿಯನ್ನು ತಪ್ಪದೆ ಸಲ್ಲಿಸುತ್ತಿದ್ದನು.

ಮುಮ್ಮಡಿ ರಣಭೈರೇಗೌಡನು ತಮ್ಮ ಪಿತೃ, ಪಿತಾಮಹ, ಪ್ರಪಿತಾಮಹರಿಗೆ ಸಾಲೋಕ್ಯ ಪದವಿ ಪ್ರಾಪ್ತವಾಗಬೇಕೆಂದು ಬಯಸಿ ಯಜುಶ್ಯಾಖೆಯ ಶ್ರೇಷ್ಠ ವಿದ್ವಾಂಸರಾದ ಮುಕುಂದನಾಯಕನ ಪುತ್ರನಾದ ಬಾಬುರಾಯನಿಗೆ ಅವರ ಆಳ್ವಿಕೆಯ ಕೊರಟಗೆರೆಯ ಸೀಮೆಗೆ ಸಲ್ಲುವ ಹುಲಿಕುಂಟೆ ಗ್ರಾಮದಲ್ಲಿನ ೧೫ ಕೊಳಗ ಭೂಮಿಯನ್ನು ಮತ್ತು ಮನೆಗೊಂದು ಹಣದಂತೆ ದಾನ ನೀಡಿರುವುದನ್ನು ಕ್ರಿ.ಶ. ೧೭೪೮ ರ ತಾಮ್ರ ಶಾಸನವು ತಿಳಿಸುತ್ತದೆ. (ಮಧುಗಿರಿ ೩೨)

ಹೀಗೆ ಮುಮ್ಮಡಿ ರಣಭೈರೇಗೌಡನು ಜನಾನುರಾಗಿಯಾಗಿ ಆಳ್ವಿಕೆ ಮಾಡುತ್ತಿರುವ ಕಾಲದಲ್ಲಿ ಅವನು ತೋಗರಿಘಟ್ಟದ ಗಿಡ್ಡೇಗೌಡನಿಗೆ ಸ್ಥಳಗೌಡಿಕೆಯನ್ನು ಕೊಟ್ಟಿದ್ದಲ್ಲದೆ ಅಲ್ಲಿನ ಒಂಬತ್ತು ಉಪಗ್ರಾಮಗಳನ್ನು ಕೂಡ ನೋಡಿಕೊಳ್ಳುವ ಜವಾಬ್ದಾರಿಯನ್ನು ಅವನಿಗೆ ನೀಡಿದ್ದನೆಂದು ಕ್ರಿ.ಶ. ೧೭೫೪ರ ಮತ್ತೊಂದು ಶಾಸನ ತಿಳಿಸುತ್ತದೆ. (ಮಧುಗಿರಿ ೪೩)

ಒಟ್ಟಿನಲ್ಲಿ ಇವನ ಆಳ್ವಿಕೆಯಲ್ಲಿ ತೋಗರಿಘಟ್ಟ, ಹುಲಿಕುಂಟೆ, ಕೊರಟಗೆರೆ ಸುತ್ತಮುತ್ತಲಿನ ಪ್ರದೇಶಗಳು ಸೇರಿದ್ದವೆಂದು ಹೇಳಬಹುದು. ಇದೇ ಸಮಯದಲ್ಲಿ ಮೈಸೂರಿನಲ್ಲಿ ರಾಜಕೀಯ ಬದಲಾವಣೆಗಳುಂಟಾಗಿ ಹೈದರಾಲಿ ಸರ್ವಾಧಿಕಾರಿಯಾಗಿದ್ದನು. ಅವನು ಸಣ್ಣಪುಟ್ಟ ಪಾಳೆಯಪಟ್ಟುಗಳ ಕಡು ವಿರೋಧಿಯಾಗಿದ್ದು ಅವುಗಳನ್ನು ದಮನ ಮಾಡಿದ್ದನು. ದೊಡ್ಡ ಸಂಸ್ಥಾನಗಳಾದ ಹಾಗಲವಾಡಿ, ಕೆಳದಿ, ಚಿತ್ರದುರ್ಗ, ಮಾಗಡಿಯಂತಹ ಸಂಸ್ಥಾನಗಳು ಹೈದರಾಲಿಯ ಅಧೀನಕ್ಕೆ ಒಳಪಟ್ಟಾಗ ಹೊಳವನಹಳ್ಳಿ ಕೊರಟಗೆರೆಯಂತಹ ಸಣ್ಣ ಸಂಸ್ಥಾನಗಳೂ ಹೈದರಾಲಿಗೆ ವಶವಾಯಿತು. ಹೀಗೆ ಮುಮ್ಮಡಿ ರಣಭೈರೇಗೌಡನ ಕಾಲದಲ್ಲಿ ಹೊಳವನಹಳ್ಳಿಯ ಆಡಳಿತ ಶ್ರೀರಂಗಪಟ್ಟಣಕ್ಕೆ ಹಸ್ತಾಂತರಗೊಂಡಿತು. ಈ ಕೊರಗಿನಲ್ಲಿಯೇ ಸಂಸ್ಥಾನ ಕಳೆದುಕೊಂಡ ಇಮ್ಮಡಿ ರಣಭೈರೇಗೌಡ ಮೃತನಾದನು.

**ದೊಡ್ಡರಣಭೈರೇಗೌಡ:** ತನ್ನ ತಂದೆಯು ಕಳೆದುಕೊಂಡಿದ್ದ ಸಂಸ್ಥಾನವನ್ನು ಮೈಸೂರರಸರಿಂದ ಪುನಃ ಪಡೆದುಕೊಳ್ಳಲು ದೊಡ್ಡಭೈರೇಗೌಡನು ಪ್ರಯತ್ನಿಸುತ್ತಿದ್ದನು. ಆದರೆ ಅದು ಹೈದರಾಲಿ ಇರುವವರೆಗೆ ಸಾಧ್ಯವಾಗಲಿಲ್ಲ. ಮೂರನೇ ಮೈಸೂರು ಯುದ್ಧದಲ್ಲಿ ಹೈದರಾಲಿಯ ಮಗನಾದ ಟಿಪ್ಪು ಸುಲ್ತಾನನ ಮೇಲೆ ಬ್ರಿಟಿಷರು ವಿಜಯ ಸಾಧಿಸಿದರು. ಈ ಸಂದರ್ಭದಲ್ಲಿ ದೊಡ್ಡರಣಭೈರೇಗೌಡನು ಶಕ್ತಿಮೀರಿ ಪ್ರಯತ್ನಿಸಿ ಬ್ರಿಟಿಷರ ಲಾರ್ಡ್ ಕಾರ್ನ್‌ವಾಲೀಸನಿಂದ ಕ್ರಿ.ಶ. ೧೭೯೨ರಲ್ಲಿ ಸಂಸ್ಥಾನವನ್ನು ಪಡೆದುಕೊಂಡನು. ಆದರೆ ಟಿಪ್ಪೂ ಸುಲ್ತಾನನು ಬ್ರಿಟೀಷರೊಡನೆ ಮಾಡಿಕೊಂಡಿದ್ದ ಸೈನಿಕ ಒಪ್ಪಂದವನ್ನು ಕಡೆಗಣಿಸಿ ಅವರಿಗೆ ಸೇರಿದ್ದ ಅನೇಕ ಪ್ರದೇಶಗಳನ್ನು ವಶಪಡಿಸಿಕೊಳ್ಳುತ್ತಿದ್ದ ಸಂದರ್ಭದಲ್ಲಿ ಹೊಳವನಹಳ್ಳಿಯನ್ನು ಟಿಪ್ಪೂ ಸುಲ್ತಾನನು ಮೈಸೂರು ರಾಜ್ಯಕ್ಕೆ ಸೇರಿಸಿಕೊಂಡನು. ಇದರಿಂದಾಗಿ ಸ್ವತಂತ್ರವಾಗಿ ಆಳ್ವಿಕೆ ನಡೆಸಬೇಕೆಂಬ ಹಂಬಲ ಇಟ್ಟುಕೊಂಡಿದ್ದ ದೊಡ್ಡರಣಭೈರೇಗೌಡನ ಆಸೆ ಈಡೇರದಾಯಿತು. ಈ ರೀತಿ ಹೊಳವನಹಳ್ಳಿಯು ಒಬ್ಬರಿಂದ ಮತ್ತೊಬ್ಬರಿಗೆ ಕೈಬದಲಾಗುತ್ತಿದ್ದರಿಂದ ಪ್ರಜಾಸೇವೆ ಮಾಡುವ ಅವಕಾಶವೇ ಅವನಿಗೆ ಸಿಗಲಿಲ್ಲ.

ಈ ಸಂತತಿಯ ಕೊನೆಯ ದೊರೆ ಕರಿಯಪ್ಪಗೌಡ. ಇವನಿಗೆ ವೆಂಕಟನಾರಾಯಣಸ್ವಾಮಿ, ಚಿಕ್ಕಪ್ಪಯ್ಯ, ಕಿರೀಟಪ್ಪಯ್ಯ, ಭೈರೇಗೌಡ ಎಂಬ ನಾಲ್ಕು ಜನ ಮಕ್ಕಳಿದ್ದರು. ಅವರು ಹುಲಿಕಲ್ಲು ಇನಮಿಂಚೇನಹಳ್ಳಿ ಎಂಬಲ್ಲಿದ್ದರು. ಹೀಗೆ ಆವತಿ ನಾಡ ಪ್ರಭುಗಳ ವಂಶದವರಿಂದ ಸ್ಥಾಪಿತವಾದ ಹೊಳವನಹಳ್ಳಿ ಕೊರಟಗೆರೆ ಸಂಸ್ಥಾನವು ದೀರ್ಘಕಾಲ ಆಳ್ವಿಕೆ ನಡೆಸಿ ಮೈಸೂರು ಸಂಸ್ಥಾನದಲ್ಲಿ ಅಂತಿಮವಾಗಿ ವಿಲೀನವಾಯಿತು.

**ಯಲಹಂಕ ನಾಡಪ್ರಭುಗಳು:** ಇವರು ಬೆಂಗಳೂರು, ಮಾಗಡಿ, ಕುಣಿಗಲ್ ಸುತ್ತಮುತ್ತಲಿನ ಪ್ರದೇಶದಲ್ಲಿ ತಮ್ಮದೇ ಆದ ಸಂಸ್ಥಾನವನ್ನು ನಿರ್ಮಿಸಿಕೊಂಡವರು. ಕುಣಿಗಲ್ ತಾಲೂಕಿನ ೨೫ನೇ ಶಾಸನದಲ್ಲಿ ಈ ಮನೆತನದ ಇಮ್ಮಡಿ ಹಿರೇಕೆಂಪೇಗೌಡನ ಉಲ್ಲೇಖವಿದ್ದು ಅವನು ಶ್ರೀರಂಗರಾಜನ ಅಧೀನನಾದ ಯಲಹಂಕ ನಾಡಿನ ಪ್ರಭುವೆಂದು ಕರೆಯಲ್ಪಟ್ಟಿದ್ದಾನೆ. ಇವನ ರಾಣಿಯ ಹೆಸರು ವೆಂಕಟಕೃಷ್ಣಾಜಮ್ಮ. ಅವಳು ತನ್ನ ಮಾವ ಇಮ್ಮಡಿ ಕೆಂಪೇಗೌಡ ಮತ್ತು ಅತ್ತೆ ಲಿಂಗಾಜಮ್ಮರ ನೆನಪಿನಲ್ಲಿ ಅಗ್ರಹಾರ ನಿರ್ಮಿಸಿದಳೆಂದು ಈ ಶಾಸನ ದಾಖಲಿಸಿದೆ. ಈ ಮನೆತನದ ಇನ್ನುಳಿದ ನಾಲ್ಕು ಶಾಸನಗಳಲ್ಲಿ ಒಂದು ಕ್ರಿ.ಶ.೧೬೪೯ಕ್ಕೆ ಸೇರಿದೆ. (ಕುಣಿಗಲ್ ೮೧) ಈ ಶಾಸನವು ಇಮ್ಮಡಿ ಹಿರೇಕೆಂಪೇಗೌಡನನ್ನು ಕುರಿತಾಗಿದ್ದು ಅವನ ಪಟ್ಟದ ನಾಟಕ ಶಾಲೆಯ ಶೃಂಗಾರಮ್ಮ, ಶೃಂಗಾರಸಾಗರ ಎಂಬ ಅಗ್ರಹಾರವನ್ನು ಮತ್ತು ಕೆರೆಯನ್ನು ಕಟ್ಟಿಸಿದ ಉಲ್ಲೇಖವಿದೆ. ಇದೇ ಮಹಿಳೆಯು ಶೃಂಗಾರ ಸಾಗರದಲ್ಲಿ ಬಸವ ಮಂಟಪವನ್ನು ನಿರ್ಮಿಸಿದ ವಿಷಯ ಕುಣಿಗಲ್ ತಾಲೂಕಿನ ೯೩ನೇ ಶಾಸನದಲ್ಲಿದೆ.

**ಹೆಬ್ಬೂರು ಗೌಡರು:** ಹೆಬ್ಬೂರಿನಲ್ಲಿ ಚಿಕ್ಕ ಜಮೀನ್ದಾರಿ ಗೌಡ ಮನೆತನವೊಂದು ಹಳೇಗೌಡ ಮತ್ತು ತಿಮ್ಮೇಗೌಡ ಎಂಬ ಸೋದರರ ನಾಯಕತ್ವದಲ್ಲಿ ವಿಜಯನಗರೋತ್ತರ ಕಾಲದಲ್ಲಿ ಉದಯವಾಯಿತು. ಆದರೆ ಮಾಗಡಿಯಲ್ಲಿ ಆಳ್ವಿಕೆ ಮಾಡುತ್ತಿದ್ದ ಯಲಹಂಕ ನಾಡಪ್ರಭು ಕೆಂಪೇಗೌಡನು ಹೆಬ್ಬೂರಿನ ಮೇಲೆ ದಾಳಿ ಮಾಡಿ ಅದನ್ನು ಗೆದ್ದುಕೊಂಡನು. ನಂತರ ಇದನ್ನು ಹಾಗಲವಾಡಿ ಅರಸರು ವಶಪಡಿಸಿಕೊಂಡರು. ಅಂತಿಮವಾಗಿ ಇದು ಮೈಸೂರಿನ ಚಿಕ್ಕದೇವರಾಜ ಒಡೆಯರ ಆಳ್ವಿಕೆಗೆ ಒಳಪಟ್ಟಿತು.

**ಮೈಸೂರು ಒಡೆಯರು:** ವಿಜಯನಗರದ ಆಳ್ವಿಕೆಯ ಕೊನೆಯಲ್ಲಿ ತಲೆ ಎತ್ತಿದ ಸಂಸ್ಥಾನಿಕರಲ್ಲಿ ಮೈಸೂರು ಒಡೆಯರು ಪ್ರಮುಖರು. ಈ ಒಡೆಯರ ರಾಜ್ಯವು ಇತ್ತೀಚಿನವರೆಗೆ ಅಂದರೆ ೧೯೫೦ರಲ್ಲಿ ಭಾರತದ ಒಕ್ಕೂಟದೊಡನೆ ವಿಲೀನವಾಗುವವರೆಗೂ ಅಸ್ತಿತ್ವದಲ್ಲಿತ್ತು. ಇವರು ವಿಜಯನಗರದ ವಾರಸುದಾರರಾಗಿ ಅಂದಿನ ರಾಜ್ಯಾಡಳಿತದ ಉದಾತ್ತ ತತ್ವಗಳನ್ನು ಮತ್ತು ಸಾಂಸ್ಕೃತಿಕ ಮೌಲ್ಯಗಳನ್ನು ನಡೆಸಿಕೊಂಡು ಬರುವಲ್ಲಿ ಸಫಲರಾದರು. ಜಿಲ್ಲೆಯಲ್ಲಿ ಈ ಮನೆತನಕ್ಕೆ ಸೇರಿದ ಒಟ್ಟು ೫೦ ಶಾಸನಗಳು ದೊರಕಿವೆ. ಇವುಗಳಲ್ಲಿ ಕ್ರಿ.ಶ.೧೬೬೩ರ ದಾಖಲೆಯು ಮೊದಲನೆಯದಾಗಿದ್ದರೂ ಇತರೆ ಸಾಹಿತ್ಯಕ ಆಧಾರಗಳು ಒಂದನೇ ಕಂಠೀರವ ನರಸರಾಜ ಒಡೆಯರ್ (೧೬೩೮–೧೬೫೯) ಕಾಲದಲ್ಲಿಯೇ ಈ ಜಿಲ್ಲೆಯ ಅನೇಕ ಭಾಗಗಳು ಅವರ ಅಧೀನದಲ್ಲಿದ್ದುದನ್ನು ತಿಳಿಸುತ್ತವೆ. ಇವರು ಕ್ರಿ.ಶ.೧೬೫೦ರಲ್ಲಿ ಹೆಬ್ಬೂರಿನ ಮೇಲೆ ದಾಳಿಮಾಡಿ ಯಲಹಂಕ ನಾಡಪ್ರಭು ಇಮ್ಮಡಿ ಕೆಂಪೇಗೌಡನ ಮಗನಾದ ಮುಮ್ಮಡಿ ಕೆಂಪೇಗೌಡನನ್ನು ಪರಾಭವಗೊಳಿಸಿ ಅದನ್ನು ಗೆದ್ದುಕೊಂಡರು. ಇದರ ಮೂಲಕ ಮೈಸೂರು ಒಡೆಯರು ತಮ್ಮ ರಾಜ್ಯವನ್ನು ಉತ್ತರ ಭಾಗಕ್ಕೆ ವಿಸ್ತರಿಸಲು ಸಹಾಯಕವಾಯಿತು. ಇವರ ನಂತರ ಆಳಿದ ದೇವರಾಜ ಒಡೆಯರು ಈ ಜಿಲ್ಲೆಯ ಕೆಲವು ಪ್ರದೇಶಗಳನ್ನು ಸಂಪೂರ್ಣ ಹತೋಟಿಗೆ ತಂದುಕೊಂಡರು. ಇಲ್ಲಿ ಶಾಸನಗಳನ್ನು ಹಾಕಿಸುವುದರ ಮೂಲಕ ತಮ್ಮ ಆಳ್ವಿಕೆಯನ್ನು ಸ್ಥಿರಗೊಳಿಸಿದರು. ಕ್ರಿ.ಶ.೧೬೬೩ರ ಕಾಲದ ಕುಣಿಗಲ್ ತಾಲೂಕಿನ ೩೭ನೇ ಶಾಸನವು ಇವರ ವಂಶಾವಳಿಯನ್ನು ನೀಡುತ್ತದೆ. ಆ ಪ್ರಕಾರ ಈ ಮನೆತನದ ಆರಂಭದಿಂದ ಯದುವಿನವರೆಗೂ ಬರುತ್ತದೆ. ಶಾಸನವು ಎಲ್ಲ ಸದ್ಗುಣಗಳ ಗಣಿ ಆಗಿದ್ದ ದೇವರಾಜ ಒಡೆಯರು ವಿಶ್ವೇಶ್ವರ ಎಂಬ ವಿದ್ವಾಂಸನಿಗೆ ಹೊಯ್ಸಳನಾಡಿಯಲ್ಲಿ ಹಾಲಗೆರೆಯನ್ನು ದಾನವಾಗಿ ಕೊಟ್ಟು ಅಲ್ಲಿ ೫೦ ಮನೆಗಳನ್ನು ಕಟ್ಟಿಸಿ ವಿದ್ವಾಂಸರಿಗೆ ಹಂಚಿದನೆಂದು ತಿಳಿಸುತ್ತದೆ. ಕುಣಿಗಲ್ ತಾಲೂಕಿನ ಕಗ್ಗೆರೆ ಶಾಸನವು ಕ್ರಿ.ಶ.೧೬೬೪ರಲ್ಲಿ ಅರವೀಡು ಶ್ರೀರಂಗರಾಯನಿಗೆ ಮೈಸೂರಿನ ದೇವರಾಜ ಒಡೆಯರು ಅಧೀನರಾಗಿದ್ದರೆಂದೂ, ಈ ದೇವರಾಜರ ಸೇನಾಧಿಕಾರಿಯಾಗಿದ್ದ ನಂದಿನಾಥಯ್ಯ ಇಕ್ಕೇರಿ ಅರಸರ ಮೇಲೆ ದಾಳಿ ಮಾಡಿ ವಿಜಯ ಪಡೆದ ನೆನಪಿಗಾಗಿ ತೋಂಟದ ಸಿದ್ದೇಶ್ವರಸ್ವಾಮಿಗೆ ಕಗ್ಗೆರೆ ಗ್ರಾಮವನ್ನು ದಾನವಾಗಿ ನೀಡಿದನೆಂಬ ಅಂಶವನ್ನು ತಿಳಿಸುತ್ತದೆ. ಇವರ ರಾಜ್ಯಕ್ಕೆ ಜಿಲ್ಲೆಯ ಕುಣಿಗಲ್, ಗುಬ್ಬಿ, ತುಮಕೂರು, ಚಿಕ್ಕನಾಯಕನಹಳ್ಳಿ, ತಿಪಟೂರು, ತುರುವೇಕೆರೆ ಪ್ರದೇಶಗಳು ಸೇರಿದ್ದವು.

ಚಿಕ್ಕದೇವರಾಜ ಒಡೆಯರ (ಕ್ರಿ.ಶ. ೧೬೭೩–೧೭೦೪) ಕಾಲಕ್ಕೆ ಸಂಬಂಧಿಸಿದ ಶಾಸನಗಳೂ ದೊರೆತಿದ್ದು ಚಾಮರಾಜನಗರ ತಾಲೂಕಿನ ೯೨ರ ಶಾಸನವು ಕ್ರಿ.ಶ.೧೬೭೫ಕ್ಕೆ ಸೇರಿದ್ದು ಅದರಲ್ಲಿ ಒಡೆಯರು ಈ ಜಿಲ್ಲೆಯಲ್ಲಿ ಮಾಡಿದ್ದ ಯುದ್ಧಗಳನ್ನು ದಾಖಲಿಸಲಾಗಿದೆ. ಇದರ ಪ್ರಕಾರ ಒಡೆಯರು ಕ್ಯಾತ್ಸಂದ್ರ, ಕಂದಿಕೆರೆ, ಹಂದಲಕೆರೆ, ಗೂಳೂರು, ತುಮಕೂರು, ಹೊನ್ನವಳ್ಳಿಯನ್ನು ಗೆದ್ದುಕೊಂಡಿದ್ದರೆಂದು ಗೊತ್ತಾಗುತ್ತದೆ. ಇವರು ನರಸನಾಯಕ ಎಂಬುವನನ್ನು ಸೋಲಿಸಿ ಅವನಿಂದ ಜಟಕನದುರ್ಗ ವಶಪಡಿಸಿಕೊಂಡು ಅದಕ್ಕೆ ಚಿಕ್ಕದೇವರಾಯನದುರ್ಗವೆಂದು ಮರು ನಾಮಕರಣ ಮಾಡಿದರು. ಶ್ರೀರಂಗಪಟ್ಟಣದ ಕ್ರಿ.ಶ.೧೬೯೯ರ ಶಾಸನವು ಮಧುಗಿರಿಯ ಮಹಾನಾಡಪ್ರಭುಗಳನ್ನು ಸೋಲಿಸಿ ಅವರಿಂದ ಮಧುಗಿರಿ, ಮಿಡಿಗೇಶಿ, ಬಿಜ್ಜಾವರ, ಚನ್ನರಾಯದುರ್ಗಗಳನ್ನು ವಶಪಡಿಸಿಕೊಂಡರೆಂದು ತಿಳಿಸುತ್ತದೆ. ಇದರಿಂದ ಮೈಸೂರು ರಾಜ್ಯವು ವಿಶಾಲವಾಗಿ ಪ್ರಬಲ ಕೋಟೆಗಳ ಸಮೂಹವನ್ನೇ ಪಡೆದಿತ್ತೆಂದು ಹೇಳಬಹುದು. ಇವರ ಆಳ್ವಿಕೆಯ ಕೊನೆಯ ವರ್ಷಗಳಲ್ಲಿ ತುಮಕೂರು ಜಿಲ್ಲೆಯ ಬಹುಭಾಗ ಮೈಸೂರು ಒಡೆಯರ ಅಧೀನದಲ್ಲಿತ್ತು.

ಕೃಷ್ಣರಾಜ ಒಡೆಯರು ಶ್ರೀರಂಗಪಟ್ಟಣದಲ್ಲಿ ಆಳ್ವಿಕೆ ನಡೆಸುತ್ತಿದ್ದಾಗ ಶೂರಗಿರಿದುರ್ಗದ ಲಕ್ಷ್ಮೀನರಸಿಂಹ ದೇವರ ಪೂಜಾಕಾರ್ಯಗಳಿಗೆ ನರಸಿಂಹಪುರ ಎಂದು ಕರೆಯಲ್ಪಡುತಿದ್ದ ಗೊಟ್ಟಿಕೆರೆ ಗ್ರಾಮವನ್ನು ದಾನವಾಗಿ ನೀಡಿದರು. ಈ ಲಕ್ಷ್ಮೀನರಸಿಂಹನ ಮೂರ್ತಿಯನ್ನು ದಳವಾಯಿ ದಾಸರಾಜಯ್ಯ ಪ್ರತಿಷ್ಠಾಪಿಸಿದ್ದನು. ನರಸಿಂಹಸ್ವಾಮಿ ದೇವಾಲಯದಲ್ಲಿ ಕಲ್ಲೂರಿನ ಕೆಂಪದಾಸಯ್ಯನು ಒಂದು ಪವಾಡವನ್ನು ಜರುಗಿಸಿದ್ದಕ್ಕಾಗಿ ಅವನಿಗೆ ಕೆಲವು ದತ್ತಿಗಳನ್ನು ನೀಡಲಾಯಿತು ಎಂಬ ವಿಷಯವೂ ಇದರಲ್ಲಿದೆ. ಕ್ರಿ.ಶ.೧೭೬೩ರಲ್ಲಿ ಇಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಸೈದು ಯಾಕೂಬ ಬುಕಾರಿ ಎಂಬುವನು ಸರ್ಕಾರಿ ಖಜಾನೆಗೆ ಕಂದಿಕೆರೆ ಸ್ಥಳದ ಬೆಳವಾಡಿ ಮತ್ತು ಅದರ ಉಪಗ್ರಾಮದ ಬೆಲೆಯನ್ನು ಕಟ್ಟಿ ಆರೀಫ್‌ಶಾಕಾದ್ರಿ ಫಕೀರ್ ಎಂಬ ದರ್ಗಾಕ್ಕೆ ನೀಡಿ ಅದನ್ನು ಅವರು ವಂಶಪಾರಂಪರ್ಯವಾಗಿ ಅನುಭವಿಸಬೇಕೆಂದು ಹೇಳುವ ವಿಷಯವನ್ನು ಶಾಸನವು ಒಳಗೊಂಡಿದೆ. ಹೈದರಾಲಿ ಕಾಲದ ಶಾಸನವು ಶಿರಾ (೯೬)ದಲ್ಲಿ ದೊರೆತಿದ್ದು ಅದರಲ್ಲಿ ಅವನು ಚಿಕ್ಕಸೀಬಿ ಎಂಬ ಹಳ್ಳಿಯನ್ನು ಸೀಬಿಯ ನರಸಿಂಹಸ್ವಾಮಿ ದೇವಾಲಯಕ್ಕೆ ದಾನ ಕೊಟ್ಟನೆಂದು ಹೇಳುತ್ತದೆ. ನಂತರ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದ ಕ್ರಿ.ಶ.೧೮೫೮ರ ತುಮಕೂರು ತಾಲೂಕಿನ ೪೧ ಮತ್ತು

೪೨ನೇ ಶಾಸನಗಳು ಆತನ ರಾಣಿ ಮುದ್ದುಕೃಷ್ಣಮಾಂಬೆಯು ದೇವರಾಯನದುರ್ಗದ ನರಸಿಂಹಸ್ವಾಮಿ ದೇವಾಲಯದ ಗೋಪುರವನ್ನು ನವೀಕರಿಸಿದ್ದನ್ನು ದಾಖಲಿಸಿವೆ. ಕೃಷ್ಣರಾಜ ಒಡೆಯರ ಆದೇಶದಂತೆ ದೇವಾಲಯದಲ್ಲಿ ವಿಷ್ಣುವಿನ ದಶಾವತಾರದ ಗಾರೆಶಿಲ್ಪಗಳನ್ನು ಬಿಡಿಸಲಾಯಿತು. ಈ ಜಿಲ್ಲೆಯು ಮೈಸೂರು ರಾಜ್ಯಕ್ಕೆ ಸೇರಿದ ಪರಿಣಾಮವಾಗಿ ಅನೇಕ ಆಡಳಿತಾತ್ಮಕ ಬದಲಾವಣೆಗಳುಂಟಾಗಿ ಜನಜಾಗೃತಿ ಮೂಡಿ,ಇಲ್ಲಿನ ಜನತೆ ನಿಧಾನವಾಗಿ ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿದರು.

**ರಾಷ್ಟ್ರೀಯ ಚಳವಳಿಯಲ್ಲಿ ತುಮಕೂರು ಜಿಲ್ಲೆಯ ಪಾತ್ರ:** ದೇಶದ ಸ್ವಾತಂತ್ರ್ಯ ಚಳವಳಿಯು ಭಾರತದಾದ್ಯಂತ ಬ್ರಿಟಿಷ್ ವಿರೋಧಿ ಚಳವಳಿಯಾಯಿತು. ಆ ಸರ್ಕಾರದ ಅರೆಪಾಲುದಾರರಾಗಿದ್ದ ಸಂಸ್ಥಾನಗಳು ಕೂಡ ಅದರ ಪಾಲುದಾರರಾದರು. ಸಂಸ್ಥಾನ ಸರ್ಕಾರದ ವಿರೋಧಿ ಚಳವಳಿಗಳು ಮೈಸೂರು ಸಂಸ್ಥಾನದಲ್ಲೂ ಕೂಡ ನಡೆದಿವೆ. ಅ ಸಂಸ್ಥಾನಕ್ಕೆ ಸೇರಿದ್ದ ಒಂದು ಪ್ರಮುಖ ಜಿಲ್ಲೆಯಾಗಿ ರೂಪುಗೊಂಡಿದ್ದ ತುಮಕೂರು ಜಿಲ್ಲೆಯ ಜನವಿರೋಧವನ್ನೂ ಮಹಾರಾಜರು ಮತ್ತು ಅವರ ಸರ್ಕಾರ ಎದುರಿಸಬೇಕಾಯಿತು.

ಭಾರತ ರಾಷ್ಟ್ರೀಯ ಕಾಂಗ್ರೆಸಿನ ಮೊದಲ ಅಧಿವೇಶನ ೧೮೮೫ರಲ್ಲಿ ಜರುಗಿತು. ಇದರ ಮೊದಲ ಅಧ್ಯಕ್ಷರು ಉಮೇಶ್ ಚಂದ್ರ ಬ್ಯಾನರ್ಜಿ. ೧೮೮೫ ರಿಂದ ೧೯೦೫ ರ ವರೆಗಿನ ಸುಮಾರು ೨೦ ವರ್ಷಗಳ ಹೋರಾಟದಲ್ಲಿ ಈ ಸಂಸ್ಥೆ ವಿವಿಧ ನಾಯಕರ ನೇತೃತ್ವದಲ್ಲಿ ಅನೇಕ ಚಳುವಳಿಗಳನ್ನು ಸಂಘಟಿಸಿತು. ಅದು ನಡೆಸಿದ ಪ್ರಬಲ ಚಳುವಳಿಯೆಂದರೆ ೧೯೦೬ ರಿಂದ ೧೯೧೧ರ ವರೆಗೆ ನಿರಂತರವಾಗಿ ನಡೆದ ಬಂಗಾಳ ವಿಭಜನೆ ವಿರುದ್ಧದ ಚಳವಳಿಯಾಗಿತ್ತು. ಇದರ ವಿರುದ್ಧ ಸರ್ಕಾರ ಅಮಾನುಷ, ದಮನಕಾರಿ ಕೃತ್ಯಗಳನ್ನು ಎಸಗಿದರೂ ಕೊನೆಗೆ ಹೋರಾಟ ಯಶಸ್ವಿಯಾಗಿ ಬಂಗಾಳದ ವಿಭಜನೆ ರದ್ದಾಯಿತು. ಇದರಿಂದ ದೇಶದಲ್ಲಿ ಒಂದು ರಾಜಕೀಯ ಜಾಗೃತಿ ಉಂಟಾಯಿತು.

ಇಂತಹ ಘಟನೆಗಳು ದೇಶದಲ್ಲಿ ನಡೆಯುತ್ತಿದ್ದರೂ ಮೈಸೂರು ಮಹಾರಾಜರ ಆಳ್ವಿಕೆಗೆ ಒಳಪಟ್ಟಿದ್ದ ತುಮಕೂರು ಪ್ರದೇಶ ಮೌನ ವಹಿಸಿತ್ತು. ಏಕೆಂದರೆ, ಭಾರತದ ಇತರೆ ಭಾಗಗಳಲ್ಲಿ ಬ್ರಿಟಿಷರ ನೇರ ಆಳ್ವಿಕೆ ಇದ್ದಂತೆ, ಮೈಸೂರಿನಲ್ಲಿ ಅವರ ನೇರ ಆಳ್ವಿಕೆ ಇರಲಿಲ್ಲ. ಪರೋಕ್ಷವಾಗಿ ಅವರು ಆಡಳಿತ ನಿಯಂತ್ರಿಸುತ್ತಿದ್ದರು. ಈ ಪ್ರದೇಶದ ಜನತೆ ಮಹಾರಾಜರ ಮೇಲಿನ ಗೌರವದಿಂದ ಮೌನವಹಿಸಿದ್ದಿರಬಹುದು. ಅಲ್ಲದೆ ೧೮೮೧ರಲ್ಲಿ ಮೈಸೂರು ಮಹಾರಾಜರಿಗೆ ಬ್ರಿಟಿಷರು ರಾಜ್ಯವನ್ನು ಪುನಃ ಕೊಟ್ಟಾಗ, ಅವರು ಪ್ರಜಾಪ್ರತಿನಿಧಿಸಭೆಯನ್ನು ಸ್ಥಾಪಿಸಿ, ಆ ಸಭೆಯಲ್ಲಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಮುಖಂಡರಿಗೆ ಅವಕಾಶ ನೀಡಿದರು. ಇದರ ಪರಿಣಾಮವಾಗಿ, ತಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವ ಜವಾಬ್ದಾರಿಯು ಪ್ರಜಾಪ್ರತಿನಿಧಿ ಸಭೆಯ ಸ್ಥಳೀಯ ಸದಸ್ಯ ರದಾಗಿತ್ತು. ಇಂತಹ ಸಭೆಯು ದೇಶದ ಚರಿತ್ರೆಯಲ್ಲಿಯೇ ಮೊಟ್ಟಮೊದಲನೆಯದಾಗಿದೆ. ೧೯೦೭ರಲ್ಲಿ ಲೆಜಿಸ್ಲೇಟಿವ್ ಕೌನ್ಸಿಲ್ ಸ್ಥಾಪಿಸಿ ಹಿರಿಯರಿಗೆ ತಮ್ಮ ಅನುಭವಗಳನ್ನು ಧಾರೆಯೆರೆದು ಕೊಡಲು ಇಲ್ಲಿನ ಸರ್ಕಾರ ಅನುವು ಮಾಡಿಕೊಟ್ಟಿತು. ಆದರೆ ಇಲ್ಲಿ ಆಡಳಿತ ನಡೆಸುತ್ತಿದ್ದ ದಿವಾನರು ತಮ್ಮ ಸಾರ್ವಭೌಮರ ಒತ್ತಡಕ್ಕೆ ಮಣಿದು ಜನತೆಯ ಆಸೆ ಆಕಾಂಕ್ಷೆಯನ್ನು ಕತ್ತರಿಸಿ ಹಾಕಲು ಪ್ರಯತ್ನಿಸಿದರು. ಆದರೂ, ಸಾರ್ವಜನಿಕ ಹಿತಾಸಕ್ತಿಯನ್ನು ಹೊಂದಿದ್ದ ದಿವಾನರು, ಜನತೆಯಲ್ಲಿ ಹಕ್ಕುಗಳ ಬಗ್ಗೆ ಮತ್ತು ಪ್ರಜಾಸಂಸ್ಥೆಗಳ ಬೆಳವಣಿಗೆಯ ಬಗ್ಗೆ ತಿಳುವಳಿಕೆ ಮೂಡಿಸಿ ಅವರಲ್ಲಿ ಜಾಗೃತಿಯನ್ನುಂಟು ಮಾಡಿದರು. ಈ ಜಾಗೃತಿ ತುಮಕೂರು ಪ್ರದೇಶದಲ್ಲಿಯೂ ನಡೆಯಿತು.

ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷವು ಬಾಲಗಂಗಾಧರ ತಿಲಕ್, ಲಾಲಲಜಪತ್‌ರಾಯ್, ಬಿಪಿನ್ ಚಂದ್ರಪಾಲ್ ನೇತೃತ್ವದಲ್ಲಿ ಸ್ವದೇಶಿ ಚಳವಳಿಯನ್ನು ನಡೆಸುತ್ತಿದ್ದ ಸಂದರ್ಭದಲ್ಲಿ ಕಾಂಗ್ರೆಸ್ ನಾಯಕರು ಕರ್ನಾಟಕದ ಉತ್ತರ ಭಾಗದಲ್ಲಿ ಪ್ರವಾಸ ಮಾಡಿ ಸ್ವರಾಜ್ಯ, ಸ್ವದೇಶಿ, ಮೊದಲಾದ ಪರಿಕಲ್ಪನೆಗಳ ಬಗ್ಗೆ ಜನಜಾಗೃತಿಯನ್ನುಂಟು ಮಾಡುತ್ತಿದ್ದರು. ಆದರೆ ಅದೇ ಸಂದರ್ಭದಲ್ಲಿ ದಕ್ಷಿಣ ಕರ್ನಾಟಕದಲ್ಲಿ ಇದು ಅಷ್ಟಾಗಿರಲಿಲ್ಲ. ಆದರೆ ಕ್ರಮೇಣ ಬಾಲಗಂಗಾಧರ ತಿಲಕರ ನೇತೃತ್ವದಿಂದ ಮಹಾತ್ಮಗಾಂಧೀಜಿಯವರ ನೇತೃತ್ವಕ್ಕೆ ಕಾಂಗ್ರೆಸ್ ನಿಧಾನವಾಗಿ ಹೊರಳತೊಡಗಿತು. ಆ ಸಂದರ್ಭದಲ್ಲಿ ಇಲ್ಲಿ ಹೆಚ್. ಚೆನ್ನಯ್ಯ ಮತ್ತು ಅವರ ಸಹಚರರು "ಪ್ರಜಾಮಿತ್ರ ಮಂಡಳಿ" ಯನ್ನು ಸ್ಥಾಪಿಸಿಕೊಂಡು ಹಿಂದುಳಿದ ವರ್ಗಗಳ ಪ್ರಗತಿಗೆ ಹೋರಾಟ ಮಾಡಲಾರಂಭಿಸಿದರು. ಅವರು ಪ್ರಜಾಪ್ರತಿನಿಧಿಸಭೆ ಮತ್ತು ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳಲ್ಲಿ

ಪ್ರಜಾಪ್ರಭುತ್ವ ಮಾದರಿಯ ಸುಧಾರಣೆ ತರಬೇಕೆಂದು ವಾದಿಸಿದರು! ಈ ಪ್ರಜಾಮಿತ್ರ ಮಂಡಳಿಯು ೧೯೧೮ರಲ್ಲಿ ತನ್ನ ಅಭಿಪ್ರಾಯಗಳನ್ನು ಪ್ರಚಾರ ಮಾಡಲು ತನ್ನದೇ ಪತ್ರಿಕೆಯನ್ನು ಹೊರತಂದಿತು. ಇದರಿಂದ ಉತ್ತೇಜಿತರಾದ ತುಮಕೂರು ಜಿಲ್ಲೆಯ ಕೆಲವು ಯುವಕರು ಈ ಹೋರಾಟಕ್ಕೆ ಧುಮುಕಿದರು. ಅವರಲ್ಲಿ ತಿಪಟೂರಿನ ಡಿ.ಎಸ್.ಮಲ್ಲಪ್ಪನವರು ಅಗ್ರಗಣ್ಯರು. ಆ ವೇಳೆಗಾಗಲೇ ಅವರು ನ್ಯಾಯ ವಿಧಾಯಕ ಸಭೆಯ ಸದಸ್ಯರಾಗಿದ್ದರು. ಅವರು ಈ ಜಿಲ್ಲೆಯಲ್ಲಿ ಪ್ರಜಾಪಕ್ಷವನ್ನು ಸ್ಥಾಪಿಸಿದರು. ಈ ಪಕ್ಷದ ಅಧಿವೇಶನಗಳು ಚನ್ನಪಟ್ಟಣ ಮತ್ತು ತುಮಕೂರಿನಲ್ಲಿ ನಡೆದಾಗ ಅದರ ಅಧ್ಯಕ್ಷರಾಗಿ ಅಧಿವೇಶನವನ್ನು ವ್ಯವಸ್ಥಿತವಾಗಿ ಸಂಘಟಿಸಿದರು. ಈ ಅಧಿವೇಶನದಲ್ಲಿ ಅವರು ಜವಾಬ್ದಾರಿ ಸರ್ಕಾರವನ್ನು ದಯಪಾಲಿಸುವಂತೆ ಮಹಾರಾಜಗೆ ಒತ್ತಾಯಿಸಿದರು. ಹೀಗೆ ತುಮಕೂರು ಜಿಲ್ಲೆಯಲ್ಲಿ ಮೊಟ್ಟಮೊದಲ ಭಾರಿಗೆ ಸ್ವಾತಂತ್ರ್ಯ ಹೋರಾಟದ ಕಿಡಿ ಹತ್ತಿತು. ಕಾಂಗ್ರೆಸಿನ ಅಗ್ರಮಾನ್ಯ ನಾಯಕರಾಗಿದ್ದ ಲೋಕಮಾನ್ಯ ತಿಲಕರು ೧೯೨೦ರಲ್ಲಿ ಮರಣ ಹೊಂದಿದರು. ಆಗ ಇಡೀ ದೇಶದಾದ್ಯಂತ ಸಂತಾಪಸೂಚಕ ಸಭೆಗಳು ನಡೆದವು. ಅಂತಹ ಒಂದು ಸಂತಾಪ ಸೂಚಕ ಸಭೆಯನ್ನು ತುಮಕೂರಿನಲ್ಲಿ ಏಕೆ ಮಾಡಬಾರದು ಎಂಬ ಆಲೋಚನೆಯನ್ನು ಮಾಡಿದ ಕೆಲವರು ಆ ಕಾರ್ಯಕ್ರಮವನ್ನು ಸಂಘಟಿಸಿಯೇ ಬಿಟ್ಟರು. ಅದರಂತೆ ತುಮಕೂರು ನಗರದ ನಾಟಕ ಥಿಯೇಟರ್‌ನಲ್ಲಿ ಏರ್ಪಾಟಾಯಿತು. ಅಂದು ಈ ಸಭೆಯಲ್ಲಿ ಬೆಂಗಳೂರು ಪುರಸಭೆಯ ಅಧ್ಯಕ್ಷರಾದ ಎಸ್.ಸೆಟ್ಲೂರ್ ರವರು ಆಗಮಿಸಿದ್ದರು. ಅಂದಿನ ಸಭೆಯಲ್ಲಿ ಜಿಲ್ಲೆಯವರೇ ಆಗಿದ್ದ ತಾಳಕೆರೆ ಸುಬ್ರಹ್ಮಣ್ಯ, ಕೆ.ರಂಗಯ್ಯಂಗಾರ್ ಭಾಷಣ ಮಾಡಿದರು. ಅಂದು ಎಸ್.ಸೆಟ್ಲೂರ್‌ರವರು ಮಾಡಿದ ಭಾಷಣ ತುಮಕೂರು ಜಿಲ್ಲೆಯ ಜನತೆಯ ಮೇಲೆ ಪರಿಣಾಮವನ್ನುಂಟು ಮಾಡಿ ಅವರನ್ನು ಹೋರಾಟಕ್ಕೆ ಧುಮುಕಲು ಪ್ರೇರೇಪಿಸಿತು.

ಸ್ವಾತಂತ್ರ್ಯ ಚಳವಳಿಯ ಇತಿಹಾಸದಲ್ಲಿ ೧೯೨೦ ರಲ್ಲಿ ನಡೆದ ನಾಗಪುರ ಕಾಂಗ್ರೆಸ್ ಅಧಿವೇಶನ ಒಂದು ಮೈಲಿಗಲ್ಲು. ಈ ಅಧಿವೇಶನ ಭಾಷೆಯ ಆಧಾರದ ಮೇಲೆ ಪ್ರಾಂತೀಯ ಕಾಂಗ್ರೆಸ್‌ಗಳ ರಚನೆಗೆ ಅನುಮತಿ ನೀಡಿತು. ಅಲ್ಲದೆ, ಸಂಸ್ಥಾನಗಳ ಆಂತರಿಕ ವಿಷಯದಲ್ಲಿ ಹಸ್ತಕ್ಷೇಪ ಮಾಡಬಾರದೆಂದೂ ಹೇಳಿತು. ಆದರೆ ಸಂಸ್ಥಾನಗಳು ರಚನಾತ್ಮಕ ಕಾರ್ಯಗಳ ಮೂಲಕ ತಮ್ಮ ರಾಜಕೀಯ ಗುರಿ ಸಾಧಿಸಿಕೊಳ್ಳಬೇಕೆಂದು ಸೂಚಿಸಿತು. ಈ ನಿಟ್ಟಿನಲ್ಲಿ ಕರ್ನಾಟಕದಲ್ಲೂ ಕೂಡ ಜಿಲ್ಲಾ ಮತ್ತು ಸ್ಥಳೀಯ ಮಟ್ಟದಲ್ಲಿ ಕಾಂಗ್ರೆಸ್ ಸಂಸ್ಥೆಗಳು ಜನ್ಮತಾಳಿ ರಚನಾತ್ಮಕ ಕಾರ್ಯಗಳಲ್ಲಿ ತೊಡಗಿದವು. ೧೯೨೧ರಲ್ಲಿ ರಾಜ್ಯಾದ್ಯಂತ ಅನೇಕ ಕಾಂಗ್ರೆಸ್ ಕಮಿಟಿಗಳು ಆರಂಭವಾದಾಗ ಅವುಗಳಲ್ಲಿ ತುಮಕೂರು ಕಾಂಗ್ರೆಸ್ ಕಮಿಟಿ ಒಂದಾಗಿತ್ತು. ಅದರ ಸಂಸ್ಥಾಪಕ ಅಧ್ಯಕ್ಷರು ಶ್ರೀ ರಂಗಯ್ಯಂಗಾರ್. ಜಿಲ್ಲೆಯಲ್ಲಿ ರಾಷ್ಟ್ರೀಯ ಚಟುವಟಿಕೆಗಳಿಗೆ ಚಾಲನೆ ನೀಡಿದರು. ಈ ಚಟುವಟಿಕೆಗಳಲ್ಲಿ ಬಿ.ಸಿ. ನಂಜುಂಡಯ್ಯ, ತಾಳಕೆರೆ ಸುಬ್ಯಹ್ಮಣ್ಯ ಮೊದಲಾದವರು ಪಾಲ್ಗೊಂಡಿದ್ದರು. ಆಗ ಕಾಂಗ್ರೆಸ್ ಕಮಿಟಿಯಡಿಯಲ್ಲಿ ಹೋರಾಟದ ರೂಪುರೇಷೆಗಳನ್ನು ತಯಾರಿಸಲಾರಂಭಿಸಿದರು. ೧೯೨೨ರಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ವಾರ್ಷಿಕ ಅಧಿವೇಶನ ಗಯಾದಲ್ಲಿ ನಡೆದಾಗ ಜಿಲ್ಲೆಯ ಕಾಂಗ್ರೆಸ್ ನಾಯಕರಾಗಿದ್ದ ಶ್ರೀರಂಗಯ್ಯಂಗಾರ್ ಗಯಾ ಕಾಂಗ್ರೆಸ್ ಅಧಿವೇಶನದಿಂದ ಹಿಂತಿರುಗಿದ ಮೇಲೆ ರಾಷ್ಟ್ರೀಯ ಕಾಂಗ್ರೆಸ್ಸಿನ, ಸತ್ಯಾಗ್ರಹ, ಅಸಹಕಾರ ಕಾರ್ಯಕ್ರಮಗಳನ್ನು ಜಿಲ್ಲೆಯಲ್ಲೂ ಪ್ರಚಾರ ಮಾಡಿ ಬ್ರಿಟೀಷರ ವಿರುದ್ಧ ಜನಜಾಗೃತಿಯನ್ನುಂಟು ಮಾಡಿದರು. ಇದೇ ಕಾಲಕ್ಕೆ ಕೀರ್ತನಕಾರರಾಗಿದ್ದ "ಜಯರಾಮಚಾರ್ಯ ಕೊಪ್ಪಳ್" ರವರು ತುಮಕೂರು ಮತ್ತು ಮಧುಗಿರಿಗಳಲ್ಲಿ ಸ್ವಾತಂತ್ರ್ಯ ಹೋರಾಟದ ಬಗೆಗಿನ ಕೀರ್ತನೆಗಳನ್ನು ಹಾಡುವುದರ ಮೂಲಕ ಈ ಭಾಗದಲ್ಲಿ ಸ್ವಾತಂತ್ರ್ಯ ಜಾಗೃತಿಯನ್ನು ಮೂಡಿಸಿದರು. ೧೯೨೨ರಲ್ಲಿ ಈ ಕೀರ್ತನಕಾರರ ಕೀರ್ತನೆಗಳನ್ನು ಕೇಳಿ ಪ್ರಭಾವಿತರಾದ ಜನತೆ ಮಧುಗಿರಿಯಲ್ಲಿ ಬಾಲಗಂಗಾಧರ ತಿಲಕರ ನೆನಪಿಗಾಗಿ ಸಭಾಭವನವನ್ನು ಕಟ್ಟಿ ರಾಷ್ಟ್ರಪ್ರೇಮ ಮೆರೆದರು.

ಕರ್ನಾಟಕದ ಚರಿತ್ರೆಯಲ್ಲಿ ಬೆಳಗಾವಿಯಲ್ಲಿ ನಡೆದ ಕಾಂಗ್ರೆಸ್‌ನ ೩೯ನೇ ವಾರ್ಷಿಕ ಅಧಿವೇಶನವು ಬಹಳ ಮುಖ್ಯ ಈ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷತೆಯನ್ನು ಮಹಾತ್ಮ ಗಾಂಧೀಜಿ ವಹಿಸಿದ್ದರು. ಈ ಅಧಿವೇಶನದಲ್ಲಿ ಪಾಲ್ಗೊಳ್ಳಲು ಜಿಲ್ಲೆಯ ಕಾಂಗ್ರೆಸ್ ಧುರೀಣರಾದ ಕೆ.ರಂಗಯ್ಯಂಗಾರ್, ತಾಳಕೆರೆ ಸುಬ್ರಹ್ಮಣ್ಯ ಬೆಳಗಾವಿಗೆ ಹೋಗಿದ್ದರು. ಅವರಿಬ್ಬರು ಗಾಂಧೀಜಿಯ ವ್ಯಕ್ತಿತ್ವವನ್ನು ಅತ್ಯಂತ ಹತ್ತಿರದಿಂದ ಕಂಡು ಪ್ರಭಾವಿತರಾಗಿ ವಾಪಸಾದರು. ಬೆಳಗಾವಿ ಅಧಿವೇಶನದ ನಂತರ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಕ್ಕೆ ಹೊಸ ತಿರುವು ಬಂದಿತು. ಮಹಾತ್ಮ ಗಾಂಧೀಜಿ ಉತ್ತರ ಕರ್ನಾಟಕದಲ್ಲಿ ಸ್ವಾತಂತ್ರ್ಯ ಹೋರಾಟಕ್ಕೆ ಸ್ಫೂರ್ತಿಯ ಸೆಲೆಯಾಗಿದ್ದರೆ, ಗಾಂಧೀಜಿಯ ಕಾರ್ಯಕ್ರಮಗಳು ತುಮಕೂರು ಜಿಲ್ಲೆಯೂ ಸೇರಿದಂತೆ ದಕ್ಷಿಣ ಕರ್ನಾಟಕದ

ಜನರಿಗೆ ಸ್ಪೂರ್ತಿಯಾಗಿದ್ದವು. ಹೀಗೆ ಈ ಜಿಲ್ಲೆಯ ಕೆ.ರಂಗಯ್ಯಂಗಾರ್, ನೀಲಕಂಠರಾವ್, ತಾಳಕೆರೆ ಸುಬ್ರಹ್ಮಣ್ಯ, ಡಿ.ಎಸ್. ಮಲ್ಲಪ್ಪ, ಎಂ.ವಿ.ರಾಮರಾವ್ ಮೊದಲಾದ ಧುರೀಣರೆಲ್ಲ ಕಾಂಗ್ರೆಸ್ಸಿನ ರಾಷ್ಟ್ರೀಯ ಅಧಿವೇಶನಗಳಲ್ಲಿ ಪಾಲ್ಗೊಳ್ಳುತ್ತ ಅಲ್ಲಿ ತೆಗೆದುಕೊಳ್ಳುತ್ತಿದ್ದ ತೀರ್ಮಾನಗಳಿಗೆ ಅನುಗುಣವಾಗಿ ಜಿಲ್ಲೆಯಲ್ಲಿ ಗಾಂಧಿಮಾರ್ಗದಲ್ಲಿ ಹೋರಾಟ ರೂಪಿಸಿ ಸ್ವಾತಂತ್ರ್ಯದ ಕಿಚ್ಚನ್ನು ಹಚ್ಚಿದರು.

**ಮಹಾತ್ಮ ಗಾಂಧೀಜಿ ಆಗಮನ ಮತ್ತು ಚಳವಳಿ:** ಸ್ವಾತಂತ್ರ್ಯಪೂರ್ವದಲ್ಲಿ ಅಸ್ಪೃಶ್ಯರ ಸ್ಥಿತಿ ಅತ್ಯಂತ ಶೋಚನೀಯವಾಗಿತ್ತು. ಅವರಿಗೆ ಸಮಾಜದಲ್ಲಿ ಯಾವುದೇ ಅವಕಾಶಗಳು ಇರಲಿಲ್ಲ. ಊರಿನ ಹೊಲಸನ್ನು ಶುದ್ಧಗೊಳಿಸುವುದು, ಸತ್ತ ಪ್ರಾಣಿಗಳ ಚರ್ಮ ಸುಲಿದು ಹದ ಮಾಡಿ ಪಾದರಕ್ಷೆಗಳನ್ನು ತಯಾರಿಸುವುದು ಇವರ ಕಾರ್ಯವಾಗಿತ್ತು. ಅವರು ಪಾದರಕ್ಷೆ ತಯಾರಿಸಿದರೂ ಅದನ್ನು ಉಪಯೋಗಿಸುವಂತಿರಲಿಲ್ಲ. ದೇವಾಲಯಗಳಿಗೆ ಪ್ರವೇಶವಿರಲಿಲ್ಲ. ಈ ರೀತಿ ಅವರನ್ನು ಸಮಾಜದ ಎಲ್ಲಾ ವಲಯಗಳಲ್ಲಿ ಶೋಷಿಸಲಾಗುತ್ತಿತ್ತು. ಅಸಮಾನತೆಯನ್ನು ಹೋಗಲಾಡಿಸುವ ಸಲುವಾಗಿ ಗಾಂಧೀಜಿ ಹರಿಜನೋದ್ಧಾರ ಚಳವಳಿಯನ್ನು ಆರಂಭಿಸಿದರು. ಜೊತೆಗೆ ಸ್ವದೇಶಿ ಚಳುವಳಿಯ ಭಾಗವಾದ ಸ್ವದೇಶಿ ವಸ್ತ್ರಗಳ ಬಳಕೆಯ ಪ್ರಚಾರವನ್ನು ಕೈಗೊಂಡರು. ಸ್ವದೇಶಿ ವಸ್ತ್ರಗಳಲ್ಲಿ ಅವರು ಆಯ್ಕೆ ಮಾಡಿಕೊಂಡಿದ್ದುದು ಖಾದಿ. ಅಂತಹ ಖಾದಿಪ್ರಚಾರಕ್ಕಾಗಿ ಗಾಂಧೀಜಿ ತುಮಕೂರು ಜಿಲ್ಲೆಗೆ ಆಗಮಿಸಿದರು. ೧೯೨೭ ಜುಲೈ ೧೪ರಂದು ಗಾಂಧೀಜಿ ತುಮಕೂರಿಗೆ ಬಂದಾಗ ಕೆ.ರಂಗಯ್ಯಂಗಾರ್ ನೇತೃತ್ವದ ಸ್ವಾಗತ ಸಮಿತಿ ಅವರನ್ನು ಸ್ವಾಗತಿಸಿತು. ಆಗ ಕೆ.ರಂಗಯ್ಯಂಗಾರ್ ರವರು ತುಮಕೂರು ಪುರಸಭೆಯ ಮೊಟ್ಟಮೊದಲ ಚುನಾಯಿತ ಅಧ್ಯಕ್ಷರಾಗಿದ್ದರು. ಮಹಾತ್ಮಗಾಂಧೀಜಿ ಜೊತೆಗೆ ಕಸ್ತೂರ್‌ಬಾ ಗಾಂಧಿ, ಗಂಗಾಧರರಾವ್ ದೇಶಪಾಂಡೆ, ಮಹದೇವ ದೇಸಾಯಿ, ಮಣಿಬೆಹನ್ ಪಟೇಲ್, ದೇವದಾಸ್ ಗಾಂಧಿ ಮತ್ತು ಬೃದುಲ್ಲಾ ಸಾರಾಬಾಯ್ ಇದ್ದರು. ಗಾಂಧೀಜಿಯವರು ಅಂದು ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಿದರು. ಅದು ಮುಗಿದ ನಂತರ ಗಾಂಧೀಜಿ ತುಮಕೂರಿನ ಆದಿಕರ್ನಾಟಕ ಜನರಿದ್ದ ಕೇರಿಗೆ ಭೇಟಿ ನೀಡಿ, ಹರಿಜನರನ್ನು ಉದ್ದೇಶಿಸಿ ಗೋಮಾಂಸ ತಿನ್ನುವುದನ್ನು ಬಿಡಿ, ಹೆಂಡ ಕುಡಿಯುವುದನ್ನು ನಿಲ್ಲಿಸಿ ಮುಂತಾಗಿ ಭಾಷಣ ಮಾಡಿದರು. ಅಂದು ಮಹಾತ್ಮ ಗಾಂಧೀಜಿಗೆ ತುಮಕೂರಿನ ಜನ ಖಾದಿ ಕಾರ್ಯಕ್ರಮಕ್ಕಾಗಿ ೨೨೫೦ ರೂಪಾಯಿ, ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು ೨೫೦ ರೂಪಾಯಿ ಹಾಗೂ ಪ್ರಾಣಿದಯಾ ಸಂಘದವರು ಗೋರಕ್ಷಣೆಗಾಗಿ ೨೦೦ ರೂಪಾಯಿ ದೇಣಿಗೆ ನೀಡಿದರು. ನಂತರ ಗಾಂಧೀಜಿ ಮಧುಗಿರಿಗೆ ಭೇಟಿ ನೀಡಿದರು. ಅಲ್ಲಿಯೂ ಕೂಡ ಗಾಂಧೀಜಿ ಖಾದಿ ಬಳಕೆಗೆ ಒತ್ತು ನೀಡಿ ಪ್ರಚಾರ ಭಾಷಣ ಮಾಡಿದರು. ಅಲ್ಲಿ ಅವರಿಗೆ ೧೦೦೦ ರೂಪಾಯಿ ಕಾಣಿಕೆಯನ್ನು ಅರ್ಪಿಸಲಾಯಿತು. ಮಧುಗಿರಿಯಿಂದ ಕೊರಟಗೆರೆಗೆ ಭೇಟಿ ನೀಡಿ ಅಲ್ಲಿನ ಜನತೆಯಿಂದ ೧೦೦ ರೂಪಾಯಿಗಳ ಕಾಣಿಕೆಯನ್ನು ಸ್ವೀಕರಿಸಿ ರಾತ್ರಿ ತುಮಕೂರಿಗೆ ಬಂದು ತಂಗಿದ್ದು ಮರುದಿವಸ ಬೆಂಗಳೂರಿಗೆ ತೆರಳಿದರು. ಮಧುಗಿರಿಯಲ್ಲಿ ಗಾಂಧೀಜಿ ಮಾಡಿದ ಭಾಷಣದಿಂದ ಪ್ರಭಾವಿತರಾದ ಪಾವಗಡ ತಾಲೂಕಿನ ನಂಜುಂಡರಾವ್, ರತಂಗಪಾಣಿ, ನರಸಿಂಗರಾವ್ ಮೊದಲಾದವರು ಪಾವಗಡದಲ್ಲಿ ತಾಲೂಕು ಕಾಂಗ್ರೆಸ್ ಕಮಿಟಿಯನ್ನು ಸ್ಥಾಪಿಸಿದರು. ಕಮಿಟಿಯ ಅಧ್ಯಕ್ಷರಾದ ನಂಜುಂಡರಾವ್ ನಾಯಕತ್ವದಲ್ಲಿ ತಕಲಿ ಮತ್ತು ಚರಕಗಳಿಂದ ನೂಲು ತೆಗೆಯುವುದನ್ನು ಆರಂಭಿಸಿದರು. ವಿದೇಶಿ ವಸ್ತುಗಳ ಬಹಿಷ್ಕಾರ ಚಳವಳಿ ಪಾವಗಡ ಪ್ರದೇಶದಲ್ಲಿ ಬಿರುಸಿನಿಂದ ನಡೆದಿತ್ತು. ವೈ.ಎನ್.ಹೊಸಕೋಟೆಯಲ್ಲಿ ವಿದೇಶಿ ವಸ್ತ್ರ ದಹನ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಾಗ ಇ.ಎಸ್. ವೆಂಕಟೇಶಗುಪ್ತ ತಮ್ಮ ಮೈ ಮೇಲೆ ಧರಿಸಿದ್ದ ವಿದೇಶಿ ಕೋಟನ್ನು ಕಳಚಿ ಬೆಂಕಿಗೆ ಅರ್ಪಿಸಿದರು. ಅಲ್ಲದೆ ವಿದೇಶಿ ವಸ್ತುಗಳನ್ನು ಧರಿಸುವುದಿಲ್ಲವೆಂದು ಸಾರ್ವಜನಿಕವಾಗಿ ಪ್ರತಿಜ್ಞೆ ಮಾಡಿ ಜೀವನಪರ್ಯಂತ ಅದರಂತೆ ನಡೆದರು.

ಜಿಲ್ಲೆಯಲ್ಲಿ ಗಾಂಧೀಜಿಯ ರಚನಾತ್ಮಕ ಕಾರ್ಯಕ್ರಮಗಳಾದ ಪಾನನಿರೋಧ ಮತ್ತು ಖಾದಿ ಪ್ರಚಾರ ಕಾರ್ಯ ಪರಿಣಾಮಕಾರಿಯಾಗಿ ನಡೆಯುತ್ತಿತ್ತು. ಜಿಲ್ಲೆಯ ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ತಾಳಕೆರೆ ಸುಬ್ರಮಣ್ಯ ನಡೆಸಿದ ಪಾನ ನಿರೋಧ ಚಳವಳಿ ಅತಿ ಮಹತ್ತರವಾದ ಪ್ರಥಮ ಕಾರ್ಯಕ್ರಮ. ತುಮಕೂರು ನಗರದ ಮಾರ್ಕೆಟ್ ಚೌಕದ ಪೂರ್ವಭಾಗದಲ್ಲಿ ತುಮಕೂರಿನ ಕೆರೆಯಿದೆ. ಆ ಮಾರುಕಟ್ಟೆಯ ಹಿಂದಿನ ಮೈದಾನದಲ್ಲಿ ಶಿರಾಕ್ಕೆ ಹೋಗುವ ರಸ್ತೆಯ ಆರಂಭದಲ್ಲೇ ಎಡಕ್ಕೆ ಶೇಂದಿ ಅಂಗಡಿ ಹಿಂದೆ ಇತ್ತು. ಸಂಜೆಯಾದರೆ ಇಲ್ಲಿ ಶೇಂದಿಯನ್ನು ಸೇವಿಸಿ ಕುಡುಕರು ಅಸಭ್ಯವಾಗಿ ವರ್ತಿಸುತ್ತಿದ್ದರು. ಶೇಂದಿ ಮಾರಾಟಗಾರರು ಹೆಂಡದ ಪಿಪಾಯಿಗಳನ್ನು ಎತ್ತಿನ ಬಂಡಿಗಳ ಮೇಲೆ ಬಹಿರಂಗವಾಗಿ ತಂದು ಮಾರಾಟ ಮಾಡುತ್ತಿದ್ದರು. ಈ ರೀತಿಯ ಬಹಿರಂಗ ಮಾರಾಟದ ಅಸಹ್ಯಕರ ದೃಶ್ಯವನ್ನು ತಪ್ಪಿಸುವುದರ ಜೊತೆಗೆ ಮತ್ತು ಮದ್ಯಪಾನದ ಕೆಡುಕಿನ ಬಗ್ಗೆ ಜನರಲ್ಲಿ ಜಾಗೃತಿಯನ್ನುಂಟು ಮಾಡುವ ಉದ್ದೇಶದಿಂದ ತಾಳಕೆರೆ ಸುಬ್ರಮಣ್ಯ

ಪಾನನಿರೋಧ ಚಳವಳಿಯನ್ನು ಗಾಂಧೀಜಿಯ ರಚನಾತ್ಮಕ ಕಾರ್ಯಕ್ರಮದ ಅಂಗವಾಗಿ ನಡೆಸಲು ತೀರ್ಮಾನಿಸಿ ಅದರ ನಾಯಕತ್ವವನ್ನು ತಾವೇ ವಹಿಸಿಕೊಂಡರು.

ಈ ಚಳವಳಿಯ ಏಳನೇ ದಿನ ಪೋಲೀಸರು ತಾಳಕೆರೆ ಸುಬ್ರಮಣ್ಯರನ್ನು ಬಂಧಿಸಿದರು. ಈ ಚಳವಳಿಯು ೧೩ ದಿನಗಳವರೆಗೆ ನಡೆಯಿತು. ಆದರೆ ಶೇಂದಿ ಮಾರಾಟಗಾರರು ಬಹಿರಂಗವಾಗಿ ಗಾಡಿಗಳಲ್ಲಿ ಮದ್ಯವನ್ನು ತಂದು ಮಾರುವ ಪದ್ಧತಿಯನ್ನು ನಿಲ್ಲಿಸಿದ್ದರಿಂದ ಚಳವಳಿಯನ್ನು ನಿಲ್ಲಿಸಲಾಯಿತು. ಬಂಧಿತರಾಗಿದ್ದ ತಾಳಕೆರೆ ಸುಬ್ರಹ್ಮಣ್ಯ ಮತ್ತು ಸಹಚರರ ಬಿಡುಗಡೆಯಾಯಿತು. ಇದೇ ರೀತಿಯ ಮತ್ತೊಂದು ಪಾನನಿರೋಧ ಚಳವಳಿ ಮಧುಗಿರಿ ರಸ್ತೆಯ ಯಲ್ಲಾಪುರದಲ್ಲಿ ನಡೆದಿತ್ತು. ಅಲ್ಲಿಯ ಹೆಂಡದಂಗಡಿಯ ಮುಂದೆ ಹೋರಾಟಗಾರರು ಪಿಕೆಟಿಂಗ್ ಕಾರ್ಯಕ್ರಮ ನಡೆಸಿದರು. ಆ ಪಿಕೆಟಿಂಗ್ ಅತ್ಯಂತ ಯಶಸ್ವಿಯಾಯಿತು.

ಗಾಂಧೀಜಿ ಖಾದಿ ಪ್ರಚಾರಕ್ಕಾಗಿ ತುಮಕೂರಿಗೆ ಬಂದು ಹೋದ ನಂತರ ಅನೇಕರು ಅವರ ಭಾಷಣದಿಂದ ಪ್ರಭಾವಿತರಾದರು. ಅವರಲ್ಲಿ ನೀಲಕಂಠರಾಯರು ಕೂಡ ಒಬ್ಬರು. ಅವರು ತುಮಕೂರು ನಗರದಲ್ಲಿ ೧೯೨೭ ಅಕ್ಟೋಬರ್ ಎರಡರಂದು ಖಾದಿಭಂಡಾರವನ್ನು ತೆರೆದರು. ಅವರ ಈ ಖಾದಿಭಂಡಾರ ರಾಷ್ಟ್ರೀಯ ಹೋರಾಟಗಾರರ ಮತ್ತು ಅವರ ಚಟುವಟಿಕೆಗಳ ಕೇಂದ್ರವಾಗಿ ಮಾರ್ಪಾಟಾಯಿತು. ನೀಲಕಂಠರಾಯರು ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಗಳಾಗಿದ್ದು ಜಿಲ್ಲಾದ್ಯಂತ ಪ್ರವಾಸ ಕೈಗೊಂಡು ಖಾದಿ ಪ್ರಚಾರ ಮಾಡತೊಡಗಿದರು. ನೀಲಕಂಠರಾಯರ ಪ್ರೇರಣೆಯಿಂದ ೧೯೩೦ರಲ್ಲಿ ಸ್ವಾತಂತ್ರ್ಯ ಹೋರಾಟಗಾರರಾದ ತಿಪಟೂರಿನ ಕೆ.ಎನ್.ರಂಗಪ್ಪ ತಿಪಟೂರಿನಲ್ಲಿ ಖಾದಿಭಂಡಾರ ತೆಗೆದರು. ಗಾಂಧೀಜಿಯಿಂದ ಪ್ರಭಾವಿತರಾಗಿದ್ದ ಅವರು ತಾವು ಆರಂಭಿಸಿದ ಖಾದಿ ಭಂಡಾರವನ್ನು ಗಂಗಾಧರರಾವ್ ದೇಶಪಾಂಡೆಯವರಿಂದ ಉದ್ಘಾಟನೆ ಮಾಡಿಸಿದರು.

ಗಾಂಧೀಜಿ ಸಂಘಟಿಸಿದ ಸತ್ಯಾಗ್ರಹಗಳಲ್ಲಿ ಉಪ್ಪಿನ ಸತ್ಯಾಗ್ರಹ ಪ್ರಮುಖವಾದುದು. ಕರ್ನಾಟಕದ ಕರಾವಳಿ ತೀರದ ಅಂಕೋಲದಲ್ಲಿ ಏರ್ಪಾಟಾಗಿದ್ದ ಉಪ್ಪಿನ ಸತ್ಯಾಗ್ರಹದಲ್ಲಿ ಪಾಲ್ಗೊಳ್ಳಲು ಜಿಲ್ಲೆಯ ಜನತೆ ಸಿದ್ಧರಾದರು. ಅವರಲ್ಲಿ ಟಿ.ಎಲ್.ಸಂಗಣ್ಣ, ಟಿ.ಎಸ್.ಚನ್ನಪ್ಪ, ಪುಟ್ಟಯ್ಯ, ವಜ್ರಂಶೆಟ್ಟಿ ಮೊದಲಾದ ಏಳೆಂಟು ಜನ ಅಂಕೋಲಕ್ಕೆ ಹೋಗಿ ಉಪ್ಪಿನ ಸತ್ಯಾಗ್ರಹ ಚಳವಳಿಯಲ್ಲಿ ಭಾಗವಹಿಸಿದರು. ಇದರ ಜೊತೆಗೆ ತಾಳಕೆರೆ ಸುಬ್ರಹ್ಮಣ್ಯರು ತಮ್ಮ ನಿಕಟವರ್ತಿಗಳಾದ ವೆಂಕಟರಾಮಯ್ಯ ಮತ್ತು ಎಲ್.ಕೃಷ್ಣಮೂರ್ತಿಯವರನ್ನು ದಂಡಿಗೆ ಕಳುಹಿಸಿಕೊಟ್ಟಿದ್ದರು. ಅಲ್ಲಿ ಅವರು ಸತ್ಯಾಗ್ರಹದಲ್ಲಿ ಪಾಲ್ಗೊಂಡು ಬಾರಿ ಏಟು ತಿಂದು ತುಮಕೂರಿಗೆ ವಾಪಸಾದರು. ಜಿಲ್ಲೆಯಲ್ಲಿ ಉಪ್ಪಿನ ಸತ್ಯಾಗ್ರಹ ಚಳವಳಿಯಲ್ಲಿ ಪಾಲ್ಗೊಂಡು ಜೈಲುವಾಸ ಅನುಭವಿಸುತ್ತಿದ್ದ ತಾಳಕೆರೆ ಸುಬ್ರಹ್ಮಣ್ಯ, ಗಾಂಧಿ–ಇರ್ವಿನ್ ಒಪ್ಪಂದದ ಪ್ರಕಾರ ಬಿಡುಗಡೆಯಾದರು. ಪುನಃ ಬ್ರಿಟಿಷ್ ಸರ್ಕಾರ ಅಖಿಲಭಾರತ ಕಾಂಗ್ರೆಸ್ ಸಂಸ್ಥೆಯನ್ನು ಕಾನೂನುಬಾಹಿರ ಎಂದು ಘೋಷಿಸಿದ್ದನ್ನು ಹಿಂತೆಗೆದುಕೊಂಡಿತು. ಆದ್ದರಿಂದ ತುಮಕೂರಿನ ಕಾಂಗ್ರೆಸ್ ಕಛೇರಿ ಪುನಃ ತೆರೆಯಲ್ಪಟ್ಟು ಅದರ ಚಟುವಟಿಕೆಗಳು ಆರಂಭವಾದವು. ಸೆರೆಮನೆಯಿಂದ ಬಿಡುಗಡೆಯಾದ ತಕ್ಷಣ ತಾಳಕೆರೆ ಸುಬ್ರಹ್ಮಣ್ಯ, ತುಮಕೂರು ನಗರದ ಸರ್ಕಾರಿ ಹೈಸ್ಕೂಲ್ ಮೈದಾನದಲ್ಲಿ ಬಹಿರಂಗ ಸಭೆಯನ್ನು ಉದ್ದೇಶಿಸಿ ಗಾಂಧಿ–ಇರ್ವಿನ್ ಒಪ್ಪಂದದ ವಿವರಗಳನ್ನು ಜನತೆಗೆ ತಿಳಿಸಿದರು. ಆ ಸಭೆ ಆ ಕಾಲದಲ್ಲಿ ನಡೆದ ಅತಿ ದೊಡ್ಡ ಸಭೆಯಾಗಿತ್ತೆಂದು ತಾಳಕೆರೆ ಸುಬ್ರಹ್ಮಣ್ಯ ತಮ್ಮ ನೆನಪಿನಾಳದಿಂದ ಹೇಳಿದ್ದಾರೆ.

ಮಹಾತ್ಮ ಗಾಂಧೀಜಿ ಅಸ್ಪೃಶ್ಯತ ನಿವಾರಣೆಯ ಕಾರ್ಯಕ್ರಮವನ್ನು ಯೋಜಿಸಿದರು. ಇದರ ಅಂಗವಾಗಿ ಇಡೀ ದೇಶಾದ್ಯಂತ ೧೦ ತಿಂಗಳ ಕಾಲ ಹರಿಜನೋದ್ಧಾರ ಅಥವಾ ಹರಿಜನ ಪ್ರವಾಸ ಕೈಗೊಂಡರು. ಈ ಸುದ್ದಿ ತುಮಕೂರಿನ ಕಾಂಗ್ರೆಸ್ ಮುಖಂಡರಿಗೆ ತಲುಪಿದಾಗ, ಇಲ್ಲಿಯ ಹಿರಿಯ ಕಾಂಗ್ರೆಸ್ ಧುರೀಣರಾದ ತಾಳಕೆರೆ ಸುಬ್ರಹ್ಮಣ್ಯ, ಕೆ.ನಾರಾಯಣಶೆಟ್ಟಿ ಅಧ್ಯಕ್ಷತೆಯಲ್ಲಿ ಸ್ವಾಗತ ಸಮಿತಿಯನ್ನು ರಚಿಸಿದರು. ಆ ಸಮಿತಿಯು ಹರಿಜನೋದ್ಧಾರ ನಿಧಿಗಾಗಿ ಗಾಂಧೀಜಿಗೆ ಕಾಣಿಕೆಯಾಗಿ ನೀಡಲು ಹಣ ಸಂಗ್ರಹ ಮಾಡಿತು. ಒಟ್ಟು ೧೦೦೦ ರೂಪಾಯಿಗಳನ್ನು ತುಮಕೂರಿನ ನಾಗರಿಕರಿಂದ ಸಂಗ್ರಹಿಸಿತು. ಹಿಂದೂಪುರದಿಂದ ನಾಲ್ಕನೇಯ ಜನವರಿ ೧೯೩೪ರಂದು ಸಂಗಡಿಗರೊಂದಿಗೆ ಆಗಮಿಸಿದ ಗಾಂಧೀಜಿ ತುಮಕೂರನ್ನು ಮಧ್ಯಾಹ್ನದ ವೇಳೆಗೆ ತಲುಪಿದರು. ಜಿಲ್ಲೆಯ ಸಹಸ್ರಾರು ಕಾಂಗ್ರೆಸ್ ಕಾರ್ಯಕರ್ತರು ಗಾಂಧೀಜಿಗೆ ಅಭೂತಪೂರ್ವ ಸ್ವಾಗತ ಕೋರಿತು. ಪ್ರಸ್ತುತ ಇರುವ ಸರ್ಕಾರಿ ಬಾಲಕರ ಕಿರಿಯ ಕಾಲೇಜಿನ ಕಟ್ಟಡದಲ್ಲಿ ಗಾಂಧೀಜಿ ತಂಗಿದ್ದರು. ತಾಳಕೆರೆ ಸುಬ್ರಹ್ಮಣ್ಯರ ಹರ್ಷಕ್ಕೆ ಎಲ್ಲೆಯೆ ಇರಲಿಲ್ಲ. ಚಟುವಟಿಕೆಯಿಂದ ಅವರು ಓಡಾಡುತ್ತಿದ್ದರು. ಅವರು ಅಂದಿನ ಘಟನೆಯನ್ನು ತಮ್ಮ ನೆನಪಿನ ಆಳದಿಂದ ಈ ರೀತಿ ಬಿಚ್ಚಿಟ್ಟಿದ್ದಾರೆ.

ಆಗ ಗಾಂಧೀಜಿಯ ಆಹಾರವೆಂದರೆ ಹಸಿ ಕಡಲೆಕಾಯಿ ಮತ್ತು ಮೇಕೆ ಹಾಲು ಮಾತ್ರ. ತಾಳಕೆರೆ ಸುಬ್ರಹ್ಮಣ್ಯ ಸಮೀಪದ ಹಳ್ಳಿಯೊಂದರಿಂದ ಮೇಕೆ ಹಾಲನ್ನು ತರಿಸಿದ್ದರು. ಅದನ್ನು ತೆಗೆದುಕೊಂಡು ಹೋಗಲು ಸರಿಯಾದ ಗಾಜಿನ ಪಾತ್ರೆ ಮನೆಯಲ್ಲಿ ಇಲ್ಲದೆ ಇದ್ದುದರಿಂದ ವಿದ್ಯುತ್ ದೀಪಕ್ಕೆ ಹಾಕಿದ್ದ ಗಾಜಿನ ಡೂಮ್ ಒಂದನ್ನು ಬಿಚ್ಚಿ ಅದನ್ನು ಶುಭ್ರಗೊಳಿಸಿ, ಅದರಲ್ಲಿ ತೆಗೆದುಕೊಂಡು ಹೋಗಿದ್ದರಂತೆ. ತುಮಕೂರಿಗೆ ಮಧ್ಯಾಹ್ನ ೨.೩೦ಕ್ಕೆ ಆಗಮಿಸಿದ ಗಾಂಧೀಜಿ ೧೫ ನಿಮಿಷ ವಿಶ್ರಾಂತಿ ಪಡೆದು ನಂತರ ಸಾರ್ವಜನಿಕರನ್ನು ಸಂದರ್ಶಿಸಿದರು. ಅಂದು ಹೈಸ್ಕೂಲ್ ಮೈದಾನದಲ್ಲಿ ಬಹಿರಂಗ ಸಭೆಯನ್ನು ಉದ್ದೇಶಿಸಿ ಗಾಂಧೀಜಿ ಭಾಷಣ ಮಾಡಿದರು. ಹರಿಜನೋದ್ಧಾರ ಕಾರ್ಯಕ್ರಮ ಕಾಂಗ್ರೆಸ್ಸಿನ ರಚನಾತ್ಮಕ ಕಾರ್ಯಕ್ರಮವೆಂದು ವಿವರಿಸಿದರು. ಅಂದು ೩೦ ಅಡಿ ಅಗಲದ ವೇದಿಕೆಯ ಮೇಲಿನಿಂದ ಗಾಂಧೀಜಿ ಭಾಷಣ ಮಾಡುತ್ತಿದ್ದರೆ ಆ ಮೈದಾನದ ತುಂಬ ಜನ ಸಮೂಹವೆ ಕಾಣುತ್ತಿತ್ತಂತೆ. ಭಾಷಣ ಮುಗಿದ ಮೇಲೆ ತುಮಕೂರು ಜನತೆಯ ಪರವಾಗಿ ಹರಿಜನೋದ್ಧಾರ ನಿಧಿಗೆ ೧೦೦೦ ರೂಪಾಯಿಗಳನ್ನು ಗಾಂಧೀಜಿಗೆ ಅರ್ಪಿಸಲಾಯಿತು. ಏತನ್ಮಧ್ಯೆ ತಾಳಕೆರೆ ಸುಬ್ರಹ್ಮಣ್ಯ ಜಿಲ್ಲೆಯಲ್ಲಿನ ಕಾಂಗ್ರೆಸ್ ಚಟುವಟಿಕೆಗಳನ್ನು ವಿವರಿಸಿ, ಗಾಂಧೀಜಿಯಿಂದ ಮೆಚ್ಚುಗೆ ಪಡೆದರು. ಹೀಗೆ ಗಾಂಧೀಜಿಯವರ ಅಮೋಘ ವ್ಯಕ್ತಿತ್ವವನ್ನು ಇಲ್ಲಿನ ಜನತೆ ವೀಕ್ಷಿಸಿ ಪುಳಕಗೊಂಡಿತು.

## ಮೈಸೂರು ಕಾಂಗ್ರೆಸ್ ಮತ್ತು ತುಮಕೂರು ಜಿಲ್ಲೆ

೨೮ನೇ ಫೆಬ್ರವರಿ ೧೯೩೮ರಂದು ಮೈಸೂರಿನಲ್ಲಿ ಸಂಸ್ಥಾನಿಕ ಕಾಂಗ್ರೆಸ್ಸಿನ ಕಾರ್ಯಕಾರಿ ಸಮಿತಿಯು ಸಭೆ ಸೇರಿ "ಮೈಸೂರು ಕಾಂಗ್ರೆಸ್" ಎಂಬ ಸ್ವತಂತ್ರ ರಾಜಕೀಯ ಪಕ್ಷವನ್ನು ಸ್ಥಾಪಿಸಿಕೊಂಡಿತು. ಈ ಮೂಲಕ ದೇಶೀಯ ಸಂಸ್ಥಾನಗಳ ಬಗೆಗೆ ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಧೋರಣೆ ವರವಾಗಿಯೇ ಪರಿಣಮಿಸಿತು. ಮೈಸೂರು ಕಾಂಗ್ರೆಸ್ಸಿನ ಮೊದಲ ಕಾರ್ಯಕಾರಿ ಸಮಿತಿ ಮಾರ್ಚ್ ೧೧, ೧೯೩೮ರಂದು ಟಿ.ಸಿದ್ಧಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು. ಆ ಸಮಿತಿಯು ಮಂಡ್ಯ ಜಿಲ್ಲೆ ಮದ್ದೂರು ತಾಲೂಕಿನ ಶಿವಪುರದಲ್ಲಿ ೧೧, ೧೨, ಮತ್ತು ೧೩ನೇ ಏಪ್ರಿಲ್ ೧೯೩೮ರಂದು ತನ್ನ ಪ್ರಥಮ ಅಧಿವೇಶನ ನಡೆಸಲು ತೀರ್ಮಾನಿಸಿತು. ಒಂದೇ ಜಾತಿಗೆ ಸೇರಿದವರ ಸಂಸ್ಥೆ ಎಂದು ಕಾಂಗ್ರೆಸ್ಸಿನ ಬಗ್ಗೆ ಇದ್ದ ತಪ್ಪು ಕಲ್ಪನೆ ದೂರವಾಗಿ ಕಾಂಗ್ರೆಸ್ ಸಮಾಜಮುಖಿಯಾಯಿತು. ಕಾಂಗ್ರೆಸ್ಸಿನ ಈ ಕಾರ್ಯಕ್ರಮ ಯಶಸ್ವಿಗೊಳ್ಳುವ ವಾಸನೆ ಹಿಡಿದ ಅಧಿಕಾರಿ ವರ್ಗ ಸಹಕರಿಸದಂತೆ ಆಮಿಷ ಒಡ್ಡುವ ಇಲ್ಲವೆ ಬೆದರಿಸುವ ಕ್ರಮಕ್ಕೆ ಮುಂದಾಯಿತು. ಈ ಅಧಿವೇಶನಕ್ಕೆ ತುಮಕೂರು ಜಿಲ್ಲೆಯಿಂದಲೂ ಅನೇಕ ಧುರೀಣರು ಹೋಗಿದ್ದರು.

ಶಿವಪುರ ಧ್ವಜಸತ್ಯಾಗ್ರಹದ ಸಮಾವೇಶನಕ್ಕೆ ಸಂಬಂಧಿಸಿದಂತೆ ತುಮಕೂರು ಜಿಲ್ಲೆಯಲ್ಲಿಯೂ ಕೂಡ ಅನೇಕ ಸಭೆ, ಸಮಾರಂಭಗಳು ನಡೆದು ಆ ಧ್ವಜಸತ್ಯಾಗ್ರಹಕ್ಕೆ ಬೆಂಬಲ ಲಭಿಸಿತು. ತುಮಕೂರು ಜಿಲ್ಲಾ ಕಾಂಗ್ರೆಸ್ ಸಮಿತಿ (ಕಮಿಟಿ), ತುಮಕೂರು ಟೌನ್ ಕೋ ಆಪರೇಟಿವ್ ಸೊಸೈಟಿ ಆವರಣದಲ್ಲಿ ೧೯೩೮ರ ಮಾರ್ಚ್ ಎಂಟರಂದು ಸಭೆ ಸೇರಿತ್ತು. ಆ ಸಭೆಯಲ್ಲಿ ಯಜಮಾನ್ ಸಿದ್ಧಪ್ಪ, ವೀರಕೇಸರಿ ಸೀತಾರಾಮಶಾಸ್ತ್ರಿ ಮತ್ತು ಕೆ.ಟಿ.ಭಾಷ್ಯಂ ಭಾಗವಹಿಸಿದ್ದರು. ಆ ಸಭೆಯಲ್ಲಿ ಅವರು ಮುಂದೆ ಸಂಘಟಿಸಲಿರುವ ಶಿವಪುರ ಧ್ವಜ ಸತ್ಯಾಗ್ರಹವನ್ನು ಕುರಿತು ಮಾತನಾಡಿದರು. ಶಿವಪುರ ಧ್ವಜ ಸತ್ಯಾಗ್ರಹ ನಡೆಯುವ ವೇಳೆಗೆ ಮಹಾರಾಜರು ಜವಾಬ್ದಾರಿ ಸರ್ಕಾರವನ್ನು ದಯಪಾಲಿಸಿದರೆ ಎಲ್ಲವೂ ಸರಿಹೋಗುತ್ತದೆ ಇಲ್ಲದಿದ್ದಲ್ಲಿ ಮೈಸೂರು ಕಾಂಗ್ರೆಸ್‌ನ ತೀವ್ರ ಪ್ರತಿಭಟನೆ ಎದುರಿಸಬೇಕಾಗುತ್ತದೆ ಎಂಬ ಠರಾವನ್ನು ಮಾಡಿ ಸರ್ಕಾರಕ್ಕೆ ಎಚ್ಚರಿಕೆಯನ್ನು ನೀಡಿದರು. ತುಮಕೂರು ಜಿಲ್ಲೆಯಲ್ಲಿ ಈ ಸತ್ಯಾಗ್ರಹಕ್ಕೆ ಕಾರ್ಯಕರ್ತರನ್ನು ಸಂಘಟಿಸುವ ಜವಾಬ್ದಾರಿಯನ್ನು ಮಾಲಿಮರಿಯಪ್ಪ ವಹಿಸಿಕೊಂಡಿದ್ದರು. ಅವರು ಜಿಲ್ಲೆಯಲ್ಲಿ ಸಂಚರಿಸಿ ಶಿವಪುರ ಧ್ವಜಸತ್ಯಾಗ್ರಹವು ಜವಾಬ್ದಾರಿ ಸರ್ಕಾರದ ಇತಿಹಾಸದಲ್ಲಿ ಮಹತ್ತರವಾದ ಮೈಲಿಗಲ್ಲಾಗಬೇಕು, ಎಲ್ಲಾ ಕಾರ್ಯಕರ್ತರು ಈ ಹೋರಾಟದಲ್ಲಿ ತೊಡಗಿಸಿಕೊಳ್ಳಲು ಸನ್ನದ್ಧರಾಗಬೇಕು ಎಂದು ಮಾತನಾಡಿ ಜನಬೆಂಬಲವನ್ನು ಕೋರಿದರು. ಇದರ ಪರಿಣಾಮವಾಗಿ ತುಮಕೂರಿಗೆ ಕೇವಲ ೮೦ ಕಿ.ಮೀ. ಅಂತರದಲ್ಲಿರುವ ಶಿವಪುರಕ್ಕೆ ಸಹಸ್ರಾರು ಸಂಖ್ಯೆಯಲ್ಲಿ ಈ ಜಿಲ್ಲೆಯಿಂದ ಕಾಂಗ್ರೆಸ್ ಕಾರ್ಯಕರ್ತರು ತೆರಳಿದರು. ಅಂದು ಶಿವಪುರದಲ್ಲಿ ಕಾಂಗ್ರೆಸ್ ಪ್ರತಿನಿಧಿಗಳು, ಆಜುಬಾಜಿನ ಗ್ರಾಮಗಳ ೨೫ ಸಾವಿರಕ್ಕೂ ಹೆಚ್ಚು ಜನರು ಈ ಅಧಿವೇಶನದಲ್ಲಿ ಉತ್ಸಾಹದಿಂದ ಪಾಲ್ಗೊಂಡಿದ್ದರು. ಇದು ಒಂದು ಅರ್ಥದಲ್ಲಿ ರಾಷ್ಟ್ರೀಯ ಕಾಂಗ್ರೆಸ್ ಆಯೋಜಿಸಿದ್ದ ಹರಿಪುರ ಅಧಿವೇಶನವನ್ನು ನೆನಪಿಸುತ್ತಿತ್ತು. ನಿಗದಿತ ಕಾರ್ಯಕ್ರಮದಂತೆ ಏಪ್ರಿಲ್ ೧೧ರ ಬೆಳಿಗ್ಗೆ ಎಂಟು ಗಂಟೆಗೆ ಅಧ್ಯಕ್ಷರ ಮೆರವಣಿಗೆ ಆಯಿತು. ನಂತರ ಟಿ.ಸಿದ್ಧಲಿಂಗಯ್ಯನವರು ಧ್ವಜಾರೋಹಣ ಮಾಡಲು ಯತ್ನಿಸಿದಾಗ ಅವರನ್ನು ಮತ್ತು

ಅವರ ಬೆಂಗಾವಲಿಗಿದ್ದ ಸೇವಾದಳದ ಎಂ.ಎನ್.ಜೋಯಿಸರನ್ನು ಪೊಲೀಸರು ಬಂಧಿಸಿದರು. ಈ ಬಂಧನದ ನಂತರ ಧ್ವಜ ರಕ್ಷಣೆ ಮಾಡುವುದು ತಮ್ಮ ಆದ್ಯ ಕರ್ತವ್ಯವೆಂದು ಜನತೆ ಭಾವಿಸಿದ್ದರಿಂದ ಬಿಗುವಿನ ವಾತಾವರಣ ಉಂಟಾಯಿತು. ಇಂತಹ ಇತಿಹಾಸ ಪ್ರಸಿದ್ಧ ಮಹಾನ್ ಕೂಟಕ್ಕೆ ಮಾಲಿಮರಿಯಪ್ಪ, ಕೆ.ಹೆಂಜಾರಪ್ಪ, ತಾಳೆಕೆರೆ ಸುಬ್ರಹ್ಮಣ್ಯ, ತಾರೇಗೌಡ, ಕೆ.ನಂಜುಂಡರಾವ್, ವೆಂಕಟೇಶ್‌ಗುಪ್ತ ಮೊದಲಾದವರು ತೆರಳಿದ್ದರು.

ಶಿವಪುರ ಸತ್ಯಾಗ್ರಹ, ಚಳವಳಿಯ ಇತಿಹಾಸದಲ್ಲೊಂದು ಮೈಲಿಗಲ್ಲು. ಈ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದ ನಾಯಕರ ಬಂಧನ ಮತ್ತು ಧ್ವಜಾರೋಹಣ ಮಾಡಿದ ಧ್ವಜವನ್ನು ವಶಪಡಿಸಿಕೊಂಡಿದ್ದರಿಂದ ಕಾಂಗ್ರೆಸ್ಸಿಗರಿಗೆ ಹೆಚ್ಚಿನ ಅಸಮಾಧಾನ ಉಂಟಾಯಿತು. ಮೂರು ದಿನಗಳ ಕಾಂಗ್ರೆಸ್ ಅಧಿವೇಶನ ಧ್ವಜ ಸತ್ಯಾಗ್ರಹ ಶಿಬಿರವಾಗಿ ಮಾರ್ಪಟ್ಟಿತು. ೧೯೩೮ರ ಮಾರ್ಚ್ ೧೩ರಂದು ಕಾಂಗ್ರೆಸ್ ಕಾರ್ಯಕಾರಿಣಿ ಸಭೆ ಸೇರಿ ಸರ್ಕಾರದ ದಮನಕಾರಿ ನೀತಿ ನಿಲ್ಲುವವರೆಗೂ ಶಾಂತಿ ಮತ್ತು ಅಹಿಂಸಾ ಮಾರ್ಗದಲ್ಲಿ ಸಂಸ್ಥಾನದಾದ್ಯಂತ ಧ್ವಜಸತ್ಯಾಗ್ರಹವನ್ನು ಮುಂದುವರೆಸಲು ತೀರ್ಮಾನಿಸಿ ಏಪ್ರಿಲ್ ೧೮ ರಂದು ಹರತಾಳ ಆಚರಿಸುವಂತೆ ಕರೆ ನೀಡಿತು. ಈ ಕರೆ ಮೈಸೂರು ಸಂಸ್ಥಾನದಾದ್ಯಂತ ನಡೆದ ಧ್ವಜಸತ್ಯಾಗ್ರಹಕ್ಕೆ ನಾಂದಿಯಾಯಿತು. ಈ ಕರೆಗೆ ಓಗೊಟ್ಟು ತುಮಕೂರಿನ ಕಾಂಗ್ರೆಸ್ ನಾಯಕರಾದ ಮಾಲಿಮರಿಯಪ್ಪ, ಕೆ.ಹೆಂಜಾರಪ್ಪ, ಟಿ.ತಾರೇಗೌಡ, ಕೆ.ನಂಜುಂಡರಾವ್ ಮೊದಲಾದವರು ಮಾಲಿಮರಿಯಪ್ಪನವರ ಮನೆಯಲ್ಲಿಯೆ ಸಭೆ ಸೇರಿದರು. ಆ ಸಭೆಯಲ್ಲಿ ಸರ್ಕಾರದ ನೀತಿಯನ್ನು ಖಂಡಿಸಿ ಕಾಂಗ್ರೆಸ್ ಕರೆ ನೀಡಿದಂತೆ ಧ್ವಜಸತ್ಯಾಗ್ರಹ ನಡೆಸಲು ಅಲ್ಲಿಯೇ ಯೋಜನೆ ರೂಪಿಸಿದರು. ಮೊದಲಿಗೆ ಮಧುಗಿರಿ ಕಾಂಗ್ರೆಸ್ ಕಮಿಟಿಯು ಏಪ್ರಿಲ್ ೧೮ರಂದು ಹರತಾಳ ದಿನವನ್ನು ಆಚರಿಸುವ ಉದ್ದೇಶದಿಂದ ಅಲ್ಲಿನ ಬಾಲಗಂಗಾಧರ ತಿಲಕರ ಭವನದಲ್ಲಿ ಸಭೆ ಕರೆದರು. ಆ ಸಭೆಯಲ್ಲಿ ಕೆ.ಹೆಂಜಾರಪ್ಪ, ಕೊರಟಗೆರೆ ನಾಗಪ್ಪಶೆಟ್ಟಿ, ಮಧುಗಿರಿಯ ನಂಜಯ್ಯಶೆಟ್ಟಿ ಭಾಗವಹಿಸಿ ಧ್ವಜ ಸತ್ಯಾಗ್ರಹವನ್ನು ಮಾಡಿ ಬಂಧಿತರಾದರು. ಕೊರಟಗೆರೆಯಲ್ಲಿ ಸೋಂಪುರದ ಎಸ್.ಹನುಮಂತರಾಯರ ನೇತೃತ್ವದಲ್ಲಿ ಧ್ವಜಸತ್ಯಾಗ್ರಹ ಮಾಡಲಾಯಿತು. ಅಲ್ಲಿ ನಾಲ್ಕು ಜನರನ್ನು ಬಂಧಿಸಲಾಯಿತು. ಮಧುಗಿರಿಯಲ್ಲಿ ಟಿ.ತಾರೇಗೌಡ, ರಾಮಚೈತನ್ಯ ಸತ್ಯಾಗ್ರಹ ಮಾಡಿ ಶಿಕ್ಷೆ ಅನುಭವಿಸಿದರು. ಕರಿಸಿದ್ಧಪ್ಪ ಶಿರಾದಲ್ಲಿ ಧ್ವಜ ಹಾರಿಸಿದಾಗ ಬಂಧಿಸಲಾಯಿತು. ಬಿ.ಸಿ.ನಂಜುಂಡಯ್ಯ ತುಮಕೂರಿನಲ್ಲಿ ಬಂಧಿತರಾದರು. ಕುಣಿಗಲ್‌ನಲ್ಲಿ ಸುಬ್ರಹ್ಮಣ್ಯಸ್ವಾಮಿ ಬಂಧಿಸಲ್ಪಟ್ಟರು. ಅವರ ಜೊತೆ ಸಹಕರಿಸಿದ್ದ ೧೭ ಮಂದಿಯನ್ನು ೧೭-೦೪-೧೯೩೮ರಂದು ಬಂಧಿಸಿ ಸೆರಮನೆಗೆ ಅಟ್ಟಲಾಯಿತು. ಅವರಲ್ಲಿ ಎ.ವಿ.ಕೃಷ್ಣಸ್ವಾಮಿ, ಸಿ.ಕೆ.ರಂಗಪ್ಪ, ಹುಚ್ಚಣ್ಣ, ಕೆ.ನಂಜಯ್ಯ, ಚಿಕ್ಕಣ್ಣ, ಸಂಜೀವಯ್ಯ, ಯಜಮಾನ್ ಮರಿಯಪ್ಪ, ಕೃಷ್ಣಶೆಟ್ಟಿ, ವೆಂಕಟೇಶ್, ವೆಂಕಟಕೃಷ್ಣ, ಕಾಂತರಾಜು, ಜನಾರ್ಧನ, ಕೃಷ್ಣಮೂರ್ತಿ, ಮಲ್ಲಯ್ಯ, ಪುಟ್ಟರೇವಣ್ಣ ಮತ್ತು ಸುಬ್ಬಣ್ಣ ಇವರೆಲ್ಲ ಸೇರಿದ್ದರು. ಈ ಬಂಧನದ ನಂತರ ಕುಣಿಗಲ್‌ನಲ್ಲಿ ೧೮-೦೪-೧೯೩೮ರಂದು ೩೩ ಜನರನ್ನು ಬಂಧಿಸಲಾಯಿತು. ಇದರಲ್ಲಿ ಬಿದನಗೆರೆ ರಾಮಣ್ಣಗೌಡರೂ ಇದ್ದರು. ಬಂಧಿತರಲ್ಲಿ ಬಹಳಷ್ಟು ಮಂದಿ ಬಿದನಗೆರೆಯವರು. ಇವರಿಗೆಲ್ಲ ಎರಡರಿಂದ ಆರು ವಾರಗಳ ಶಿಕ್ಷೆ ಆಯಿತು.

ಇಂತಹ ಧ್ವಜಸತ್ಯಾಗ್ರಹದಲ್ಲಿ ದಸ್ತಗಿರಿ ಆಗಿದ್ದ ಜನರನ್ನು ವಿಚಾರಣೆಗೆ ಒಳಪಡಿಸಲಾಯಿತು. ಆಪಾದಿತರ ಪರವಾಗಿ ಅಂದು ಖ್ಯಾತ ವಕೀಲರಾಗಿದ್ದ ಮಾಲಿಮರಿಯಪ್ಪ ವಾದಿಸಿದರು. ಅವರು ನ್ಯಾಯಾಲಯದಲ್ಲಿ ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿ ಧ್ವಜಾರೋಹಣ ಮಾಡಿದ್ದು ಸತ್ಯ. ಮಹಾರಾಜರ ಸರ್ಕಾರವನ್ನು ವಿರೋಧಿಸಿ, ಪ್ರಜಾಸರ್ಕಾರಕ್ಕಾಗಿ ಹೋರಾಡುವುದು ಪ್ರತಿಯೊಬ್ಬ ಪ್ರಜೆಯ ಕರ್ತವ್ಯ. ಇಂತಹ ದೇಶಭಕ್ತಿಯ ಮಹಾನ್ ಉದ್ದೇಶದಿಂದ ಕೂಡಿದ ಈ ಸತ್ಯಾಗ್ರಹ ದೇಶದ್ರೋಹದ ಕೆಲಸವಲ್ಲ ಎಂದು ವಾದಿಸಿ ಶಿಕ್ಷೆಯನ್ನು ಕಡಿಮೆ ಮಾಡಿ ಎಂದು ನ್ಯಾಯಾಧೀಶರಲ್ಲಿ ಮನವಿ ಮಾಡಿದರು. ಆದರೆ ಅಂದಿನ ಸರ್ಕಾರದ ಬಹುತೇಕ ಅಧಿಕಾರಿಗಳು ದೇಶಾಭಿಮಾನದ ಕೆಲಸಗಳನ್ನು ವಿರೋಧಿಸುತ್ತಿದ್ದುದರಿಂದ ಆಪಾದಿತ ಸತ್ಯಾಗ್ರಹಿಗಳಿಗೆ ಆರು ತಿಂಗಳ ಕಠಿಣ ಶಿಕ್ಷೆ ವಿಧಿಸಿದರು. ಇದರಿಂದಾಗಿ ನೊಂದ ಮಾಲಿಮರಿಯಪ್ಪ ಸತ್ಯಾಗ್ರಹಿಗಳಿಗೆ ವಿಧಿಸಿದ್ದ ಕಠಿಣ ಶಿಕ್ಷೆಯನ್ನು ಸಾದಾ ಶಿಕ್ಷೆಗೆ ಇಳಿಸಲು ಎಲ್ಲಾ ವಕೀಲರುಗಳಿಂದ ಸಹಿ ಮಾಡಿದ ಮನವಿಯನ್ನು ಸರ್ಕಾರಕ್ಕೆ ಸಲ್ಲಿಸಿದರು. ಈ ಬಂಧನಗಳನ್ನು ವಿರೋಧಿಸಿದ ಡಿ.ಎಸ್.ಮಲ್ಲಪ್ಪ ಪೊಲಿಟಿಕಲ್ ಕಾನ್ಫೆರೆನ್ಸ್ ಕಮಿಟಿಗೆ ರಾಜಿನಾಮೆ ನೀಡಿ ಪ್ರತಿಭಟಿಸಿದರು. ಇದೆ ರೀತಿ ನೆರೆಯ ತುಮಕೂರು ಜಿಲ್ಲೆಯ ಗೌರಿಬಿದನೂರು ತಾಲೂಕಿನ ವಿಧುರಾಶ್ವಥದಲ್ಲಿ ಜರುಗಿದ ಧ್ವಜಸತ್ಯಾಗ್ರಹದಲ್ಲೂ ಜಿಲ್ಲೆಯ ಪಾತ್ರ ಹಿರಿದಾಗಿತ್ತು. ಹೀಗೆ ಧ್ವಜಸತ್ಯಾಗ್ರಹ ಚಳವಳಿ ತುಮಕೂರು ಜಿಲ್ಲೆಯಲ್ಲಿ ಅಚ್ಚಳಿಯದ ಪರಿಣಾಮ ಉಂಟುಮಾಡಿತು.

**ಅರಣ್ಯ ಸತ್ಯಾಗ್ರಹ ೧೯೩೯:** ಪಾನ ನಿರೋಧವನ್ನು ಜಾರಿಗೆ ತರಲು ಸರ್ಕಾರ ಅಸಮರ್ಥವಾದುದರಿಂದ ಸರ್ಕಾರಿ ಈಚಲುಮರಗಳನ್ನು ಕಡಿದು ಹೆಂಡದ ಸರಬರಾಜು ಆಗದಂತೆ ಮಾಡುವ ಮಹತ್ವದ ಗುರಿ ಹೊಂದಿದ್ದ ಈ ಅರಣ್ಯ ಸತ್ಯಾಗ್ರಹ ಭಾರಿ ಈಚಲು ವನಗಳಿದ್ದ ಭಾಗಗಳನ್ನು ಕೇಂದ್ರೀಕರಿಸಿತು. ಬಡವರ, ಅನಕ್ಷರಸ್ಥರ ಹಣ ದೋಚುವ ಮೂಲಕ ಆದಾಯ ಪಡೆಯುತ್ತಿರುವ ಸರ್ಕಾರದ ಕ್ರಮವನ್ನು ವಿರೋಧಿಸಿ ಈಚಲುಮರ ಕಡಿಯುವ ಮೂಲಕ ಮದ್ಯಪಾನದ ಅನಿಷ್ಟ ಬೇರಿಗೆ ಕೊಡಲಿ ಹಾಕುವ ತಾತ್ವಿಕತೆಯನ್ನು ಇದರ ಸುತ್ತ ಎಣೆಯಲಾಯಿತು. ಜನರನ್ನು ಕ್ರೋಢೀಕರಿಸಲು ಸತ್ಯಾಗ್ರಹ ಶಿಬಿರಗಳನ್ನು ಸ್ಥಾಪಿಸುವ ಮೂಲಕ ಸತ್ಯಾಗ್ರಹಿಗಳು ಗ್ರಾಮಸ್ಥರೊಂದಿಗೆ ಮೆರವಣಿಗೆಯಲ್ಲಿ ಈಚಲು ವನಕ್ಕೆ ಹೋಗಿ ಮರ ಕಡಿದು ಕಾನೂನನ್ನು ಉಲ್ಲಂಘಿಸುವುದು ಇದರ ಉದ್ದೇಶವಾಗಿತ್ತು. ಇಂತಹ ಚಳವಳಿ ತುಮಕೂರು, ಶಿವಮೊಗ್ಗ, ಚಿತ್ರದುರ್ಗ ಮೊದಲಾದ ಜಿಲ್ಲೆಗಳಲ್ಲಿ ಯಶಸ್ವಿಯಾಯಿತು. ಈ ಜಿಲ್ಲೆಯ ಯಲಿಯೂರು, ವಡ್ಡನಹಳ್ಳಿ ಮತ್ತು ತಾವರೆಕೆರೆ ಪ್ರಮುಖ ಕೇಂದ್ರಗಳಾದವು. ಇವುಗಳಲ್ಲಿ ಯಲಿಯೂರು ಕೇಂದ್ರದ ರೈತರು ಈ ಸತ್ಯಾಗ್ರಹದ ಮೂಲಕ ರಾಷ್ಟ್ರೀಯ ಚಳುವಳಿಗೆ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ.

**ಯಲಿಯೂರು ಗ್ರಾಮದ ರೈತರ ಪಾತ್ರ :** ಜಿಲ್ಲೆಯ ತಾಲೂಕುಕೇಂದ್ರ ಶಿರಾದಿಂದ ಕೇವಲ ಎಂಟು ಕಿ.ಮೀ ದೂರದಲ್ಲಿರುವ ಮಳೆ ಆಶ್ರಿತ ಕೃಷಿ ಪ್ರಧಾನವಾದ ಒಂದು ಪುಟ್ಟ ಗ್ರಾಮ ಯಲಿಯೂರು. ಈ ಗ್ರಾಮದ ಸುತ್ತಮುತ್ತ ೪೩೭ ಎಕರೆ ವಿಸ್ತೀರ್ಣದಲ್ಲಿ ಹರಡಿದ್ದ ಸೇಂದಿ ವನದಿಂದಾಗಿ ಸಹಜವಾಗಿಯೇ ಈಚಲುಮರ ಕಡಿಯುವ ರೂಪದಲ್ಲಿ ಅರಣ್ಯ ಸತ್ಯಾಗ್ರಹ ವ್ಯಕ್ತವಾಯಿತು. ಇದು ಬಹುಸಂಖ್ಯಾತ ಲಿಂಗಾಯಿತರು ಮತ್ತು ತಿಗಳರು ವಾಸಿಸುತ್ತಿದ್ದ ಗ್ರಾಮ. ಚಳವಳಿ ಆರಂಭವಾದಾಗ ಒಗ್ಗಟ್ಟನ್ನು ಪ್ರದರ್ಶಿಸಿದ ಈ ಗ್ರಾಮದ ನಾಯಕ, ಗೊಲ್ಲ ಮತ್ತಿತರ ಎಲ್ಲ ಜಾತಿ ಜನ ವರ್ಗಗಳನ್ನು ಒಳಗೊಂಡು ಯಶಸ್ವಿಯಾಗಿ ಮುನ್ನಡೆಯಿತು.

ಜಿಲ್ಲಾ ಮಟ್ಟದ ಮಾಲಿ ಮರಿಯಪ್ಪ, ಬಿ.ಸಿ.ನಂಜುಂಡಯ್ಯ ಮತ್ತಿತರ ನಾಯಕರು ಈ ಕೇಂದ್ರದಲ್ಲಿ ಚಳವಳಿಯನ್ನು ನಿರ್ದೇಶಿಸಿ ಮುನ್ನಡೆಸಿದರೂ ಈ ಗ್ರಾಮದ ನಂಜುಂಡಪ್ಪ, ವೈ.ವಿ.ವೀರಭದ್ರಯ್ಯ, ಎಸ್.ಮಲ್ಲಯ್ಯರಂತಹ ರೈತ ನಾಯಕರು ಇಡೀ ಗ್ರಾಮವೇ ಚಳವಳಿಯಲ್ಲಿ ಉತ್ಸಾಹದಿಂದ ಪಾಲ್ಗೊಳ್ಳುವಂತೆ ಸಂಘಟಿಸಿ ಯಶಸ್ವಿಯಾದರು.

ಚಳವಳಿಯಲ್ಲಿ ಭಾಗವಹಿಸಿದ ಗ್ರಾಮಸ್ಥರಲ್ಲಿ ದಸ್ತಗಿರಿಯಾಗಿ, ಶಿಕ್ಷೆಗೊಳಗಾದವರು ೩೦ ಮಂದಿಯಾಗಿದ್ದು ಇದು ಇಡೀ ಜಿಲ್ಲೆಯಲ್ಲೆ ಅತ್ಯಧಿಕ ಸತ್ಯಾಗ್ರಹಿಗಳನ್ನು ಒದಗಿಸಿದ ಮುಂಚೂಣಿ ಗ್ರಾಮ ಎಂಬ ಗೌರವಕ್ಕೆ ಪಾತ್ರವಾಯಿತು. ಪ್ರತಿ ಮನೆಯೂ ತನ್ನೊಬ್ಬ ಸದಸ್ಯನನ್ನು ಚಳವಳಿಗೆ ಕಳುಹಿಸಬೇಕೆಂದು ಮಾಡಿಕೊಂಡ ತೀರ್ಮಾನಕ್ಕೆ ಉತ್ಸಾಹದಿಂದಲೇ ಪ್ರತಿಕ್ರಿಯಿಸಿತು. ಪೊಲೀಸರು, ಸೆರೆಮನೆ ಇಂತಹ ಹೆಸರು ಕೇಳಿದರೂ ಅಂಜುತ್ತಿದ್ದ ಮುಗ್ಧ ರೈತಾಪಿ ಜನರು ಈಚಲು ಮರ ಕಡಿದರೂ ಪೊಲೀಸರು ನಮ್ಮನ್ನು ಬಂಧಿಸುತ್ತಿಲ್ಲ ಎಂದು ನಿರಾಶರಾದದ್ದೂ ಉಂಟು, ಬಹಳಷ್ಟು ಗ್ರಾಮಸ್ಥರಿಂದ ಕ್ಷಮಾಪಣೆ ಪತ್ರ ಬರೆಯಿಸಿಕೊಂಡು ಕೈಬಿಡಲಾಯಿತು; ಇಲ್ಲವೆ ದೂರದ ಬುಕ್ಕಾಪಟ್ಟಣದ ಕಲ್ಯಾಣಿಗಿಡ ಅಥವಾ ಹುಳಿಯಾರು ಸಮೀಪದ ಕುದುರೆ ಕಣಿವೆಯಂತಹ ದುರ್ಗಮ ಕಾಡು ಬೆಟ್ಟಗಳಲ್ಲಿ ಬಂಧಿತರನ್ನು ರಾತ್ರಿಯ ವೇಳೆ ಬಿಟ್ಟು ಬರಲಾಗುತ್ತಿತ್ತು. ಈ ಚಳವಳಿಯಲ್ಲಿ ಭಾಗವಹಿಸಿದ ಬಹಳಷ್ಟು ರೈತರಿಗೆ ಸ್ವರಾಜ್ಯ, ಸತ್ಯಾಗ್ರಹ ಇಂತಹ ಪರಿಕಲ್ಪನೆ ಇರಲಿಲ್ಲ. ಆದರೆ ತಮ್ಮ ಗ್ರಾಮವನ್ನು ಕೇಂದ್ರೀಕರಿಸಿ ಒದಗಿಬಂದ ಅವಕಾಶವನ್ನು ಆಡಳಿತ ಯಂತ್ರದ ಬಗೆಗೆ ಇದ್ದ ತಮ್ಮ ಅಸಮಾಧಾನವನ್ನು ಹೊರಹಾಕಲು ಬಳಸಿಕೊಂಡರು.

ತುಂಡು ಜಮೀನುಗಳನ್ನು ಹೊಂದಿದ್ದ ಸಣ್ಣ ಮತ್ತು ಮಧ್ಯಮ ರೈತರಿಂದ ಕೂಡಿದ್ದ ಈ ಗ್ರಾಮ ಕನಿಷ್ಠ ೫೦ ಎಕರೆ ಮಾಲೀಕತ್ವ ಹೊಂದಿದ್ದ ಸ್ಥಿತಿವಂತ ಯಾವ ರೈತನನ್ನೂ ಹೊಂದಿರಲಿಲ್ಲ. ದಸ್ತಗಿರಿಯಾದ ಹನುಮಂತಯ್ಯ, ಉಗ್ರಪ್ಪ, ತಿಮ್ಮಯ್ಯ, ನಾಗಣ್ಣ, ವೈ.ಕರಿಯಣ್ಣ, ಚಿಕ್ಕಸಿದ್ಧಯ್ಯ ಇವರೆಲ್ಲಾ ಸಣ್ಣ ರೈತರೆಂಬುದು ಗಮನಾರ್ಹ. ದಸ್ತಗಿರಿಯಾಗಿ ಶಿಕ್ಷೆಗೊಳಗಾದ ಗಿರಿಯಣ್ಣನ ಮಗ ಈರಣ್ಣ, ವಾರ್ಷಿಕ ಎಂಟು ರೂ. ಕಂದಾಯ ತೆರುತ್ತಿದ್ದ ಸಣ್ಣ ರೈತ. ಕಂದಾಯದ ಹೊರೆಯಿಂದಾಗಿ ಅದನ್ನು ತೆರಲಾಗದ ಅಸಹಾಯಕ ಸ್ಥಿತಿ ತಲುಪಿದ ಈತ ೨೫–೪–೦ ರೂ.ಗಳ ಕಂದಾಯದ ಬಾಕಿಗಾಗಿ ತನ್ನ ಜಮೀನು ಹರಾಜಿಗೆ ಬಂದು ಕಳೆದುಕೊಂಡನೆಂಬುದು ರೈತರ ಸ್ಥಿತಿಯನ್ನು ಹೇಳುತ್ತದೆ. ಹಾಗಾಗಿ ಇಲ್ಲಿನ ರೈತರು ಸರ್ಕಾರದ ಭೂಕಂದಾಯ ನೀತಿಯಿಂದ ಹೆಚ್ಚೆಚ್ಚು ತೊಂದರೆಗೆ ಸಿಲುಕಿದ್ದರು. ಇಂತಹ ತೊಂದರೆಯನ್ನು ಮತ್ತಷ್ಟು ಉಲ್ಬಣಗೊಳಿಸಿದ್ದು ಅದೇ ೧೯೩೦ರ ದಶಕದುದ್ದಕ್ಕೂ ಪೀಡಿಸಿದ ಮಹಾ ಆರ್ಥಿಕ ಮುಗ್ಗಟ್ಟು ರೈತರ ದಿವಾಳಿತನವನ್ನು ತೀವ್ರಗೊಳಿಸಿತು.

ಚಳವಳಿ ಆರಂಭವಾಗುವ ಹೊತ್ತಿಗಾಗಲೇ ಸರ್ಕಾರವು ಈ ಗ್ರಾಮದ ೧೮೩೬ ಎಕರೆ ಜಮೀನಿನಲ್ಲಿ ೩೨೬ ಎಕರೆಯಷ್ಟು ಜಮೀನನ್ನು ಕಂದಾಯ ತೆರದ ಕಾರಣಕ್ಕೆ ಮುಟ್ಟುಗೋಲು ಹಾಕಿ ತನ್ನ ವಶಕ್ಕೆ ತೆಗೆದುಕೊಂಡಿತ್ತು. ಅದು ಆ ಗ್ರಾಮದ ಒಟ್ಟು ಜಮೀನಿನ ಶೇಕಡ ೧೮ರಷ್ಟಿತ್ತು. ಈ ಭೂಮಿ ಹರಾಜಿನಲ್ಲಿ ಕೊಳ್ಳುವವರಿಲ್ಲದೆ ಸರ್ಕಾರದ ಫಡಾ ಲೆಕ್ಕಕ್ಕೆ ಸೇರಿತ್ತು ಎಂಬುದು ಗಮನಾರ್ಹ. ಕಂದಾಯದ ಬಾಕಿಗಾಗಿ ಮತ್ತು ಸಾಲದ ಕಾರಣಕ್ಕಾಗಿ ಹರಾಜುಗೊಂಡ ಹಾಗೂ ಸಿವಿಲ್ ಕೋರ್ಟಿನ ದಾವೆಯ ಮೂಲಕ ರೈತರು ಕಳೆದುಕೊಂಡ ಜಮೀನು ಮತ್ತೂ ಅಧಿಕವಾದುದಾಗಿತ್ತು. ಯಲಿಯೂರು ಗ್ರಾಮದ ಶ್ಯಾನುಭೋಗ ಎಸ್.ಅಚ್ಚಣ್ಣನ ಸಂಬಂಧಿ ನರಸಿಂಹಮೂರ್ತಿರಾವ್ ಈ ಗ್ರಾಮದಲ್ಲಿ ೨೧೦ ಎಕರೆ ಜಮೀನಿನ ಮಾಲೀಕತ್ವ ಹೊಂದಿದ್ದು, ಇದನ್ನು ಕಂದಾಯದ ಬಾಕಿಗಾಗಿ ಹರಾಜಿಗೆ ಬಂದ ಭೂಮಿ ಮತ್ತು ಲೇವಾದೇವಿ ವ್ಯವಹಾರದಲ್ಲಿ ಕೋರ್ಟಿನ ದಾವೆಯ ಮೂಲಕ ಪಡೆದುದಾಗಿತ್ತು.

ಈ ಗ್ರಾಮದ ರೈತರನ್ನು ಕಂದಾಯದ ಹೊರೆ ಎಷ್ಟೊಂದು ಕಂಗೆಡಿಸಿತ್ತೆಂದರೆ ಅರಣ್ಯ ಸತ್ಯಾಗ್ರಹದಲ್ಲಿ ಸಕ್ರಿಯರಾಗಿದ್ದ ಬಹಳಷ್ಟು ರೈತರು ತಮ್ಮ ಜಮೀನುಗಳನ್ನು ಕಳೆದುಕೊಂಡವರೆ ಆಗಿದ್ದರು. ಯಲಿಯೂರಿನಲ್ಲಿದ್ದ ಇಂತಹ ಸ್ಥಿತಿಯಿಂದಾಗಿ ರೈತರು ತಮ್ಮ ಅಸಮಾಧಾನವನ್ನು ಹೊರಹಾಕಲು ಮೈಸೂರು ಕಾಂಗ್ರೆಸ್ ಒದಗಿಸಿದ ಚಳವಳಿಯ ಅವಕಾಶವನ್ನು ಬಳಸಿಕೊಂಡರು. ಯಲಿಯೂರಿನ ಅರಣ್ಯ ಸತ್ಯಾಗ್ರಹ ೩೦-೯-೧೯೩೯ ರಂದು ಬೃಹತ್ ಪ್ರಮಾಣದಲ್ಲಿ ಸಂಭವಿಸಿದರೆ ಅದಕ್ಕಿಂತ ಎರಡು ದಿನ ಮೊದಲು ತಾವರೆಕೆರೆಯಲ್ಲಿ ಅರಣ್ಯ ಸತ್ಯಾಗ್ರಹ ನಡೆಯಿತು. ಆ ಸತ್ಯಾಗ್ರಹದ ನೇತೃತ್ವವನ್ನು ಮಾಲಿಮರಿಯಪ್ಪ ವಹಿಸಿದ್ದರು. ಅವರ ಜೊತೆ ಕೇವಲ ನಾಲ್ಕು ಜನ ಸತ್ಯಾಗ್ರಹಿಗಳಿದ್ದರು. ಅವರು ಹೆಗಲ ಮೇಲೆ ಕೊಡಲಿ ಹೊತ್ತು ಹಾಸ್ಯದ ಚಟಾಕಿಗಳನ್ನು ಹಾರಿಸುತ್ತ ಮದ್ದಾನೆಯಂತೆ ಈಚಲು ವನಕ್ಕೆ ನುಗ್ಗಿ, ಈಚಲು ಮರಗಳನ್ನು ಕಡಿದು ಹಾಕಿದರು. ಈ ಸತ್ಯಾಗ್ರಹದಲ್ಲಿ ಹೆಚ್.ಆರ್.ದಾಸೇಗೌಡ, ಬಿ.ಕೆಂಚಣ್ಣ, ಮಠದ ಬಸವಯ್ಯ, ಗಿರಿಯಣ್ಣ ಮುಂತಾದವರಿದ್ದರು. ಇದೇ ರೀತಿ ವಡ್ಡನಹಳ್ಳಿಯಲ್ಲಿ ಹೆಂಜಾರಪ್ಪನವರ ನೇತೃತ್ವದಲ್ಲಿ ಅರಣ್ಯ ಸತ್ಯಾಗ್ರಹ ನಡೆಯಿತು. ಈ ಸತ್ಯಾಗ್ರಹ ಬಹಳ ದಿನಗಳವರೆಗೆ ನಡೆಯಿತು. ದಿನಾಂಕ ೦೫-೧೦-೧೯೩೯ ರಂದು ತಾವರೆಕೆರೆಯಲ್ಲಿ ಎಂಟು ಮಂದಿ, ಯಲಿಯೂರಿನಲ್ಲಿ ಐದು ಮಂದಿ, ವಡ್ಡನಹಳ್ಳಿಯಲ್ಲಿ ನಾಲ್ಕು ಮಂದಿ ಬಂಧಿತರಾದರು. ಅದೇ ರೀತಿ ೦೬-೧೦-೧೯೩೯ ರಂದು ತಾವರೆಕೆರೆಯಲ್ಲಿ ಆರು ಮಂದಿ, ಯಲಿಯೂರಿನಲ್ಲಿ ನಾಲ್ಕು ಮಂದಿ ಬಂಧಿತರಾದರು. ೧೯೩೯ರ ಅಕ್ಟೋಬರ್ ೭ ರಂದು ನಡೆದ ಅರಣ್ಯ ಸತ್ಯಾಗ್ರಹದಲ್ಲಿ ತಾವರೆಕೆರೆಯ ನಾಲ್ಕು ಮಂದಿ, ಯಲಿಯೂರಿನ ನಾಲ್ಕು ಮಂದಿಯ ಮೇಲೆ ಸೆಕ್ಷನ್ ೪೪೭, ೪೨೬ ಮತ್ತು ೫೧೧ರ ಐಪಿಸಿ ಚಾರ್ಜ್‌ಶೀಟ್ ಮಾಡಿ ಮೊದಲ ಕೇಸಿಗೆ ಸಂಬಂಧಿಸಿದಂತೆ ಮೂರು ತಿಂಗಳ ಶಿಕ್ಷೆ ಮತ್ತು ೨೫ ರೂಪಾಯಿ ದಂಡ ವಿಧಿಸಲಾಯಿತು. ಈ ಮೂರು ಪ್ರದೇಶಗಳಲ್ಲಿ ಅರಣ್ಯ ಸತ್ಯಾಗ್ರಹವನ್ನು ಆರಂಭಿಸಿದ ೧೫ ಮಂದಿಯನ್ನು ಮೈಸೂರು ಸಾರ್ವಜನಿಕ ರಕ್ಷಣಾ ಕಾಯ್ದೆ ಪ್ರಕಾರ ಅಬಕಾರಿ ಇಲಾಖೆಯವರು ದಸ್ತಗಿರಿ ಮಾಡಿ ಬಂಧಿಸಿ ಶಿರಾದ ಪೊಲೀಸ್ ಕಸ್ಟಡಿಗೆ ಒಪ್ಪಿಸಿದರು. ಪೊಲೀಸರು ಅವರನ್ನು ಪುರಭವನದ ಆವರಣಕ್ಕೆ ಕರೆತಂದ ತಕ್ಷಣವೆ ಸಾರ್ವಜನಿಕರು ಬಂಧಿತ ಸತ್ಯಾಗ್ರಹಿಗಳಿಗೆ ಹೂಹಾರವನ್ನು ಅರ್ಪಿಸಿ ಕಹಳೆ, ಕೊಂಬು ಜಯಕಾರಗಳೊಂದಿಗೆ ಸ್ವಾಗತಿಸಿದರು. ಇವರನ್ನು ಮಧುಗಿರಿ ಪ್ರಥಮ ದರ್ಜೆ ನ್ಯಾಯಾಧೀಶರ ಕೋರ್ಟಿಗೆ ಹಾಜರುಪಡಿಸಿದರು. ವಿಚಾರಣೆ ನಡೆಸಿದ ನ್ಯಾಯಾಧೀಶರು ಅವರಿಗೆ ಆರು ತಿಂಗಳ ಕಠಿಣ ಸಜೆ ಮತ್ತು ೧೫೦ ರೂಪಾಯಿ ದಂಡ ವಿಧಿಸಿ ಬೆಂಗಳೂರಿನ ಸೆಂಟ್ರಲ್ ಜೈಲಿಗೆ ಕಳುಹಿಸಿದರು. ಆದರೂ ಈ ಜಿಲ್ಲೆಯ ಮೂರು ಶಿಬಿರಗಳಲ್ಲಿ ಇದ್ದ ಸತ್ಯಾಗ್ರಹಿಗಳು ಪ್ರತಿನಿತ್ಯ ಸಣ್ಣ ಸಣ್ಣ ತಂಡಗಳಲ್ಲಿ ಹೋಗಿ ಈಚಲು ಮರಗಳನ್ನು ಕಡಿದು ಅರಣ್ಯ ಸತ್ಯಾಗ್ರಹವನ್ನು ಮುಂದುವರಿಸಿದರು.

ಪ್ರತಿದಿನ ಸತ್ಯಾಗ್ರಹಿಗಳನ್ನು ಬಂಧಿಸುವುದು, ನ್ಯಾಯಾಧೀಶರ ಮುಂದೆ ಹಾಜರುಪಡಿಸುವುದು, ಅವರಿಗೆ ಕಠಿಣ ಶಿಕ್ಷೆ ವಿಧಿಸುವುದು, ಅವರನ್ನು ಬೆಂಗಳೂರಿನ ಸೆಂಟ್ರಲ್ ಜೈಲಿಗೆ ರವಾನಿಸುವುದು ದಿನನಿತ್ಯದ ಘಟನೆಗಳಾಗಿದ್ದವು. ಇದರಿಂದ ಪೊಲೀಸರು ತಾಳ್ಮೆ ಕಳೆದುಕೊಂಡು ಚಳುವಳಿಗಾರರನ್ನು ಬೆದರಿಸಬೇಕೆಂದು ನಿರ್ಧರಿಸಿ ಅವರನ್ನು ಬಂಧಿಸಿ ನ್ಯಾಯಾಧೀಶರ ಮುಂದೆ ಹಾಜರುಪಡಿಸುವುದಕ್ಕೆ ಬದಲಾಗಿ ಹುಳಿಯಾರು ಹತ್ತಿರದ ದುರ್ಗಮ ಅರಣ್ಯ ಪ್ರದೇಶವಾದ "ಕುದುರೆ ಕಣಿವೆ" ಯಲ್ಲಿ ಬಿಟ್ಟು ಬಂದರು. ಈ ರೀತಿ ಸತ್ಯಾಗ್ರಹಿಗಳನ್ನು ಕಾಡಿನಲ್ಲಿ ಬಿಟ್ಟು ಬರುತ್ತಿದ್ದ ವಿಚಾರ ಕಾಡ್ಗಿಚ್ಚಿನಂತೆ ಸುತ್ತ ಮುತ್ತಲ ಹಳ್ಳಿಗಳಲ್ಲಿ ಹರಡಿತು. ರೊಚ್ಚಿಗೆದ್ದ ಜನತೆ ಶಿರಾದತ್ತ ಮುನ್ನುಗಿತು. ಆ ಜನತೆಯನ್ನು ಬಿ.ಎನ್.ರಾಮೇಗೌಡ ಮತ್ತು ಎಂ.ಆರ್. ರಾಜಪ್ಪ ಸಮಾಧಾನಪಡಿಸಿದರು. ನಂತರ ಅವರಿಬ್ಬರು ಬಂಧಿತರನ್ನು ಹುಡುಕಿಕೊಂಡು ಬರಲು ಬುಕ್ಕಾಪಟ್ಟಣ ಮತ್ತು ಹುಳಿಯಾರಿನತ್ತ ಸಾಗಿದರು. ಅವರು ಹುಳಿಯಾರಿಗೆ ಹೋಗುವ ಮುನ್ನವೆ ಬಂಧಿತರನ್ನು ಕಾಡಿನಲ್ಲಿ ಭೇಟಿಯಾದರು.

ರಾತ್ರಿಯೆಲ್ಲ ನಿದ್ದೆ ಆಹಾರಗಳಿಲ್ಲದೆ ಅಲೆದು ಬಳಲಿದ ಅವರಿಗೆ ಊಟೋಪಚಾರ ಮಾಡಿಸಿ ಸಂಜೆಯ ವೇಳೆಗೆ ಶಿರಾಕ್ಕೆ ಕರೆತಂದರು. ನಂತರ ಜನ ಶಿರಾದಲ್ಲಿ ನೂರಾರು ಸಂಖ್ಯೆಯಲ್ಲಿ ನೆರೆದು ಅವರನ್ನು ಮೆರವಣಿಗೆ ಮಾಡಿದರು.

ಈ ಅರಣ್ಯ ಸತ್ಯಾಗ್ರಹವು ದಿನದಿಂದ ದಿನಕ್ಕೆ ಚುರುಕಾಗುತ್ತಿರುವಾಗಲೆ ಅದನ್ನು ಹತ್ತಿಕ್ಕಲು ಸರ್ಕಾರ ತುಮಕೂರು ಜಿಲ್ಲಾ ಕಾಂಗ್ರೆಸ್ಸನ್ನು ಕಾನೂನು ಬಾಹಿರ ಸಂಸ್ಥೆ ಎಂದು ಸಾರಿತು. ಇದನ್ನು ಲೆಕ್ಕಿಸದೆ ಸತ್ಯಾಗ್ರಹ ಸಂಘಟನಾಕಾರರಾದ ಬಿ.ಎನ್. ರಾಮೇಗೌಡ ಮತ್ತು ಇತರರು ಸತ್ಯಾಗ್ರಹಿಗಳನ್ನು ಹುರಿದುಂಬಿಸಿ ಚಳವಳಿಯನ್ನು ಮುಂದುವರೆಸಿದರು. ಜಿಲ್ಲೆಯ ಅಗ್ರಮಾನ್ಯ ಹೋರಾಟಗಾರರಾದ ಆರ್.ಎಸ್.ಆರಾಧ್ಯ ಸರ್ಕಾರದ ವಿರುದ್ಧ ತ್ರಿಶೂಲ, ಸಮರ, ಕಹಳೆ, ಕ್ರಾಂತಿ ಎಂಬ ಪತ್ರಿಕೆಗಳನ್ನು ಪ್ರಕಟಿಸಿ ಸರ್ಕಾರದ ಆಡಳಿತ ವೈಖರಿಯನ್ನು ಟೀಕಿಸಿದರು. ಅಂದು ತುಮಕೂರು ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಯಾಗಿದ್ದ ಕೆ.ಗುರುದತ್ ಅರಣ್ಯ ಸತ್ಯಾಗ್ರಹವನ್ನು ಹತ್ತಿಕ್ಕಲು ಯಾವ ಯೋಜನೆಗಳನ್ನು ರೂಪಿಸುತ್ತಿದ್ದಾರೆ ಎಂದು ತಿಳಿದು, ಆರ್.ಎಸ್. ಆರಾಧ್ಯರು "ಗುರುದತ್–ಕ–ದರ್ಬಾರ್" ಎಂಬ ವಿಶೇಷ ಸಂಚಿಕೆಯನ್ನು ರಚಿಸಿ ಅದನ್ನು ಜಿಲ್ಲೆಯಾದ್ಯಂತ ಹಂಚಿದರು. ಹೀಗೆ ಅರಣ್ಯ ಸತ್ಯಾಗ್ರಹಕ್ಕೆ ಬೆಂಬಲ ನೀಡಿದ ಆರ್.ಎಸ್.ಆರಾಧ್ಯರನ್ನು ಬಂಧಿಸಿ ಸೆರೆಮನೆಗೆ ಕಳುಹಿಸಲಾಯಿತು. ನಂತರ ಅವರನ್ನು ಬಿಡುಗಡೆಗೊಳಿಸಲಾಯಿತು. ೧೯೪೦ರ ಮೇ ೧೯ ರಂದು ಆರ್.ಎಸ್.ಆರಾಧ್ಯರ ನೇತೃತ್ವದಲ್ಲಿ ತುಮಕೂರಿನ ಬೀದಿಗಳಲ್ಲಿ ಅರಣ್ಯ ಸತ್ಯಾಗ್ರಹಿಗಳ ದಿನವನ್ನು ಆಚರಿಸಿದರು. ಮೈಸೂರು ಸಂಸ್ಥಾನದ ಸೆರೆಮನೆಗಳಲ್ಲಿ ಅರಣ್ಯ ಸತ್ಯಾಗ್ರಹಿಗಳಿಗೆ ಸರ್ಕಾರದ ಅಟ್ಟಹಾಸ, ವೈಖರಿಯನ್ನು ಉಗ್ರವಾಗಿ ಆರ್.ಎಸ್.ಆರಾಧ್ಯ ಟೀಕಿಸಿದರು. ಸೆಪ್ಟೆಂಬರ್ ೨೧ ರಿಂದ ನವೆಂಬರ್ ೨೨ರವರೆಗೆ ನಡೆದ ಈ ಸತ್ಯಾಗ್ರಹದಲ್ಲಿ ಪಾಲ್ಗೊಂಡ ೧೨೩೮ ಮಂದಿಯನ್ನು ಬಂಧಿಸಲಾಗಿತ್ತು. ಹೀಗೆ ತುಮಕೂರು ಜಿಲ್ಲೆ ಶಿವಪುರ ಸತ್ಯಾಗ್ರಹದಲ್ಲಿ ಪಾಲ್ಗೊಂಡ ಮೇಲೆ ಅರಣ್ಯ ಸತ್ಯಾಗ್ರಹ ಚಲೋದಲ್ಲಿ ಪಾಲ್ಗೊಂಡು ಒಂದು ವಿಕ್ರಮವನ್ನು ಸಾಧಿಸಿತೆಂದು ಹೇಳಬಹುದು.

## ಕ್ವಿಟ್ ಇಂಡಿಯಾ ಚಳವಳಿ ಮತ್ತು ತುಮಕೂರು

ಬ್ರಿಟಿಷ್ ವಸಾಹತುಶಾಹಿ ವಿರುದ್ಧ ನಡೆದ ಕೊನೆಯ ನಿರ್ಣಾಯಕ ಜನತಾ ಸಮರವೇ ಬ್ರಿಟಿಷರೇ, ಭಾರತ ಬಿಟ್ಟು ತೊಲಗಿ (ಕ್ವಿಟ್ ಇಂಡಿಯಾ) ಚಳವಳಿ. ಆದರೆ, ಅದಕ್ಕೂ ಮೊದಲು ಜರುಗಿದ ೧೯೩೯ರ ಕಾನೂನುಭಂಗ ಚಳವಳಿಯನ್ನು ನಿಲ್ಲಿಸಿ ಸಂಸದೀಯ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಂತೆ ಗಾಂಧೀಜಿ ನೀಡಿದ ಮಾರ್ಗದರ್ಶನವನ್ನು ಮೈಸೂರು ಕಾಂಗ್ರೆಸ್ ಪಾಲಿಸಿತು. ಆಗ ಎರಡನೇ ಮಹಾಯುದ್ಧ ನಡೆಯುತ್ತಿದ್ದುದರಿಂದ ಅದು ತಾತ್ಕಾಲಿಕವಾಗಿ ಸರ್ಕಾರದ ಬೇಡಿಕೆಯನ್ನು ಹಿಂಬದಿಯಲ್ಲಿಟ್ಟಿತು. ಕಾಂಗ್ರೆಸ್ ನೀಡಿದ ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಲು ಉತ್ಸಾಹ ತೋರದ ಸರ್ಕಾರ ತನ್ನ ದಬ್ಬಾಳಿಕೆ ನೀತಿಯನ್ನು ಮುಂದುವರೆಸಿದ್ದರಿಂದ ಮತ್ತೆ ಅದರೊಂದಿಗೆ ಮುಖಾಮುಖಿ ಅನಿವಾರ್ಯವಾಯಿತು. ಹಾಗಾಗಿ ಏಪ್ರಿಲ್ ೧೯೪೨ರಲ್ಲಿ ಜರುಗಿದ ಕಾಂಗ್ರೆಸ್‌ನ ೫ನೇ ಅಧಿವೇಶನದಲ್ಲಿ ಮತ್ತೆ ಸಂಘರ್ಷಕ್ಕೆ ಸಜ್ಜುಗೊಂಡಿತು. ಇದೇ ಸಮಯಕ್ಕೆ ರಾಷ್ಟ್ರಮಟ್ಟದಲ್ಲಿ ಮಹತ್ವದ ಘಟನೆಗಳು ಘಟಿಸಿದವು ಅವುಗಳಲ್ಲಿ ಮುಖ್ಯವಾದುದು ೧೯೪೨ರ ಆಗಸ್ಟ್ ಎಂಟರಂದು ಮುಂಬಯಿನಲ್ಲಿ ಜರುಗಿದ ಅಖಿಲಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ವಾರ್ಷಿಕ ಅಧಿವೇಶನವು "ಜನತಾ ಚಳವಳಿ" ಎಂದೆ ಪ್ರಸಿದ್ಧವಾದ 'ಕ್ವಿಟ್ ಇಂಡಿಯಾ' ಚಳುವಳಿಗೆ ಕರೆ ನೀಡಿತು. ಈ ಚಳವಳಿಯಲ್ಲಿ ವಿದ್ಯಾರ್ಥಿಗಳು, ರೈತರು, ಮಹಿಳೆಯರು, ಕೂಲಿ ಕಾರ್ಮಿಕರು ಭಾಗವಹಿಸಿದ್ದರು. ಬೇರೆ ಜಿಲ್ಲೆಗಿಂತ ತುಮಕೂರು ಜಿಲ್ಲೆಯಲ್ಲಿ ಭಾಗವಹಿಸಿದ ರೈತರು ಮತ್ತು ಕಾರ್ಮಿಕರಿಗಿಂತ ವಿದ್ಯಾರ್ಥಿಗಳ ಪಾತ್ರ ತುಂಬಾ ಶ್ಲಾಘನೀಯವಾದದ್ದು.

ಹುಬ್ಬಳ್ಳಿಯಿಂದ ಪ್ರಕಟಗೊಳ್ಳುತ್ತಿದ್ದ ಸಂಯುಕ್ತ ಕರ್ನಾಟಕ ಆಗಸ್ಟ್ ೧೪, ೧೯೪೨ರ ದಿನಪತ್ರಿಕೆಯ ಪ್ರಕಾರ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಪ್ರೊಫೆಸರ್ ಆಗಿದ್ದ ಆರ್.ವಿ.ಜಾಗಿರ್‌ದಾರ್ ಉಪನ್ಯಾಸವನ್ನು ಅಲ್ಲಿನ ಕರ್ನಾಟಕ ಸಂಘದಲ್ಲಿ ಆಗಸ್ಟ್ ಒಂಬತ್ತು ರಂದು ಏರ್ಪಡಿಸಿದ್ದರು. ಆ ಕಾರ್ಯಕ್ರಮ ಮುಗಿದ ನಂತರ ವಿದ್ಯಾರ್ಥಿಗಳು ಮೆರವಣಿಗೆಯಲ್ಲಿ ಸಾಗಿ ಸುಬ್ಬರಾಯನಕೆರೆ ಮೈದಾನದಲ್ಲಿ ಸಭೆ ಸೇರಿ ಆಗಸ್ಟ್ ೧೦ ರಿಂದ ರಾಜ್ಯಾದ್ಯಂತ ವಿದ್ಯಾರ್ಥಿಗಳು "ಭಾರತ ಬಿಟ್ಟು ತೊಲಗಿ" ಚಳವಳಿಯನ್ನು ಆರಂಭಿಸಬೇಕೆಂದು ಕರೆ ನೀಡಿದರು. ಈ ಸುದ್ದಿ ಮಿಂಚಿನಂತೆ ತುಮಕೂರು ಜಿಲ್ಲೆಗೂ ಹಬ್ಬಿತು. ಮಾರನೇ ದಿನವೇ ವಿದ್ಯಾರ್ಥಿಗಳು ತುಮಕೂರಿನಲ್ಲಿ ಸಾರ್ವಜನಿಕ ಸಭೆ ಏರ್ಪಡಿಸುವ ತೀರ್ಮಾನ ಕೈಗೊಂಡರು. ಆದರೆ ಜಿಲ್ಲಾಡಳಿತ, ಸಭೆ, ಮರವಣಿಗೆಗಳನ್ನು ನಿಷೇಧಿಸಿ ಆಜ್ಞೆ ಹೊರಡಿಸಿದಾಗ ಅಂದು ವಿದ್ಯಾರ್ಥಿಗಳ ಸಭೆ ರದ್ದಾಯಿತು. ಆದರೆ, ವಿದ್ಯಾರ್ಥಿಗಳು ಮತ್ತೆ ಜೊತೆಗೂಡಿ ಪ್ರತಿನಿತ್ಯ ಸಭೆ, ಮರೆವಣಿಗೆಗಳನ್ನು ಏರ್ಪಾಡು ಮಾಡುವ

ನಿರ್ಣಯ ಕೈಗೊಂಡರು. ಅದರಂತೆ ಆಗಸ್ಟ್ ೧೨ ರಂದು ತುಮಕೂರು ನಗರದ ಇಂಟರ್ ಮೀಡಿಯಟ್ ಕಾಲೇಜಿನಲ್ಲಿ ಓದುತ್ತಿದ್ದ ವಿದ್ಯಾರ್ಥಿಗಳು ಮತ್ತು ಇತರೆ ಶಾಲೆಯ ವಿದ್ಯಾರ್ಥಿಗಳು ತರಗತಿಗಳನ್ನು ಬಹಿಷ್ಕರಿಸಿ ಸರ್ಕಾರದ ವಿರುದ್ಧ ತಮ್ಮ ಪ್ರತಿಭಟನೆಯನ್ನು ವ್ಯಕ್ತಪಡಿಸಿದರು. ಪೊಲೀಸ್ ವರದಿಯು ಈ ವಿದ್ಯಾರ್ಥಿಗಳನ್ನು ತುಮಕೂರಿನ ಆರ್.ಎಸ್. ಆರಾಧ್ಯ ಹುರಿದುಂಬಿಸಿ ಸಂಘಟಿಸಿದ್ದರೆಂದು ತಿಳಿಸುತ್ತದೆ. ಆಗಸ್ಟ್ ೧೩ ರಂದು ತುಮಕೂರಿನಲ್ಲಿ ೧೦೦ ವಿದ್ಯಾರ್ಥಿಗಳು ನಾರ್ಮಲ್ ಸ್ಕೂಲ್ ಬಳಿ ಗುಂಪುಗೂಡಿ ವಿದೇಶಿ ವಸ್ತುಗಳನ್ನು ಸುಡುವ ಕಾರ್ಯಕ್ರಮವನ್ನು ಹಾಕಿಕೊಂಡು ಬ್ರಿಟಿಷರು ಬಳಸುತ್ತಿದ್ದ ಹ್ಯಾಟ್, ಟೈ ಮತ್ತು ಕೋಟುಗಳನ್ನು ಸುಟ್ಟುಹಾಕಿದರು. ಅದೇ ದಿನ ಸಂಜೆ ನಡೆದ ಸಭೆಯಲ್ಲಿ ಆಗಿನ ಮುನ್ಸಿಪಲ್ ಅಧ್ಯಕ್ಷರಾಗಿದ್ದ ಎಂ.ವಿ.ರಾಮರಾವ್ ವಿದ್ಯಾರ್ಥಿಗಳನ್ನು ಹುರಿದುಂಬಿಸುವ ಭಾಷಣ ಮಾಡಿದರು. ಇದರಿಂದ ತುಮಕೂರಿನಲ್ಲಿ ಕ್ವಿಟ್ ಇಂಡಿಯಾ ಚಳವಳಿಯು ವಿದ್ಯಾರ್ಥಿಗಳಿಂದ ತೀವ್ರವಾಯಿತೆಂದು ಹೇಳಬಹುದು. ಈ ರೀತಿ ಮೈಸೂರು ಸಂಸ್ಥಾನದಲ್ಲಿ ವಿದ್ಯಾರ್ಥಿಗಳ ಚಳವಳಿಯು ತೀವ್ರವಾದಾಗ ಸರ್ಕಾರ ಶಾಲಾ ಕಾಲೇಜುಗಳಿಗೆ ರಜೆ ಘೋಷಿಸಿತು. ತುಮಕೂರಿನಲ್ಲಿ ವಿದ್ಯಾರ್ಥಿಗಳಿಗೆ ಸ್ಫೂರ್ತಿದಾಯಕರಾಗಿದ್ದ ಆರ್.ಎಸ್.ಆರಾಧ್ಯರನ್ನು ಹಿಡಿದುಕೊಟ್ಟವರಿಗೆ ಬಹುಮಾನ ಕೊಡುವುದೆಂದು ಪ್ರಕಟಿಸಿತು. ಇದರಿಂದ ಆರ್.ಎಸ್.ಆರಾಧ್ಯರು ಭೂಗತರಾದರೂ ಕೂಡ ವಿದ್ಯಾರ್ಥಿಗಳು ಚಳವಳಿಯನ್ನು ಮುಂದುವರಿಸಿದರು. ಈ ಬಾರಿ ಚಳವಳಿಯ ಅಂಗವಾಗಿ ಕೋರ್ಟಿನ ಬಳಿ ಪಿಕೆಟಿಂಗ್ ಆರಂಭಿಸಿದರು. ಕೋರ್ಟಿನ ದ್ವಾರವನ್ನು ಮುರಿದು ವಿದ್ಯಾರ್ಥಿಗಳು ಮುನ್ಸಿಫ್ ಕುರ್ಚಿಯನ್ನು ಆಕ್ರಮಿಸಿದರು. ಬಹಳಷ್ಟು ಸಂಖ್ಯೆಯಲ್ಲಿದ್ದ ವಿದ್ಯಾರ್ಥಿಗಳ ಈ ಕೃತ್ಯವನ್ನು ಪೊಲೀಸರು ಅಸಹಾಯಕರಾಗಿ ನೋಡಿದರೆಂದು ತುಮಕೂರಿನ ಮುಖ್ಯ ನ್ಯಾಯಾಧೀಶರು ಮುಖ್ಯ ಕಾರ್ಯದರ್ಶಿಗೆ ಬರೆದ ಪತ್ರದಲ್ಲಿ ತಿಳಿಸಿದ್ದಾರೆ. ತುಮಕೂರಿನ ವಿದ್ಯಾರ್ಥಿಗಳು ಹಾಸನ, ಅರಸೀಕೆರೆಯಲ್ಲಿ ವಿದ್ಯಾರ್ಥಿಗಳನ್ನು ಸಂಘಟಿಸಲು ತಂಡ ತಂಡವಾಗಿ ಹೋಗಿ ಅಲ್ಲಿನ ವಿದ್ಯಾರ್ಥಿಗಳನ್ನು ಹುರಿದುಂಬಿಸಿ ಚಳವಳಿಯನ್ನು ಆರಂಭಿಸಿದುದು ಗಮನಾರ್ಹವಾಗಿದೆ. ಈ ಸಮಯದಲ್ಲಿ ವಿದ್ಯಾರ್ಥಿ ಮುಖಂಡನಾಗಿದ್ದ ಕೆ.ಎಸ್.ರಾಜಪ್ಪನನ್ನು ಬಂಧಿಸಿ ಸೆರೆಮನೆಗೆ ಹಾಕಲಾಯಿತು. ಇದೇ ಸಮಯದಲ್ಲಿ ಕೇವಲ ಒಂಬತ್ತನೇ ತರಗತಿಯಲ್ಲಿ ಓದುತ್ತಿದ್ದ ಬಿ.ಕೆ.ಪುಟ್ಟಣ್ಣಶೆಟ್ಟಿ ಎಂಬ ಬಾಲಕ ಹೈಸ್ಕೂಲ್ ವಿದ್ಯಾರ್ಥಿಗಳನ್ನು ಸಂಘಟಿಸಿ ಚಳುವಳಿಗೆ ಧುಮುಕಿದನು. ಈ ಬಾಲಕನಿಗೆ ಬೆಂಗಳೂರಿನಲ್ಲಿದ್ದ ಚಳವಳಿಕಾರರಿಂದ ಪೂನಾಕ್ಕೆ ಹೋಗಿ ಪ್ರತಿಭಟನೆಯನ್ನು ಮಾಡಲು ಕರೆ ಬಂದಿತು. ಸ್ವಾತಂತ್ರ್ಯ ಹೋರಾಟದ ಹುಮ್ಮಸ್ಸಿನಲ್ಲಿದ್ದ ಬಾಲಕನನ್ನು ಅವರ ತಂದೆ ತಾಯಿ ಹೃದಯಪೂರ್ವಕವಾಗಿ ಬೀಳ್ಕೊಟ್ಟರು. ಮಧುಗಿರಿಯ ಬಾಲಕ ಬಿ.ಕೆ.ಪುಟ್ಟಣ್ಣಶೆಟ್ಟಿಗೆ ೨೦೦/– ರೂ. ಕೈಗೆ ಕಾಂಗ್ರೆಸ್ಸಿನ ಬಾವುಟ ಹಾಗೂ ಗಾಂಧೀಜಿ ಬಿಡುಗಡೆಗೊಳಿಸಿ ಎಂಬ ಫಲಕ ಹೊತ್ತ ಬ್ಯಾನರುಗಳನ್ನು ಕೊಟ್ಟರು. ನಾಲ್ಕು ಜನರ ಇವರ ತಂಡ ಪೂನಾದಲ್ಲಿ ಗಾಂಧೀಜಿ ಬಿಡುಗಡೆ ಮಾಡಿ ಎಂಬ ಘೋಷಣೆಯೊಡನೆ ಕಾಂಗ್ರೆಸ್ಸಿನ ಬಾವುಟವನ್ನು ಬೀಸುತ್ತಾ ಮೆರವಣಿಗೆ ಆರಂಭಿಸಿತು. ಆದರೆ ಸ್ವಲ್ಪ ದೂರವೇ ಕ್ರಮಿಸಿದ್ದ ಇವರನ್ನು ಬ್ರಿಟಿಷ್ ಅಧಿಕಾರಿಗಳು ಬಂಧಿಸಿ ಪೊಲೀಸ್ ಕಸ್ಟಡಿಗೆ ಒಪ್ಪಿಸಿದರು. ಪೊಲೀಸ್ ಅಧಿಕಾರಿಗಳು ಈ ಬಾಲಕರನ್ನು ನೋಡಿ ಕರುಣೆ ಬಂದು, ಕ್ಷಮಾಪಣೆ ಪತ್ರ ಬರೆದುಕೊಟ್ಟರೆ ಕೇಸ್ ಹಾಕದೆ ೫೦೦/– ರೂ.ಗಳನ್ನು ಕೊಟ್ಟು ಊರಿಗೆ ಕಳುಹಿಸುವ ಏರ್ಪಾಡು ಮಾಡುತ್ತೇವೆ ಎಂದು ಹೇಳಿದರಂತೆ. ಆಗ ಅದನ್ನು ಕೋಪದಿಂದ ತಿರಸ್ಕರಿಸಿದಾಗ ಪುಟ್ಟಣ್ಣಶೆಟಿಯನ್ನು ಯರವಾಡ ಜೈಲಿಗೆ ಹಾಕಲಾಯಿತು. ವಿದ್ಯಾರ್ಥಿಯೊಬ್ಬ ಹೊರ ರಾಜ್ಯದಲ್ಲಿ ಚಳವಳಿ ಮಾಡಿ ಬಂದ ಕೀರ್ತಿ ತುಮಕೂರಿಗೆ ಸಂದಿರುವುದು ಹೆಮ್ಮೆಯ ಸಂಗತಿಯಾಗಿದೆ.

೧೯೪೨ರ ಆಗಸ್ಟ್ ೧೮ ರಂದು ವಿದ್ಯಾರ್ಥಿಗಳ ಅಹಿಂಸಾತ್ಮಕ ಚಳವಳಿಯು ತಿಪಟೂರಿನಲ್ಲಿ ಹಿಂಸಾಕೃತ್ಯಕ್ಕೆ ತಿರುಗಿತು. ಅಂದು ಯೂರೋಪಿಯನ್ ಮಿಲಿಟರಿ ಅಧಿಕಾರಿಗಳನ್ನು ಹೊತ್ತಿದ್ದ ರೈಲು ತಿಪಟೂರಿನಿಂದ ಅರಸೀಕೆರೆಗೆ ಹೋಗಬೇಕಾಗಿತ್ತು. ಅಲ್ಲಿ ಆ ದಿನ ಚಳವಳಿಯಲ್ಲಿ ವೀರ ಮರಣವನ್ನಪ್ಪಿದ್ದ ಮಹದೇವ ದೇಸಾಯಿಗೆ ಸಂತಾಪ ಸೂಚಕ ಸಭೆಯನ್ನು ಏರ್ಪಡಿಸಲಾಗಿತ್ತು. ವಿದ್ಯಾರ್ಥಿಗಳೆಲ್ಲಾ ಬೃಹತ್ ಮೆರವಣಿಗೆಯೊಂದಿಗೆ ಆ ಸಭೆಗೆ ಹೊಗುವ ಕಾರ್ಯಕ್ರಮವಿತ್ತು. ಮೆರವಣಿಗೆ ಸಾಗುತ್ತಿದ್ದಾಗ ಕೆಲವು ವಿದ್ಯಾರ್ಥಿಗಳು ಹೊರಟಿದ್ದ ರೈಲಿಗೆ ಕಲ್ಲು ತೂರಿದರು. ಇದರಿಂದ ರೈಲಿನಲ್ಲಿದ್ದ ಮಿಲಿಟರಿ ಅಧಿಕಾರಿಗಳು ಕೋಪಗೊಂಡು ವಿದ್ಯಾರ್ಥಿಗಳ ಮೆರವಣಿಗೆಯ ಮೇಲೆ ಗುಂಡು ಹಾರಿಸಿದರು. ಆಗ ಆ ಸಂದರ್ಭದಲ್ಲಿ ಮೆರವಣಿಗೆಯನ್ನು ನೋಡುತ್ತಿದ್ದ ಮಾರನಗೆರೆಯ ರೈತ ಸಿದ್ದಪ್ಪ ಎಂಬುವನು ಮರಣ ಹೊಂದಿದನು. ಇದರಿಂದ ರೊಚ್ಚಿಗೆದ್ದ ವಿದ್ಯಾರ್ಥಿಗಳು ರೈಲ್ವೆ ಸ್ಟೇಷನ್‌ಗೆ ಬೆಂಕಿ ಇಟ್ಟು ಸುಟ್ಟು ಹಾಕಿದರು. ಸಾಮಾನುಗಳನ್ನಿಟ್ಟಿದ್ದ ಕೋಣೆಗೆ ನುಗ್ಗಿ ನಾಶಪಡಿಸಿದರು. ಗೂಡ್ಸ್ ರೈಲಿನ ಬೋಗಿಗಳ ಬಾಗಿಲನ್ನು ತೆರೆದು ಅದರೊಳಗಿದ್ದ ವಸ್ತುಗಳನ್ನು

ಲೂಟಿ ಮಾಡಿದರು. ಎಲ್ಲಾ ಮುಗಿದ ನಂತರ ಸಂಜೆ ಆಗಮಿಸಿದ ಮೀಸಲು ಪಡೆಯ ಪೊಲೀಸರು ತಿಪಟೂರಿನ ಹಾಸ್ಟೆಲ್‌ಗಳಲ್ಲೆಲ್ಲಾ ಹುಡುಕಿ ಮಾರನಗೆರೆ ರಂಗಪ್ಪ, ಗಾಣಿಗರ ಗಂಗಣ್ಣ ಎಂಬ ವಿದ್ಯಾರ್ಥಿ ಮುಖಂಡರ ಜೊತೆ ಒಟ್ಟು ೪೨ ಮಂದಿ ವಿದ್ಯಾರ್ಥಿಗಳನ್ನು ಬಂಧಿಸಿ ಸೆರೆಮನೆಗೆ ಕಳುಹಿಸಿದರು ಎಂದು ಸರ್ಕಾರಿ ದಾಖಲೆ ತಿಳಿಸುತ್ತದೆ. ಮೆರವಣಿಗೆಯಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿ ಶಂಬೇಗೌಡನ ಹೇಳಿಕೆಯ ಪ್ರಕಾರ ಆ ದಿನ ಮೆರವಣಿಗೆಯು ಶಾಂತಿಯುತವಾಗಿದ್ದು ಮತ್ತು ವಿದ್ಯಾರ್ಥಿಗಳು ಯೂರೋಪಿಯನ್ ಮಿಲಿಟರಿ ಅಧಿಕಾರಿಗಳನ್ನು ಹೊತ್ತಿದ್ದ ರೈಲನ್ನು ಶಾಂತಿಯುತವಾಗಿ ತಡೆಯಲು ಯತ್ನಿಸಿದರು. ಆಗ ಒಬ್ಬ ಅಧಿಕಾರಿ ಹೊರಬಂದು ಗುಂಡು ಹಾರಿಸಿದಾಗ ರೊಚ್ಚಿಗೆದ್ದ ವಿದ್ಯಾರ್ಥಿಗಳು ರೈಲ್ವೆ ಸ್ಟೇಷನ್ ಸುಟ್ಟು ಹಾಕಿದರೆಂದು ಹೇಳಲಾಗಿದೆ.

ತುಮಕೂರಿನಲ್ಲಿ ವಿದ್ಯಾರ್ಥಿಗಳೇ ಅಲ್ಲದೆ ವಿದ್ಯಾರ್ಥಿನಿಯರೂ ಕೂಡಾ 'ಭಾರತ ಬಿಟ್ಟು ತೊಲಗಿ' ಚಳವಳಿಯಲ್ಲಿ ಭಾಗವಹಿಸಿ ತಮ್ಮ ಅಮೂಲ್ಯ ಕೊಡುಗೆಯನ್ನು ನೀಡಿದ್ದಾರೆ. ವಿದ್ಯಾರ್ಥಿನಿಯರನ್ನು ಸಂಘಟಿಸಿ ಅವರನ್ನು ಹುರಿದುಂಬಿಸಲು ಬೆಂಗಳೂರಿನ ಮಹಾರಾಣಿ ಕಾಲೇಜಿನ ವಿದ್ಯಾರ್ಥಿನಿ ನಾಯಕಿಯರಾದ ಪೊನ್ನಮ್ಮ, ಮೀನಾಕ್ಷಮ್ಮ ಹಾಗೂ ಕೋಮಲ ತುಮಕೂರಿಗೆ ಆಗಮಿಸಿ ವಿದ್ಯಾರ್ಥಿನಿಯರನ್ನು ಉದ್ದೇಶಿಸಿ ಭಾಷಣ ಮಾಡಿ ಅವರನ್ನು ಚಳವಳಿಗೆ ಧುಮುಕುವಂತೆ ಪ್ರೇರೇಪಿಸುವಲ್ಲಿ ಯಶಸ್ವಿಯಾದರು. ಆದುದರಿಂದ ಸರೋಜಮ್ಮ ಮತ್ತು ಅಮೃತಾಬಾಯಿ ಎಂಬ ಇಬ್ಬರು ಕಾಲೇಜು ವಿದ್ಯಾರ್ಥಿನಿಯರು ತುಮಕೂರು ಜಿಲ್ಲೆಯಲ್ಲಿ ವಿದ್ಯಾರ್ಥಿನಿಯರನ್ನು ಸಂಘಟಿಸಿ ಆಗಸ್ಟ್ ೩೧, ೧೯೪೨ರಲ್ಲಿ ಸಭೆಯೊಂದನ್ನು ಏರ್ಪಡಿಸಿ ಮಾತನಾಡಿದುದು ಗಮನಾರ್ಹವಾಗಿದೆ. ಹೀಗೆ ಜಿಲ್ಲೆಯಲ್ಲಿ ದಿನದಿಂದ ದಿನಕ್ಕೆ ವಿದ್ಯಾರ್ಥಿ ಚಳವಳಿ ಗಟ್ಟಿಯಾಗುತ್ತಿತ್ತು. ಜಿಲ್ಲಾಡಳಿತಕ್ಕೆ ಇದನ್ನು ನಿಯಂತ್ರಿಸಲು ಸಾಧ್ಯವಾಗಲಿಲ್ಲ. ಆದ್ದರಿಂದ ಆಗಸ್ಟ್ ೨೯, ೧೯೪೨ರಂದು ತುಮಕೂರು ಜಿಲ್ಲೆಯ ಪೊಲೀಸ್ ಸೂಪರಿಂಟೆಂಡೆಂಟ್‌ರು ಜಿಲ್ಲಾಧಿಕಾರಿಗೆ ಪತ್ರ ಬರೆಯುತ್ತಾ "ಕ್ವಿಟ್ ಇಂಡಿಯಾ ಚಳವಳಿಯು ದಿನದಿಂದ ದಿನಕ್ಕೆ ತೀವ್ರವಾಗಲು ವಿದ್ಯಾರ್ಥಿಗಳು ಈ ಚಳುವಳಿಗೆ ಬಂದಿರುವುದೇ ಕಾರಣವಾಗಿದೆ ಎಂದು ತಿಳಿಸಿ, ಸರ್ಕಾರಕ್ಕೆ ಪತ್ರ ಬರೆದರು. ಇದೇ ರೀತಿ ಕರ್ನಾಟಕದ ಹಲವಾರು ಕಡೆ ಚಳುವಳಿ ತೀವ್ರವಾದಾಗ, ಸರ್ಕಾರಿ ಸೇವೆಯಲ್ಲಿರುವ ಎಲ್ಲಾ ನೌಕರರಿಗೆ ತಮ್ಮ ಮಕ್ಕಳನ್ನು ಕಟ್ಟುನಿಟ್ಟಾಗಿ ಶಾಲಾ ಕಾಲೇಜಿಗೆ ಹಾಜರಾಗುವಂತೆ ನೋಡಿಕೊಳ್ಳಬೇಕೆಂಬ ಸುತ್ತೋಲೆಯನ್ನು ಸರ್ಕಾರ ಹೊರಡಿಸಿತು. ಶಿಕ್ಷಕರು ಶಾಲಾ ಕಾಲೇಜುಗಳಲ್ಲಿ ಹಾಜರಾತಿಯನ್ನು ಕಡ್ಡಾಯವಾಗಿ ತೆಗೆದುಕೊಂಡು ಪ್ರತಿನಿತ್ಯ ಜಿಲ್ಲಾಧಿಕಾರಿಗೆ ವರದಿ ಸಲ್ಲಿಸಬೇಕೆಂದು ಸರ್ಕಾರ ಆಜ್ಞೆ ಮಾಡಿತು. ಆದರೂ ಕೂಡ ವಿದ್ಯಾರ್ಥಿಗಳು ಶಾಲೆಗೆ ಹೋಗಿ ತರಗತಿಗಳನ್ನು ಬಹಿಷ್ಕರಿಸಿ ಶಾಲಾ ಕಾಲೇಜುಗಳ ಮುಂಭಾಗದಲ್ಲಿ ಪಿಕೆಟಿಂಗ್ ನಡೆಸುತ್ತಿದ್ದರು. ಆದುದರಿಂದ ವಿದ್ಯಾರ್ಥಿಗಳ ಮುಷ್ಕರ ಸರ್ಕಾರಕ್ಕೆ ತಲೆನೋವಾಗಿ ಪರಿಣಮಿಸಿ ಪಿಕೆಟಿಂಗನ್ನು ಬಲವಂತದಿಂದ ತಡೆಯಬೇಕು. ಕಾಲೇಜಿನ ಮುಖ್ಯ ಬಾಗಿಲೊಂದನ್ನು ಹೊರತುಪಡಿಸಿ ಎಲ್ಲಾ ಬಾಗಿಲನ್ನು ಭದ್ರಪಡಿಸಬೇಕು. ಬಾಗಿಲಿನಲ್ಲಿ ಶಿಕ್ಷಕರು ನಿಂತು ವಿದ್ಯಾರ್ಥಿಗಳನ್ನು ಗುರ್ತಿಸಿ ಒಳಗೆ ಬಿಡಬೇಕು ಗೇಟಿನ ಒಳಭಾಗದಲ್ಲಿ ಪೊಲೀಸ್ ಕಾವಲನ್ನು ಹಾಕಬೇಕು ಎಂದು ಸರ್ಕಾರ ವಿಶ್ವವಿದ್ಯಾನಿಲಯದ ಉಪಕುಲಪತಿಗಳಿಗೆ ತಿಳಿಸಿತು. ಆದಾಗ್ಯೂ ಕೂಡಾ ಚಳವಳಿಯು ಮುಂದುವರಿದೇ ಇತ್ತು.

ತುಮಕೂರು ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದ ವಿದ್ಯಾರ್ಥಿಗಳು ಹಲವು ಗುಂಪುಗಳಾಗಿ ತಾಲೂಕು ಕೇಂದ್ರಗಳಿಗೆ ಬಂದು ಕ್ವಿಟ್ ಇಂಡಿಯಾ ಚಳವಳಿಯ ಬಗ್ಗೆ ಜಾಗೃತಿ ಹಾಗೂ ಸರ್ಕಾರದ ಯುದ್ಧೋದ್ಯಮಕ್ಕೆ ಯಾವುದೇ ವಿಧವಾದ ನೆರವು ನೀಡಬಾರದೆಂದು ತಿಳುವಳಿಕೆ ನೀಡುತ್ತಿದ್ದರು. ತುಮಕೂರಿನಿಂದ ಹೊರಟ ಗುಂಪು ಚಿಕ್ಕನಾಯಕನಹಳ್ಳಿ ತಾಲೂಕಿಗೆ ತಲುಪಿತು. ಅದರ ನಾಯಕತ್ವವನ್ನು ಅದೇ ತಾಲೂಕಿನ ಎ.ಬಿ.ಮರಿಯಪ್ಪ ವಹಿಸಿದ್ದರು. ನೇರವಾಗಿ ಈ ವಿದ್ಯಾರ್ಥಿಗಳು ಜಿ.ವಿ.ನಾರಾಯಣಮೂರ್ತಿಯ ಮನೆಗೆ ಹೋಗಿ ಅತಿಥ್ಯ ಪಡೆದರು. ಪೊಲೀಸಿನವರು ಈ ಗುಂಪಿನ ಮೇಲೆ ನಿಗಾ ಇಟ್ಟಿದ್ದರು. ವಿಷಯ ತಿಳಿದ ಕಾವಲು ಪಡೆಯ ಪೊಲೀಸ್ ವ್ಯಾನು ವಿದ್ಯಾರ್ಥಿಗಳನ್ನು ಹಿಂಬಾಲಿಸಿತು. ಆದರೆ ವಿದ್ಯಾರ್ಥಿಗಳು ತಪ್ಪಿಸಿಕೊಂಡು ಶೆಟ್ಟೀಕೆರೆಗೆ ಹೋಗಿ ಅಲ್ಲಿ ವಿಧ್ವಂಸಕ ಕೃತ್ಯಗಳಲ್ಲಿ ತೊಡಗಿದರು. ಆದ್ದರಿಂದ ಪೊಲೀಸರು ಅಲ್ಲಿಗೆ ಹೊರಟರು. ಈ ಸುದ್ದಿ ಹಳ್ಳಿಯ ಜನರಿಗೆ ಗೊತ್ತಾದಾಗ ಶೆಟ್ಟಿಕೆರೆ ಹೊರ ಭಾಗದಲ್ಲಿರುವ ಮಹಾನವಮಿ ಮಂಟಪದ ಬಳಿ ರಸ್ತೆಗೆ ಅಡ್ಡವಾಗಿ ನಿಂತರು. ಆ ಸಮಯಕ್ಕಾಗಲೇ ರೈತರು ವಿದ್ಯಾರ್ಥಿಗಳನ್ನು ಕುರಿರೊಪ್ಪ, ದನದ ಕೊಟ್ಟಿಗೆ ಹಾಗೂ ಹುಲ್ಲುಮೆದೆಗಳ ಅಡಿಯಲ್ಲಿ ಅಡಗಿಸಿಟ್ಟಿದ್ದರು. ಪೊಲೀಸ್ ವ್ಯಾನು ಬಂದು ಆ ಜನಸ್ತೋಮದ ಮಧ್ಯೆ ನಿಂತಿತು. ಅಷ್ಟರಲ್ಲಿ ವಿಷಯ ತಿಳಿದ ಜಿ.ವಿ.ನಾರಾಯಣಮೂರ್ತಿ ಮತ್ತು ಎಂ.ಎಸ್.ಹನುಮಂತರಾವ್ ಅಲ್ಲಿಗೆ ಬಂದರು. ಆದರೆ ಪೊಲೀಸಿನವರ ವ್ಯಾನು ಹಿಂದಕ್ಕೆ ಹೊರಟಿತು.

ತುಮಕೂರು ಜಿಲ್ಲೆಯಲ್ಲಿ ಆಗಸ್ಟ್ ೧೧, ೧೯೪೨ ರಲ್ಲಿ ಆರಂಭವಾದ ವಿದ್ಯಾರ್ಥಿಗಳ ಈ ಚಳವಳಿಯು ಸೆಪ್ಟೆಂಬರ್ ೧೦, ೧೯೪೨ ರವರೆವಿಗೆ ಪ್ರತಿನಿತ್ಯ ಸಭೆ ಸಮಾರಂಭಗಳನ್ನು ಏರ್ಪಡಿಸುವುದರ ಮೂಲಕ ಚಳವಳಿಯ ಕಾವನ್ನು ಉಳಿಸಿಕೊಂಡಿತ್ತು. ಈ ಅವಧಿಯಲ್ಲಿ ಅನೇಕ ವಿದ್ಯಾರ್ಥಿಗಳನ್ನು ಬಂಧಿಸಿ ಸೆರೆಮನೆಗೆ ತಳ್ಳಲಾಗಿತ್ತು. ಸೆಪ್ಟೆಂಬರ್ ೧೦, ೧೯೪೨ರ ಸಾರ್ವಜನಿಕ ಸಭೆಯಲ್ಲಿ ವಿದ್ಯಾರ್ಥಿಗಳು ಪ್ರತಿನಿತ್ಯ ಸಭೆಗಳನ್ನು ಇನ್ನು ಮುಂದೆ ನಡೆಸಲು ಸಾಧ್ಯವಾಗದು ಎಂದು ಘೋಷಿಸಿದರು. ಸೆಪ್ಟೆಂಬರ್ ಅಂತ್ಯದ ವೇಳೆಗೆ ವಿದ್ಯಾರ್ಥಿ ಚಳವಳಿಯು ತನ್ನ ಶಕ್ತಿಯನ್ನು ಕಳೆದುಕೊಳ್ಳಲಾರಂಭಿಸಿತು. ಸೆಪ್ಟೆಂಬರ್ ೨೭, ೧೯೪೨ ರಂದು ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ತುಮಕೂರಿನಲ್ಲಿ ಶಾಲಾ ಕಾಲೇಜುಗಳು ಶಾಂತಿಯುತವಾಗಿ ನಡೆಯುತ್ತಿವೆ ಎಂದು ವರದಿ ಸಲ್ಲಿಸಿದರು. ಆದರೆ ವಾಸ್ತವ ಸ್ಥಿತಿಯೇ ಬೇರೆಯಾಗಿತ್ತು. ವಿದ್ಯಾರ್ಥಿಗಳು ಶಾಲಾ ಕಾಲೇಜುಗಳಿಗೆ ಹೋದರೂ ಕೂಡ ತರಗತಿಗಳನ್ನು ಬಹಿಷ್ಕರಿಸಿದ್ದರು. ನವೆಂಬರ್ ೫, ೧೯೪೨ ರಂದು ತುಮಕೂರು ನಗರದಲ್ಲಿ ವಿದ್ಯಾರ್ಥಿಗಳ ಸಭೆಯೊಂದು ಜರುಗಿ ಅದರಲ್ಲಿ ಶಾಲಾ ಕಾಲೇಜುಗಳಿಗೆ ವಿದ್ಯಾರ್ಥಿಗಳು ಹಾಜರಾಗಬೇಕಾದರೆ ಹಾಗೂ ಚಳುವಳಿಯನ್ನು ಸ್ಥಗಿತಗೊಳಿಸಬೇಕಾದರೆ ನವೆಂಬರ್ ೧೦, ೧೯೪೨ ರೊಳಗಾಗಿ ಬಂಧಿಸಿರುವ ಎಲ್ಲಾ ವಿದ್ಯಾರ್ಥಿಗಳನ್ನು ಬಿಡುಗಡೆಗೊಳಿಸಬೇಕು ಎಂದು ಸರ್ಕಾರಕ್ಕೆ ಆಗ್ರಹಪಡಿಸಲಾಯಿತು. ಇಲ್ಲದಿದ್ದರೆ ಸರ್ಕಾರ ಬಲವಂತಪಡಿಸಿದರೆ ತರಗತಿಗಳಿಗೆ ಹಾಜರಾಗಿ ಪಾಠವನ್ನು ಕೇಳಬೇಡಿರೆಂದು ವಿದ್ಯಾರ್ಥಿಗಳನ್ನು ಈ ಸಭೆಯಲ್ಲಿ ಕೋರಲಾಯಿತು. ಆದುದರಿಂದ ಸರ್ಕಾರ ಯಾವುದೇ ಷರತ್ತಿಲ್ಲದೆ ವಿದ್ಯಾರ್ಥಿಗಳನ್ನು ನವೆಂಬರ್ ೦೯, ೧೯೪೨ರಂದು ಜೈಲಿನಿಂದ ಬಿಡುಗಡೆ ಮಾಡಿ ಅವರ ವಿರುದ್ಧದ ಎಲ್ಲಾ ಮೊಕದ್ದಮೆಗಳನ್ನು ಹಿಂತೆಗೆದುಕೊಂಡಿತು. ವಿದ್ಯಾರ್ಥಿ ನಾಯಕ ಕೃಷ್ಣಾಚಾರ್ ಅಂದು ಭಾಷಣ ಮಾಡುತ್ತಾ ವಿದ್ಯಾರ್ಥಿಗಳನ್ನು ಜೈಲಿನಿಂದ ಬಿಡುಗಡೆಗೊಳಿಸಿರುವುದರಿಂದ ಸರ್ಕಾರದ ವಿರುದ್ಧದ ಯಾವುದೇ ಮುಷ್ಕರದಲ್ಲಿ ಅವರು ಭಾಗವಹಿಸುವುದಿಲ್ಲವೆಂದು ಘೋಷಿಸಿದರು. ವಿದ್ಯಾರ್ಥಿ ಚಳವಳಿಯನ್ನು ಸ್ಥಗಿತಗೊಳಿಸಿದ್ದರಿಂದ ಕೆಲವು ವಿದ್ಯಾರ್ಥಿಗಳು ಬೇಸರ ಹೊಂದಿ ಗುಂಪುಗೂಡಿ ಡಿಸೆಂಬರ್ ೧೦, ೧೯೪೨ರಂದು ಪೋರ್ಟ್‌ಬಾಯ್ಸ್ ಸ್ಕೂಲಿನ ವಸ್ತುಗಳಿಗೆ ಬೆಂಕಿ ಹಚ್ಚಿ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದರು. ಅದೇ ದಿನ ಇಂಟರ್ ಮೀಡಿಯೇಟ್ ಕಾಲೇಜಿನ ಹಿಂಬದಿಯಲ್ಲಿದ್ದ ಗುಡಿಸಲುಗಳಿಗೆ ಬೆಂಕಿ ಹಚ್ಚಿ ಸುಡಲಾಯಿತು. ಕಾಲೇಜಿನ ಕೊಠಡಿಗಳಲ್ಲಿ ಸಿಡಿಮದ್ದುಗಳನ್ನು ಇಟ್ಟು ಸಿಡಿಸಲಾಯಿತು. ಈ ಘಟನೆಗೆ ಸಂಬಂಧಿಸಿದಂತೆ ಖಾದಿಭಂಡಾರದ ಎಸ್.ರಾಮಚಂದ್ರರಾವ್‌ರನ್ನು ಬಂಧಿಸಿ ಸೆರೆಮನೆಗೆ ಹಾಕಲಾಯಿತು.

ತಿಪಟೂರು, ವಿದ್ಯಾರ್ಥಿಗಳ ಚಳವಳಿಗೆ ಬಹು ಮುಖ್ಯ ಕೇಂದ್ರವಾಗಿತ್ತು. ಅಲ್ಲಿನ ಸರ್ಕಾರಿ ಹೈಸ್ಕೂಲಿನ ವಿದ್ಯಾರ್ಥಿಗಳಾಗಿದ್ದ ಶಂಬೇಗೌಡ ಮತ್ತು ಕೇಶವಮೂರ್ತಿ ಕರಡಿ ರೈಲ್ವೆ ಸ್ಟೇಷನ್ನಿನ ಬಳಿ ಪೊಲೀಸರ ಕೈಗೆ ಸಿಕ್ಕಿಬಿದ್ದಾಗ ಭದ್ರಾವತಿಯ ವಿಳಾಸವನ್ನು ಕೊಟ್ಟು ತಪ್ಪಿಸಿಕೊಂಡು ತಿಪಟೂರಿಗೆ ಬಂದರು. ಅಲ್ಲಿ ವಿದ್ಯಾರ್ಥಿಗಳನ್ನು ಒಟ್ಟುಗೂಡಿಸಿ ಸರ್ಕಾರದ ವಿರುದ್ಧ ಭೂಗತ ಚಟುವಟಿಕೆಗಳನ್ನು ಆರಂಭಿಸಿದರು. ಆದರೆ ಈ ಬಾರಿ ಶಂಬೇಗೌಡ ಎಂಬ ವಿದ್ಯಾರ್ಥಿಯನ್ನು ಪೊಲೀಸರು ಹಿಡಿದು ಜೈಲಿಗೆ ಕಳುಹಿಸಿದರು. ತಿಪಟೂರು ಜೈಲಿನಲ್ಲಿ ತಿಪಟೂರು ಹೈಸ್ಕೂಲಿನ ನಾಲ್ಕು ಜನ ವಿದ್ಯಾರ್ಥಿಗಳು ಮತ್ತು ತುಮಕೂರು ಹೈಸ್ಕೂಲಿನ ಒಬ್ಬ ವಿದ್ಯಾರ್ಥಿಯೂ ಇದ್ದ. ಶಂಬೇಗೌಡನ ಹೇಳಿಕೆಯ ಪ್ರಕಾರ ಜೈಲಿನ ಅಧಿಕಾರಿಗಳು ಕ್ಷಮಾಪಣೆ ಪತ್ರವನ್ನು ಬರೆದುಕೊಟ್ಟರೆ ಬಿಡುಗಡೆಗೊಳಿಸುತ್ತೇವೆ ಎಂದು ಹೇಳಿದಾಗ ತಿರಸ್ಕರಿಸಿದೆವು. ತಾಲೂಕಿನ ಮ್ಯಾಜಿಸ್ಟ್ರೇಟ್ ಆಗಿದ್ದ ಕೆಂಪಣ್ಣನವರೂ ಕೂಡಾ ಜೈಲಿಗೆ ಬಂದು ಕ್ಷಮಾಪಣೆ ಪತ್ರ ಬರೆದುಕೊಡಿ ಎಂದು ಹೇಳಿದರೂ ಕೂಡಾ ಜೈಲಿನಲ್ಲಿದ್ದವರೆಲ್ಲಾ ತಿರಸ್ಕರಿಸಿದರು. ಇದರಿಂದ ಪೊಲೀಸರ ಕೋಪಕ್ಕೆ ಗುರಿಯಾಗಬೇಕಾಯಿತು. ಶಿಕ್ಷೆ ಮುಂದುವರಿಯಿತು. ೧೯೪೨ರ ಸೆಪ್ಟೆಂಬರ್‌ನಿಂದ ತಿಪಟೂರು, ವಿದ್ಯಾರ್ಥಿ ಚಳವಳಿ ಕೇಂದ್ರವಾಗಿತ್ತು ಅಲ್ಲಿನ ವಿದ್ಯಾರ್ಥಿಗಳ ಒಂದು ಗುಂಪಿನ ಮುಖಂಡ ಓಬಳಯ್ಯ ಮತ್ತು ಸ್ನೇಹಿತರು ಕೊರಟಗೆರೆ, ಮಧುಗಿರಿ ತಾಲೂಕುಗಳಲ್ಲಿ ಸಂಚರಿಸಿ ವಿದ್ಯಾರ್ಥಿಗಳನ್ನು ಒಟ್ಟುಗೂಡಿಸಿ ಭೂಗತ ಚಟುವಟಿಕೆಗಳನ್ನು ನಡೆಸಲಾರಂಭಿಸಿದರು. ಓಬಳಯ್ಯ ಪೊಲೀಸರ ಕೆಂಗಣ್ಣಿಗೆ ಗುರಿಯಾಗಿದ್ದು ಅವನನ್ನು ಹುಡುಕಲಾರಂಭಿಸಿದರು. ಕೊನೆಗೆ ತಿಪಟೂರು ಬಳಿ ಸಿಕ್ಕಿಬಿದ್ದಾಗ ವಿಚಾರಣೆ ನಡೆಸಿ ಭದ್ರತಾ ಕಾಯ್ದೆಯ ಅನ್ವಯ ಡಿಸೆಂಬರ್ ೧೭, ೧೯೪೩ರವರೆವಿಗೂ ಬೆಂಗಳೂರು ಜೈಲಿನಲ್ಲಿಡಲಾಯಿತು.

ಹೀಗೆ ತುಮಕೂರು ನಗರದಲ್ಲಿ ಸೆಪ್ಟೆಂಬರ್ ೧೦, ೧೯೪೨ರ ಸಭೆಯಲ್ಲಿ ವಿದ್ಯಾರ್ಥಿ ಚಳವಳಿ ಮುಕ್ತಾಯವಾಯಿತೆಂದು ಮುಖಂಡರು ಘೋಷಿಸಿದರೂ ಕೂಡಾ ಅದರಲ್ಲಿನ ಒಂದು ಗುಂಪು ಚಳವಳಿಯನ್ನು ಮುಂದುವರಿಸಿ ಗಾಂಧೀಜಿಯವರು ಸಾರಿದ್ದ “ಮಾಡು ಇಲ್ಲವೆ ಮಡಿ” ಎಂಬ ತತ್ವವನ್ನು ಚಾಚೂ ತಪ್ಪದೆ ಪಾಲಿಸಿ ಸ್ವಾತಂತ್ರ್ಯವನ್ನು ಪಡೆಯಲಿಕ್ಕೆ ಹೋರಾಟ

ನಡೆಸಿದ್ದು ಇತಿಹಾಸದಲ್ಲಿ ದಾಖಲಾದ ಸಂಗತಿಯಾಗಿದೆ. ವಿದ್ಯಾರ್ಥಿಗಳ ಚಳವಳಿಯ ಬಿಸಿ ಕಡಿಮೆಯಾದಾಗ ತುಮಕೂರು ಜಿಲ್ಲೆಯಲ್ಲಿ ರೈತರು ಅದನ್ನು ಮುಂದುವರಿಸಿಕೊಂಡು ಹೋಗುವ ಜವಾಬ್ದಾರಿಯನ್ನು ಹೊತ್ತು ಅದರಂತೆ ಸ್ವಾತಂತ್ರ್ಯ ಹೋರಾಟವನ್ನೂ ಮುಂದುವರಿಸಿದರು.

ಬೆಂಗಳೂರಿನ ಮಿನರ್ವ ಮಿಲ್ಲಿನ ೧೦೦ ಮಂದಿ ಕಾರ್ಮಿಕರು ರೈಲಿನಲ್ಲಿ ತುಮಕೂರನ್ನು ತಲುಪಿ ನಗರದಲ್ಲಿ ಮೆರವಣಿಗೆ ಮಾಡಿ ಸಭೆಯನ್ನೂ ನಡೆಸಿದರು. ಈ ಸಭೆಗೆ ೧೦೦೦ ಮಂದಿ ಹಾಜರಿದ್ದರು. ಸಭೆಯ ನಂತರ ಗುಬ್ಬಿ ಟೋಲ್‌ಗೇಟಿನ ಹತ್ತಿರ ಇರುವ ಮದ್ಯದ ಅಂಗಡಿಯನ್ನು ನಾಶಮಾಡಿದರು. ಹೊನ್ನುಡಿಕೆ ಗ್ರಾಮದಲ್ಲಿ ಇದೇ ರೀತಿ ಮದ್ಯದ ಅಂಗಡಿಯನ್ನು ಸುಟ್ಟು ಭಸ್ಮಮಾಡಿದರು. ಟೆಲಿಫೋನ್ ತಂತಿಗಳನ್ನು ಕಡಿದುಹಾಕಿ, ತುಮಕೂರು ಮತ್ತು ಬೆಂಗಳೂರು ನಡುವಿನ ಸಂಪರ್ಕವನ್ನು ಸ್ಥಗಿತಗೊಳಿಸಿದರು. ಜಿಲ್ಲೆಯ ಹೆಬ್ಬೂರು, ತಿಪಟೂರು, ಮಧುಗಿರಿ, ಚಿಕ್ಕನಾಯಕನಹಳ್ಳಿ ಮತ್ತು ಗುಬ್ಬಿಗಳಲ್ಲಿ ಸಭೆ ಮತ್ತು ಮೆರವಣಿಗೆಗಳು ತೀವ್ರಗೊಂಡವು.

ತುಮಕೂರಿನಲ್ಲಿ ಆಗಸ್ಟ್ ೧೫ರಂದು ಒಂದು ಸಾರ್ವಜನಿಕ ಮೆರವಣಿಗೆ ನಡೆಯಿತು. ಈ ಮೆರವಣಿಗೆಯಲ್ಲಿ ವಿದ್ಯಾರ್ಥಿಗಳು, ಸರ್ಕಾರಿ ನೌಕರರು, ಕಾರ್ಮಿಕರು ಹಾಗೂ ಮಹಿಳೆಯರೂ ಭಾಗವಹಿಸಿದ್ದರು. ಇವರು ಪಟ್ಟಣದ ಬೀದಿ ಬೀದಿಗಳಲ್ಲಿ ಮಹಾತ್ಮ ಗಾಂಧೀಜಿ ಕೀ ಜೈ, ಬ್ರಿಟಿಷರೇ ಭಾರತ ಬಿಟ್ಟು ತೊಲಗಿ, ಗಂಟು ಮೂಟೆ ಕಟ್ಟಿ ಮುಂತಾದ ಘೋಷಣೆಗಳೊಂದಿಗೆ ಮೆರವಣಿಗೆ ಹೊರಟರು. ಈ ಮೆರವಣಿಗೆಯಲ್ಲಿ ಜಿಲ್ಲೆಯ ಕಾಂಗ್ರೆಸ್ ಬೆಂಬಲಿಗರು, ಸ್ವಾತಂತ್ರ್ಯ ಹೋರಾಟಗಾರರು ಆದ ಎಂ.ವಿ.ರಾಮರಾವ್, ಕೆಂಪಹೊನ್ನಯ್ಯ, ಆರ್.ಎಸ್.ಆರಾಧ್ಯ, ಕೆ.ಭೀಮಯ್ಯ, ಸಿ.ರಾಜಗೋಪಾಲಚಾರಿ ಮುಂತಾದವರು ಭಾಗವಹಿಸಿದ್ದರು. ಅದೇ ದಿನ ಎಂ.ವಿ.ರಾಮರಾವ್‌ರನ್ನು ಬಂಧಿಸಲಾಯಿತು. ಮಹದೇವ ದೇಸಾಯಿರವರು ಆಗಸ್ಟ್ ೧೫ ರಂದು ಪೋಲೀಸರ ದುಷ್ಕೃತ್ಯದಿಂದ ನಿಧನರಾದ ವಿಷಯ ತಿಳಿದು ಕರ್ನಾಟಕದಲ್ಲಿ ಕ್ವಿಟ್ ಇಂಡಿಯಾ ಚಳವಳಿ ಮತ್ತಷ್ಟು ತೀವ್ರಗೊಂಡಿತ್ತು. ಮಹದೇವ ದೇಸಾಯಿಯವರ ನಿಧನಕ್ಕೆ ಪ್ರತಿಕ್ರಿಯೆಯಾಗಿ ಆಗಸ್ಟ್ ೧೭ ರಂದು ತುಮಕೂರಿನಲ್ಲಿ ಒಂದೇ ದಿನ ಮೂರು ಮೆರವಣಿಗೆಗಳಾದವು.

ಸಾರ್ವಜನಿಕ ಸಭೆ ಸಮಾರಂಭಗಳೂ ಪೋಲೀಸರೊಂದಿಗೆ ಘರ್ಷಣೆಗಳು ತುಮಕೂರಿನ ದಿನನಿತ್ಯದ ಕಾರ್ಯಕ್ರಮಗಳಾದವು. ಆಗಸ್ಟ್ ೧೯ ರಂದು ತುಮಕೂರಿನಲ್ಲಿ ಭಾರಿ ಸಾರ್ವಜನಿಕ ಸಭೆಯಾಗಿ ೫೦೦೦ ಜನ ಪಾಲ್ಗೊಂಡು ಗೋಲಿಬಾರ್‌ನಲ್ಲಿ ಸಾವಿಗೀಡಾದ ಹುತಾತ್ಮರಿಗೆ ಸಂತಾಪ ಸೂಚಿಸಲಾಯಿತು. ಸಭೆಯಲ್ಲಿ ಬಿಜವಾಡ ಭಾನುಮೂರ್ತಿ, ಬಿ.ಸಿ.ನಂಜುಂಡಯ್ಯ ಹಾಗೂ ಟಿ.ಪಿ.ಬ್ರಹ್ಮಯ್ಯ ಭಾಷಣ ಮಾಡಿದರು. ಆಗಸ್ಟ್ ೨೦ರಂದು ವಿದ್ಯಾರ್ಥಿಗಳು ಸಭೆಯನ್ನು ಸಂಘಟಿಸಿದರು. ಬಿ.ಸಿ.ನಂಜುಂಡಯ್ಯ ಚಳುವಳಿಯ ಉದ್ದೇಶವನ್ನು ಕುರಿತು ಮಾತನಾಡಿದ ನಂತರ ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್ ಕಳುಹಿಸಿದ್ದ ಸಂದೇಶವನ್ನು ಓದಿ, ಗಾಂಧೀಜಿಯ "ಮಾಡು ಇಲ್ಲವೇ ಮಡಿ" ಎಂಬುದು ಪ್ರತಿಯೊಬ್ಬರ ಗುರಿಯಾಗಬೇಕೆಂದು ಹೇಳಿದ್ದರು. ಸಭೆಯಲ್ಲಿ ಭಾಗವಹಿಸಿದ ಕೆ.ಭೀಮಯ್ಯ, ಗಟ್ಟಿರೇವಣ್ಣ, ಮಲ್ಲಪ್ಪ, ವೆಂಕಟಾಚಲಯ್ಯ, ಕೆ.ಎಸ್.ನರಸಿಂಹಯ್ಯ, ನೀಲಕಂಠರಾವ್ ಮತ್ತು ಇತರರು ಬಂಧನಕ್ಕೆ ಒಳಗಾಗಿ ಬೆಂಗಳೂರಿನ ಸೆಂಟ್ರಲ್ ಜೈಲಿನಲ್ಲಿ ಶಿಕ್ಷೆಯನ್ನು ಅನುಭವಿಸಿದರು.

ಜಿಲ್ಲಾಧಿಕಾರಿಗಳ ವರದಿಯ ಪ್ರಕಾರ ಕಳ್ಳಂಬೆಳ್ಳ ಮತ್ತು ಬಿದರಗುಂಡಿಗಳಲ್ಲಿ ಹೆಂಡದ ಅಂಗಡಿಗಳನ್ನು ಸುಡಲಾಯಿತು. ೧೯೪೨ರ ಚಳವಳಿಯಲ್ಲಿ ಕೊರಟಗೆರೆ ತಾಲೂಕಿನ ಹಳ್ಳಿ ಹಳ್ಳಿಗಳಲ್ಲಿ ಎಸ್.ಆರ್.ವೀರಶೆಟ್ಟರು, ಆರ್.ಚನ್ನಿಗರಾಮಯ್ಯ ಮುಂತಾದವರು ಸೇರಿ ಪ್ರಚಾರ ಸಭೆ ಮೆರವಣಿಗೆ ಮಾಡಿ ಸೈಕ್ಲೋಸ್ಟೈಲ್ಡ್ ಬುಲೆಟಿನ್‌ಗಳನ್ನು ಹಂಚಿದರು. ಆಗಸ್ಟ್ ೧೮ರಂದು ತಾಲೂಕು ಕಛೇರಿಯ ಮೇಲೆ ತ್ರಿವರ್ಣ ಧ್ವಜವನ್ನು ಹಾರಿಸುವಲ್ಲಿ ಯಶಸ್ವಿಯಾದರು. ಚಳವಳಿಗಾರರು ಕೆಸ್ತೂರು, ದೇವಲಾಪುರ ಮತ್ತು ಅಗಳಕೋಟೆಗಳಲ್ಲಿ ಸೇಂದಿ ಅಂಗಡಿಗಳನ್ನು ಧ್ವಂಸಮಾಡಿದರು. ಬಿಟ್ರಗೊರಕೆಯಲ್ಲಿ ಸೇಂದಿ ಮರಗಳನ್ನು ಕಡಿದು, ಸೇಂದಿ ಮರಗಳಿಗೆ ಕಟ್ಟಿದ ಗಡಿಗೆಗಳನ್ನು ಹೊಡೆದು ಹಾಕಿದರು. ಕೊರಟಗೆರೆ ಮತ್ತು ಹೊಳವನಹಳ್ಳಿ ಶಾಲೆಯ ಮುಂದೆ ಪಿಕೆಟಿಂಗ್ ನಡೆಸಿದರು. ಚಿಕ್ಕನಾಯಕನಹಳ್ಳಿ ಮತ್ತು ಕೊಡಿಗೇನಹಳ್ಳಿಗಳಲ್ಲಿಯೂ ಸರ್ಕಾರಿ ಕಟ್ಟಡಗಳ ಮೇಲೆ ಧ್ವಜಾರೋಹಣ ಮಾಡುವ ಕಾರ್ಯಗಳು ಭರದಿಂದ ಸಾಗಿತ್ತು. ಗುಬ್ಬಿಯಲ್ಲಿ ತಾಲೂಕು ಕಛೇರಿ ಮುಂದೆ ಪಿಕೆಟಿಂಗ್ ನಡೆಯಿತು.

ಆಗಸ್ಟ್ ಒಂಬತ್ತರಂದು ಪ್ರಾರಂಭವಾದ ಈ ಚಳವಳಿಯು ಮುಂದುವರೆಯುತ್ತಲೇ ಇತ್ತು. ಹೆಂಡದ ಗಾಡಿಗಳ ಮೇಲೆ ಹಲ್ಲೆ, ಮದ್ಯದ ಪಿಪಾಯಿಗಳನ್ನು ಹೊಡೆದು ಹಾಕುವ ಮತ್ತು ಮದ್ಯ ಹೊರ ಚೆಲ್ಲುವ ಚಟುವಟಿಕೆಗಳು ಜಿಲ್ಲೆಯಾದ್ಯಂತ ಸಾಮಾನ್ಯವಾಗಿದ್ದವು. ಆಗಸ್ಟ್ ೨೧ರಂದು ಮಧುಗಿರಿ ತಾಲೂಕು ನಿಟ್ಟರಹಳ್ಳಿಯಲ್ಲಿ ಹೆಂಡದ ಗಾಡಿಗಳನ್ನು ಉರುಳಿಸಲಾಯಿತು. ಆಗಸ್ಟ್ ೨೫ರಂದು ಬುಕ್ಕಾಪಟ್ಟಣ ಮತ್ತು ಪಟ್ಟನಾಯಕನಹಳ್ಳಿಗಳಲ್ಲಿ ಹೆಂಡದ ಅಂಗಡಿಗಳನ್ನು ಸುಟ್ಟು ಭಸ್ಮಮಾಡಿದರು. ತೀರ್ಥ ಮಾವತ್ತೂರು, ತುಂಬಾಡಿ ಗ್ರಾಮದಲ್ಲಿ ಮದ್ಯದ ಅಂಗಡಿಗಳನ್ನು ಚಳವಳಿಗಾರರು ಮುಚ್ಚಿಸಿದರು. ಮದ್ಯದ ಗಡಿಗೆಗಳನ್ನು ಅಂಗಡಿ ಮುಂದೆ ಹೊಡೆದು ಹಾಕಿದರು. ಅದೇ ದಿನ ಶಿರಾ ಮತ್ತು ವೆಂಕಟಾಪುರಗಳಲ್ಲಿ ಇದೇ ಕಾರ್ಯಗಳು ಮುಂದುವರೆದವು ಇದರ ಪರಿಣಾಮವಾಗಿ ಶಿರಾದಲ್ಲಿ ಹದಿನಾಲ್ಕು ಮಂದಿ, ತುಮಕೂರಿನಲ್ಲಿ ಹದಿನೆಂಟು ಮಂದಿ, ಕ್ಯಾತ್ಸಂದ್ರದಲ್ಲಿ ಆರು ಮಂದಿ ಹಾಗೂ ಮಧುಗಿರಿಯಲ್ಲಿ ಇಬ್ಬರು ದಸ್ತಗಿರಿಯಾದರು.

ಸರ್ಕಾರ ಎಷ್ಟೇ ನಿಷೇಧಾಜ್ಞೆಗಳನ್ನು ಜಾರಿಗೆ ತಂದರೂ ಪ್ರಯೋಜನವಾಗಲಿಲ್ಲ. ಜಿಲ್ಲೆಯಾದ್ಯಂತ ಸಭೆ, ಮೆರವಣಿಗೆ ಮತ್ತು ಮದ್ಯದ ಅಂಗಡಿಗಳ ಮುಂದೆ ಪಿಕೆಟಿಂಗ್‌ಗಳು ಜರುಗಿದವು. ಅಕ್ಟೋಬರ್ ಎರಡರಂದು ಅಮೃತೂರಿನಲ್ಲಿ ಗಾಂಧಿ ಜಯಂತಿಯನ್ನು ಆಚರಿಸಲಾಯಿತು. ಮಾಯಸಂದ್ರದಲ್ಲಿ ಅಕ್ಟೋಬರ್ ಮೂರು ಮತ್ತು ನಾಲ್ಕರಂದು ಆಚರಿಸಲಾಯಿತು. ತಿಪಟೂರಿನ ಸಾಂಬೇಗೌಡರು ಸಭೆಯಲ್ಲಿ ಮಾತನಾಡಿದರು. ಅಕ್ಟೋಬರ್ ಒಂಬತ್ತರಂದು ತುಮಕೂರು ಮತ್ತು ತಿಪಟೂರಿನಲ್ಲಿ ಪ್ರತಿಭಟನಾ ದಿನದ ಹರತಾಳವನ್ನು ಆಚರಿಸಲಾಯಿತು. ಈ ಎಲ್ಲಾ ವಿವರಗಳು ಅಕ್ಟೋಬರ್ ೧೭ರಂದು ಜಿಲ್ಲಾಧಿಕಾರಿಗಳು ನೀಡಿದ ವರದಿಯಲ್ಲಿದ್ದು, ಎಲ್ಲಾ ಘಟನೆಗಳು ಶಾಂತರೀತಿಯಲ್ಲಿಯೇ ಜರುಗಿದವೆಂದು ವರದಿ ತಿಳಿಸಿದೆ.

ಚಿಕ್ಕನಾಯಕನಹಳ್ಳಿಯ ಸಂತೆಯಲ್ಲಿ ಸುಂಕದ ವಿರುದ್ಧ ಅಕ್ಟೋಬರ್ ೨೨ರಂದು ಪಿಕೆಂಟಿಂಗ್ ನಡೆಯಿತು. ಅಕ್ಟೋಬರ್ ೨೪ರಂದು ತುಮಕೂರು–ಶಿರಾ ರಸ್ತೆಯಲ್ಲಿ ಮೂರು ಮಂದಿ ಚಳವಳಿಕಾರರು ವಿದ್ಯುತ್ ತಂತಿಗಳನ್ನು ಕತ್ತರಿಸಿ ಬಂಧಿತಕೊಳಗಾದರು. ಈ ಚಳವಳಿ ಆಗಸ್ಟ್‌ನಲ್ಲಿ ಆರಂಭವಾಗಿ ಬಿರುಸಾಗಿ ನಡೆಯುತ್ತಿತ್ತು. ಡಿಸೆಂಬರ್ ವೇಳೆಗೆ ಚಳವಳಿಯ ಕಾವು ಕಡಿಮೆಯಾಗತೊಡಗಿತು. ಇದೇ ಸಂದರ್ಭದಲ್ಲಿ ಕಾರ್ಮಿಕರು, ರೈತರು, ಮುಷ್ಕರದಿಂದ ಹಿಂದೆ ಸರಿದಿದ್ದರಿಂದ ಚಳವಳಿಯು ತನ್ನ ಸಾಮೂಹಿಕ ಸ್ವರೂಪವನ್ನು ಕಳೆದುಕೊಂಡಿತು. ನಂತರ ಅಲ್ಲಲ್ಲಿ ಮಾತ್ರ ಸರ್ಕಾರಿ ವಿರೋಧಿ ಕೃತ್ಯಗಳು ನಡೆಯುತ್ತಿದ್ದವು. ಡಿಸೆಂಬರ್ ೧೫ರ ನಂತರ ತುಮಕೂರು ಜಿಲ್ಲೆಯಲ್ಲಿ ಚಳವಳಿ ಸ್ಥಗಿತಗೊಂಡಿತು. ಹೀಗೆ ಆಗಸ್ಟ್ ತಿಂಗಳಿನಲ್ಲಿ ಆರಂಭವಾದ "ಆಗಸ್ಟ್ ಕ್ರಾಂತಿ" ಡಿಸೆಂಬರ್ ೧೫ರ ತನಕ ಮುಂದುವರೆಯಿತು. ಈ ಚಳವಳಿಯ ನಂತರ ತುಮಕೂರಿನ ಜನತೆ ಮೈಸೂರು ಸರ್ಕಾರದ ವಿರುದ್ಧ ಪ್ರಜಾಸರ್ಕಾರದ ಸ್ಥಾಪನೆಗೆ ತೀವ್ರ ಹೋರಾಟ ಆರಂಭಿಸಿದರು. ಅದೇ ಮೈಸೂರು ಚಲೋ ಚಳವಳಿ.

## ಮೈಸೂರು ಚಲೋ ಚಳವಳಿ

ಜಿಲ್ಲೆಯಲ್ಲಿ "ಮೈಸೂರು ಚಲೋ ಚಳವಳಿ" ಅಥವಾ ಅರಮನೆ ಸತ್ಯಾಗ್ರಹ ತನ್ನದೇ ಆದ ವೈಶಿಷ್ಟ್ಯವನ್ನು ಪಡೆದುಕೊಂಡಿರುವುದು ಸ್ಪಷ್ಟವಾಗುತ್ತದೆ. ಏಕೆಂದರೆ ೧೯೧೭ರಲ್ಲಿ ಪ್ರಜಾಮಿತ್ರ ಮಂಡಳಿ ರೂಪುಗೊಂಡಾಗ ಈ ಜಿಲ್ಲೆಯ ಹಿರಿಯ ಕಾಂಗ್ರೆಸ್ಸಿಗರಾಗಿದ್ದ ಡಿ.ಎಸ್.ಮಲ್ಲಪ್ಪನವರು ಪಾಲ್ಗೊಂಡಿದ್ದು ಸರಿಯಷ್ಟೇ. ಇದನ್ನು ಗಮನಿಸಿದರೆ ಈ ಜಿಲ್ಲೆಯಲ್ಲಿ ಮೈಸೂರು ಚಳುವಳಿಯ ಮೂಲ ಪ್ರೇರಣೆಗಳು ಅಲ್ಲಿಂದಲೇ ಆರಂಭವಾಗಿದ್ದುದನ್ನು ಗುರುತಿಸಬಹುದು. ಪ್ರಜಾಮಿತ್ರ ಮಂಡಳಿ ಕೇವಲ ಕೆಲವೇ ಜನರನ್ನು ಪ್ರತಿನಿಧಿಸುತ್ತಿದೆ ಎಂಬ ಅಭಿಪ್ರಾಯದಿಂದ ಡಿ.ಎಸ್.ಮಲ್ಲಪ್ಪ ಆ ಪಕ್ಷದಿಂದ ಹೊರಬಂದು ಪ್ರಜಾಪಕ್ಷವನ್ನು ಸ್ಥಾಪಿಸಿದರು. ೧೯೩೧ರಲ್ಲಿ ಅದರ ಅಧಿವೇಶನ ತುಮಕೂರಿನಲ್ಲಿ ನಡೆದಾಗ ಕಾಂಗ್ರೆಸ್ಸಿನ ಹೋರಾಟಗಾರ ಕೆ.ರಂಗಯ್ಯಂಗಾರ್, ತಾಳಕೆರೆ ಸುಬ್ರಹ್ಮಣ್ಯ, ಆರ್.ಎಸ್.ಆರಾಧ್ಯ, ಬಿ.ಸಿ.ನಂಜುಂಡಯ್ಯ, ಕೆ.ನೀಲಕಂಠರಾವ್ ಮುಂತಾದವರು ಪಾಲ್ಗೊಂಡಿದ್ದರು. ಡಿ.ಎಸ್.ಮಲ್ಲಪ್ಪ ಸ್ವಾಗತ ಸಮಿತಿಯ ಅಧ್ಯಕ್ಷರಾಗಿದ್ದು, ಪ್ರಜಾಪಕ್ಷವು ಸಮಾಜದ ಎಲ್ಲಾ ವರ್ಗಗಳನ್ನು ಪ್ರತಿನಿಧಿಸಿ ಶಕ್ತಿಯುತವಾಗಿ ಬೆಳೆದು, ಜನತೆ ಜವಾಬ್ದಾರಿಯುತ ಸರ್ಕಾರ ಸ್ಥಾಪನೆಗೆ ಹೋರಾಟ ಮಾಡಬೇಕೆಂಬ ಕರೆಯನ್ನು ಅಂದು ನೀಡಿದ್ದರು. ೧೯೩೭ರಲ್ಲಿ ಪ್ರಜಾಮಿತ್ರಮಂಡಳಿ ಮತ್ತು ಪ್ರಜಾಪಕ್ಷಗಳು ಮೈಸೂರು ಕಾಂಗ್ರೆಸ್‌ನಲ್ಲಿ ವಿಲೀನಗೊಂಡು ಜವಾಬ್ದಾರಿ ಸರ್ಕಾರದ ಸ್ಥಾಪನೆಗೆ ಹೋರಾಟ ನಡೆಸಲು ಆರಂಭಿಸಿದವು. ಇಂತಹ ಹೋರಾಟ ಮಧುಗಿರಿ, ಕುಣಿಗಲ್, ಚಿಕ್ಕನಾಯಕನಹಳ್ಳಿ, ಶಿರಾ, ತುಮಕೂರು ಹಾಗೂ ಪಾವಗಡ ತಾಲೂಕುಗಳಲ್ಲಿ ನಡೆಯಿತು. ಮೈಸೂರು ಕಾಂಗ್ರೆಸ್ ಸಂಸ್ಥೆಗೆ ನಾಲ್ಕು ಆಣೆ ನೀಡಿ ಸದಸ್ಯತ್ವ ಪಡೆಯಿರಿ, ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಮತ ನೀಡಿ, ಹಳ್ಳಿಗಳಲ್ಲಿ ಕಾಂಗ್ರೆಸ್ ಧ್ಯೇಯೋದ್ದೇಶಗಳ ಬಗ್ಗೆ ಪ್ರಚಾರ ಮಾಡಿ ಎಂದು ಜಿಲ್ಲೆಯ ಕಾಂಗ್ರೆಸ್ಸಿಗರು ಜನರನ್ನು

ಹುರಿದುಂಬಿಸಿದರು. ಮೈಸೂರು ಕಾಂಗ್ರೆಸ್‌ನ ಅಧ್ಯಕ್ಷರಾದ ಕೆ.ಸಿ.ರೆಡ್ಡಿ ೧೯೪೬ ನವೆಂಬರ್ ಎರಡರಂದು ರಂದು ಬೆಂಗಳೂರಿನ ಸುಭಾಷ್‌ನಗರದಲ್ಲಿ ಏರ್ಪಡಿಸಿದ್ದ ಕಾಂಗ್ರೆಸ್ ಸಭೆಯಲ್ಲಿ ಜವಾಬ್ದಾರಿ ಸರ್ಕಾರದ ಸ್ಥಾಪನೆಗೆ ಪ್ರತಿಯೊಬ್ಬರು ಹೋರಾಟ ಮಾಡಬೇಕೆಂದು ಕರೆನೀಡಿದರು. ಇದಕ್ಕೆ ಜನತೆಯ ಬೆಂಬಲ ಪಡೆಯಲು ಮೂರು ತಂಡಗಳು ರಚನೆಯಾದವು. ಆ ತಂಡದಲ್ಲಿ ಈ ಜಿಲ್ಲೆಯ ತಾಳಿಕೆರೆ ಸುಬ್ರಹ್ಮಣ್ಯ ಪ್ರಮುಖರಾಗಿ ಕಾರ್ಯ ನಿರ್ವಹಿಸಿದರು.

ಹೀಗೆ ಸ್ವಾತಂತ್ರ್ಯ ಪ್ರೇಮಿಗಳ ನಿರಂತರ ಹೋರಾಟದ ಫಲವಾಗಿ ಕಾಂಗ್ರೆಸ್ ಪಕ್ಷ ದೇಶದಲ್ಲಿ ವ್ಯಾಪಕ ಬೆಂಬಲ ಗಳಿಸಿ ಭಾರತಕ್ಕೆ ೧೯೪೭ರ ಆಗಸ್ಟ್ ೧೫ ರಂದು ಸ್ವಾತಂತ್ರ್ಯ ದಕ್ಕಿತು. ಆದರೂ ಮೈಸೂರು ಸಂಸ್ಥಾನದ ಮಹಾರಾಜ ಜಯಚಾಮರಾಜೇಂದ್ರ ಒಡೆಯರ್ ಸಂಸ್ಥಾನವನ್ನು ಭಾರತದ ಒಕ್ಕೂಟಕ್ಕೆ ಸೇರಿಸಲು ಆರಂಭದಲ್ಲಿ ಹಿಂಜರಿದರೂ ಅಂತಿಮವಾಗಿ ಒಪ್ಪಿದರು. ಆದರೆ ಜವಾಬ್ದಾರಿ ಸರ್ಕಾರ ನೀಡಲು ಮನಸ್ಸು ಮಾಡಲಿಲ್ಲ. ಇದರ ಪರಿಣಾಮವಾಗಿ ಅಸಹನೆಗೊಂಡ ಸಂಸ್ಥಾನದ ಕಾಂಗ್ರೆಸ್ಸಿಗರು ಜನತೆಗೆ ಜವಾಬ್ದಾರಿ ಸರ್ಕಾರ ನೀಡದಿದ್ದರೆ 'ಮೈಸೂರು ಚಲೋ' ಚಳವಳಿ ಮಾಡುವುದಾಗಿ ಎಚ್ಚರಿಕೆ ನೀಡಿದರು.

ಮೈಸೂರು ಕಾಂಗ್ರೆಸ್ಸಿನ ಪ್ರಚಾರ ಕಾರ್ಯದ ಮುಖ್ಯಸ್ಥರಾದ ಹೆಚ್.ಕೆ.ವೀರಣ್ಣಗೌಡರು ಮೈಸೂರು ಚಲೋ ಚಳವಳಿಗೆ ಕೆ.ಸಿ.ರೆಡ್ಡಿ ನಾಯಕರೆಂದು ಘೋಷಿಸಲಾಯಿತು. ಅವರು ಸೆಪ್ಟೆಂಬರ್ ೧, ೧೯೪೭ ರಂದು ಬೆಂಗಳೂರಿನಲ್ಲಿ ಸತ್ಯಾಗ್ರಹ ಪ್ರಚಾರ ಶಿಬಿರವನ್ನು ಉದ್ಘಾಟಿಸಿದರು. ಚಳವಳಿಯ ಬಗ್ಗೆ ಅಧಿಕೃತ ಘೋಷಣೆ ಹೊರಡಿಸಿದರು. ಸೆಪ್ಟೆಂಬರ್ ನಾಲ್ಕನೇ ತಾರೀಖಿನೊಳಗೆ ಚಳವಳಿಗಾರರು ಸಂಸ್ಥಾನದಾದ್ಯಂತ ಪ್ರವಾಸ ಮಾಡಿ ಮೈಸೂರು ಅರಮನೆಯ ಮುಂದೆ ಸತ್ಯಾಗ್ರಹ ಮಾಡಲು ಸೇರಬೇಕೆಂದು ತಿಳಿಸಿದರು. ಅದರಂತೆ, ತುಮಕೂರು ಜಿಲ್ಲೆಯಲ್ಲಿಯೂ ಮೈಸೂರು ಚಲೋ ಚಳವಳಿಯ ಉದ್ದೇಶಗಳನ್ನು ಸಾರಲು ಇಲ್ಲಿನ ನಾಯಕರು ಪ್ರವಾಸ ಕೈಗೊಂಡು ಜನರನ್ನು ಸಂಘಟಿಸಿದರು. ಅದನ್ನು ಈ ಕೆಳಕಂಡಂತೆ ಸಂಗ್ರಹಿಸಬಹುದು.

ಸೆಪ್ಟೆಂಬರ್ ಒಂದರಂದು ಮಧುಗಿರಿಯಲ್ಲಿ ಮಾಲಿಮರಿಯಪ್ಪ ಮತ್ತು ಕೆ.ಹೆಂಜಾರಪ್ಪ ಸಭೆಯನ್ನು ಏರ್ಪಡಿಸಿದರು. ಈ ಸಭೆಯಲ್ಲಿ ಮಾಲಿಮರಿಯಪ್ಪನವರು "ಸ್ವಾತಂತ್ರ್ಯ ನಮ್ಮ ಕೈ ಹಿಡಿಯಲು ಮನೆಯ ಬಾಗಿಲಿಗೆ ಬಂದಿದೆ, ನಾವೆಲ್ಲರೂ ಅದನ್ನು ಎದುರುಗೊಳ್ಳಬೇಕು, ಆದರೆ ದಿವಾನರು ಇಲ್ಲಿ ಅಡ್ಡಗೋಡೆಯಾಗಿದ್ದಾರೆ. ಇದು ನಮ್ಮ ಕೊನೆಯ ಹೋರಾಟ, ಎದ್ದೇಳಿ, ಪ್ರತಿಭಟಿಸಿ, ಭಾರತ ಮಾತೆಯ ಶೌರ್ಯ ಪ್ರದರ್ಶಿಸಿ, ಕಾರ್ಮಿಕ ಬಂಧುಗಳೇ, ಕೆಲಸ ನಿಲ್ಲಿಸಿ ಈ ಕೊನೆಯ ಹೋರಾಟದಲ್ಲಿ ಪಾಲ್ಗೊಳ್ಳಿ, ವಿದ್ಯಾರ್ಥಿಗಳೇ ಶಾಲಾ ಕಾಲೇಜುಗಳನ್ನು ತ್ಯಜಿಸಿ ಹೊರಬನ್ನಿ, ನಮ್ಮನ್ನು ನಾವೇ ಪ್ರತಿನಿಧಿಸುವ ಸರ್ಕಾರ ಅಸ್ತಿತ್ವಕ್ಕೆ ಬರದಿದ್ದರೆ ನಾವೆಲ್ಲರೂ ಜೀವಂತ ಶವಗಳು. ಬ್ರಿಟಿಷ್ ಭಾರತದಲ್ಲಿ ನಮ್ಮ ಸಹೋದರರು ಸ್ವಾತಂತ್ರ್ಯದ ಪವಿತ್ರ ವಾತಾವರಣದಲ್ಲಿ ಉಸಿರಾಡುತ್ತಿರುವಾಗ ಮಾದರಿ ಮೈಸೂರಿನ ಪ್ರಜೆಗಳಾದ ನಾವು ದಿವಾನರ ಅಧೀನದಲ್ಲಿ ಉಳಿಯುವುದು ಅವಮಾನ. ನಮ್ಮ ಆಜನ್ಮಸಿದ್ಧ ಹಕ್ಕಾದ ಸ್ವಾತಂತ್ರ್ಯ ದೊರಕುವವರೆಗೂ ಹೋರಾಟ ನಿಲ್ಲುವುದಿಲ್ಲ. ಎದ್ದೇಳಿ ಮಧುಗಿರಿಯ ವೀರಪುತ್ರರೇ" ಎಂದು ಘರ್ಜಿಸಿ ಸಭೆಯನ್ನು ಮುಕ್ತಾಯಗೊಳಿಸಿದರು. ಮಾರನೆಯ ದಿನ ಯಾರ್‍ಯಾರು ಸತ್ಯಾಗ್ರಹ ಮಾಡಬೇಕು, ಧ್ವಜಾರೋಹಣ ಮಾಡಬೇಕು ಮುಂತಾದ ವಿಷಯಗಳನ್ನು ಚರ್ಚಿಸಿ ಮನೆಗೆ ಹಿಂತಿರುಗಿದ ಸ್ವಲ್ಪ ಸಮಯದಲ್ಲೇ ಮಾಲಿಮರಿಯಪ್ಪ ಮತ್ತು ಕೆ.ಹೆಂಜಾರಪ್ಪರನ್ನು ಬಂಧಿಸಿ ಬೆಂಗಳೂರಿನ ಸೆಂಟ್ರಲ್ ಜೈಲಿಗೆ ಕಳುಹಿಸಲಾಯಿತು.

ಕೊಡಿಗೇನಹಳ್ಳಿ, ಚಿನಕವಜ್ರ, ಗಂಜಲಗುಂಟೆಯ ತಂಡಗಳು ಮಧುಗಿರಿಯತ್ತ ಹೊರಟವು. ಚಿನಕವಜ್ರ ತಂಡದ ನಾಯಕತ್ವವನ್ನು ವಹಿಸಿದ್ದು ಲಕ್ಷ್ಮಮ್ಮ ಎಂಬ ೧೭ ವರ್ಷದ ಹೆಣ್ಣು ಮಗಳು. ಈ ತಂಡಗಳು ಚಲೋ ಮೈಸೂರ್, ಆರ್ಕಾಟ್‌ಬಾಯ್ಕಟ್, ತಂಬೂಚೆಟ್ಟಿ-ಚೆಟ್ಟಕಟ್ಟಿ, ಗಾಂಧೀಜಿ ಕಿ ಜೈ ಮಾಲಿಮರಿಯಪ್ಪ ಕೀ ಜೈ ಎಂಬ ಘೋಷಣೆಳೊಂದಿಗೆ ಮಧುಗಿರಿಗೆ ಬಂದು ತಲುಪಿದವು. ನಂತರ ವಿ.ಎನ್. ಚೌಡಯ್ಯ ಮತ್ತು ಎಂ.ಪುಟ್ಟತಿಮ್ಮಯ್ಯ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಪ್ರತಿಭಟನಾ ಮೆರವಣಿಗೆ ಮುಂದುವರಿಯಿತು. ಪೊಲೀಸರು ಗುಂಪಿನ ಮೇಲೆ ಗುಂಡುಹಾರಿಸಿದರು. ಪರಿಣಾಮವಾಗಿ ಒಬ್ಬ ರೈತ ಸ್ಥಳದಲ್ಲೇ ಮೃತಪಟ್ಟನು. ಇಬ್ಬರನ್ನು ಚಿಕಿತ್ಸೆಗಾಗಿ ತುಮಕೂರು ಮತ್ತು ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಯಿತು. ಇಷ್ಟಾದರೂ ಪೊಲೀಸರು ಚಳವಳಿಗಾರರನ್ನು ದಸ್ತಗಿರಿ ಮಾಡುವುದನ್ನು ಬಿಡಲಿಲ್ಲ.

ಚಿಕ್ಕನಾಯಕನಹಳ್ಳಿಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಹರತಾಳ ಆಚರಿಸಿ ತಾಲೂಕು ಕಛೇರಿಗೆ ಮುತ್ತಿಗೆ ಹಾಕಿ 'ಆರ್ಕಾಟ್ ಬಾಯ್ಕಾಟ್' 'ತಂಬೂಚಟ್ಟಿ ಚಟ್ಟಕಟ್ಟಿ' ಮುಂತಾದ ಘೋಷಣೆಗಳನ್ನು ಕೂಗುತ್ತಾ ಕಛೇರಿಯ ಮುಂದೆ ಪಿಕೇಟಿಂಗ್ ನಡೆಸಿದರು. ಮರುದಿನವೇ ಅನ್ನಪೂರ್ಣಮ್ಮ, ಗೌರಮ್ಮ, ಭಾಗ್ಯಮ್ಮ ಮತ್ತು ನಾಗಮ್ಮ ಎಂಬ ಮಹಿಳೆಯರು ತಾಲ್ಲೂಕು ಕಛೇರಿಯ ಮೇಲೆ ರಾಷ್ಟ್ರಧ್ವಜವನ್ನು ಹಾರಿಸುವ ಪ್ರಯತ್ನ ಮಾಡಿದರು. ಶಿರಾ ತಾಲೂಕಿನಲ್ಲಿ ಇದೇ ರೀತಿ ಚಳುವಳಿ ತೀವ್ರ ಸ್ವರೂಪದಲ್ಲಿ ನಡೆಯಿತು. ಶಿರಾದಲ್ಲಿ ಬಿ.ಎನ್.ರಾಮೇಗೌಡ, ಸಿದ್ಧಪ್ಪ ಮತ್ತು ದೊಡ್ಡಮರುಳಪ್ಪ ಹಳ್ಳಿ ಹಳ್ಳಿಗಳನ್ನು ಸುತ್ತಿ ಕಂದಾಯ ಕೊಡಬೇಡಿ ಈ ಸರ್ಕಾರದ ವಿರುದ್ಧ ಕರ ನಿರಾಕರಣಾ ಚಳವಳಿ ನಡೆಸಿ ಎಂದು ರೈತರನ್ನು ಹುರಿದುಂಬಿಸುತ್ತಿದ್ದರು. ಭೂಮಿ ರೈತರದು, ಮಳೆ ಕೊಡುವವನು ವರುಣದೇವ ಸರ್ಕಾರಕ್ಕೆ ಯಾಕೆ ಕಂದಾಯ ಕೊಡಬೇಕು ಎಂದು ರೈತರಿಗೆ ಬುದ್ಧಿ ಹೇಳಿ ತಾಲೂಕಿನ ಪಟೇಲರು ಮತ್ತು ಶ್ಯಾನುಭೋಗರ ಹತ್ತಿರ ರಾಜೀನಾಮೆಗೆ ಒತ್ತಾಯಿಸಿ, ಅವರಿಂದ ರಾಜೀನಾಮೆಗೆ ಸಹಿಯನ್ನು ಪಡೆದು ಚಳವಳಿಯನ್ನು ತೀವ್ರಗೊಳಿಸಿದರು.

ಇದೇ ಸಂದರ್ಭದಲ್ಲಿ ಜಿಲ್ಲೆಯ ದಿಟ್ಟ ಹೋರಾಟಗಾರರಾದ ಆರ್.ಎಸ್.ಆರಾಧ್ಯ ಕೆಳಕಂಡ ಹೇಳಿಕೆಯನ್ನು ನೀಡಿದರು. "ಸತ್ಯಾಗ್ರಹಿಗಳೆಲ್ಲರೂ ಹಳ್ಳಿಗಳಿಗೆ ಹೋಗಿ ಸತ್ಯಾಗ್ರಹ ಸಮರ ಸಮಿತಿಯವರು ನೀಡುವ ಕಾರ್ಯಕ್ರಮಗಳನ್ನು ಪ್ರಚಾರ ಮಾಡಿ ಬಂಧಿತ ನಾಯಕರು ಬಿಡುಗಡೆ ಆಗುವವರೆಗೂ ಕಾರ್ಯಕ್ರಮಗಳನ್ನು ನಿಲ್ಲಿಸಕೂಡದು, ಜೈಲುಗಳೆಲ್ಲ ತುಂಬಿಹೋಗಿರುವುದರಿಂದ ಪ್ರತಿಬಂಧಕಾಜ್ಞೆಗಳನ್ನು ಉಲ್ಲಂಘಿಸಿದವರನ್ನು ದಸ್ತಗಿರಿ ಮಾಡಲು ಸರ್ಕಾರಕ್ಕೆ ಸಾಧ್ಯವಾಗುವುದಿಲ್ಲ. ಕೋರ್ಟು ಕಛೇರಿಗಳೆಲ್ಲ ಮುಚ್ಚಲ್ಪಟ್ಟಿವೆ, ಸಂಸ್ಥಾನದಲ್ಲಿ ಸರ್ಕಾರದ ಆಡಳಿತ ಯಂತ್ರ ಕಳಚಿಬಿದ್ದಿದೆ ಎಂಬುದು ಸತ್ಯಾಗ್ರಹದಲ್ಲಿ ಭಾಗವಹಿಸಿರುವ ಪ್ರತಿಯೊಬ್ಬರಿಗೂ ತಿಳಿದಿದೆ. ಸರ್ಕಾರ ಸತ್ಯಾಗ್ರಹಿಗಳ ಮೇಲೆ ಪುಂಡರನ್ನು ಛೂ ಬಿಟ್ಟಿದೆ, ಶಾಂತಿಯಿಂದ ಮುಷ್ಕರ ನಡೆಸುತ್ತಿದ್ದ ಮುಖಂಡರನ್ನು ದಸ್ತಗಿರಿ ಮಾಡಿರುವುದು ಖಂಡನೀಯವಾದುದು." ಈ ಹೇಳಿಕೆಯು ಜಿಲ್ಲೆಯಲ್ಲಿ ಚಳವಳಿಯು ಮತ್ತಷ್ಟು ತೀವ್ರಗೊಳ್ಳಲು ಕಾರಣವಾಯಿತು.

ಇದೇ ಸಮಯದಲ್ಲಿ ಕೆ.ಆರ್.ಶ್ರೀಧರ್, ಮುದ್ದಪ್ಪ ಮತ್ತು ಕೆಲವು ಕಾಂಗ್ರೆಸ್ಸಿಗರು ಸೇರಿಕೊಂಡು ಮಧುಗಿರಿ, ಪಾವಗಡ ತಾಲೂಕಿನ ಗ್ರಾಮೀಣ ಪ್ರದೇಶಗಳಲ್ಲಿ ಮತ್ತೊಂದು ಪ್ರತಿಭಟನಾ ಚಳವಳಿ ಹಮ್ಮಿಕೊಂಡರು. ಈ ಸತ್ಯಾಗ್ರಹಿಗಳ ಚಟುವಟಿಕೆಗಳು ಅಹಿಂಸಾತ್ಮಕವಾಗಿದ್ದು, ಯಾವುದೇ ರೀತಿಯ ಅಹಿತಕರ ಘಟನೆಗಳಿಗೆ ಅವಕಾಶವಿಲ್ಲದೆ ಎಲ್ಲಾ ಹಳ್ಳಿಗಳಲ್ಲಿ ದಿವಾನ್ ಆರ್ಕಾಟ್ ರಾಮಸ್ವಾಮಿಯ ನಿರಂಕುಶ ಧೋರಣೆಯನ್ನು ಪ್ರತಿಭಟಿಸಲಾಯಿತು.

ಪಾವಗಡ ತಾಲೂಕಿನ ವೈ.ಎನ್.ಹೊಸಕೋಟೆಯಲ್ಲಿ ಇ.ಎಸ್.ವೆಂಕಟೇಶ್‌ಗುಪ್ತ, ಗುಂಡಪ್ಪ ಮತ್ತಿತರರ ನೇತೃತ್ವದಲ್ಲಿ ರಾತ್ರಿ ವೇಳೆ ಸಭೆಗಳನ್ನು ನಡೆಸಲಾಯಿತು. ಈ ಸಭೆಗಳನ್ನು ನಡೆಸುವಾಗ ಊರ ಹೊರವಲಯದಲ್ಲಿ ಸ್ವಯಂಸೇವಕರು ಪಾಳಿ ನಿರ್ವಹಿಸಿ ಪೋಲೀಸರ ಚಲನವಲನಗಳನ್ನು ಗಮನಿಸುತ್ತಿದ್ದರು. ಈ ಸಭೆಗಳಲ್ಲಿ ನಾಯಕರು ಆರ್ಕಾಟ್ ರಾಮಸ್ವಾಮಿಯ ನಿರಂಕುಶ ಆಡಳಿತದ ಬಗ್ಗೆ ವಿವರಣೆ ನೀಡಿ, ಅವರ ಆಡಳಿತದ ವಿರುದ್ಧ ಗ್ರಾಮೀಣ ಜನತೆಯನ್ನು ಸಂಘಟಿಸಿ, ಆಜಾದ್ ಮೈಸೂರು ಸರ್ಕಾರಕ್ಕೆ ತಮ್ಮ ಬೆಂಬಲ ವ್ಯಕ್ತಪಡಿಸಿದರು.

ಕೊರಟಗೆರೆಯಲ್ಲಿ ಸತ್ಯಾಗ್ರಹಿಗಳು ಸೆಪ್ಟೆಂಬರ್ ಐದರಂದು ಶಾಂತ ರೀತಿಯಿಂದ ಕೊರಟಗೆರೆ ತಾಲೂಕು ಕಛೇರಿಯ ಮೇಲೆ ಧ್ವಜಾರೋಹಣವನ್ನು ಮಾಡುವ ಪ್ರಯತ್ನ ಮಾಡಿದಾಗ ಪೋಲೀಸರು ಸತ್ಯಾಗ್ರಹಿಗಳ ಕೈಯಲ್ಲಿದ್ದ ಬಾವುಟವನ್ನು ಕಸಿದುಕೊಂಡು ಸತ್ಯಾಗ್ರಹಿಗಳನ್ನು ಬಂಧಿಸಿ ಎರಡು ದಿನಗಳ ನಂತರ ಬಿಡುಗಡೆ ಮಾಡಿದರು. ಟಿ.ಆರ್. ಚನ್ನಪ್ಪ ಮತ್ತಿತರರು ಪೋಲೀಸರು ಈ ಹಿಂದೆ ಕಸಿದುಕೊಂಡಿದ್ದ ಬಾವುಟಗಳನ್ನು ಕೊಡಬೇಕೆಂದು ಕೇಳಿದರು. ಆದರೆ ಅವರು ಒಪ್ಪಲಿಲ್ಲ ಸುಮಾರು ಐದು ಗಂಟೆಯ ಸಮಯಕ್ಕೆ ಸತ್ಯಾಗ್ರಹಿಗಳು ಪೋಲೀಸರಿಂದ ಬಾವುಟವನ್ನು ಕಸಿದುಕೊಂಡು ಕಛೇರಿಯ ಮೇಲೆ ಧ್ವಜಾರೋಹಣ ಮಾಡಿ ಅಲ್ಲಿಂದ ಕಣ್ಮರೆಯಾದರು. ಅದೃಷ್ಟವಶಾತ್ ಅಂದು ರಾತ್ರಿಯೇ ಮೈಸೂರು ಸಂಸ್ಥಾನದಲ್ಲಿ ಬಂಧಿತರಾದಂತಹ ಚಳವಳಿಕಾರರನ್ನು ಬಿಡುಗಡೆ ಮಾಡಬೇಕೆಂದು ತೀರ್ಮಾನವಾದ್ದರಿಂದ ಟಿ.ಆರ್.ಚನ್ನಪ್ಪ ಅವರನ್ನು ಬಂಧಿಸಲಿಲ್ಲ.

೧೯೪೭ರ ಸೆಪ್ಟೆಂಬರ್ ೧೪ ರಂದು, ಒಂದು ಸಾವಿರ ಚಳವಳಿಗಾರರ ದೊಡ್ಡ ಗುಂಪೊಂದು, ತುಮಕೂರಿನ ತಾಲೂಕು ಕಛೇರಿ ಮೇಲೆ ಧ್ವಜಾರೋಹಣ ಕಾರ್ಯಕ್ರಮ ನಡೆಸಲು ಪ್ರಯತ್ನಿಸಿದಾಗ, ಪೋಲೀಸರು ಗುಂಪನ್ನು

ಚದುರಿಸಲು ಗೋಲಿಬಾರ್ ನಡೆಸಿದರು. ಅಂದು ಸಂತೆಪೇಟೆಯ ನಂಜುಂಡಪ್ಪ, ಹೈಸ್ಕೂಲ್‌ನಲ್ಲಿ ಓದುತ್ತಿದ್ದ ವಿದ್ಯಾರ್ಥಿ, ಗೊರೂರು ರಾಮಸ್ವಾಮಿ ಅಯ್ಯಂಗಾರರ ಜೇಷ್ಠಪುತ್ರ ರಾಮಚಂದ್ರ ಮತ್ತು ಗಂಗಪ್ಪ, ಪೊಲೀಸರ ಗುಂಡಿಗೆ ಬಲಿಯಾಗಿ ಹುತಾತ್ಮರಾದರು. ಹಾಗೆಯೇ ಮೈಸೂರಿನಲ್ಲಿ ರಾಮಸ್ವಾಮಿ ಎಂಬ ವಿದ್ಯಾರ್ಥಿಯು ಪೊಲೀಸರ ಗುಂಡಿಗೆ ಬಲಿಯಾದದ್ದು ಇಡೀ ಸಂಸ್ಥಾನದ ಜನತೆಯಲ್ಲಿ ದಿಗ್ಭ್ರಾಂತಿಯನ್ನು ಉಂಟುಮಾಡಿತು.

ಸೆಪ್ಟೆಂಬರ್ ೨೪ ರಂದು ಪಾವಗಡ ತಾಲೂಕಿನ, ವೆಂಕಟಾಪುರ, ಕಣಿವೇನಹಳ್ಳಿ, ಜಾಜೂರಾಯನಹಳ್ಳಿ ಮೊದಲಾದೆಡೆ ಕಾಂಗ್ರೆಸ್ ಕಾರ್ಯಕರ್ತರು, ಜಾಥಾ ಹೊರಟು, ತಾಲೂಕು ಕಛೇರಿಯ ಮೇಲೆ ಧ್ವಜಾರೋಹಣ ಮಾಡಿದರು. ಈ ಜಾಥಾದಲ್ಲಿ ವಿ.ಎನ್.ರೆಡ್ಡಿ, ಕೆ.ನಂಜುಂಡರಾವ್, ನಾಗರತ್ನಶೆಟ್ಟಿ, ರತಂಗಪಾಣಿ, ನರಸಿಂಹರಾವ್, ಮೊದಲಾದವರು ಹಾಜರಿದ್ದು ಸಭೆಯಲ್ಲಿ ಮಾತನಾಡಿದರು. ಈ ಚಳವಳಿಯಲ್ಲಿ ತುಮಕೂರು ಜಿಲ್ಲೆಯ ವಿದ್ಯಾರ್ಥಿಗಳ ಪಾತ್ರ ಪ್ರಮುಖವಾಗಿತ್ತು. ವಿದ್ಯಾರ್ಥಿಗಳು ಶಾಲಾ–ಕಾಲೇಜುಗಳನ್ನು ತ್ಯಜಿಸಿ ಕೋರ್ಟ್, ಕಛೇರಿಗಳ ಮುಂದೆ ಪಿಕೆಟಿಂಗ್ ನಡೆಸಿ ರೈಲ್ವೆಯ ಅಂಚೆ ತಂತಿಗಳನ್ನು ನಾಶಗೊಳಿಸುವ ಚಟುವಟಿಕೆಗಳಲ್ಲಿ ನಿರತಾದರು. "ಮೈಸೂರು ಚಲೋ ಆರ್ಕಾಟ್ ಬಾಯ್ಕಾಟ್, ತಂಬೂಚೆಟ್ಟಿ ಚಟ್ಟಕಟ್ಟಿ" ಎಂಬ ಘೋಷಣೆಗಳಿಂದ ಜಿಲ್ಲೆಯಾದ್ಯಂತ ಚಳುವಳಿಯನ್ನು ಬಿರುಸಿನಿಂದ ನಡೆಸಿದರು.

ಕೆ.ಸಿ.ರೆಡ್ಡಿ ಮೈಸೂರು ಚಲೋ ಚಳವಳಿಗೆ ಕರೆ ನೀಡುತ್ತಿದ್ದಂತೆ ಸತ್ಯನಾರಾಯಣಶೆಟ್ಟಿ, ಅಜ್ಜೇಗೌಡ, ಅರೆಲಿಂಗಯ್ಯ, ಹಂದ್ರಾಳು ನಂಜುಂಡಪ್ಪ ಇವರ ನೇತೃತ್ವದಲ್ಲಿ ತಮಟೆ ಕಹಳೆ ವಾದ್ಯಗಳಿಂದ ಮಧುಗಿರಿ ಪಟ್ಟಣವನ್ನು ಸೇರಿದರು. ಇದೇ ರೀತಿ ಸುತ್ತಮುತ್ತಲಿನ ಗ್ರಾಮಗಳ ಜಾಥಾಗಳು ಮಧುಗಿರಿಗೆ ಬಂದು ಸೇರಿದವು. ಈ ಸಂದರ್ಭದಲ್ಲಿ ಜನರ ನೂಕು ನುಗ್ಗಲು ಹೆಚ್ಚಿ ಅಧಿಕಾರಿಗಳು ಜನರನ್ನು ನಿಯಂತ್ರಿಸುವ ನೆಪದಲ್ಲಿ ಲಾಟಿಪ್ರಹಾರ ಮಾಡಿ ಗುಂಡು ಹಾರಿಸಿದರು. ಸತ್ಯಾಗ್ರಹಿಯಾದ ಹಂದ್ರಾಳ್ ನಂಜುಂಡಪ್ಪ ಪೊಲೀಸರ ಗುಂಡಿಗೆ ಬಲಿಯಾದರು. ಅಜ್ಜೇಗೌಡ, ಅರೆಲಿಂಗಯ್ಯ, ಸತ್ಯನಾರಾಯಣಶೆಟ್ಟಿ ಇವರನ್ನೆಲ್ಲಾ ಕಾರಾಗೃಹಕ್ಕೆ ತಳ್ಳಲಾಯಿತು.

ಮೈಸೂರು ಚಲೋ ಚಳವಳಿ ಸಂದರ್ಭದಲ್ಲಿ ಬೇಜವಾಬ್ದಾರಿ ಸರ್ಕಾರದಲ್ಲಿ ತಮ್ಮ ಕರ್ತವ್ಯ ನಿರ್ವಹಿಸದೆ, ಹುದ್ದೆಗಳಿಗೆ ರಾಜೀನಾಮೆ ನೀಡಿ ಚಳವಳಿಗೆ ಸಹಕರಿಸಬೇಕೆಂದು ಕಾಂಗ್ರೆಸ್ ಕಾರ್ಯಕರ್ತರು ಗ್ರಾಮಾಧಿಕಾರಿಗಳನ್ನು ಕೋರಿದರು. ಆ ಸಂದರ್ಭದಲ್ಲಿ ಶಿರಾ ತಾಲ್ಲೂಕಿನ ತಾವರೆಕೆರೆಯಲ್ಲಿ ಪಟೇಲರಾಗಿದ್ದ ದೊಡ್ಡರಂಗೇಗೌಡ ಮತ್ತು ಶಾನುಭೋಗರಾಗಿದ್ದ ಭೀಮಸೇನರಾಯರು ತಮ್ಮ ಹುದ್ದೆಗಳಿಗೆ ರಾಜೀನಾಮೆ ನೀಡಿದರು. ಚಿಕ್ಕನಾಯಕನಹಳ್ಳಿಯ ಕಾಂಗ್ರೆಸ್ ಕಾರ್ಯಕರ್ತರಾದ ಕುಪ್ಪೂರು ನರಸಿಂಹಮೂರ್ತಿ, ಕುಪ್ಪೂರು ಗೋಪಾಲ, ಖಾದಿರಂಗಪ್ಪ, ಲಿಂಗಪ್ಪ, ರಾಜಾರಾವ್ ಮತ್ತು ಸೈಯದ್ ಸಾಹೇಬ್, ವಿದ್ಯಾರ್ಥಿಗಳಿಂದ ಪ್ರತಿಜ್ಞೆಯನ್ನು ಮಾಡಿಸಿ ಮೈಸೂರು ಚಲೋ ಚಳವಳಿಗೆ ಬೆಂಬಲವನ್ನು ಕೋರಿದರು.

ತಾಳಕೆರೆ ಸುಬ್ರಹ್ಮಣ್ಯ ಮೈಸೂರು ಚಲೋ ಚಳವಳಿಯ ಸಂದರ್ಭದಲ್ಲಿ ಎಲ್ಲಾ ಕಾರ್ಯಕರ್ತರನ್ನು ಸಂಘಟಿಸಿ ಸ್ಥಳೀಯ ಕಾರ್ಯಕರ್ತರು ಸರ್ಕಾರಿ ಕಛೇರಿಗಳ ಮುಂದೆ ಪಿಕೆಟಿಂಗ್ ಮಾಡಬೇಕು. ಸರ್ಕಾರಿ ಕಛೇರಿಗಳ ಕಾರ್ಯಕಲಾಪಗಳು ಸ್ಥಗಿತಗೊಳ್ಳುವಂತೆ ಮಾಡಬೇಕು. ಈ ಕಾರ್ಯಕ್ರಮಗಳು ಜನತೆಯನ್ನು ಹುರಿದುಂಬಿಸುವಂತೆ ಇರಬೇಕು. ಪ್ರತಿಯೊಬ್ಬರು ಚಳವಳಿಯಲ್ಲಿ ಭಾಗವಹಿಸಬೇಕು ಮುಂತಾಗಿ ಕರೆ ನೀಡಿದರು. ಸೆಪ್ಟೆಂಬರ್ ನಾಲ್ಕರಂದು ಚಳವಳಿಯಲ್ಲಿ ತೊಡಗಿದ ಕೆ.ವಿ.ಕೃಷ್ಣಸ್ವಾಮಿ, ನಾಗೇಶರಾಯರು, ಮತ್ತು ಹುಚ್ಚಮಾಸ್ತಿಗೌಡರನ್ನು ಬಂಧಿಸಲಾಯಿತು. ಬಂಧನವನ್ನು ವಿರೋಧಿಸಿ ಕಾರ್ಯಕರ್ತರು ಹರತಾಳನವನ್ನು ಆಚರಿಸಿದರು.

ಈ ಚಳವಳಿಯ ಸಂದರ್ಭದಲ್ಲಿ ಚಳವಳಿಗಾರರು ಪೊಲೀಸ್ ಕಛೇರಿ ಮತ್ತು ಸರ್ಕಾರಿ ಕಛೇರಿಗಳ ಮೇಲೆ ರಾಷ್ಟ್ರ ಧ್ವಜಾರೋಹಣ ಮಾಡುವುದು ಸಾಮಾನ್ಯವಾಗಿತ್ತು ಈ ಸಂದರ್ಭದಲ್ಲಿ ಜಿಲ್ಲೆಯ, ಪಾವಗಡ ತಾಲ್ಲೂಕಿನ ತಿರುಮಣಿ ಗ್ರಾಮದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಮತ್ತು ಸುತ್ತಮುತ್ತಲಿನ ಹಳ್ಳಿಗಳ ಜನರು ಸೆಪ್ಟೆಂಬರ್ ೨೪ ರಂದು ಸಾರ್ವಜನಿಕ ಸಭೆ ನಡೆಸಿ, ಮೆರವಣಿಗೆ ಮೂಲಕ ಆರಕ್ಷಕರ ಠಾಣೆಗೆ ಹೋಗಿ, ಪರ್ಯಾಯ ಸರ್ಕಾರದ ರಚನೆ ಬಗ್ಗೆ ಘೋಷಿಸಿ, ಆರಕ್ಷಕ ಠಾಣೆಯ ಮೇಲೆ ಧ್ವಜಾರೋಹಣ ನಡೆಸಿದರು. ಗ್ರಾಮಸ್ಥರು ಅಲ್ಲಿಂದ ನಿರ್ಗಮಿಸಿದ ನಂತರ ಪೊಲೀಸರು ರಾಷ್ಟ್ರೀಯ ಧ್ವಜವನ್ನು ಕೆಳಗಿಳಿಸಿದರು. ಇದನ್ನು ತಿಳಿದ ಗ್ರಾಮಸ್ಥರು ರಾಷ್ಟ್ರೀಯ ಧ್ವಜವನ್ನು ಹಿಂದಿರುಗಿಸುವಂತೆ ಪೊಲೀಸರನ್ನು ಒತ್ತಾಯಿಸಿದರು. ಪ್ರತಿಕೂಲ ಪರಿಸ್ಥಿತಿಯಿಂದ ಪೊಲೀಸರು ಗ್ರಾಮಸ್ಥರ ಒಡಂಬಡಿಕೆಯನ್ನು ಒಪ್ಪಿದರು. ಆದರೆ ಕೆಲವೇ

ಗಂಟೆಗಳಲ್ಲಿ ತಾಲೂಕಿನ ಅಮಲ್ದಾರ್‌ನೊಂದಿಗೆ ಎರಡು ವ್ಯಾನುಗಳ ಸಮೇತ ಪೋಲೀಸರು ಬಂದು ಗ್ರಾಮಸ್ಥರನ್ನು ಅಮಾನುಷವಾಗಿ ಥಳಿಸಿದರು. ಆದರೆ ಅದೃಷ್ಟವಶಾತ್ ಇದು ಮತ್ತೊಂದು ಈಸೂರು ದುರಂತ ಆಗಲಿಲ್ಲ.

ಹೀಗೆ ಮೈಸೂರು ಸಂಸ್ಥಾನದ ಉದ್ದಗಲಕ್ಕೂ ಮೈಸೂರು ಚಳವಳಿಯು ಬಿರುಸಿನಿಂದ ನಡೆಯಿತು. ಕೊನೆಗೆ ಇಷ್ಟೊಂದು ಜನಬೆಂಬಲ ಪಡೆದಿದ್ದ ಕಾಂಗ್ರೆಸ್ ಚಳವಳಿಯನ್ನು ಸಂಸ್ಥಾನದ ಸರ್ಕಾರದಿಂದ ಹತ್ತಿಕ್ಕಲಾಗಲಿಲ್ಲ. ಮಹಾರಾಜರು ತಾವು ಇಲ್ಲಿಯವರೆಗೂ ಸುಮ್ಮನೆ ಇದ್ದದ್ದು ತಪ್ಪಾಯಿತೆಂದು ಪಶ್ಚಾತ್ತಾಪಪಟ್ಟು, ಅಕ್ಟೋಬರ್ ಏಳರಂದು ಜವಾಬ್ದಾರಿ ಸರ್ಕಾರ ಸ್ಥಾಪಿಸುವ ಇಚ್ಛೆಯನ್ನು ವ್ಯಕ್ತಪಡಿಸಿದರು. ಮೈಸೂರು ಸಂಸ್ಥಾನದ ದಿವಾನರು ಕೆ.ಸಿ.ರೆಡ್ಡಿಯನ್ನು ಅಕ್ಟೋಬರ್ ಒಂಬತ್ತರಂದು ಭೇಟಿ ಮಾಡಿ ಮಾತುಕತೆ ನಡೆಸಿದರು. ಇದರ ಪರಿಣಾಮವಾಗಿ ಬಂಧಿತರಾದ ಎಲ್ಲಾ ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಲಾಯಿತು. ಅಕ್ಟೋಬರ್ ೧೧ರಂದು ಸರ್ಕಾರ ಮತ್ತು ಕಾಂಗ್ರೆಸ್ಸಿನ ನಡುವೆ ಒಪ್ಪಂದ ನಡೆಯಿತು. ಅಕ್ಟೋಬರ್ ೧೨ ರಂದು ಮಹಾರಾಜರು ಜವಾಬ್ದಾರಿ ಸರ್ಕಾರದ ಸ್ಥಾಪನೆಗೆ ಹಸಿರು ನಿಶಾನೆ ತೋರಿಸಿದರು. ಮೈಸೂರು ಕಾಂಗ್ರೆಸ್ಸಿನ ಅಧ್ಯಕ್ಷರಾದ ಕೆ.ಸಿ. ರೆಡ್ಡಿ ಸಂಸ್ಥಾನದ ಸರ್ಕಾರ ನಮ್ಮ ಎಲ್ಲಾ ಬೇಡಿಕೆಗಳನ್ನು ಈಡೇರಿಸಿ, ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರದ ಸ್ಥಾಪನೆಗಾಗಿ ಒಪ್ಪಿರುವುದರಿಂದ ಸಂಸ್ಥಾನದ ಎಲ್ಲಾ ಕಡೆಗಳಲ್ಲೂ ಚಳವಳಿಯನ್ನು ಅಂತ್ಯ ಗೊಳಿಸಬೇಕೆಂದು ಘೋಷಿಸಿ, ಅಕ್ಟೋಬರ್ ೨೪ ರಂದು ಅಧಿಕಾರ ಸ್ವೀಕರಿಸುವುದಾಗಿ ಹೇಳಿಕೆ ನೀಡಿದರು. ಇದರಿಂದ ಸಂಸ್ಥಾನದಲ್ಲಿ ೪೨ ದಿನಗಳ ಕಾಲ ಸತತವಾಗಿ ನಡೆದ ಹೋರಾಟವು ಅಂತಿಮಘಟ್ಟವನ್ನು ತಲುಪಿತು. ಅಕ್ಟೋಬರ್ ೨೪ರಂದು (ವಿಜಯದಶಮಿಯ ದಿನ) ಮಹಾರಾಜರು ಕೆ.ಸಿ.ರೆಡ್ಡಿಗೆ ಅಧಿಕಾರವನ್ನು ಹಸ್ತಾಂತರ ಮಾಡುವುದರೊಂದಿಗೆ ಜವಾಬ್ದಾರಿ ಸರ್ಕಾರ ಸ್ಥಾಪನೆಯಾಯಿತು. ೧೯೫೦ರಲ್ಲಿ ಭಾರತ ಸಂವಿಧಾನ ರಚನೆಯಾದಾಗ ಮೈಸೂರು ರಾಜ್ಯವು "ಬಿ" ರಾಜ್ಯವಾಗಿ, ಜಯಚಾಮರಾಜ ಒಡೆಯರ್ ಮೊದಲ ರಾಜಪ್ರಮುಖರಾದರು. ೧೯೫೬ರಲ್ಲಿ ಭಾಷಾವಾರು ರಾಜ್ಯಗಳ ಪುನರ್ ವಿಂಗಡಣೆಯಾದಾಗ ನವಮೈಸೂರು ರಾಜ್ಯ ಉದಯಿಸಿ ರಾಜ್ಯಪಾಲರು ರಾಜ್ಯದ ಸಂವಿಧಾನಾತ್ಮಕ ಮುಖ್ಯಸ್ಥರಾದರು. ಮುಂದೆ, ೧೯೭೩ರ ನವೆಂಬರ್ ಒಂದರಂದು, ರಾಜ್ಯದ ಹೆಸರನ್ನು 'ಕರ್ನಾಟಕ' ಎಂದು ಘೋಷಿಸಲಾಯಿತು.

**ಚುನಾವಣೆಗಳು**

ಬ್ರಿಟಿಷ್ ಭಾರತದಲ್ಲಿ ಚುನಾವಣಾ ಪ್ರಕ್ರಿಯೆಗಳು (೧೮೯೬) ಆರಂಭಗೊಳ್ಳುವುದಕ್ಕೆ ಮೊದಲೇ ಅಂದಿನ ಮೈಸೂರು ಸಂಸ್ಥಾನದಲ್ಲಿ ೧೮೮೧ರಲ್ಲಿ ಆರಂಭಗೊಂಡ 'ಪ್ರಜಾಪ್ರತಿನಿಧಿ ಸಭೆಯು' ದೇಶದ ಚುನಾವಣಾ ಪದ್ಧತಿಯಲ್ಲೊಂದು ಮೈಲಿಗಲ್ಲಾಗಿದ್ದು, ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರದತ್ತ ಇಟ್ಟ ಮೊದಲ ಹೆಜ್ಜೆಯಾಗಿತ್ತು. ದಿವಾನ್ ರಂಗಾಚಾರ್ಲು ಅವರ ಕಾಲಾವಧಿಯಲ್ಲಿ ಸ್ಥಾಪಿಸಲ್ಪಟ್ಟ ಪ್ರಜಾಪ್ರತಿನಿಧಿ ಸಭೆಗೆ ಆರಂಭದಲ್ಲಿ ಪ್ರಮುಖ ಭೂಮಾಲೀಕರು, ಕೃಷಿಕರು, ಶ್ರೀಮಂತ ವರ್ತಕರು ಹಾಗೂ ಸ್ಥಳೀಯನಿಧಿ ಬೋರ್ಡುಗಳಿಂದ ಆಯ್ದ ಸದಸ್ಯರನ್ನು ಒಂದು ವರ್ಷದ ಅವಧಿಗೆ ನಾಮಕರಣ ಮಾಡಲಾಗುತ್ತಿತ್ತು. ಆದರೆ ಈ ಸಭೆಗೆ ಯಾವುದೇ ಶಾಸನಬದ್ಧ ಅಧಿಕಾರವಿರದೆ ವರುಷದಲ್ಲೊಮ್ಮೆ ಡಿಸೆಂಬರ್ ತಿಂಗಳಲ್ಲಿ ಸಮಾವೇಶಗೊಳ್ಳುತ್ತಿತ್ತು. ಮೈಸೂರಿನಲ್ಲಿ ೧೮೮೧ರ ಅಕ್ಟೋಬರ್ ಏಳರಂದು ಜರುಗಿದ ಪ್ರಜಾಪ್ರತಿನಿಧಿ ಸಭೆಯ ಮೊದಲ ಅಧಿವೇಶನದಲ್ಲಿ ೧೪೪ ಜನ ಭಾಗವಹಿಸಿದ್ದರೆಂದು ತಿಳಿದುಬರುತ್ತದೆ.

ತದನಂತರ ೧೮೯೧ರಲ್ಲಿ ಪ್ರಜಾಪ್ರತಿನಿಧಿ ಸಭೆಗೆ ಸದಸ್ಯರನ್ನು ನಿಗಧಿತ ಭೂಕಂದಾಯ ಹಾಗೂ ಮನೆ/ಅಂಗಡಿ ಕಂದಾಯ ಪಾವತಿ ಮೊತ್ತವನ್ನು ಆಧರಿಸಿ ಚುನಾವಣೆ ಮೂಲಕ ಆಯ್ಕೆ ಮಾಡುವ ಪ್ರಕ್ರಿಯೆ ಆರಂಭಗೊಂಡಿತು. ಹಿಂದೆ ೧೮೮೧ರಲ್ಲಿ ರೂಪಿಸಲ್ಪಟ್ಟ ಮೂವರು ಕೌನ್ಸಿಲರುಗಳು ಹಾಗೂ ಪದನಿಮಿತ್ತ ಅಧ್ಯಕ್ಷರಾದ ದಿವಾನರನ್ನೊಳಗೊಂಡ ಎಕ್ಸಿಕ್ಯೂಟಿವ್ ಕೌನ್ಸಿಲನ್ನೇ ೧೯೦೭ರಲ್ಲಿ ೧೮ ಸದಸ್ಯರ ಲೆಜಿಸ್ಲೇಟಿವ್ ಕೌನ್ಸಿಲ್ (ವಿಧಾನ ಪರಿಷತ್ ಮಾದರಿಯಲ್ಲಿ) ಎಂಬ ಇನ್ನೊಂದು ಸದನವನ್ನು ಆರಂಭಿಸುವ ಮೂಲಕ ದಿವಾನ್ ವಿ.ಪಿ.ಮಾಧವರಾಯರು ದ್ವಿಸದನ (ಬೈಕ್ಯಾಮೆರಲ್) ಶಾಸಕಾಂಗ ಪದ್ಧತಿಗೆ ಚಾಲನೆ ನೀಡಿದರು. ಇದರ ಸದಸ್ಯರ ಸಂಖ್ಯೆಯನ್ನು ೧೯೧೩ರಲ್ಲಿ ೨೪ಕ್ಕೆ ಏರಿಸಿದ ದಿವಾನ್ ಸರ್.ಎಂ.ವಿಶ್ವೇಶ್ವರಯ್ಯನವರು, ಸಂಸ್ಥಾನದ ಆಯವ್ಯಯ ಪಟ್ಟಿಯ ಚರ್ಚೆಯಲ್ಲಿ ಪಾಲ್ಗೊಳ್ಳುವ ಅಧಿಕಾರವನ್ನೂ ಅದಕ್ಕೆ ನೀಡಿದರು. ಇದೇ ಪರಿಸ್ಥಿತಿ ೧೯೧೫ರವರೆವಿಗೂ ಮುಂದುವರಿಯಿತು. ಆ ವರ್ಷ ಚುನಾವಣಾ ಕಣದಲ್ಲಿ ಭಾಗವಹಿಸುವ ಸ್ಪರ್ಧಿಗಳಿಗೆ ಭೂಕಂದಾಯ ಮತ್ತು ಮನೆ ಕಂದಾಯದ ಅರ್ಹತಾ ಮೊತ್ತ ಈ ಕೆಳಕಂಡಂತಿತ್ತು.

| ತಾಲೂಕು | ಭೂಕಂದಾಯದ ವಾರ್ಷಿಕ ಮಿತಿ | ಮನೆ/ಅಂಗಡಿ ಕಂದಾಯದ ಮಿತಿ |
|---|---|---|
| ತುಮಕೂರು | ೧೦೦.೦೦ | ೧೭.೦೦ |
| ಮಧುಗಿರಿ / ಕೊರಟಗೆರೆ | ೧೫೦.೦೦ | ೧೩.೦೦ |
| ಚಿಕ್ಕನಾಯಕನಹಳ್ಳಿ | ೧೫೦.೦೦ | ೧೩.೦೦ |
| ಶಿರಾ | ೨೦೦.೦೦ | ೧೩.೦೦ |
| ಗುಬ್ಬಿ | ೨೦೦.೦೦ | ೧೭.೦೦ |
| ತಿಪಟೂರು/ತುರುವೇಕೆರೆ | ೧೦೦.೦೦ | ೧೭.೦೦ |
| ಪಾವಗಡ | ೧೦೦.೦೦ | ೧೩.೦೦ |
| ಕುಣಿಗಲ್ | ೧೦೦.೦೦ | ೧೩.೦೦ |

ಪ್ರಜಾಪ್ರತಿನಿಧಿ ಸಭೆಯು ವರ್ಷದಲ್ಲಿ ಎರಡು ಬಾರಿ (ಜೂನ್ ಹಾಗೂ ಡಿಸೆಂಬರ್) ಸಮಾವೇಶಗೊಳ್ಳುವ ವ್ಯವಸ್ಥೆ ೧೯೧೭ರಿಂದ ಆರಂಭವಾಯಿತು. ಆ ವೇಳೆಗೆ ಸ್ಥಾಪಿಸಲ್ಪಟ್ಟ 'ಪ್ರಜಾಮಿತ್ರ ಮಂಡಳಿ' (೧೯೧೭) ಪಕ್ಷವು ಕಾಂಗ್ರೆಸ್ ಬ್ರಾಹ್ಮಣಶಾಹಿ ಪಕ್ಷವೆಂದು ಪರಿಗಣಿಸುವುದರೊಂದಿಗೆ ಕಾಂಗ್ರೆಸ್ ವಿರೋಧಿಯಾಗಿದ್ದು, ಕಾಂಗ್ರೆಸ್ಸಿನ 'ಜವಾಬ್ದಾರಿ ಸರ್ಕಾರ ರಚನೆ' ಹೋರಾಟಕ್ಕೆ ವಿರೋಧ ವ್ಯಕ್ತಪಡಿಸಿತು. ೧೯೧೮ರಲ್ಲಿ ಪ್ರಜಾಪ್ರತಿನಿಧಿ ಸಭೆಯ ಸದಸ್ಯರನ್ನು ಚುನಾಯಿಸಲು ಮತದಾರರಿಗೆ ಇದ್ದ ಅರ್ಹತೆಯನ್ನು ಸುಧಾರಿಸಲಾಯಿತು. ಅದರಂತೆ ಮತದಾರರಾಗಲು ೫೦ ರೂ.ಗಳ ಭೂ ಕಂದಾಯ ಅಥವಾ ೧೦ ರೂ.ಗಳ ವಾಣಿಜ್ಯ/ಅಂಗಡಿ ತೆರಿಗೆ ಸಲ್ಲಿಸಬೇಕಾಗಿತ್ತು. ಇದರಿಂದ ಮತದಾರರ ಸಮುದಾಯ ವಿಸ್ತರಿಸಿತಲ್ಲದೆ ಎಲ್ಲಾ ಮತದಾರರೂ ಈ ಸಭೆಗೆ ಸದಸ್ಯರಾಗಲು ಅರ್ಹರಾದರು. ಕ್ರಮೇಣ ಚುನಾಯಿತಗೊಂಡ ಪ್ರಜಾಪ್ರತಿನಿಧಿಸಭೆಯ ಸದಸ್ಯರು ೧೯೨೧ರಲ್ಲಿ ಸಂವಿಧಾನಿಕ ಸುಧಾರಣೆಗಳ ಯೋಜನೆಯನ್ನು ರೂಪಿಸಲು ಸರ್ಕಾರೇತರ ಸದಸ್ಯರನ್ನು ಒಳಗೊಂಡ ಸಮಿತಿಯನ್ನು ರಚಿಸಬೇಕೆಂದು ಒತ್ತಾಯ ಮಾಡಿದರು. ಆದ್ದರಿಂದ ಸಂವಿಧಾನಿಕ ಸುಧಾರಣಾ ಸಮಿತಿ ರಚನೆಗೊಂಡು ಅದರ ವರದಿಯ ಆಧಾರದ ಮೇಲೆ ೧೯೨೩ರಲ್ಲಿ ರೆಪ್ರಸೆಂಟೆಟೀವ್ ಅಸೆಂಬ್ಲಿ ಆಕ್ಟ್ ಕಾಯ್ದೆ ಜಾರಿಗೆ ತಂದಿತು. ಈ ಕಾಯ್ದೆ ಪ್ರಜಾಪ್ರತಿನಿಧಿ ಸಭೆಯ ಸದಸ್ಯರ ಸಂಖ್ಯೆಯನ್ನು ೨೫೦ಕ್ಕೆ ನಿಗಧಿಗೊಳಿಸಿತು. ಒಟ್ಟು ಸದಸ್ಯರಲ್ಲಿ ೧೫೦ ಸದಸ್ಯರು ಗ್ರಾಮೀಣ ಮತ ಕ್ಷೇತ್ರಗಳಿಂದ ಆಯ್ಕೆಯಾಗಿ ಬರಬೇಕಿತ್ತು. ಅದರಂತೆ ೧೯೨೩ರಲ್ಲಿ ಈ ಜಿಲ್ಲೆಯ ಗ್ರಾಮಾಂತರ ಪ್ರದೇಶಗಳಿಂದ ಆಯ್ಕೆಯಾಗಿದ್ದ ಸದಸ್ಯರ ಸಂಖ್ಯೆ ಈ ಕೆಳಕಂಡಂತಿತ್ತು.

**ತುಮಕೂರು ಗ್ರಾಮಾಂತರ ಕ್ಷೇತ್ರಗಳು**

| ಕ್ರಮ ಸಂಖ್ಯೆ | ಕ್ಷೇತ್ರದ ಹೆಸರು | ಸದಸ್ಯರ ಸಂಖ್ಯೆ |
|---|---|---|
| ೧ | ತುಮಕೂರು | ೦೩ |
| ೨ | ಕುಣಿಗಲ್ | ೦೨ |
| ೩ | ಮಧುಗಿರಿ | ೦೨ |
| ೪ | ಶಿರಾ | ೦೨ |
| ೫ | ಗುಬ್ಬಿ | ೦೨ |
| ೬ | ತಿಪಟೂರು | ೦೨ |
| ೭ | ಪಾವಗಡ | ೦೨ |
| ೮ | ಚಿಕ್ಕನಾಯಕನಹಳ್ಳಿ | ೦೨ |
| ೯ | ಕೊರಟಗೆರೆ ಉಪ ತಾಲೂಕು | ೦೧ |
| ೧೦ | ತುರುವೇಕೆರೆ ಉಪ ತಾಲೂಕು | ೦೧ |
| | ಒಟ್ಟು | ೧೯ |

## ಪ್ರಜಾಪ್ರತಿನಿಧಿ ಸಭೆಯಲ್ಲಿ ಗ್ರಾಮಾಂತರ ಕ್ಷೇತ್ರಗಳಲ್ಲದೆ ಪಟ್ಟಣ ಕ್ಷೇತ್ರಗಳೂ ಇದ್ದವು

| ಕ್ರಮ ಸಂಖ್ಯೆ | ಕ್ಷೇತ್ರದ ಹೆಸರು | ಸದಸ್ಯರ ಸಂಖ್ಯೆ |
|---|---|---|
| ೧ | ತುಮಕೂರು | ೦೧ |
| ೨ | ಚಿಕ್ಕನಾಯಕನಹಳ್ಳಿ | ೦೧ |
| ೩ | ಶಿರಾ | ೦೧ |
| ೪ | ಗುಬ್ಬಿ | ೦೧ |
| ೫ | ಮಧುಗಿರಿ | ೦೧ |
| | ಒಟ್ಟು | ೦೫ |

ಹೀಗೆ ಈ ಜಿಲ್ಲೆಯಲ್ಲಿ ಗ್ರಾಮಾಂತರ ಮತ್ತು ಪಟ್ಟಣ ಪ್ರತಿನಿಧಿಗಳೂ ಸೇರಿದಂತೆ ಒಟ್ಟು ೨೪ ಜನ ಸದಸ್ಯರಿದ್ದರು. ಈ ಸದಸ್ಯರಲ್ಲಿ ಹಿಂದೂ ಮತ್ತು ಮುಸಲ್ಮಾನರೂ ಇದ್ದರು. ಇವರಲ್ಲಿ ವ್ಯಾಪಾರಿಗಳು, ಬ್ಯಾಂಕರ್ಸ್‌ಗಳು, ಭೂಮಾಲಿಕರೂ, ಗ್ರಾಮಾಧಿಕಾರಿಗಳು, ವಕೀಲರು ಮತ್ತು ಶಾಲಾ ಶಿಕ್ಷಕರೂ ಸೇರಿದ್ದರು.

೧೮೮೧ ರಿಂದ ಅಸ್ತಿತ್ವದಲ್ಲಿದ್ದ ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ ಈ ಜಿಲ್ಲೆಯ ಸದಸ್ಯರುಗಳಾಗಿ ಕಾರ್ಯನಿರ್ವಹಿಸಿದ ವ್ಯಕ್ತಿಗಳು ಅನೇಕರಿದ್ದಾರೆ. ಅವರಲ್ಲಿ ಲಭ್ಯವಿರುವ ಹೆಸರುಗಳನ್ನು ಇಲ್ಲಿ ನೀಡಲಾಗಿದೆ.

| ಕ್ರಮ ಸಂಖ್ಯೆ | ಸದಸ್ಯರ ಹೆಸರು | ಊರು/ಸ್ಥಳ |
|---|---|---|
| ೧ | ಎಂ.ವಿ.ರಾಮರಾವ್ | ತುಮಕೂರು |
| ೨ | ವಿ.ಕರಿಬಸಪ್ಪ | ಶಿರಾ |
| ೩ | ಸಿ.ಪಟ್ಟಾಭಿರಾಮಶೆಟ್ಟಿ | ಚಿಕ್ಕನಾಯಕನಹಳ್ಳಿ |
| ೪ | ಜಿ.ಎಸ್.ಸುಬ್ಬರಾವ್ | ಮಧುಗಿರಿ |
| ೫ | ಗಟ್ಟಿ ರೇವಣ್ಣ | ಗುಬ್ಬಿ |
| ೬ | ಗಂಡಿಕೋಟೆ ವೆಂಕಟಶಾಮಯ್ಯ | ತಿಪಟೂರು |
| ೭ | ಕೆ.ಗುಂಡಣ್ಣ | ಗುಬ್ಬಿ |
| ೮ | ಮೂಡಲಗಿರಿಗೌಡ | ನಾಗವಲ್ಲಿ |
| ೯ | ಟಿ.ಎನ್.ಕೆಂಪಹೊನ್ನಯ್ಯ | ತುಮಕೂರು |
| ೧೦ | ಆರ್.ಎಸ್.ಸಿದ್ಧರಾಮಯ್ಯ | ರಾಮಗೋನಹಳ್ಳಿ |
| ೧೧ | ಸಿ.ಟಿ.ಹನುಮಂತಯ್ಯ | ಕೋಡಿಹಳ್ಳಿ ಮಠ |
| ೧೨ | ಮಂಡಳಿ ನರಸಿಂಹಯ್ಯ | ಕೊಡಿಗೇನಹಳ್ಳಿ |
| ೧೩ | ಡಿ.ನರಸೇಗೌಡ | ಚಿಕ್ಕಬೆಲವತ್ತ |
| ೧೪ | ಎಸ್.ನಂಜಯ್ಯಶೆಟ್ಟಿ | ಮಧುಗಿರಿ |
| ೧೫ | ಜೆ.ಕೆಂಚಪ್ಪ | ಮೇಲನಹಳ್ಳಿ |
| ೧೬ | ಹೆಚ್.ಸಿ.ವೀರಭದ್ರಪ್ಪ | ಶ್ರೀರಾಮಪುರ |
| ೧೭ | ಟಿ.ತಾರೇಗೌಡ | ತಾವರೆಕೆರೆ |
| ೧೮ | ಕೆ.ರಂಗಣ್ಣ | ಗುಳಿಗೇನಹಳ್ಳಿ |
| ೧೯ | ಕೆ.ರಾಮಕೃಷ್ಣಯ್ಯ | ಕಲ್ಲೂರು |

| | | |
|---|---|---|
| ೨೦ | ಸಿ.ಎಂ.ಅಣ್ಣಯ್ಯಪ್ಪ | ಚಿಕ್ಕಚೆನ್ನಿಗಾವು |
| ೨೧ | ಟಿ.ಜಿ.ತಿಮ್ಮೇಗೌಡ | ತಿಪಟೂರು |
| ೨೨ | ಜಿ.ಶಂಕರಶೆಟ್ಟಿ | ಪಾವಗಡ |
| ೨೩ | ಹೆಚ್.ಕೆ.ನಾರಾಯಣಚಾರ್ಯ | ವೈ.ಎನ್.ಹೊಸಕೋಟೆ |
| ೨೪ | ಪಿ.ಆಂಜನಪ್ಪ | ಪಾವಗಡ |
| ೨೫ | ರೇವಣ್ಣಗೌಡ | ಕಲ್ಲನಾಯಕನಹಳ್ಳಿ |
| ೨೬ | ಬೆಟ್ಟೆಗೌಡ | ಭಕ್ತರಹಳ್ಳಿ |
| ೨೭ | ವೈ.ಎಸ್.ರಾಜಶೇಖರಪ್ಪ | ಕೊರಟಗೆರೆ |
| ೨೮ | ಜಿ.ರಾಮಯ್ಯ | ಕೊರಟಗೆರೆ |
| ೨೯ | ಪಟೇಲ್ ಮಾಯಣ್ಣಗೌಡ | ದಬ್ಬೆಗಟ್ಟ |
| ೩೦ | ಪಿ.ಹುಚ್ಚೇಗೌಡ | ಬಾಣಸಂದ್ರ |
| ೩೧ | ಚೌದುರಿಅಬ್ದುಲ್ ರಷೀದ್ ಸಾಹೇಬ್ | ತುಮಕೂರು |
| ೩೨ | ಎಸ್.ಎಂ.ಅಬ್ದುಲ್ ಜಲೀಲ್ ಸಾಬ್ | ಶಿರಾ |
| ೩೩ | ಸೈಯದ್ ಮಹಮದ್ ಸಾಬ್ | ತಿಪಟೂರು |
| ೩೪ | ಬಿ.ಎಸ್.ರಾಮನಾಯಕ | ಕೊಂಗಲಪುರ |
| ೩೫ | ಎಸ್.ಗಂಗಮ್ಮ | ತುಮಕೂರು |

ಚುನಾವಣೆಗೆ ಸ್ಪರ್ಧಿಸುವವರಿಗೆ ಹಾಗೂ ಮತದಾರರಿಗೆ ಇದ್ದ ಅರ್ಹತಾ ತೆರಿಗೆ ಪಾವತಿ ಮಿತಿಯನ್ನು ರೂ.೨೫ ಭೂಕಂದಾಯ ಇಲ್ಲವೇ ರೂ.೫/– ಮನೆಗಂದಾಯವೆಂದು ಪುನರ್ ಪರಿಷ್ಕರಿಸುವ ಮೂಲಕ ಚುನಾವಣೆ ಪ್ರಕ್ರಿಯೆಯಲ್ಲಿ ಹೆಚ್ಚು ಜನ ಭಾಗವಹಿಸುವಂತೆ ಮಾಡಲಾಯಿತು. ಅಲ್ಲದೆ ಮತದಾರರ ವಯಸ್ಸನ್ನು ೧೮ ರಿಂದ ೨೧ಕ್ಕೆ ಏರಿಸಲಾಯಿತು. ಮಿಗಿಲಾಗಿ ಮುಸ್ಲಿಮರಿಗೆ ಮೀಸಲು ಸ್ಥಾನ ನೀಡುವ ವ್ಯವಸ್ಥೆಯು ೧೯೨೩ರಲ್ಲೇ ಜಾರಿಗೆ ಬಂತು. ಮಹಿಳೆಯರಿಗೆ ಚುನಾವಣೆಯಲ್ಲಿ ಸ್ಪರ್ಧಿಸುವ ಹಕ್ಕನ್ನು ೧೯೨೭ರಲ್ಲಿ ನೀಡಲಾಯಿತು.

ಸಂಸ್ಥಾನದಲ್ಲಿ ಕೃಷಿಕರ ಅಭ್ಯುದಯಕ್ಕೆಂದೇ ೧೯೨೭ರಲ್ಲಿ 'ರೈತಸಂಘ' ಸ್ಥಾಪಿಸಲ್ಪಟ್ಟಿತು. ಕ್ರಮೇಣ ಕೆ.ಸಿ.ರೆಡ್ಡಿ, ವಿ.ವೆಂಕಟಪ್ಪ, ಮುಂತಾದ ಧುರೀಣರು 'ಪ್ರಜಾಪಕ್ಷ'ವನ್ನು ೧೯೩೦ರಲ್ಲಿ ನೂತನವಾಗಿ ಆರಂಭಿಸಿ, ಜವಾಬ್ದಾರಿ ಸರ್ಕಾರಕ್ಕಾಗಿ ಒತ್ತಾಯಿಸಲಾರಂಭಿಸಿದರು. ಚುನಾವಣೆಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳು ಪ್ರಜಾಪ್ರತಿನಿಧಿ ಸಭೆಯಲ್ಲಿ ಪ್ರಮಾಣವಚನ ಸ್ವೀಕರಿಸುವ ಪದ್ಧತಿ ೧೯೩೦ರ ನಂತರ ಜಾರಿಗೆ ಬಂತು. ಮುಂದೆ 'ಪ್ರಜಾಮಿತ್ರ ಮಂಡಳಿ' ಹಾಗೂ 'ಪ್ರಜಾಪಕ್ಷಗಳು' ತಮ್ಮ ನಡುವಣ ಭಿನ್ನಾಭಿಪ್ರಾಯವನ್ನು ಬಗೆಹರಿಸಿಕೊಂಡು ೧೯೩೪ರಲ್ಲಿ ವಿಲೀನಗೊಂಡಾಗ ಜನ್ಮತಾಳಿದ 'ಪ್ರಜಾಸಂಯುಕ್ತ ಪಕ್ಷ'ವು ಸ್ಥಳೀಯ ಕಾಂಗ್ರೆಸ್ ಪಕ್ಷದೊಡನೆ ೧೯೩೭ರಲ್ಲಿ ವಿಲೀನಗೊಳ್ಳುವುದರೊಂದಿಗೆ 'ಮೈಸೂರು ಕಾಂಗ್ರೆಸ್' ಪಕ್ಷದ ಉದಯಕ್ಕೆ ನಾಂದಿಯಾಯಿತು. ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರಕ್ಕೆ ಒತ್ತಾಯಿಸಿದ ರಾಜಕೀಯ ಪಕ್ಷಗಳ ಒತ್ತಡಕ್ಕೆ ಮಣಿದು, ಸಂಸ್ಥಾನದ ಸರ್ಕಾರ, ಕೆ.ಆರ್.ಶ್ರೀನಿವಾಸ್ ಅಯ್ಯಂಗಾರ್ ಸಮಿತಿಯನ್ನು ಮಾರ್ಚ್ ೧೯೩೮ರಲ್ಲಿ ರೂಪಿಸಿ ಜವಾಬ್ದಾರಿ ಸರ್ಕಾರ ರಚನೆ ಬಗ್ಗೆ ಪರಿಶೀಲಿಸುವಂತೆ ಕೋರಿತು. ಅದೇ ವರ್ಷ (೧೯೩೮) ಏಪ್ರಿಲ್ ತಿಂಗಳಲ್ಲಿ ಶಿವಪುರದಲ್ಲಿ ಜರುಗಿದ ಮೈಸೂರು ಕಾಂಗ್ರೆಸ್ಸಿನ ಮೊದಲ ಸಮಾವೇಶ ದೇಶದ ಇತಿಹಾಸದಲ್ಲಿ 'ಧ್ವಜಸತ್ಯಾಗ್ರಹ' ಎಂದೇ ಪ್ರಸಿದ್ಧವಾಯಿತು. ಕೆ.ಆರ್. ಶ್ರೀನಿವಾಸ್ ಅಯ್ಯಂಗಾರ್ ಸಮಿತಿಯು ಸಲ್ಲಿಸಿದ ವರದಿಯನ್ನು ಭಾಗಶಃ ಒಪ್ಪಿದ ಸಂಸ್ಥಾನದ ಸರ್ಕಾರವು ೧೯೪೦ರಲ್ಲಿ ಕೌನ್ಸಿಲ್‌ನ ಸದಸ್ಯತ್ವವನ್ನು ೫೦ ರಿಂದ ೬೮ಕ್ಕೂ ಹಾಗೂ ಪ್ರಜಾಪ್ರತಿನಿಧಿ ಸಭೆಯ ಸದಸ್ಯರ ಸಂಖ್ಯೆಯನ್ನು ೩೨೫ಕ್ಕೂ ಹೆಚ್ಚಿಸುವುದರ ಜೊತೆಗೆ ಸದಸ್ಯರ ಕಾಲಾವಧಿಯನ್ನು ಮೂರರಿಂದ ನಾಲ್ಕು ವರುಷಗಳಿಗೆ ಹೆಚ್ಚಿಸಿತು. ಅಲ್ಲದೆ ಮಹಿಳೆಯರು ಹಾಗೂ ಕ್ರಿಶ್ಚಿಯನ್ನರಿಗಾಗಿ ಪ್ರತ್ಯೇಕ ಮೀಸಲು ಸ್ಥಾನ ನೀಡುವ ಪದ್ಧತಿಯನ್ನೂ ಜಾರಿಗೆ

ತಂದಿತು. ಪದನಿಮಿತ್ತ ದಿವಾನರೇ ಅಧ್ಯಕ್ಷರಾಗಿರುವ ಎಕ್ಸಿಕ್ಯೂಟಿವ್ ಕೌನ್ಸಿಲ್ ಸರ್ಕಾರದ ಕಾರ್ಯಾಂಗವಾಯಿತು. ಮುಂದೆ ೧೯೪೧ರಲ್ಲಿ ಜರುಗಿದ ಚುನಾವಣೆಯಲ್ಲಿ 'ಮೈಸೂರು ಕಾಂಗ್ರೆಸ್' ತಾನು ಸ್ಪರ್ಧಿಸಿದ್ದ ೧೫೨ ಸ್ಥಾನಗಳಲ್ಲಿ ೧೩೭ ಸ್ಥಾನ ಗಳಿಸಿತು. ಆದರೆ ದೇಶಾದಾದ್ಯಂತ ಬ್ರಿಟಿಷರ ವಿರುದ್ಧ ನಡೆದ 'ಭಾರತ ಬಿಟ್ಟು ತೊಲಗಿ' ಬ್ರಿಟಿಷ್ ಚಳುವಳಿಯಿಂದಾಗಿ ಸಂಸ್ಥಾನದಲ್ಲೂ ನಾಯಕರು ಬಂಧಿಸಲ್ಪಟ್ಟರು.

ದೇಶಕ್ಕೆ ಸ್ವಾತಂತ್ರ್ಯ ನಂತರವೂ ಸಂಸ್ಥಾನದ ರಾಜಪ್ರಭುತ್ವವು ಸ್ಥಳೀಯ ರಾಜಕೀಯ ಪಕ್ಷಗಳ ಜವಾಬ್ದಾರಿ ಸರ್ಕಾರ ರಚನೆಯ ಬೇಡಿಕೆಯನ್ನು ಒಪ್ಪಲಿಲ್ಲ. ಇದಕ್ಕಾಗಿ ಒತ್ತಾಯಿಸಿ, ೧೯೪೭ರ ಅಕ್ಟೋಬರ್ ೧೧ ರಂದು 'ಮೈಸೂರು ಚಲೋ' ಚಳವಳಿಯನ್ನು ಮೈಸೂರು ಕಾಂಗ್ರೆಸ್ ಹಮ್ಮಿಕೊಂಡಿತು. ಇದರಲ್ಲಿ ತಾಳಕೆರೆ ಸುಬ್ರಮಣ್ಯರ ಪಾತ್ರ ಹಿರಿದಾಗಿತ್ತು. ಈ ಚಳವಳಿಗೆ ತಲೆಬಾಗಿದ ಸಂಸ್ಥಾನದ ಸರ್ಕಾರ, ಕಾಂಗ್ರೆಸ್ಸಿಗೆ ಜವಾಬ್ದಾರಿ ಸರ್ಕಾರ ರಚಿಸಲು ಒಪ್ಪಿಗೆ ನೀಡಿತು. ಅದರಂತೆ ಅಕ್ಟೋಬರ್ ೨೪ ರಂದು ಕೆ.ಸಿ.ರೆಡ್ಡಿ ಅವರ ಮುಂದಾಳತ್ವದಲ್ಲಿ ತಾತ್ಕಾಲಿಕ ಜವಾಬ್ದಾರಿ ಸರ್ಕಾರ ರಚಿಸಲ್ಪಟ್ಟಿತು. ಮುಂದೆ ಮೈಸೂರು ಸಂವಿಧಾನ ಸಭೆಗೆ ಮಾರ್ಚ್ ೧೯೪೮ರಲ್ಲಿ ಚುನಾವಣೆಗಳು ನಡೆದು ಏಪ್ರಿಲ್‌ನಲ್ಲಿ ಅದು ಸಮಾವೇಶಗೊಂಡಾಗ ಕೆ.ಸಿ.ರೆಡ್ಡಿ ಅದರ ಅಧ್ಯಕ್ಷರಾಗಿದ್ದರಾದರೂ ಮುಂದೆ ಟಿ.ಸುಬ್ರಮಣ್ಯ ಹಾಗೂ ಗಂಜೀವೀರಪ್ಪ ಕ್ರಮವಾಗಿ ಅದರ ಅಧ್ಯಕ್ಷ ಹಾಗೂ ಉಪಾಧ್ಯಕ್ಷರಾದರು. ಸಂಸ್ಥಾನದ ಅರಸರು ಭಾರತೀಯ ಸಂವಿಧಾನವನ್ನು ಒಪ್ಪಿಕೊಳ್ಳುವುದರೊಂದಿಗೆ ೧೫-೦೨-೧೯೪೯ರಂದು ಪ್ರಜಾಪ್ರತಿನಿಧಿ ಸಭೆ ಹಾಗೂ ಲೆಜಿಸ್ಲೇಟಿವ್ ಕೌನ್ಸಿಲ್‌ಗಳು ರದ್ದಾಗಿ ಮೈಸೂರು ಕಾನ್‌ಸ್ಟಿಟ್ಯೂಯೆಂಟ್ ಸಭೆಯೇ ತಾತ್ಕಾಲಿಕ ಶಾಸಕಾಂಗವಾಗಿ ಮಾರ್ಪಟ್ಟು, ಕೆ.ಸಿ.ರೆಡ್ಡಿ ಮೊದಲ ಮುಖ್ಯಮಂತ್ರಿಯಾದರು. ಮುಂದೆ ೧೯೫೦ರಲ್ಲಿ ಭಾರತೀಯ ಸಂವಿಧಾನ ರಚಿಸಲ್ಪಟ್ಟು ೧೯೫೨ರಲ್ಲಿ ದೇಶದಲ್ಲಿ ಮೊದಲ ಸಾರ್ವತ್ರಿಕ ಚುನಾವಣೆ ನಡೆದಾಗ ತುಮಕೂರು ಜಿಲ್ಲೆಯಲ್ಲಿ ಒಂದು ಲೋಕಸಭಾ ಸ್ಥಾನ ಹಾಗೂ ಎರಡು ದ್ವಿ ಸದಸ್ಯ (ಪಾವಗಡ ಹಾಗೂ ಮಧುಗಿರಿ) ಕ್ಷೇತ್ರಗಳೂ ಸೇರಿದಂತೆ ಒಟ್ಟು ಹದಿಮೂರು ವಿಧಾನಸಭಾ ಸ್ಥಾನಗಳಿದ್ದವು. ೧೯೬೨ರ ಚುನಾವಣೆಗೆ ಮೊದಲೇ ದ್ವಿ-ಸದಸ್ಯ ಕ್ಷೇತ್ರಗಳು ಏಕ-ಸದಸ್ಯ ಕ್ಷೇತ್ರಗಳಾದವು.

ಜಿಲ್ಲೆಯಲ್ಲಿ ಈವರೆಗೆ ಜರುಗಿರುವ ಲೋಕಸಭಾ, ವಿಧಾನಸಭಾ ಚುನಾವಣೆ ಹಾಗೂ ಉಪಚುನಾವಣೆಗಳ ಫಲಿತಾಂಶವನ್ನು ನೀಡುವಲ್ಲಿ ಆಯಾ ಕ್ಷೇತ್ರದಿಂದ ಆಯ್ಕೆಯಾದ ಹಾಗೂ ದ್ವಿತೀಯ ಸ್ಥಾನ ಗಳಿಸಿದ ಅಭ್ಯರ್ಥಿಗಳ ಹೆಸರು, ಪಕ್ಷ, ಗಳಿಸಿದ ಮತ ಹಾಗೂ ಅದರ ಶೇಕಡಾವಾರು ಪ್ರಮಾಣವನ್ನು ಒದಗಿಸಲಾಗಿದ್ದು, ಜೊತೆಗೆ ಎರಡು ಸ್ಥಾನ ಪಡೆದ ಪಕ್ಷ, ಗಳಿಸಿದ ಮತ ಹಾಗೂ ಅದರ ಶೇಕಡಾವಾರು ಪ್ರಮಾಣಗಳನ್ನಷ್ಟೇ ನೀಡಲಾಗಿದೆ. ಇನ್ನೂ ಹೆಚ್ಚಿನ ವಿವರ ಬೆಂಗಳೂರಿನಲ್ಲಿರುವ ಚುನಾವಣಾ ಆಯೋಗದ ಕಛೇರಿಯಲ್ಲಿ ಲಭಿಸುತ್ತದೆ.

**ತುಮಕೂರು ಲೋಕಸಭಾ ಚುನಾವಣೆ ಫಲಿತಾಂಶಗಳು ೧೯೫೨ - ೨೦೧೪**

| ಕ್ಷೇತ್ರದ ಸಂಖ್ಯೆ ಮತ್ತು ಹೆಸರು | ಅಭ್ಯರ್ಥಿಯ ಹೆಸರು | ಪಕ್ಷ | ಪಡೆದ ಮತಗಳು | ಶೇಕಡಾವಾರು |
|---|---|---|---|---|
| | **ಲೋಕಸಭೆ-೧೯೫೨** | | | |
| ತುಮಕೂರು-೨ | ೧. ಸಿ.ಆರ್.ಬಸಪ್ಪ (ಆಯ್ಕೆ)<br>೨. ಖಾದ್ರಿ ಶಾಮಣ್ಣ | ಭಾ.ರಾ.ಕಾ.<br>ಸ.ಪ. | ೧೧೬೪೯೬<br>೪೭೫೫೬ | ೫೨.೧೭<br>೨೧.೩೭ |
| | **೧೯೫೭ರ ಲೋಕಸಭೆ** | | | |
| ತುಮಕೂರು-೨ | ೧. ಎಂ.ವಿ.ಕೃಷ್ಣಪ್ಪ (ಆಯ್ಕೆ)<br>೨. ಬಿ.ಪಿ.ಗಂಗಾಧರಯ್ಯ | ಭಾ.ರಾ.ಕಾ.<br>ಪ್ರ.ಸ.ಪ. | ೧೧೬೮೫೩<br>೫೨೪೭೫ | ೫೦.೨೦<br>೨೭.೦೨ |
| | **೧೯೬೨ರ ಲೋಕಸಭೆ** | | | |
| ತುಮಕೂರು-೨ | ೧. ಎಂ.ವಿ.ಕೃಷ್ಣಪ್ಪ (ಆಯ್ಕೆ)<br>೨. ಕೆ.ಎನ್.ಶಂಕರಲಿಂಗಪ್ಪ | ಭಾ.ರಾ.ಕಾ.<br>ಪ್ರ.ಸ.ಪ. | ೧೧೯೬೧೭<br>೭೦೭೨೪ | ೪೭.೪೮<br>೨೮.೦೭ |

| | | | | |
|---|---|---|---|---|
| | **ಉಪಚುನಾವಣೆ ೧೯೬೨**<br>**ಎಂ.ವಿ.ಕೃಷ್ಣಪ್ಪ ರಾಜಿನಾಮೆಯಿಂದ** | | | |
| ತುಮಕೂರು–೨ | ೧. ಅಜಿತ್‌ಪ್ರಸಾದ್ ಜೈನ್<br>೨. ಎಂ.ಬುಡ್ಡಾದಾಸ್ | ಭಾ.ರಾ.ಕಾ.<br>ಪ್ರ.ಸ.ಪ. | ೮೩೧೫೧<br>೩೬೬೩೩ | ೬೭.೪೫<br>೨೯.೭೨ |
| | **೧೯೬೭ರ ಲೋಕಸಭೆ** | | | |
| ತುಮಕೂರು–೭ | ೧. ಕೆ.ಲಕ್ಕಪ್ಪ (ಆಯ್ಕೆ)<br>೨. ಸಿ.ಆರ್.ಬಸಪ್ಪ | ಪ್ರ.ಸ.ಪ.<br>ಭಾ.ರಾ.ಕಾ. | ೧೧೫೩೧೨<br>೧೧೫೦೫೧ | ೪೨.೯೦<br>೪೨.೮೧ |
| | **೧೯೭೧ರ ಲೋಕಸಭೆ** | | | |
| ತುಮಕೂರು–೭ | ೧. ಕೆ.ಲಕ್ಕಪ್ಪ (ಆಯ್ಕೆ)<br>೨. ಎಂ.ಆರ್.ರಾಮಣ್ಣ | ರಾ.ಕಾ.(ಜೆ)<br>ಭಾ.ರಾ.ಕಾ | ೨೪೦೭೧೮<br>೭೮೯೩೯ | ೭೪.೪೮<br>೨೪.೪೩ |
| | **೧೯೭೭ರ ಲೋಕಸಭೆ** | | | |
| ತುಮಕೂರು–೮ | ೧. ಕೆ.ಲಕ್ಕಪ್ಪ (ಆಯ್ಕೆ)<br>೨. ಎಸ್.ಮಲ್ಲಿಕಾರ್ಜುನಯ್ಯ | ಭಾ.ರಾ.ಕಾ.<br>ಭಾ.ಲೋ.ದ | ೨೩೭೦೮೬<br>೧೭೦೨೬೯ | ೫೭.೬೫<br>೪೧.೪೧ |
| | **೧೯೮೦ರ ಲೋಕಸಭೆ** | | | |
| ತುಮಕೂರು–೮ | ೧. ಕೆ.ಲಕ್ಕಪ್ಪ (ಆಯ್ಕೆ)<br>೨. ಎಸ್.ಮಲ್ಲಿಕಾರ್ಜುನಯ್ಯ | ಭಾ.ರಾ.ಕಾ<br>ಜ.ಪ. | ೨೪೩೨೨೯<br>೧೨೬೧೬೮ | ೫೫.೪೬<br>೨೮.೭೭ |
| | **೧೯೮೪ರ ಲೋಕಸಭೆ** | | | |
| ತುಮಕೂರು–೮ | ೧. ಜಿ.ಎಸ್.ಬಸವರಾಜು (ಆಯ್ಕೆ)<br>೨. ವೈ.ಕೆ.ರಾಮಯ್ಯ | ಭಾ.ರಾ.ಕಾ<br>ಜೆ.ಎನ್.ಪಿ | ೨೬೫೨೪೯<br>೨೩೪೮೩೯ | ೫೦.೯೯<br>೪೫.೧೫ |
| | **೧೯೮೯ರ ಲೋಕಸಭೆ** | | | |
| ತುಮಕೂರು–೮ | ೧. ಜಿ.ಎಸ್.ಬಸವರಾಜು (ಆಯ್ಕೆ)<br>೨. ವೈ.ಕೆ.ರಾಮಯ್ಯ | ಭಾ.ರಾ.ಕಾ.<br>ಜ.ಪ | ೩೭೬೮೭೮<br>೧೭೭೭೪೦ | ೫೫.೦೯<br>೨೬.೩೭ |
| | **೧೯೯೧ರ ಲೋಕಸಭೆ** | | | |
| ತುಮಕೂರು–೮ | ೧.ಎಸ್.ಮಲ್ಲಿಕಾರ್ಜುನಯ್ಯ(ಆಯ್ಕೆ)<br>೨. ಜಿ.ಎಸ್.ಬಸವರಾಜು | ಭಾ.ಜ.ಪ.<br>ಭಾ.ರಾ.ಕಾ | ೨೫೫೧೮೬<br>೨೩೬೨೬೯ | ೪೩.೨೯<br>೪೦.೦೮ |
| | **೧೯೯೬ರ ಲೋಕಸಭೆ** | | | |
| ತುಮಕೂರು–೮ | ೧. ಸಿ.ಎನ್.ಭಾಸ್ಕರಪ್ಪ (ಆಯ್ಕೆ)<br>೨. ಎಸ್.ಮಲ್ಲಿಕಾರ್ಜುನಯ್ಯ | ಜೆ.ಡಿ.<br>ಭಾ.ಜ.ಪ. | ೧೯೨೨೨೮<br>೧೭೬೫೧೬ | ೨೮.೬೦<br>೨೬.೨೬ |
| | **೧೯೯೮ರ ಲೋಕಸಭೆ** | | | |
| ತುಮಕೂರು–೮ | ೧.ಎಸ್.ಮಲ್ಲಿಕಾರ್ಜುನಯ್ಯ(ಆಯ್ಕೆ)<br>೨. ಆರ್.ನಾರಾಯಣ | ಭಾ.ಜ.ಪ.<br>ಭಾ.ರಾ.ಕಾ | ೩೨೭೩೧೨<br>೨೫೬೧೨೫ | ೪೫.೫೦<br>೩೫.೬೦ |
| | **೧೯೯೯ರ ಲೋಕಸಭೆ** | | | |
| ತುಮಕೂರು–೮ | ೧. ಜಿ.ಎಸ್.ಬಸವರಾಜು (ಆಯ್ಕೆ)<br>೨. ಎಸ್.ಮಲ್ಲಿಕಾರ್ಜುನಯ್ಯ | ಭಾ.ರಾ.ಕಾ<br>ಬಿ.ಜೆ.ಪಿ | ೩೧೮೯೨೨<br>೨೫೪೯೮೫ | ೪೧.೨೧<br>೩೨.೯೫ |
| | **೨೦೦೪ರ ಲೋಕಸಭೆ** | | | |

| | | | | |
|---|---|---|---|---|
| ತುಮಕೂರು–೮ | ೧. ಎಸ್. ಮಲ್ಲಿಕಾರ್ಜುನಯ್ಯ(ಆಯ್ಕೆ)<br>೨. ಡಿ.ಎಲ್.ಜಗದೀಶ್ | ಬಿ.ಜೆ.ಪಿ<br>ಜೆ.ಡಿ.ಎಸ್ | ೩೦೩೦೧೬<br>೩೦೦೬೬೫ | ೩೫.೦೮<br>೩೪.೮೧ |
| | **೨೦೦೯ರ ಲೋಕಸಭೆ** | | | |
| ತುಮಕೂರು–೮ | ೧. ಜಿ.ಎಸ್.ಬಸವರಾಜು(ಆಯ್ಕೆ)<br>೨. ಎಸ್.ಪಿ.ಮುದ್ದಹನುಮೇಗೌಡ. | ಬಿ.ಜೆ.ಪಿ<br>ಜೆ.ಡಿ.ಎಸ್. | ೩೩೧೦೬೪<br>೩೦೯೬೧೯ | ೩೬.೭೯<br>೩೪.೪೧ |
| | **೨೦೧೪ ರ ಲೋಕಸಭೆ** | | | |
| ತುಮಕೂರು–೮ | ೧. ಎಸ್.ಪಿ.ಮುದ್ದಹನುಮೇಗೌಡ.<br>೨. ಜಿ.ಎಸ್.ಬಸವರಾಜು | ಐ.ಎನ್.ಸಿ<br>ಬಿ.ಜೆ.ಪಿ | ೪೨೯೮೬೮<br>೩೫೫೮೨೯ | |

**ಸೂಚನೆ:** ಭಾ.ರಾ.ಕಾ: ಭಾರತೀಯ ರಾಷ್ಟ್ರೀಯ ಕಾಂಗ್ರೆಸ್; ಸ.ಪ: ಸಮಾಜವಾದಿ ಪಕ್ಷ; ಭಾ.ಲೋ.ದ: ಭಾರತೀಯ ಲೋಕದಳ: ಪ್ರ.ಸ.ಪ; ಪ್ರಜಾ ಸಮಾಜವಾದಿ ಪಕ್ಷ: ರಾ.ಕಾ.(ಜೆ); ರಾಷ್ಟ್ರೀಯ ಕಾಂಗ್ರೆಸ್(ಜೆ); ಜ.ಪ: ಜನತಾ ಪಕ್ಷ; ಜೆ.ಡಿ: ಜನತಾ ದಳ; ಭಾ.ಜ.ಪ: ಭಾರತೀಯ ಜನತಾ ಪಕ್ಷ;ಜೆ.ಡಿ.ಎಸ್; ಜನತಾ ದಳ(ಜಾ).

## ತುಮಕೂರು ವಿಧಾನಸಭಾ ಚುನಾವಣೆ ಪಕ್ಷಿನೋಟ (೧೯೫೨–೨೦೧೩)

## ವಿಧಾನಸಭಾ ಚುನಾವಣೆ ಫಲಿತಾಂಶ – ೧೯೫೨

| ಕ್ಷೇತ್ರದ ಸಂಖ್ಯೆ ಮತ್ತು ಹೆಸರು | ಅಭ್ಯರ್ಥಿ | ಪಕ್ಷ | ಪಡೆದ ಮತಗಳು | ಶೇಕಡಾವಾರು |
|---|---|---|---|---|
| ೧೦ – ಪಾವಗಡ (ದ್ವಿ–ಸದಸ್ಯ) | ೧. ಸಿ.ಟಿ.ಹನುಮಂತಯ್ಯ (ಆಯ್ಕೆ)<br>೨. ಮಾಲಿಮರಿಯಪ್ಪ (ಆಯ್ಕೆ)<br>೩. ಬಿ.ನಾರಾಯಣನಾಯ್ಕ<br>೪. ಪಿ.ಆರ್.ಮಾಧವರಾವ್ | ಭಾ.ರಾ.ಕಾ.<br>ಭಾ.ರಾ.ಕಾ.<br>ಕಿ.ಮ.ಪ್ರ.ಪ.<br>ಸ.ಪ. | ೨೪೩೩೨<br>೨೨೮೮೩<br>೮೪೯೦<br>೮೧೦೫ | ೩೧.೫೧<br>೨೯.೬೪<br>೧೧.೦೦<br>೧೦.೫೦ |
| ೧೧ – ಮಧುಗಿರಿ (ದ್ವಿ–ಸದಸ್ಯ) | ೧. ಆರ್. ಚನ್ನಿಗರಾಮಯ್ಯ (ಆಯ್ಕೆ)<br>೨. ಮುದ್ದುರಾಮಯ್ಯ (ಆಯ್ಕೆ)<br>೩. ಸಿ.ಜೆ. ಮುಕ್ಕಣ್ಣಪ್ಪ<br>೪. ಕೆ. ಭೀಮಯ್ಯ | ಭಾ.ರಾ.ಕಾ.<br>ಭಾ.ರಾ.ಕಾ.<br>ಸ್ವ.ಅ.<br>ಸ.ಪ. | ೧೭೫೯೦<br>೧೬೦೬೭<br>೧೦೨೫೭<br>೮೧೬೩ | ೨೨.೦೮<br>೨೦.೧೭<br>೧೨.೮೮<br>೧೦.೨೫ |
| ೧೨ ಹುಲಿಯೂರುದುರ್ಗ | ೧. ಹುಚ್ಚಮಾಸ್ತಿ ಗೌಡ.ಎನ್. (ಆಯ್ಕೆ)<br>೨. ರೇವಣ್ಣಗೌಡ | ಭಾ.ರಾ.ಕಾ.<br>ಕಿ.ಮ.ಪ್ರ.ಪ. | ೧೪೮೬೩<br>೫೮೬೪ | ೬೧.೨೮<br>೨೪.೧೭ |
| ೧೩ – ಕುಣಿಗಲ್ | ೧. ಟಿ.ಎನ್.ಮೂಡ್ಲಗಿರಿಗೌಡ (ಆಯ್ಕೆ)<br>೨. ಬಿ.ಭೈರಪ್ಪ | ಭಾ.ರಾ.ಕಾ.<br>ಕಿ.ಮ.ಪ್ರ.ಪ. | ೧೧೫೯೮<br>೭೦೮೧ | ೪೩.೫೯<br>೨೬.೬೧ |
| ೧೪ – ತುಮಕೂರು | ೧. ಎಂ.ವಿ.ರಾಮರಾವ್(ಆಯ್ಕೆ)<br>೨. ಟಿ.ಎನ್.ಕೆಂಪಹೊನ್ನಯ್ಯ | ಭಾ.ರಾ.ಕಾ.<br>ಕಿ.ಮ.ಪ್ರ.ಪ. | ೧೩೪೩೪<br>೪೯೭೨ | ೫೩.೩೮<br>೧೯.೭೬ |
| ೧೫ – ಕೊರಟಗೆರೆ | ೧. ಬಿ.ಸಿ.ನಂಜುಂಡಯ್ಯ(ಆಯ್ಕೆ)<br>೨. ಶೆಟ್ಟಿಗೌಡ | ಭಾ.ರಾ.ಕಾ.<br>ಸ್ವ.ಅ. | ೯೫೫೩<br>೪೧೩೮ | ೪೪.೧೯<br>೧೯.೧೪ |
| ೧೬ – ಶಿರಾ | ೧. ಬಿ.ಎನ್.ರಾಮೇಗೌಡ(ಆಯ್ಕೆ)<br>೨. ಟಿ.ತಾರೇಗೌಡ | ಸ್ವ.ಅ.<br>ಭಾ.ರಾ.ಕಾ. | ೧೧೩೮೭<br>೧೦೪೦೧ | ೪೧.೬೧<br>೩೮.೦೧ |
| ೧೭ – ಗುಬ್ಬಿ | ೧. ಸಿ.ಎಂ.ಅಣ್ಣಯ್ಯಪ್ಪ(ಆಯ್ಕೆ)<br>೨. ಎನ್.ಚನ್ನಪ್ಪ | ಭಾ.ರಾ.ಕಾ.<br>ಸ.ಪ. | ೮೧೭೧<br>೬೫೭೮ | ೩೩.೬೦<br>೨೭.೦೫ |
| ೧೮ – ತುರುವೇಕೆರೆ | ೧. ಬಿ.ಹುಚ್ಚೇಗೌಡ(ಆಯ್ಕೆ)<br>೨. ಟಿ.ಸುಬ್ರಮಣ್ಯಂ | ಕಿ.ಮ.ಪ್ರ.ಪ ಭಾ.<br>ರಾ.ಕಾ. | ೧೦೬೦೩<br>೯೮೨೩ | ೩೮.೧೮<br>೩೫.೩೭ |

| | | | | |
|---|---|---|---|---|
| ೧೯ – ತಿಪಟೂರು | ೧. ಟಿ.ಜಿ.ತಿಮ್ಮೇಗೌಡ(ಆಯ್ಕೆ)<br>೨. ಡಿ.ಎಂ.ಚಂದ್ರಶೇಖರ | ಭಾ.ರಾ.ಕಾ.<br>ಸ್ವ.ಅ. | ೯೯೮೦<br>೬೫೯೭ | ೩೮.೯೭<br>೨೫.೭೬ |
| ೨೦ – ಚಿಕ್ಕನಾಯಕನಹಳ್ಳಿ | ೧. ಸಿ.ಹೆಚ್.ಲಿಂಗದೇವರು(ಆಯ್ಕೆ)<br>೨. ಕೆ.ಬಿ.ಮರಿಯಪ್ಪ | ಭಾ.ರಾ.ಕಾ.<br>ಸ್ವ.ಅ. | ೧೧೧೪೨<br>೮೬೪೫ | ೪೨.೮೭<br>೩೩.೫೭ |

**ಸೂಚನೆ:** ಭಾ.ರಾ.ಕಾ: ಭಾರತೀಯ ರಾಷ್ಟ್ರೀಯ ಕಾಂಗ್ರೆಸ್; ಸ.ಪ: ಸಮಾಜವಾದಿ ಪಕ್ಷ; ಕಿ.ಮ.ಪ್ರ.ಪ: ಕಿಸಾನ್ ಮಜ್ದೂರ್ ಪ್ರಜಾಪಕ್ಷ; ಪ್ರ.ಸ.ಪ; ಪ್ರಜಾ ಸಮಾಜವಾದಿ ಪಕ್ಷ: ರಾ.ಕಾ.(ಜೆ); ರಾಷ್ಟ್ರೀಯ ಕಾಂಗ್ರೆಸ್(ಜೆ); ಜ.ಪ: ಜನತಾ ಪಕ್ಷ; ಜೆ.ಡಿ: ಜನತಾ ದಳ; ಭಾ.ಜ.ಪ: ಭಾರತೀಯ ಜನತಾ ಪಕ್ಷ; ಜೆ.ಡಿ.ಎಸ್; ಜನತಾ ದಳ(ಜಾ); ಸ್ವ.ಅ: ಸ್ವತಂತ್ರ ಅಭ್ಯರ್ಥಿ.

## ವಿಧಾನಸಭಾ ಚುನಾವಣೆ ಫಲಿತಾಂಶ – ೧೯೫೭

| ಕ್ಷೇತ್ರದ ಸಂಖ್ಯೆ ಮತ್ತು ಹೆಸರು | ಅಭ್ಯರ್ಥಿ | ಪಕ್ಷ | ಪಡೆದ ಮತಗಳು | ಶೇಕಡಾವಾರು |
|---|---|---|---|---|
| ೧೧೫ – ತುರುವೇಕೆರೆ | ೧. ಟಿ.ಸುಬ್ರಮಣ್ಯಂ (ಆಯ್ಕೆ)<br>೨. ಡಿ.ಶಿವಲಿಂಗೇಗೌಡ | ಭಾ.ರಾ.ಕಾ.<br>ಪ್ರ.ಸ.ಪ. | ೧೯೩೧೩<br>೧೨೦೧೦ | ೬೧.೬೫<br>೩೮.೩೫ |
| ೧೧೬ – ತಿಪಟೂರು | ೧. ಕೆ.ಪಿ.ರೇವಣಸಿದ್ದಪ್ಪ(ಆಯ್ಕೆ)<br>೨. ಟಿ.ಜಿ.ತಿಮ್ಮೇಗೌಡ | ಪ್ರ.ಸ.ಪ.<br>ಭಾ.ರಾ.ಕಾ. | ೧೬೦೬೩<br>೧೨೦೨೬ | ೫೭.೧೮<br>೪೨.೮೨ |
| ೧೧೭ – ಚಿಕ್ಕನಾಯಕನಹಳ್ಳಿ | ೧.ಸಿ.ಕೆ.ರಾಜಯ್ಯಶೆಟ್ಟಿ(ಆಯ್ಕೆ)<br>೨.ಸಿ.ಹೆಚ್.ಲಿಂಗದೇವರು | ಪ್ರ.ಸ.ಪ.<br>ಭಾ.ರಾ.ಕಾ. | ೧೪೮೫೬<br>೧೨೦೧೦ | ೫೮.೯೩<br>೪೧.೧೮ |
| ೧೧೮ – ಶಿರಾ (ದ್ವಿ-ಸದಸ್ಯ) | ೧. ಟಿ.ತಾರೇಗೌಡ (ಆಯ್ಕೆ)<br>೨.ಪಿ.ಆಂಜನಪ್ಪ (ಎಸ್.ಸಿ)(ಆಯ್ಕೆ)<br>೩. ದೇವಣಂ ವಿ ಸತ್ಯನಾರಾಯಣ<br>೪. ಎಂ.ಚಂದ್ರಶೇಖರಯ್ಯ | ಭಾ.ರಾ.ಕಾ.<br>ಭಾ.ರಾ.ಕಾ.<br>ಸ್ವ.ಅ.<br>ಬಿ.ಜೆ.ಎಸ್. | ೩೩೧೯೫<br>೨೫೯೨೬<br>೭೦೨೨<br>೬೯೨೬ | ೩೮.೧೨<br>೨೮.೬೩<br>೮.೦೭<br>೭.೯೫ |
| ೧೧೯ – ಗುಬ್ಬಿ | ೧. ಸಿ.ಜೆ.ಮುಕ್ಕಣ್ಣಪ್ಪ(ಆಯ್ಕೆ)<br>೨. ಗಟ್ಟಿ ರೇವಣ್ಣ | ಸ್ವ.ಅ.<br>ಭಾ.ರಾ.ಕಾ. | ೮೫೨೧<br>೬೯೭೨ | ೩೨.೧೫<br>೨೬.೩೧ |
| ೧೨೦ – ಚಂದ್ರಶೇಖರಪುರ | ೧.ಎನ್.ಹುಚ್ಚಮಾಸ್ತಿಗೌಡ(ಆಯ್ಕೆ)<br>೨. ಜಿ.ತಮ್ಮಣ್ಣ | ಭಾ.ರಾ.ಕಾ.<br>ಸ್ವ.ಅ. | ೯೪೭೮<br>೫೯೪೦ | ೩೭.೭೯<br>೨೩.೮೨ |
| ೧೨೧ – ಕುಣಿಗಲ್ | ೧.ಟಿ.ಎನ್.ಮೂಡ್ಲಗಿರಿಗೌಡ(ಆಯ್ಕೆ)<br>೨. ಅಂದಾನಯ್ಯ | ಭಾ.ರಾ.ಕಾ.<br>ಸ್ವ.ಅ. | ೮೩೭೧<br>೬೯೧ | ೩೩.೩೮<br>೨೮.೩೮ |
| ೧೨೨ – ತುಮಕೂರು | ೧. ಜಿ.ಎನ್.ಪುಟ್ಟಣ್ಣ(ಆಯ್ಕೆ)<br>೨. ಎಂ.ವಿ.ರಾಮರಾವ್ | ಪ್ರ.ಸ.ಪ.<br>ಭಾ.ರಾ.ಕಾ. | ೧೪೦೫೫<br>೧೨೪೮೬ | ೫೯.೯೪<br>೪೪.೩೭ |
| ೧೨೩ – ಹೆಬ್ಬೂರು | ೧. ಕೆ.ಎಲ್. ನರಸಿಂಹಯ್ಯ(ಆಯ್ಕೆ)<br>೨. ಕೆ.ಲಕ್ಕಪ್ಪ | ಭಾ.ರಾ.ಕಾ.<br>ಪ್ರ.ಸ.ಪ. | ೧೭೮೮೨<br>೧೦೪೯೧ | ೬೩.೨೧<br>೩೬.೭೯ |
| ೧೨೪ – ಮಧುಗಿರಿ (ದ್ವಿ-ಸದಸ್ಯ) | ೧. ಮಾಲಿ ಮರಿಯಪ್ಪ(ಆಯ್ಕೆ)<br>೨. ಆರ್.ಚನ್ನಿಗರಾಮಯ್ಯ(ಆಯ್ಕೆ)<br>೩. ಟಿ.ಎಸ್.ಶಿವಣ್ಣ<br>೪. ಎಸ್.ಆಂಜಯ್ಯ (ಎಸ್ಸಿ) | ಭಾ.ರಾ.ಕಾ.<br>ಭಾ.ರಾ.ಕಾ.<br>ಪ್ರ.ಸ.ಪ.<br>ಪ್ರ.ಸ.ಪ. | ೨೬೮೦೭<br>೨೫೧೯೫<br>೨೨೫೦೧<br>೨೦೬೮೨ | ೨೮.೧೯<br>೨೬.೫೯<br>೨೩.೬೭<br>೨೧.೭೫ |

**ಬಿ.ಜೆ.ಎಸ್: ಭಾರತೀಯ ಜನಸಂಘ**

## ವಿಧಾನಸಭಾ ಚುನಾವಣೆ ಫಲಿತಾಂಶ – ೧೯೬೨

| ಕ್ಷೇತ್ರದ ಸಂಖ್ಯೆ ಮತ್ತು ಹೆಸರು | ಅಭ್ಯರ್ಥಿ | ಪಕ್ಷ | ಪಡೆದ ಮತಗಳು | ಶೇಕಡಾವಾರು |
|---|---|---|---|---|
| ೧೩೬ – ತುರುವೇಕೆರೆ | ೧. ಬಿ.ಹುಚ್ಚೇಗೌಡ(ಆಯ್ಕೆ)<br>೨. ಟಿ.ಸುಬ್ರಮಣ್ಯಂ | ಪ್ರ.ಸ.ಪ.<br>ಭಾ.ರಾ.ಕಾ. | ೧೮೬೯೫<br>೧೫೬೧೫ | ೫೪.೪೯<br>೪೫.೫೧ |
| ೧೩೭ – ತಿಪಟೂರು | ೧. ಕೆ.ಪಿ.ರೇವಣ್ಣಸಿದ್ದಪ್ಪ(ಆಯ್ಕೆ)<br>೨. ಎಂ.ಎಸ್.ನೀಲಕಂಠಸ್ವಾಮಿ | ಪ್ರ.ಸ.ಪ.<br>ಭಾ.ರಾ.ಕಾ. | ೧೭೭೫೪<br>೧೩೪೮೪ | ೫೬.೮೩<br>೪೩.೧೭ |
| ೧೩೮ – ಚಿಕ್ಕನಾಯಕನಹಳ್ಳಿ | ೧.ಸಿ.ಹೆಚ್.ಲಿಂಗದೇವರು(ಆಯ್ಕೆ)<br>೨. ಸಿ.ಎಸ್.ಅನಂತಯ್ಯ | ಭಾ.ರಾ.ಕಾ.<br>ಪ್ರ.ಸ.ಪ. | ೧೬೪೭೩<br>೯೩೭೧ | ೫೩.೪೦<br>೩೦.೪೩ |
| ೧೩೯ – ಶಿರಾ | ೧. ಸಿ.ಜೆ.ಮುಕ್ಕಣ್ಣಪ್ಪ(ಆಯ್ಕೆ)<br>೨. ಮಾಲಿಮರಿಯಪ್ಪ | ಸ್ವ.ಅ.<br>ಭಾ.ರಾ.ಕಾ. | ೨೧೭೪೬<br>೧೮೦೦೨ | ೫೩.೨೫<br>೪೪.೦೮ |
| ೧೪೦–ಪಾವಗಡ (ಎಸ್.ಸಿ) | ೧. ಆರ್.ಕೆಂಚಪ್ಪ(ಆಯ್ಕೆ)<br>೨.ಎನ್.ಬಿ.ಹನುಮಂತರಾಯಪ್ಪ | ಭಾ.ರಾ.ಕಾ.<br>ಪ್ರ.ಸ.ಪ. | ೧೨೯೭೬<br>೭೪೭೮ | ೫೫.೩೨<br>೩೧.೮೮ |
| ೧೪೧ – ಗುಬ್ಬಿ | ೧. ವಿ.ಎಂ.ಡಿಯೋ(ಆಯ್ಕೆ)<br>೨. ಆರ್.ಎಸ್.ಆರಾಧ್ಯ | ಸ್ವ.ಅ.<br>ಭಾ.ರಾ.ಕಾ. | ೧೦೪೨೦<br>೯೮೯೬ | ೩೫.೨೨<br>೩೩.೪೫ |
| ೧೪೨ – ಚಂದ್ರಶೇಖರಪುರ | ೧.ಎನ್.ಹುಚ್ಚಮಾಸ್ತಿಗೌಡ(ಆಯ್ಕೆ)<br>೨. ಜಿ.ತಮ್ಮಣ್ಣ | ಭಾ.ರಾ.ಕಾ.<br>ಸ್ವತಂತ್ರ | ೧೪೦೧೨<br>೧೩೧೩೮ | ೩೭.೨೮<br>೩೪.೯೫ |
| ೧೪೩ – ಕುಣಿಗಲ್ | ೧. ಅಂದಾನಯ್ಯ(ಆಯ್ಕೆ)<br>೨. ಟಿ.ಎನ್.ಮೂಡ್ಲಗಿರಿಗೌಡ | ಸ್ವತಂತ್ರ<br>ಭಾ.ರಾ.ಕಾ. | ೧೭೪೧೦<br>೯೧೬೫ | ೫೧.೯೦<br>೨೭.೩೨ |
| ೧೪೪ – ಹೆಬ್ಬೂರು | ೧. ಕೆ.ಲಕ್ಕಪ್ಪ(ಆಯ್ಕೆ)<br>೨. ಕೆ.ಎಲ್.ನರಸಿಂಹಯ್ಯ | ಪ್ರ.ಸ.ಪ.<br>ಭಾ.ರಾ.ಕಾ. | ೨೧೮೨೨<br>೧೮೧೪೦ | ೫೪.೬೧<br>೪೫.೩೯ |
| ೧೪೫ – ತುಮಕೂರು | ೧. ಜಿ.ಸಿ.ಭಾಗೀರತಮ್ಮ(ಆಯ್ಕೆ)<br>೨.ಟಿ.ಎಸ್.ಮಲ್ಲಿಕಾರ್ಜುನಯ್ಯ | ಭಾ.ರಾ.ಕಾ.<br>ಸ್ವತಂತ್ರ | ೧೫೧೭೮<br>೧೦೯೧೯ | ೪೮.೬೩<br>೩೪.೯೯ |
| ೧೪೬–ಕೊರಟಗೆರೆ(ಎಸ್.ಸಿ) | ೧.ಆರ್.ಚನ್ನಿಗರಾಮಯ್ಯ(ಆಯ್ಕೆ)<br>೨. ಎಸ್.ಆಂಜನೇಯ | ಭಾ.ರಾ.ಕಾ..<br>ಪ್ರ.ಸ.ಪ. | ೯೦೫೩<br>೮೮೮೫ | ೪೬.೬೯<br>೪೫.೮೨ |
| ೧೪೭ – ಮಧುಗಿರಿ | ೧. ಟಿ.ಎಸ್.ಶಿವಣ್ಣ(ಆಯ್ಕೆ)<br>೨. ಜಿ.ಟಿ.ಗೋವಿಂದರೆಡ್ಡಿ | ಪ್ರ.ಸ.ಪ.<br>ಭಾ.ರಾ.ಕಾ. | ೧೯೦೮೩<br>೧೫೪೯೨ | ೫೧.೬೩<br>೪೧.೯೨ |

## ಆರ್.ಚನ್ನಿಗರಾಮಯ್ಯನವರ ರಾಜೀನಾಮೆಯಿಂದ ಉಪ ಚುನಾವಣೆ ಫಲಿತಾಂಶ–ಏಪ್ರಿಲ್ ೧೯೬೩ರಲ್ಲಿ

| ಕ್ಷೇತ್ರದ ಸಂಖ್ಯೆ ಮತ್ತು ಹೆಸರು | ಅಭ್ಯರ್ಥಿ | ಪಕ್ಷ | ಪಡೆದ ಮತಗಳು | ಶೇಕಡಾವಾರು |
|---|---|---|---|---|
| ೧೪೬ – ಕೊರಟಗೆರೆ | ೧. ಎಸ್.ಆಂಜನೇಯ(ಆಯ್ಕೆ)<br>೨.ಹೆಚ್.ಎಂ.ಗಂಗಾಧರಯ್ಯ | ಪ್ರ.ಸ.ಪ.<br>ಭಾ.ರಾ.ಕಾ. | ೧೨೫೯೪<br>೧೧೬೦೨ | ೫೨.೦೫<br>೪೭.೯೫ |

## ಬಿ.ಹುಚ್ಚೇಗೌಡರ ಮರಣದಿಂದ ಉಪ ಚುನಾವಣೆ ಫಲಿತಾಂಶ–ಡಿಸೆಂಬರ್ ೧೯೬೩

| ಕ್ಷೇತ್ರದ ಸಂಖ್ಯೆ ಮತ್ತು ಹೆಸರು | ಅಭ್ಯರ್ಥಿ | ಪಕ್ಷ | ಪಡೆದ ಮತಗಳು | ಶೇಕಡಾವಾರು |
|---|---|---|---|---|
| ೧೩೬ – ತುರುವೇಕೆರೆ | ೧. ಬಿ.ಭೈರಪ್ಪಾಜಿ(ಆಯ್ಕೆ)<br>೨.ಬಿ.ಹೆಚ್.ಪದ್ಮಾವತಿ | ಪ್ರ.ಸ.ಪ.<br>ಭಾ.ರಾ.ಕಾ. | ೨೦೨೮೯<br>೧೩೨೩೮ | ೬೦.೫೨<br>೩೯.೪೮ |

## ವಿಧಾನಸಭಾ ಚುನಾವಣೆ ಫಲಿತಾಂಶ – ೧೯೬೭

| ಕ್ಷೇತ್ರದ ಸಂಖ್ಯೆ ಮತ್ತು ಹೆಸರು | ಅಭ್ಯರ್ಥಿ | ಪಕ್ಷ | ಪಡೆದ ಮತಗಳು | ಶೇಕಡಾವಾರು |
|---|---|---|---|---|
| ೪೮ – ಪಾವಗಡ (ಎಸ್.ಸಿ) | ೧. ಪಿ.ಆಂಜನಪ್ಪ(ಆಯ್ಕೆ)<br>೨. ರಾಮಪ್ಪ | ಭಾ.ರಾ.ಕಾ.<br>ಸ್ವ.ಅ. | ೧೯೩೨೧<br>೧೫೮೮೯ | ೫೩.೪೮<br>೪೩.೯೮ |
| ೪೯ – ಶಿರಾ | ೧.ಬಿ.ಎನ್.ರಾಮೇಗೌಡ(ಆಯ್ಕೆ)<br>೨. ಬಿ.ಪುಟ್ಟಕಾಮಯ್ಯ | ಭಾ.ರಾ.ಕಾ.<br>ಸ್ವ.ಅ. | ೧೬೩೫೬<br>೭೨೪೨ | ೪೪.೬೫<br>೧೯.೭೭ |
| ೫೦ – ಕಳ್ಳಂಬೆಳ್ಳ | ೧. ಬಿ.ಗಂಗಣ್ಣ(ಆಯ್ಕೆ)<br>೨. ಜಿ.ಮರುಳಪ್ಪ | ಭಾ.ರಾ.ಕಾ.<br>ಸ್ವ.ಅ. | ೧೬೧೭೬<br>೮೦೧೫ | ೪೯.೬೯<br>೨೪.೮೭ |
| ೫೧ – ಗುಬ್ಬಿ | ೧. ಚಿಕ್ಕೇಗೌಡ(ಆಯ್ಕೆ)<br>೨. ಬಿ.ಜಿ.ಭಗವಾನ್ | ಭಾ.ರಾ.ಕಾ..<br>ಪ್ರ.ಸ.ಪ. | ೧೧೯೬೨<br>೧೧೩೧೧ | ೩೫.೩೦<br>೩೩.೩೭ |
| ೫೨ – ಚಿಕ್ಕನಾಯಕನಹಳ್ಳಿ | ೧. ಸಿ.ಕೆ.ರಾಜಯ್ಯಶೆಟ್ಟಿ(ಆಯ್ಕೆ)<br>೨. ಸಿ.ಹೆಚ್.ಲಿಂಗದೇವರು | ಪ್ರ.ಸ.ಪ.<br>ಭಾ.ರಾ.ಕಾ. | ೧೭೨೨೦<br>೧೬೮೫೨ | ೪೭.೧೬<br>೪೬.೧೪ |
| ೫೩ – ತಿಪಟೂರು | ೧.ಎಂ.<br>ಎಸ್.ನೀಲಕಂಠಸ್ವಾಮಿ(ಆಯ್ಕೆ)<br>೨. ವಿ.ಎಲ್.ಶಿವಪ್ಪ | ಭಾ.ರಾ.ಕಾ.<br>ಸ್ವ.ಅ. | ೧೯೦೫೬<br>೧೧೬೯ | ೪೬.೨೯<br>೨೮.೪೨ |
| ೫೪ – ತುರುವೇಕೆರೆ | ೧. ಎಂ.ಎನ್.ರಾಮಣ್ಣ(ಆಯ್ಕೆ)<br>೨. ಬಿ.ಭೈರಪ್ಪಾಜಿ | ಭಾ.ರಾ.ಕಾ.<br>ಪ್ರ.ಸ.ಪ. | ೧೮೦೨೨<br>೧೭೦೬೫ | ೪೬.೩೧<br>೪೩.೮೫ |
| ೫೫ – ಕುಣಿಗಲ್ | ೧. ಜಿ.ತಮ್ಮಣ್ಣ(ಆಯ್ಕೆ)<br>೨. ಅಂದಾನಯ್ಯ | ಭಾ.ರಾ.ಕಾ.<br>ಪ್ರ.ಸ.ಪ. | ೧೬೯೩೦<br>೧೧೨೩೮ | ೫೪.೨೫<br>೩೬.೦೧ |
| ೫೬– ಹುಲಿಯೂರುದುರ್ಗ | ೧. ಎನ್.<br>ಹುಚ್ಚಮಾಸ್ತಿಗೌಡ(ಆಯ್ಕೆ)<br>೨. ಡಿ.ಟಿ.ಮಾಯಣ್ಣ | ಸ್ವತಂತ್ರ<br>ಭಾ.ರಾ.ಕಾ. | ೧೫೫೧೨೬<br>೧೫೦೫೦ | ೪೫.೦೮<br>೪೪.೮೫ |
| ೫೭–ಗೂಳೂರು (ಎಸ್.ಸಿ) | ೧. ಗಂಗಾಭೋವಿ(ಆಯ್ಕೆ)<br>೨. ಎಸ್.ಚಿಕ್ಕಸಿದ್ದಯ್ಯ | ಪ್ರ.ಸ.ಪ..<br>ಭಾ.ರಾ.ಕಾ. | ೧೧೯೦೩<br>೭೫೩೧ | ೪೬.೧೫<br>೨೯.೨೦ |
| ೫೮ – ತುಮಕೂರು | ೧. ಬಿ.ಪಿ.ಗಂಗಾಧರ್(ಆಯ್ಕೆ)<br>೨. ಜಿ.ಸಿ.ಭಾಗೀರತಮ್ಮ | ಪ್ರ.ಸ.ಪ.<br>ಭಾ.ರಾ.ಕಾ. | ೧೦೫೪೯<br>೭೯೩೬ | ೪೫.೦೯<br>೩೪.೦೫ |
| ೫೯ – ಕೊರಟಗೆರೆ | ೧. ಟಿ.ಎಸ್.ಶಿವಣ್ಣ(ಆಯ್ಕೆ)<br>೨. ವಿ.ಆಂಜನರೆಡ್ಡಿ | ಭಾ.ರಾ.ಕಾ.<br>ಸ್ವ.ಅ. | ೧೪೫೩೮<br>೭೯೩೮ | ೫೦.೯೫<br>೨೫.೩೮ |
| ೬೦ – ಮಧುಗಿರಿ | ೧. ಜಿ.ಟಿ.ಗೋವಿಂದರೆಡ್ಡಿ(ಆಯ್ಕೆ)<br>೨. ಟಿ.ಹೆಚ್.ಹನುಮಂತರಾಯಪ್ಪ | ಭಾ.ರಾ.ಕಾ.<br>ಸ್ವ.ಅ. | ೧೭೧೮೩<br>೭೦೮೩ | ೫೮.೪೯<br>೨೪.೧೫ |

## ಎಂ.ಎಸ್. ನೀಲಕಂಠಸ್ವಾಮಿರವರ ಮರಣದಿಂದ ಉಪ ಚುನಾವಣೆ ನವೆಂಬರ್ ೧೯೬೭

| ಕ್ಷೇತ್ರ | ಅಭ್ಯರ್ಥಿ | ಪಕ್ಷ | ಪಡೆದ ಮತಗಳು | ಶೇಕಡಾವಾರು |
|---|---|---|---|---|
| ೫೩ – ತಿಪಟೂರು | ೧. ವಿ.ಎಲ್.ಶಿವಪ್ಪ<br>೨. ಟಿ.ಎಂ.ಮಂಜುನಾಥ್ | ಪ್ರ.ಸ.ಪ.<br>ಭಾ.ರಾ.ಕಾ. | ೨೬೭೪೨<br>೧೯೩೨ | ೫೭.೩೦<br>೪೨.೬೯ |

## ವಿಧಾನಸಭಾ ಚುನಾವಣೆ ಫಲಿತಾಂಶ – ೧೯೭೨

| ಕ್ಷೇತ್ರದ ಸಂಖ್ಯೆ ಮತ್ತು ಹೆಸರು | ಅಭ್ಯರ್ಥಿ | ಪಕ್ಷ | ಪಡೆದ ಮತಗಳು | ಶೇಕಡಾವಾರು |
|---|---|---|---|---|
| ೪೮ – ಪಾವಗಡ (ಎಸ್.ಸಿ) | ೧.ಕೆ.ಆರ್.ತಿಮ್ಮರಾಯಪ್ಪ(ಆಯ್ಕೆ)<br>೨. ಪಿ.ಆಂಜನಪ್ಪ | ಭಾ.ರಾ.ಕಾ.<br>ಸ್ವ.ಅ. | ೨೬೨೪೫<br>೪೮೫೩ | ೭೬.೮೪<br>೧೪.೨೧ |

| | | | | |
|---|---|---|---|---|
| ೪೯ – ಶಿರಾ | ೧. ಬಿ.ಪುಟ್ಟಕಾಮಣ್ಣ(ಆಯ್ಕೆ)<br>೨. ಪಿ.ಮೂಡ್ಲೆಗೌಡ | ಭಾ.ರಾ.ಕಾ.<br>ಸ್ವ.ಅ. | ೨೨೬೪೯<br>೧೬೭೯೬ | ೫೪.೨೦<br>೪೦.೧೬ |
| ೫೦ – ಕಳ್ಳಂಬೆಳ್ಳ | ೧. ಟಿ.ತಾರೇಗೌಡ(ಆಯ್ಕೆ)<br>೨. ಬಿ.ಗಂಗಣ್ಣ | ಭಾ.ರಾ.ಕಾ.<br>ಸ್ವ.ಅ. | ೧೭೮೬೨<br>೭೯೨೯ | ೪೩.೭೫<br>೧೯.೪೨ |
| ೫೧ – ಗುಬ್ಬಿ | ೧. ಗಟ್ಟಿ ಚಂದ್ರಶೇಖರ್(ಆಯ್ಕೆ)<br>೨. ಎಸ್.ರೇವಣ್ಣ | ಭಾ.ರಾ.ಕಾ.<br>ರಾ.ಕಾ(ಒ) | ೨೪೨೧೪<br>೧೭೧೮೭ | ೫೮.೪೯<br>೪೧.೫೧ |
| ೫೨ – ಚಿಕ್ಕನಾಯಕನಹಳ್ಳಿ | ೧. ಎನ್.ಬಸವಯ್ಯ(ಆಯ್ಕೆ)<br>೨. ಎ.ಬಿ.ಮರಿಯಪ್ಪ | ರಾ.ಕಾ(ಒ)<br>ಭಾ.ರಾ.ಕಾ. | ೨೧೩೩೫<br>೧೯೪೪೫ | ೫೦.೯೬<br>೪೬.೩೯ |
| ೫೩ – ತಿಪಟೂರು | ೧.ಟಿ.ಎಂ.ಮಂಜುನಾಥ್(ಆಯ್ಕೆ)<br>೨. ವಿ.ಎಲ್.ಶಿವಪ್ಪ | ರಾ.ಕಾ(ಒ)<br>ಭಾ.ರಾ.ಕಾ. | ೩೩೧೯೨<br>೧೫೨೮೭ | ೬೧.೧೭<br>೨೮.೧೭ |
| ೫೪ – ತುರುವೇಕೆರೆ | ೧. ಬಿ.ಭೈರಪ್ಪಾಜಿ(ಆಯ್ಕೆ)<br>೨. ಟಿ.ಶಿವಣ್ಣ | ಭಾ.ರಾ.ಕಾ.<br>ರಾ.ಕಾ(ಒ) | ೩೦೯೯೦<br>೧೬೧೫೭ | ೬೪.೧೮<br>೩೩.೪೬ |
| ೫೫ – ಕುಣಿಗಲ್ | ೧. ಅಂದಾನಯ್ಯ(ಆಯ್ಕೆ)<br>೨. ಮಹ್ಮದ್ ಗೈಬಾನ್ ಖಾನ್ | ಭಾ.ರಾ.ಕಾ.<br>ರಾ.ಕಾ(ಒ) | ೨೩೪೯೯<br>೧೧೨೦೦ | ೬೭.೭೨<br>೩೨.೨೮ |
| ೫೬ – ಹುಲಿಯೂರುದುರ್ಗ | ೧.ಎನ್.ಹುಚ್ಚಮಾಸ್ತಿಗೌಡ(ಆಯ್ಕೆ)<br>೨. ಡಿ.ಟಿ.ಮಾಯಣ್ಣ | ಭಾ.ರಾ.ಕಾ.<br>ರಾ.ಕಾ(ಒ) | ೨೮೫೯೧<br>೧೧೨೦೦ | ೬೯.೮೯<br>೩೦.೦೧ |
| ೫೭ – ಗೂಳೂರು (ಎಸ್.ಸಿ) | ೧. ದೊಡ್ಡತಿಮ್ಮ ಯ್ಯ(ಆಯ್ಕೆ)<br>೨. ಗಂಗಾಬೋವಿ | ಭಾ.ರಾ.ಕಾ.<br>ರಾ.ಕಾ(ಒ) | ೧೮೩೦೭<br>೧೫೪೪೮ | ೫೨.೫೯<br>೪೪.೩೮ |
| ೫೮ – ತುಮಕೂರು | ೧. ಕೆ.ಅಬ್ದುಲ್‌ಸುಬಾನ್(ಆಯ್ಕೆ)<br>೨. ಎಸ್.ಮಲ್ಲಿಕಾರ್ಜುನಯ್ಯ | ಭಾ.ರಾ.ಕಾ.<br>ರಾ.ಕಾ (ಒ)<br>ಸಿ.ಬಿ.ಜೆ.ಎಸ್. | ೧೧೫೪೮<br>೯೪೬೪ | ೩೪.೫೫<br>೨೮.೩೨ |
| ೫೯ – ಕೊರಟಗೆರೆ | ೧. ಮುದ್ದರಾಮಯ್ಯ(ಆಯ್ಕೆ)<br>೨.ಟಿ.ಹೆಚ್.ಹನುಮಂತರಾಯಪ್ಪ | ಭಾ.ರಾ.ಕಾ.<br>ಸ್ವ.ಅ. | ೨೦೯೯೮<br>೮೫೬೪ | ೫೧.೩೦<br>೧೮.೪೮ |
| ೬೦ – ಮಧುಗಿರಿ | ೧. ಆರ್.ಚಿಕ್ಕಯ್ಯ(ಆಯ್ಕೆ)<br>೨. ಎಂ.ಎನ್.ನಾಗಭೂಷಣ | ಭಾ.ರಾ.ಕಾ.<br>ರಾ.ಕಾ(ಒ) | ೨೪೦೮೧<br>೧೯೪೨೫ | ೫೫.೩೪<br>೪೪.೬೬ |

## ವಿಧಾನಸಭಾ ಚುನಾವಣೆ ಫಲಿತಾಂಶ – ೧೯೭೮

| ಕ್ಷೇತ್ರದ ಸಂಖ್ಯೆ ಮತ್ತು ಹೆಸರು | ಅಭ್ಯರ್ಥಿ | ಪಕ್ಷ | ಪಡೆದ ಮತಗಳು | ಶೇಕಡಾವಾರು |
|---|---|---|---|---|
| ೫೧ – ಪಾವಗಡ (ಎಸ್.ಸಿ.) | ೧. ನಾಗಪ್ಪ (ಆಯ್ಕೆ)<br>೨. ಡಿ.ಆಂಜನಪ್ಪ | ಕಾಂಗ್ರೆ<br>ಜೆ.ಎನ್.ಪಿ. | ೩೧೫೧೧<br>೨೦೩೪೧ | ೪೮.೧೫<br>೩೧.೦೮ |
| ೫೨ – ಶಿರಾ | ೧. ಎಸ್.ಲಿಂಗಯ್ಯ(ಆಯ್ಕೆ)<br>೨. ಪಿ.ಮೂಡ್ಲೇಗೌಡ | ಕಾಂಗ್ರೆ<br>ಜೆ.ಎನ್.ಪಿ. | ೩೨೨೭೦<br>೨೨೭೭೫ | ೫೪.೯೦<br>೩೮.೭೪ |
| ೫೩ – ಕಳ್ಳಂಬೆಳ್ಳ | ೧. ಟಿ.ಬಿ.ಜಯಚಂದ್ರ(ಆಯ್ಕೆ)<br>೨, ಬಿ.ಗಂಗಣ್ಣ(ಆಯ್ಕೆ) | ಕಾಂಗ್ರೆ<br>ಜೆ.ಎನ್.ಪಿ. | ೨೭೬೪೫<br>೧೯೮೩೩ | ೫೨.೯೩<br>೩೭.೯೮ |
| ೫೪ – ಬೆಳ್ಳಾವಿ | ೧. ಜಿ.ಎಸ್.ಶಿವನಂಜಪ್ಪ (ಆಯ್ಕೆ)<br>೨, ಆರ್.ನಾರಾಯಣ | ಜೆ.ಎನ್.ಪಿ.<br>ಕಾಂಗ್ರೆ | ೨೭೭೩೬<br>೨೭೧೩೪ | ೪೭.೪೫<br>೪೬.೪೨ |
| ೫೫ – ಮಧುಗಿರಿ (ಎಸ್.ಸಿ.) | ೧. ಗಂಗಹನುಮಯ್ಯ(ಆಯ್ಕೆ)<br>೨. ಗಂಗಾಭೋವಿ | ಕಾಂಗ್ರೆ<br>ಜೆ.ಎನ್.ಪಿ. | ೩೨೬೮೬<br>೨೫೮೨೦ | ೫೧.೯೪<br>೪೧.೦೩ |

| | | | | |
|---|---|---|---|---|
| ೫೬ – ಕೊರಟಗೆರೆ | ೧. ಮುದ್ದರಾಮಯ್ಯ(ಆಯ್ಕೆ)<br>೨. ವೀರಣ್ಣ | ಕಾಂಗ್ರೆ<br>ಜೆ.ಎನ್.ಪಿ. | ೨೯೮೩೩<br>೨೪೮೩೫ | ೪೬.೮೨<br>೩೮.೯೮ |
| ೫೭ – ತುಮಕೂರು | ೧. ನಜೀರ್ ಅಹ್ಮದ್(ಆಯ್ಕೆ)<br>೨. ಮಹಮದ್ ಗೈಬನ್ ಖಾನ್ | ಕಾಂಗ್ರೆ<br>ಜೆ.ಎನ್.ಪಿ. | ೩೪೧೯೯<br>೨೪೭೩೩ | ೫೩.೮೧<br>೩೮.೯೧ |
| ೫೮ – ಕುಣಿಗಲ್ | ೧. ಅಂದಾನಯ್ಯ(ಆಯ್ಕೆ)<br>೨. ತಮ್ಮಣ್ಣ.ಜಿ. | ಕಾಂಗ್ರೆ<br>ಜೆ.ಎನ್.ಪಿ. | ೩೨೬೫೪<br>೨೪೪೬೩ | ೫೩.೩೨<br>೩೯.೯೪ |
| ೫೯ ಹುಲಿಯೂರುದುರ್ಗ | ೧. ಮಾಯಣ್ಣ.ಡಿ.ಟಿ. (ಆಯ್ಕೆ)<br>೨. ಬೋರೇಗೌಡ.ಹೆಚ್. | ಜೆ.ಎನ್.ಪಿ.<br>ಕಾಂಗ್ರೆ | ೨೫೦೪೫<br>೧೫೫೯೫ | ೪೭.೬೬<br>೨೯.೬೭ |
| ೬೦ – ಗುಬ್ಬಿ | ೧. ಗಟ್ಟಿ ಚಂದ್ರಶೇಖರ್(ಆಯ್ಕೆ)<br>೨. ಎಸ್.ರೇವಣ್ಣ | ಕಾಂಗ್ರೆ<br>(ಐ)<br>ಜೆ.ಎನ್.ಪಿ. | ೨೮೧೮೬<br>೨೪೧೧೭ | ೪೮.೯೦<br>೪೧.೮೪ |
| ೬೧ – ತುರುವೇಕೆರೆ | ೧. ಕೆ.ಹೆಚ್.ರಾಮಕೃಷ್ಣಯ್ಯ(ಆಯ್ಕೆ)<br>೨. ಡಿ.ಎಂ.ನಂಜಪ್ಪ | ಕಾಂಗ್ರೆ<br>ಜೆ.ಎನ್.ಪಿ. | ೨೩೨೭೦<br>೨೦೭೪೭ | ೩೯.೨೬<br>೩೫.೦೧ |
| ೬೨ – ತಿಪಟೂರು | ೧. ವಿ.ಎಲ್.ಶಿವಪ್ಪ(ಆಯ್ಕೆ)<br>೨. ಎಂ.ಆರ್.ರಾಮಣ್ಣ | ಕಾಂಗ್ರೆ<br>ಜೆ.ಎನ್.ಪಿ. | ೨೮೩೩೯<br>೨೬೫೧೧ | ೪೬.೪೩<br>೪೩.೪೩ |
| ೬೩–ಚಿಕ್ಕನಾಯಕನಹಳ್ಳಿ | ೧. ಎನ್.ಬಸವಯ್ಯ(ಆಯ್ಕೆ)<br>೨. ಟಿ.ಎಂ.ಮಂಜುನಾಥ್ | ಕಾಂಗ್ರೆ<br>ಜೆ.ಎನ್.ಪಿ. | ೩೧೬೨೭<br>೨೨೫೯೪ | ೫೪.೫೯<br>೩೯.೦೦ |

**ಜೆ.ಎನ್.ಪಿ: ಜನತಾ ಪಕ್ಷ**

## ವಿಧಾನಸಭಾ ಚುನಾವಣೆ ಫಲಿತಾಂಶ – ೧೯೮೩

| ಕ್ಷೇತ್ರದ ಸಂಖ್ಯೆ ಮತ್ತು ಹೆಸರು | ಅಭ್ಯರ್ಥಿ | ಪಕ್ಷ | ಪಡೆದ ಮತಗಳು | ಶೇಕಡಾವಾರು |
|---|---|---|---|---|
| ೫೧ – ಪಾವಗಡ<br>(ಎಸ್.ಸಿ.) | ೧. ಉಗ್ರನರಸಿಂಹಪ್ಪ(ಆಯ್ಕೆ)<br>೨. ಕೆ.ಬಿ.ಕೃಷ್ಣಮೂರ್ತಿ. | ಸ್ವ.ಅ.<br>ಭಾ.ರಾ.ಕಾ. | ೪೨೨೭೪<br>೨೫೨೮೫ | ೬೦.೭೦<br>೩೬.೩೧ |
| ೫೨ – ಶಿರಾ | ೧. ಮೂಡ್ಲೇಗೌಡ(ಆಯ್ಕೆ)<br>೨. ಎಸ್.ಎನ್.ಕೃಷ್ಣಯ್ಯ. | ಸ್ವ.ಅ.<br>ಭಾ.ರಾ.ಕಾ. | ೪೨೦೧೫<br>೧೪೮೦೦ | ೬೯.೭೬<br>೨೪.೫೭ |
| ೫೩ – ಕಳ್ಳಂಬೆಳ್ಳ | ೧. ಬಿ.ಗಂಗಣ್ಣ. (ಆಯ್ಕೆ)<br>೨. ಟಿ.ಬಿ.ಜಯಚಂದ್ರ. | ಜೆ.ಎನ್.ಪಿ.<br>ಭಾ.ರಾ.ಕಾ. | ೩೦೯೬೯<br>೨೪೦೯೪ | ೫೩.೮೨<br>೪೧.೮೭ |
| ೫೪ – ಬೆಳ್ಳಾವಿ | ೧.ಟಿ.ಹೆಚ್.ಹನುಮಂತರಾಯಪ್ಪ(ಆಯ್ಕೆ)<br>೨. ಸಿ.ಎನ್.ಭಾಸ್ಕರಪ್ಪ | ಭಾ.ರಾ.ಕಾ.<br>ಜೆ.ಎನ್.ಪಿ. | ೨೯೪೧೮<br>೨೮೪೧೦ | ೪೭.೯೩<br>೪೬.೩೦ |
| ೫೫ – ಮಧುಗಿರಿ<br>(ಎಸ್.ಸಿ.) | ೧. ರಾಜವರ್ಧನ(ಆಯ್ಕೆ)<br>೨. ಗಂಗಹನುಮಯ್ಯ | ಜೆ.ಎನ್.ಪಿ.<br>ಭಾ.ರಾ.ಕಾ. | ೨೯೧೫೯<br>೨೮೪೮೩ | ೪೭.೮೭<br>೪೬.೭೬ |
| ೫೬ – ಕೊರಟಗೆರೆ | ೧. ವೀರಣ್ಣ(ಆಯ್ಕೆ)<br>೨. ಮುದ್ದುರಾಮಯ್ಯ | ಜೆ.ಎನ್.ಪಿ.<br>ಭಾ.ರಾ.ಕಾ. | ೩೭೧೩೯<br>೨೪೧೩೬ | ೫೬.೪೬<br>೩೬.೬೮ |
| ೫೭ – ತುಮಕೂರು | ೧. ಲಕ್ಷ್ಮೀನರಸಿಂಹಯ್ಯ(ಆಯ್ಕೆ)<br>೨. ಎಸ್.ಷಫಿ ಅಹ್ಮದ್ | ಜೆ.ಎನ್.ಪಿ.<br>ಭಾ.ರಾ.ಕಾ. | ೩೪೬೮೯<br>೨೪೧೫೯ | ೫೪.೧೧<br>೩೭.೬೮ |
| ೫೮ – ಕುಣಿಗಲ್ | ೧. ವೈ.ಕೆ.ರಾಮಯ್ಯ(ಆಯ್ಕೆ)<br>೨. ಬಿ.ರುದ್ರಯ್ಯ | ಜೆ.ಎನ್.ಪಿ.<br>ಭಾ.ರಾ.ಕಾ. | ೩೭೧೯೮<br>೨೪೭೯೯ | ೫೮.೫೬<br>೩೯.೦೩ |

| | | | | |
|---|---|---|---|---|
| ೫೯–ಹುಲಿಯೂರುದುರ್ಗ | ೧. ಎನ್.ಹುಚ್ಚಮಾಸ್ತಿಗೌಡ(ಆಯ್ಕೆ)<br>೨. ಹೆಚ್.ಬೋರೇಗೌಡ | ಸ್ವ.ಅ.<br>ಭಾ.ರಾ.ಕಾ. | ೨೧೩೪೨<br>೧೬೬೭೧ | ೩೮.೭೩<br>೩೦.೨೬ |
| ೬೦ – ಗುಬ್ಬಿ | ೧. ಎಸ್.ರೇವಣ್ಣ(ಆಯ್ಕೆ)<br>೨. ಗಟ್ಟಿ ಚಂದ್ರಶೇಖರ್ | ಜೆ.ಎನ್.ಪಿ.<br>ಭಾ.ರಾ.ಕಾ. | ೨೯೪೧೯<br>೨೦೨೬೪ | ೪೯.೬೨<br>೩೪.೧೯ |
| ೬೧ – ತುರುವೇಕೆರೆ | ೧. ಭೈರಪ್ಪಾಜಿ(ಆಯ್ಕೆ)<br>೨. ಕೆ.ಹೆಚ್.ರಾಮಕೃಷ್ಣಯ್ಯ | ಭಾ.ರಾ.ಕಾ.<br>ಸ್ವ.ಅ. | ೩೩೧೧೦<br>೧೬೪೨೩ | ೫೪.೦೭<br>೨೬.೮೨ |
| ೬೨ – ತಿಪಟೂರು | ೧. ಎಸ್.ಪಿ.ಗಂಗಾಧರಪ್ಪ(ಆಯ್ಕೆ)<br>೨. ವಿ.ಎಲ್.ಶಿವಪ್ಪ | ಭಾ.ರಾ.ಕಾ.<br>ಸ್ವ.ಅ. | ೩೨೦೮೭<br>೧೯೦೬೪ | ೫೨.೯೬<br>೩೧.೪೬ |
| ೬೩–ಚಿಕ್ಕನಾಯಕನಹಳ್ಳಿ | ೧. ಎಸ್.ಜಿ.ರಾಮಲಿಂಗಯ್ಯ<br>೨. ಎನ್.ಬಸವಯ್ಯ | ಬಿ.ಜೆ.ಪಿ.<br>ಭಾ.ರಾ.ಕಾ. | ೨೯೬೧೪<br>೨೬೨೪೩ | ೫೦.೯೮<br>೪೫.೧೮ |

ಜೆ.ಎನ್.ಪಿ: ಜನತಾ ಪಕ್ಷ

## ವಿಧಾನಸಭಾ ಚುನಾವಣೆ ಫಲಿತಾಂಶ – ೧೯೮೫

| ಕ್ಷೇತ್ರದ ಸಂಖ್ಯೆ ಮತ್ತು ಹೆಸರು | ಅಭ್ಯರ್ಥಿ | ಪಕ್ಷ | ಪಡೆದ ಮತಗಳು | ಶೇಕಡಾವಾರು |
|---|---|---|---|---|
| ೫೧ – ಪಾವಗಡ (ಎಸ್.ಸಿ.) | ೧. ಸೋಮ್ಲನಾಯಕ(ಆಯ್ಕೆ)<br>೨. ಉಗ್ರನರಸಿಂಹಪ್ಪ | ಜೆ.ಎನ್.ಪಿ.<br>ಭಾ.ರಾ.ಕಾ. | ೪೧೯೬೪<br>೨೯೪೦೧ | ೫೩.೧೧<br>೩೮.೧೨ |
| ೫೨ – ಶಿರಾ | ೧. ಮೂಡ್ಲಗಿರಿಯಪ್ಪ.ಸಿ.ಪಿ. (ಆಯ್ಕೆ)<br>೨. ಸಿದ್ದಣ್ಣ.ಎಸ್.ಕೆ. | ಭಾ.ರಾ.ಕಾ.<br>ಸ್ವ.ಅ. | ೨೦೦೪೯<br>೧೯೯೬೭ | ೩೧.೯೬<br>೩೧.೮೩ |
| ೫೩ – ಕಳ್ಳಂಬೆಳ್ಳ | ೧. ಬಿ.ಎಲ್.ಗೌಡ(ಆಯ್ಕೆ)<br>೨. ಎಸ್.ಲಿಂಗಯ್ಯ (ಎಸ್‌ಟಿ) | ಜೆ.ಎನ್.ಪಿ.<br>ಭಾ.ರಾ.ಕಾ. | ೩೬೦೨೭<br>೨೫೨೪೪ | ೫೫.೧೯<br>೩೮.೬೭ |
| ೫೪ – ಬೆಳ್ಳಾವಿ | ೧. ಸಿ.ಎನ್.ಭಾಸ್ಕರಪ್ಪ(ಆಯ್ಕೆ)<br>೨. ಸಿ.ಶಿವಮೂರ್ತಿ | ಜೆ.ಎನ್.ಪಿ.<br>ಭಾ.ರಾ.ಕಾ. | ೩೬೯೧೯<br>೨೫೫೮೬ | ೫೩.೫೫<br>೩೭.೧೨ |
| ೫೫ – ಮಧುಗಿರಿ (ಎಸ್.ಸಿ.) | ೧. ರಾಜವರ್ಧನ(ಆಯ್ಕೆ)<br>೨. ಗಂಗಹನುಮಯ್ಯ | ಜೆ.ಎನ್.ಪಿ.<br>ಭಾ.ರಾ.ಕಾ. | ೪೧೧೯೨<br>೩೦೪೫೬ | ೫೪.೪೮<br>೩೯.೫೧ |
| ೫೬ – ಕೊರಟಗೆರೆ | ೧. ವೀರಣ್ಣ(ಆಯ್ಕೆ)<br>೨. ಎನ್.ಸುಕುಮಾರ್ | ಜೆ.ಎನ್.ಪಿ.<br>ಭಾ.ರಾ.ಕಾ. | ೪೭೩೯೫<br>೩೨೩೭೯ | ೫೮.೫೨<br>೩೯.೯೮ |
| ೫೭ – ತುಮಕೂರು | ೧. ಲಕ್ಷ್ಮೀನರಸಿಂಹಯ್ಯ(ಆಯ್ಕೆ)<br>೨. ಆಲಿಯಾ ಬೇಗಂ | ಜೆ.ಎನ್.ಪಿ.<br>ಭಾ.ರಾ.ಕಾ. | ೪೦೪೪೦<br>೨೬೯೧೦ | ೫೪.೩೯<br>೩೬.೧೯ |
| ೫೮ – ಕುಣಿಗಲ್ | ೧. ವೈ.ಕೆ.ರಾಮಯ್ಯ(ಆಯ್ಕೆ)<br>೨. ಅಂದಾನಯ್ಯ | ಜೆ.ಎನ್.ಪಿ.<br>ಭಾ.ರಾ.ಕಾ. | ೪೯೩೦೯<br>೨೫೦೦೭ | ೬೫.೭೪<br>೩೩.೩೪ |
| ೫೯ – ಹುಲಿಯೂರುದುರ್ಗ | ೧. ಡಿ.ನಾಗರಾಜಯ್ಯ(ಆಯ್ಕೆ)<br>೨. ಎನ್.ಹುಚ್ಚಮಾಸ್ತಿಗೌಡ | ಜೆ.ಎನ್.ಪಿ.<br>ಭಾ.ರಾ.ಕಾ. | ೩೬೪೩೪<br>೨೭೪೫೪ | ೫೬.೧೯<br>೪೨.೩೪ |
| ೬೦ – ಗುಬ್ಬಿ | ೧. ಜಿ.ಎಸ್.ಶಿವನಂಜಪ್ಪ(ಆಯ್ಕೆ)<br>೨.ಎಸ್.ಎಂ.ಶಿವಕುಮಾರಸ್ವಾಮಿ | ಭಾ.ರಾ.ಕಾ.<br>ಸ್ವ.ಅ. | ೨೬೮೪೭<br>೨೧೨೭೭ | ೪೪.೩೬<br>೩೫.೧೬ |
| ೬೧ – ತುರುವೇಕೆರೆ | ೧. ಕೆ.ಹೆಚ್.ರಾಮಕೃಷ್ಣಯ್ಯ(ಆಯ್ಕೆ)<br>೨. ಬಿ.ಭೈರಪ್ಪಾಜಿ | ಜೆ.ಎನ್.ಪಿ.<br>ಭಾ.ರಾ.ಕಾ. | ೩೫೨೭೨<br>೩೦೭೮೮ | ೫೧.೩೧<br>೪೪.೭೯ |

| | | | | |
|---|---|---|---|---|
| ೬೨ – ತಿಪಟೂರು | ೧.ಬಿ.ಎಸ್.ಚಂದ್ರಶೇಖರಯ್ಯ(ಆಯ್ಕೆ)<br>೨. ಟಿ.ಎಂ.ಮಂಜುನಾಥ್ | ಜೆ.ಎನ್.ಪಿ.<br>ಭಾ.ರಾ.ಕಾ. | ೩೬೫೪<br>೩೩೮೫೭ | ೫೧.೨೩<br>೪೭.೪೦ |
| ೬೩ – ಚಿಕ್ಕನಾಯಕನಹಳ್ಳಿ | ೧. ಬಿ.ಲಕ್ಕಪ್ಪ(ಆಯ್ಕೆ)<br>೨. ಎನ್.ಬಸವಯ್ಯ | ಭಾ.ರಾ.ಕಾ.<br>ಸ್ವ.ಅ. | ೨೦೮೧೫<br>೧೮೪೨೭ | ೩೧.೯೮<br>೨೮.೧೧ |

ಜೆ.ಎನ್.ಪಿ: ಜನತಾ ಪಕ್ಷ

## ವಿಧಾನಸಭಾ ಚುನಾವಣೆ ಫಲಿತಾಂಶ – ೧೯೮೯

| ಕ್ಷೇತ್ರದ ಸಂಖ್ಯೆ ಮತ್ತು ಹೆಸರು | ಅಭ್ಯರ್ಥಿ | ಪಕ್ಷ | ಪಡೆದ ಮತಗಳು | ಶೇಕಡಾವಾರು |
|---|---|---|---|---|
| ೫೧ – ಪಾವಗಡ (ಎಸ್.ಸಿ.) | ೧. ವೆಂಕಟರಮಣಪ್ಪ(ಆಯ್ಕೆ)<br>೨. ತಿಪ್ಪೆಸ್ವಾಮಿ | ಭಾ.ರಾ.ಕಾ.<br>ಜೆ.ಡಿ. | ೪೫೬೨೬<br>೨೦೮೬೩ | ೫೨.೧೯<br>೨೩.೮೬ |
| ೫೨ – ಶಿರಾ | ೧. ಎಸ್.ಕೆ.ದಾಸಪ್ಪ(ಆಯ್ಕೆ)<br>೨. ಬಿ.ಸತ್ಯನಾರಾಯಣ | ಭಾ.ರಾ.ಕಾ.<br>ಜೆ.ಡಿ. | ೨೯೬೯<br>೨೨೧೪೬ | ೪೯.೩೧<br>೨೯.೩೧ |
| ೫೩ – ಕಳ್ಳಂಬೆಳ್ಳ | ೧. ಟಿ.ಬಿ.ಜಯಚಂದ್ರ(ಆಯ್ಕೆ)<br>೨. ಬಿ.ಗಂಗಣ್ಣ | ಸ್ವ.ಅ.<br>ಜೆ.ಡಿ. | ೩೭೮೪೪<br>೧೪೦೮೯ | ೫೦.೨೪<br>೧೮.೭೦ |
| ೫೪ – ಬೆಳ್ಳಾವಿ | ೧. ಆರ್.ನಾರಾಯಣ(ಆಯ್ಕೆ)<br>೨. ಸಿ.ಎನ್.ಭಾಸ್ಕರಪ್ಪ | ಭಾ.ರಾ.ಕಾ.<br>ಜೆ.ಡಿ. | ೩೨೮೪೬<br>೧೪೫೬೦ | ೪೧.೬೪<br>೧೮.೪೬ |
| ೫೫ – ಮಧುಗಿರಿ (ಎಸ್.ಸಿ.) | ೧.ಡಾ.ಜಿ.ಪರಮೇಶ್ವರ್(ಆಯ್ಕೆ)<br>೨. ರಾಜವರ್ಧನ | ಭಾ.ರಾ.ಕಾ.<br>ಜೆ.ಡಿ. | ೪೭೪೭೭<br>೨೯೬೦ | ೫೨.೧೬<br>೩೨.೦೦ |
| ೫೬ – ಕೊರಟಗೆರೆ | ೧. ಸಿ.ವೀರಭದ್ರಯ್ಯ(ಆಯ್ಕೆ)<br>೨. ವೀರಣ್ಣ.ಸಿ. | ಭಾ.ರಾ.ಕಾ.<br>ಜೆ.ಡಿ. | ೩೫೬೮೪<br>೩೨೦೪೪ | ೩೭.೮೫<br>೩೩.೯೮ |
| ೫೭ – ತುಮಕೂರು | ೧. ಎಸ್.ಶಫಿಅಹ್ಮದ್(ಆಯ್ಕೆ)<br>೨. ಲಕ್ಷ್ಮೀನರಸಿಂಹಯ್ಯ | ಭಾ.ರಾ.ಕಾ.<br>ಜೆ.ಡಿ. | ೪೪೭೮೬<br>೩೯೬೪೬ | ೪೩.೯೪<br>೩೮.೮೯ |
| ೫೮ – ಕುಣಿಗಲ್ | ೧. ಕೆ.ಲಕ್ಕಪ್ಪ(ಆಯ್ಕೆ)<br>೨. ವೈ.ಕೆ.ರಾಮಯ್ಯ | ಭಾ.ರಾ.ಕಾ.<br>ಜೆ.ಡಿ. | ೩೪೯೪೨<br>೩೩೭೭೬ | ೪೦.೮೬<br>೩೯.೫೨ |
| ೫೯ – ಹುಲಿಯೂರುದುರ್ಗ | ೧. ಎನ್.ಹುಚ್ಚಮಾಸ್ತಿಗೌಡ<br>೨. ಡಿ.ನಾಗರಾಜಯ್ಯ | ಭಾ.ರಾ.ಕಾ.<br>ಜೆ.ಡಿ. | ೩೨೨೭೨<br>೩೧೫೫೩ | ೪೫.೭೧<br>೪೨.೭೪ |
| ೬೦ – ಗುಬ್ಬಿ | ೧.ಜಿ.ಎಸ್.ಶಿವನಂಜಪ್ಪ(ಆಯ್ಕೆ)<br>೨. ಕೆ.ಆರ್.ತಾತಯ್ಯ | ಭಾ.ರಾ.ಕಾ.<br>ಜೆ.ಡಿ. | ೩೩೫೨೪<br>೧೭೩೩೯ | ೪೨.೮೫<br>೨೨.೧೬ |
| ೬೧ – ತುರುವೇಕೆರೆ | ೧. ಎಸ್.ರುದ್ರಪ್ಪ(ಆಯ್ಕೆ)<br>೨. ಹೆಚ್.ಬಿ.ನಂಜೇಗೌಡ | ಭಾ.ರಾ.ಕಾ.<br>ಜೆ.ಎನ್.ಪಿ. | ೪೩೮೦೩<br>೧೫೫೮೬ | ೫೪.೧೮<br>೧೯.೨೮ |
| ೬೨ – ತಿಪಟೂರು | ೧.ಟಿ.ಎಂ.ಮಂಜುನಾಥ್(ಆಯ್ಕೆ)<br>೨.ಬಿ.ಎಸ್.ಚಂದ್ರಶೇಖರಯ್ಯ | ಭಾ.ರಾ.ಕಾ.<br>ಜೆ.ಡಿ. | ೬೧೦೫೨<br>೧೨೭೮೩ | ೬೮.೮೩<br>೧೪.೪೧ |
| ೬೩ – ಚಿಕ್ಕನಾಯಕನಹಳ್ಳಿ | ೧. ಜೆ.ಸಿ.ಮಾಧುಸ್ವಾಮಿ(ಆಯ್ಕೆ)<br>೨. ಬಿ.ಲಕ್ಕಪ್ಪ | ಜೆ.ಡಿ.<br>ಭಾ.ರಾ.ಕಾ. | ೨೬೨೧<br>೨೫೬೬೩ | ೩೩.೦೦<br>೩೨.೨೧ |

ಜೆ.ಡಿ: ಜನತಾದಳ

## ವಿಧಾನಸಭಾ ಚುನಾವಣೆ ಫಲಿತಾಂಶ – ೧೯೯೪

| ಕ್ಷೇತ್ರದ ಸಂಖ್ಯೆ ಮತ್ತು ಹೆಸರು | ಅಭ್ಯರ್ಥಿ | ಪಕ್ಷ | ಪಡೆದ ಮತಗಳು | ಶೇಕಡಾವಾರು |
|---|---|---|---|---|
| ೫೧ – ಪಾವಗಡ (ಎಸ್.ಸಿ.) | ೧. ಸೋಮ್ಲನಾಯಕ(ಆಯ್ಕೆ)<br>೨. ವೆಂಕಟರಮಣಪ್ಪ | ಜೆ.ಡಿ.<br>ಭಾ.ರಾ.ಕಾ. | ೪೬೭೩೯<br>೪೧೫೪೩ | ೪೧.೪೬<br>೩೬.೮೬ |
| ೫೨ – ಶಿರಾ | ೧. ಬಿ.ಸತ್ಯನಾರಾಯಣ(ಆಯ್ಕೆ)<br>೨. ಎಸ್.ಕೆ.ಸಿದ್ದಣ್ಣ | ಜೆ.ಡಿ.<br>ಕೆ.ಸಿ.ಪಿ | ೨೮೨೭೨<br>೨೫೫೧೩ | ೩೦.೩೭<br>೨೭.೪೧ |
| ೫೩ – ಕಳ್ಳಂಬೆಳ್ಳ | ೧. ಟಿ.ಬಿ.ಜಯಚಂದ್ರ(ಆಯ್ಕೆ)<br>೨. ಬಿ.ಗಂಗಣ್ಣ | ಭಾ.ರಾ.ಕಾ.<br>ಜೆ.ಡಿ. | ೨೮೭೨೯<br>೨೦೧೫೮ | ೩೨.೧೯<br>೨೨.೫೯ |
| ೫೪ – ಬೆಳ್ಳಾವಿ | ೧. ಆರ್.ನಾರಾಯಣ್(ಆಯ್ಕೆ)<br>೨. ಸಿ.ಎನ್.ಭಾಸ್ಕರಪ್ಪ | ಭಾ.ರಾ.ಕಾ.<br>ಜೆ.ಡಿ. | ೨೨೭೭೭<br>೨೦೯೪೬ | ೨೪.೫೩<br>೨೨.೫೬ |
| ೫೫ – ಮಧುಗಿರಿ(ಎಸ್.ಸಿ.) | ೧. ಗಂಗಹನುಮಯ್ಯ(ಆಯ್ಕೆ)<br>೨. ಡಾ.ಜಿ.ಪರಮೇಶ್ವರ | ಜೆ.ಡಿ.<br>ಭಾ.ರಾ.ಕಾ. | ೪೫೩೦೩<br>೪೨೧೩೧ | ೪೩.೫೭<br>೪೦.೫೨ |
| ೫೬ – ಕೊರಟಗೆರೆ | ೧. ಆರ್.ಚೆನ್ನಿಗಪ್ಪ(ಆಯ್ಕೆ)<br>೨. ಜಿ.ವೆಂಕಟಾಚಲಯ್ಯ | ಜೆ.ಡಿ.<br>ಭಾ.ರಾ.ಕಾ. | ೩೫೬೭೨<br>೨೭೯೩೭ | ೩೩.೫೬<br>೨೬.೨೮ |
| ೫೭ – ತುಮಕೂರು | ೧. ಎಸ್.ಶಿವಣ್ಣ(ಆಯ್ಕೆ)<br>೨. ಶಫಿ ಅಹ್ಮದ್ | ಭಾ.ಜ.ಪ<br>ಭಾ.ರಾ.ಕಾ. | ೩೯೧೦೧<br>೨೯೯೯೭ | ೩೧.೬೪<br>೨೪.೨೭ |
| ೫೮ – ಕುಣಿಗಲ್ | ೧.ಎಸ್.ಪಿ.ಮುದ್ದಹನುಮೇಗೌಡ(ಆಯ್ಕೆ)<br>೨. ವೈ.ಕೆ.ರಾಮಯ್ಯ | ಭಾ.ರಾ.ಕಾ.<br>ಸ.ಪ. | ೩೭೮೨೩<br>೨೮೬೬೬ | ೩೮.೮೫<br>೨೯.೪೫ |
| ೫೯ – ಹುಲಿಯೂರುದುರ್ಗ | ೧. ಡಿ.ನಾಗರಾಜಯ್ಯ(ಆಯ್ಕೆ)<br>೨. ಶ್ರೀರಾಮಚಂದ್ರಪ್ರಸಾದ್ | ಜೆ.ಡಿ.<br>ಭಾ.ರಾ.ಕಾ. | ೪೧೯೯೩<br>೨೩೧೨೮ | ೫೧.೪೫<br>೨೮.೩೪ |
| ೬೦ – ಗುಬ್ಬಿ | ೧. ಜಿ.ಎಸ್.ಶಿವನಂಜಪ್ಪ(ಆಯ್ಕೆ)<br>೨. ಜಿ.ಎಸ್.ಬಸವರಾಜು | ಸ್ವತಂತ್ರ<br>ಭಾ.ರಾ.ಕಾ. | ೩೭೩೭೪<br>೨೮೬೮೪ | ೪೦.೫೬<br>೩೧.೧೩ |
| ೬೧ – ತುರುವೇಕೆರೆ | ೧.ಹೆಚ್.ಬಿ.ನಂಜೇಗೌಡ/<br>ಮೂರ್ತಿ(ಆಯ್ಕೆ)<br>೨. ಎಂ.ಡಿ.ಲಕ್ಷ್ಮಿನಾರಾಯಣ | ಜೆ.ಡಿ.<br>ಭಾ.ಜ.ಪ | ೪೪೩೮೪<br>೨೯೭೮೦ | ೪೭.೦೧<br>೩೧.೫೪ |
| ೬೨ – ತಿಪಟೂರು | ೧. ಬಿ.ನಂಜಾಮರಿ(ಆಯ್ಕೆ)<br>೨. ಅನ್ನಪೂರ್ಣ ಮಂಜುನಾಥ | ಭಾ.ಜ.ಪ<br>ಭಾ.ರಾ.ಕಾ. | ೪೩೭೬೯<br>೨೭೭೦೮ | ೪೭.೧೦<br>೨೯.೮೨ |
| ೬೩ – ಚಿಕ್ಕನಾಯಕನಹಳ್ಳಿ | ೧. ಎನ್.ಬಸವಯ್ಯ (ಆಯ್ಕೆ)<br>೨. ಜೆ.ಸಿ.ಮಧುಸ್ವಾಮಿ | ಕೆ.ಸಿ.ಪಿ.<br>ಜೆ.ಡಿ. | ೩೮೦೨೫<br>೨೪೧೪೦ | ೪೩.೪೮<br>೨೭.೬೦ |

**ಕೆ.ಸಿ.ಪಿ: ಕರ್ನಾಟಕ ಕಾಂಗ್ರೇಸ್ ಪಕ್ಷ**

## ವಿಧಾನಸಭಾ ಚುನಾವಣೆ ಫಲಿತಾಂಶ– ೧೯೯೯

| ಕ್ಷೇತ್ರದ ಸಂಖ್ಯೆ ಮತ್ತು ಹೆಸರು | ಅಭ್ಯರ್ಥಿ | ಪಕ್ಷ | ಪಡೆದ ಮತಗಳು | ಶೇಕಡಾವಾರು |
|---|---|---|---|---|
| ೫೧ – ಪಾವಗಡ (ಎಸ್.ಸಿ.) | ೧. ವೆಂಕಟರಮಣಪ್ಪ(ಆಯ್ಕೆ)<br>೨. ಸೋಮ್ಲನಾಯಕ | ಭಾ.ರಾ.ಕಾ.<br>ಜೆ.ಡಿ.ಯು | ೬೫೯೯೯<br>೪೪೮೯೭ | ೫೩<br>೩೬ |
| ೫೨ – ಶಿರಾ | ೧. ಪಿ.ಎಂ.ರಂಗನಾಥ(ಆಯ್ಕೆ)<br>೨. ಬಿ.ಸತ್ಯನಾರಾಯಣ | ಭಾ.ರಾ.ಕಾ.<br>ಜೆ.ಡಿ.ಎಸ್ | ೪೨೨೬೩<br>೧೬೬೦೯ | ೪೪<br>೧೭ |

| | | | | |
|---|---|---|---|---|
| ೫೩ – ಕಳ್ಳಂಬೆಳ್ಳ | ೧. ಟಿ.ಬಿ.ಜಯಚಂದ್ರ(ಆಯ್ಕೆ)<br>೨. ಕೆ.ಎಸ್.ಕಿರಣ್‌ಕುಮಾರ್ | ಭಾ.ರಾ.ಕಾ.<br>ಭಾ.ಜ.ಪ. | ೪೪೪೮೦<br>೩೭೩೬೫ | ೪೮<br>೪೦ |
| ೫೪ – ಬೆಳ್ಳಾವಿ | ೧. ಆರ್.ನಾರಾಯಣ(ಆಯ್ಕೆ)<br>೨. ವಿ.ಎನ್.ಮೂರ್ತಿ | ಭಾ.ರಾ.ಕಾ.<br>ಭಾ.ಜ.ಪ. | ೪೩೮೦೩<br>೧೯೭೦೭ | ೪೬<br>೨೧ |
| ೫೫ – ಮಧುಗಿರಿ(ಎಸ್.ಸಿ.) | ೧.ಡಾ.ಜಿ.ಪರಮೇಶ್ವರ(ಆಯ್ಕೆ)<br>೨. ಗಂಗಹನುಮಯ್ಯ | ಭಾ.ರಾ.ಕಾ.<br>ಜೆ.ಡಿ.ಎಸ್ | ೭೧೮೯೫<br>೧೬೦೯೩ | ೬೮ |
| ೫೬ – ಕೊರಟಗೆರೆ | ೧. ಸಿ.ಚನ್ನಿಗಪ್ಪ(ಆಯ್ಕೆ)<br>೨. ಸಿ.ವೀರಭದ್ರಯ್ಯ | ಜೆ.ಡಿ.ಎಸ್<br>ಭಾ.ರಾ.ಕಾ. | ೩೩೫೫೮<br>೩೨೮೫೨ | ೩೨<br>೩೧ |
| ೫೭ – ತುಮಕೂರು | ೧. ಎಸ್.ಶಿವಣ್ಣ(ಆಯ್ಕೆ)<br>೨. ಎಸ್.ಶಫಿಅಹ್ಮದ್ | ಭಾ.ಜ.ಪ.<br>ಭಾ.ರಾ.ಕಾ. | ೬೦೬೯೯<br>೫೨೧೧೧ | ೪೭<br>೪೦ |
| ೫೮ – ಕುಣಿಗಲ್ | ೧.ಎಸ್.ಪಿ.ಮುದ್ದಹನುಮೇಗೌಡ(ಆಯ್ಕೆ)<br>೨. ಹೆಚ್.ನಿಂಗಪ್ಪ | ಭಾ.ರಾ.ಕಾ.<br>ಜೆ.ಡಿ.ಎಸ್ | ೪೫೬೫೯<br>೪೨೦೭೮ | ೪೭<br>೪೪ |
| ೫೯ – ಹುಲಿಯೂರುದುರ್ಗ | ೧. ವೈ.ಕೆ.ರಾಮಯ್ಯ(ಆಯ್ಕೆ)<br>೨. ಡಿ.ನಾಗರಾಜಯ್ಯ | ಭಾ.ರಾ.ಕಾ.<br>ಜೆ.ಡಿ.ಎಸ್ | ೪೭೮೨೪<br>೨೬೨೫೯ | ೬೦<br>೩೩ |
| ೬೦ – ಗುಬ್ಬಿ | ೧. ಎನ್.ವೀರಣ್ಣಗೌಡ(ಆಯ್ಕೆ)<br>೨. ಜಿ.ಎಸ್.ಶಿವನಂಜಪ್ಪ | ಜೆ.ಡಿ.ಎಸ್<br>ಭಾ.ರಾ.ಕಾ. | ೩೯೨೭೨<br>೩೫೨೧೭ | ೩೭<br>೩೩ |
| ೬೧ – ತುರುವೇಕೆರೆ | ೧. ಎಂ.ಡಿ.ಲಕ್ಷ್ಮಿನಾರಾಯಣ(ಆಯ್ಕೆ)<br>೨. ಎಂ.ಟಿ.ಕೃಷ್ಣಪ್ಪ | ಭಾ.ಜ.ಪ.<br>ಸ್ವ.ಅ. | ೩೮೧೨೨<br>೨೨೭೯೦ | ೪೦<br>೨೪ |
| ೬೨ – ತಿಪಟೂರು | ೧. ಕೆ.ಷಡಕ್ಷರಿ(ಆಯ್ಕೆ)<br>೨. ಬಿ.ನಂಜಾಮರಿ | ಭಾ.ರಾ.ಕಾ.<br>ಭಾ.ಜ.ಪ. | ೪೬೪೮೯<br>೪೩೭೪೨ | ೪೯<br>೪೬ |
| ೬೩ – ಚಿಕ್ಕನಾಯಕನಹಳ್ಳಿ | ೧. ಸಿ.ಬಿ.ಸುರೇಶ್‌ಬಾಬು(ಆಯ್ಕೆ)<br>೨. ಜೆ.ಸಿ.ಮಾಧುಸ್ವಾಮಿ | ಜೆ.ಡಿ.ಎಸ್<br>ಜೆ.ಡಿ.ಯು | ೪೩೯೬೧<br>೨೯೦೧೮ | ೪೯<br>೩೨ |

## ವಿಧಾನಸಭಾ ಚುನಾವಣೆ ಫಲಿತಾಂಶ– ೨೦೦೪

| ಕ್ಷೇತ್ರದ ಸಂಖ್ಯೆ ಮತ್ತು ಹೆಸರು | ಅಭ್ಯರ್ಥಿ | ಪಕ್ಷ | ಪಡೆದ ಮತಗಳು | ಶೇಕಡಾವಾರು |
|---|---|---|---|---|
| ೫೧ – ಪಾವಗಡ (ಎಸ್.ಸಿ.) | ೧. ಕೆ.ಎಂ.ತಿಮ್ಮರಾಯಪ್ಪ(ಆಯ್ಕೆ)<br>೨. ವೆಂಕಟರಮಣಪ್ಪ | ಜೆ.ಡಿ.ಎಸ್<br>ಭಾ.ರಾ.ಕಾ. | ೫೩೧೩೬<br>೪೫೦೫೮ | ೩೯.೬೯<br>೩೩.೬೫ |
| ೫೨ – ಶಿರಾ | ೧. ಬಿ.ಸತ್ಯನಾರಾಯಣ(ಆಯ್ಕೆ)<br>೨. ಶ್ರೀನಿವಾಸಯ್ಯ | ಜೆ.ಡಿ.ಎಸ್.<br>ಭಾ.ರಾ.ಕಾ. | ೩೩೧೬೬<br>೨೫೦೭೩ | ೩೦.೮೬<br>೨೩.೩೩ |
| ೫೩ – ಕಳ್ಳಂಬೆಳ್ಳ | ೧.ಕೆ.ಎಸ್.ಕಿರಣ್‌ಕುಮಾರ್(ಆಯ್ಕೆ)<br>೨. ಟಿ.ಬಿ.ಜಯಚಂದ್ರ | ಭಾ.ಜ.ಪ.<br>ಭಾ.ರಾ.ಕಾ. | ೫೦೧೦೮<br>೩೨೮೭೩ | ೪೭.೧೯<br>೩೦.೯೬ |
| ೫೪ – ಬೆಳ್ಳಾವಿ | ೧. ಕೆ.ಎನ್.ರಾಜಣ್ಣ(ಆಯ್ಕೆ)<br>೨. ಸಿ.ವಿ.ಮಹದೇವಯ್ಯ | ಜೆ.ಡಿ.ಎಸ್.<br>ಭಾ.ಜ.ಪ. | ೩೫೦೯೯<br>೩೩೫೯೫ | ೩೧.೦೭<br>೨೯.೭೪ |
| ೫೫ – ಮಧುಗಿರಿ (ಎಸ್.ಸಿ.) | ೧. ಡಾ.ಜಿ.ಪರಮೇಶ್ವರ(ಆಯ್ಕೆ)<br>೨. ಹೆಚ್.ಕೆಂಚಮಾರಯ್ಯ | ಭಾ.ರಾ.ಕಾ.<br>ಜೆ.ಡಿ.ಎಸ್. | ೪೭೦೩೯<br>೨೯೮೨೬ | ೪೨.೩೦<br>೨೬.೮೨ |
| ೫೬ – ಕೊರಟಗೆರೆ | ೧. ಸಿ.ಚನ್ನಿಗಪ್ಪ(ಆಯ್ಕೆ)<br>೨. ವೀರಣ್ಣ | ಜೆ.ಡಿ.ಎಸ್.<br>ಜೆ.ಡಿ.ಯು | ೪೧೮೨೬<br>೩೮೮೩೨ | ೩೫.೫೮<br>೩೩.೦೪ |

| | | | | |
|---|---|---|---|---|
| ೫೭ – ತುಮಕೂರು | ೧. ಎಸ್.ಶಿವಣ್ಣ(ಆಯ್ಕೆ)<br>೨. ಎಸ್.ಷಫಿ ಅಹ್ಮದ್ | ಭಾ.ಜ.ಪ.<br>ಭಾ.ರಾ.ಕಾ. | ೩೯೯೭೭<br>೫೧೩೩೨ | ೪೧.೫೩<br>೩೫.೫೪ |
| ೫೮ – ಕುಣಿಗಲ್ | ೧. ಹೆಚ್.ನಿಂಗಪ್ಪ(ಆಯ್ಕೆ)<br>೨. ಮುದ್ದ ಹನುಮಯ್ಯ.ಎಸ್.ಪಿ | ಜೆ.ಡಿ.ಎಸ್.<br>ಭಾ.ರಾ.ಕಾ. | ೫೨೩೭೦<br>೩೩೨೮೦ | ೪೬.೩೧<br>೨೯.೪೩ |
| ೫೯ – ಹುಲಿಯೂರುದುರ್ಗ | ೧. ಡಿ.ನಾಗರಾಜಯ್ಯ(ಆಯ್ಕೆ)<br>೨. ಅನುಸೂಯಮ್ಮ | ಜೆ.ಡಿ.ಎಸ್.<br>ಭಾ.ಜ.ಪ. | ೨೭೮೪೮<br>೨೩೧೦೬ | ೩೨.೭೧<br>೨೭.೧೪ |
| ೬೦ – ಗುಬ್ಬಿ | ೧.ಎಸ್.ಆರ್.ಶ್ರೀನಿವಾಸ(ಆಯ್ಕೆ)<br>೨. ಜಿ.ಎಸ್.ಶಿವನಂಜಪ್ಪ | ಸ್ವ.ಅ.<br>ಜೆ.ಡಿ.ಎಸ್. | ೪೦೪೩೧<br>೨೮೮೫೪ | ೩೮.೫೭<br>೨೭.೫೩ |
| ೬೧ – ತುರುವೇಕೆರೆ | ೧. ಎಂ.ಟಿ.ಕೃಷ್ಣಪ್ಪ(ಆಯ್ಕೆ)<br>೨.ಎಂ.ಡಿ.ಲಕ್ಷ್ಮಿನಾರಾಯಣ | ಜೆ.ಡಿ.ಎಸ್.<br>ಭಾ.ಜ.ಪ. | ೩೯೯೩೪<br>೩೦೭೭೬ | ೩೮.೯೫<br>೩೦.೦೧ |
| ೬೨ – ತಿಪಟೂರು | ೧. ಬಿ.ನಂಜಾಮರಿ(ಆಯ್ಕೆ)<br>೨. ಕೆ.ಷಡಕ್ಷರಿ | ಜೆ.ಡಿ.ಎಸ್.<br>ಭಾ.ರಾ.ಕಾ. | ೪೬೯೯೬<br>೩೦೧೭೩ | ೪೪.೮೪<br>೨೮.೭೯ |
| ೬೩ – ಚಿಕ್ಕನಾಯಕನಹಳ್ಳಿ | ೧. ಜೆ.ಸಿ.ಮಧುಸ್ವಾಮಿ(ಆಯ್ಕೆ)<br>೨. ಸಿ.ಬಿ.ಸುರೇಶ್‌ಬಾಬು | ಜೆ.ಡಿ.ಯು<br>ಜೆ.ಡಿ.ಎಸ್. | ೪೩೦೪೦<br>೪೧೪೧೨ | ೪೪.೭೪<br>೪೩.೦೫ |

ಜೆ.ಡಿ.ಎಸ್: ಜನತಾದಳ(ಜಾ): ಜೆ.ಡಿ.ಯು: ಜನತಾ ದಳ(ಯು)

## ವಿಧಾನಸಭಾ ಚುನಾವಣೆ ಫಲಿತಾಂಶ– ೨೦೦೮

| ಕ್ಷೇತ್ರದ ಸಂಖ್ಯೆ ಮತ್ತು ಹೆಸರು | ಅಭ್ಯರ್ಥಿ | ಪಕ್ಷ | ಪಡೆದ ಮತಗಳು | ಶೇಕಡಾವಾರು |
|---|---|---|---|---|
| ೧೨೮–ಚಿಕ್ಕನಾಯಕನಹಳ್ಳಿ | ೧. ಸಿ.ಬಿ.ಸುರೇಶ್‌ಬಾಬು(ಆಯ್ಕೆ)<br>೨. ಕೆ.ಎಸ್.ಕಿರಣ್‌ಕುಮಾರ್ | ಜೆ.ಡಿ.ಎಸ್.<br>ಭಾ.ಜ.ಪ. | ೬೭೦೪೬<br>೩೮೦೦೨ | ೪೬.೭<br>೨೬.೫ |
| ೧೨೯–ತಿಪಟೂರು | ೧. ಬಿ.ಸಿ.ನಾಗೇಶ್(ಆಯ್ಕೆ)<br>೨. ಕೆ.ಷಡಕ್ಷರಿ | ಭಾ.ಜ.ಪ.<br>ಭಾ.ರಾ.ಕಾ. | ೪೬೦೩೪<br>೩೯೧೬೮ | ೩೭.೯<br>೩೨.೩ |
| ೧೩೦–ತುರುವೇಕೆರೆ | ೧. ಜಗ್ಗೇಶ್(ಆಯ್ಕೆ)<br>೨.ಎಂ.ಡಿ.ಲಕ್ಷ್ಮಿನಾರಾಯಣ | ಭಾ.ರಾ.ಕಾ.<br>ಭಾ.ಜ.ಪ. | ೪೭೮೪೯<br>೩೮೩೨೩ | ೩೭.೫<br>೩೦.೦೦ |
| ೧೩೧–ಕುಣಿಗಲ್ | ೧.ಬಿ.ಬಿ.ರಾಮಸ್ವಾಮಿಗೌಡ(ಆಯ್ಕೆ)<br>೨. ಡಿ.ಕೃಷ್ಣಕುಮಾರ್ | ಭಾ.ರಾ.ಕಾ.<br>ಭಾ.ಜ.ಪ. | ೪೮೧೬೦<br>೩೪೩೬೬ | ೩೯.೯<br>೨೮.೫ |
| ೧೩೨–ತುಮಕೂರು ನಗರ | ೧. ಎಸ್.ಶಿವಣ್ಣ(ಆಯ್ಕೆ)<br>೨. ರಫೀಕ್ ಅಹ್ಮದ್ | ಭಾ.ಜ.ಪ.<br>ಭಾ.ರಾ.ಕಾ. | ೩೯೪೩೫<br>೩೭೪೮೬ | ೩೭.೫<br>೩೫.೬ |
| ೧೩೩–ತುಮಕೂರು (ಗ್ರಾ) | ೧. ಬಿ.ಸುರೇಶ್‌ಗೌಡ(ಆಯ್ಕೆ)<br>೨. ಹೆಚ್.ನಿಂಗಪ್ಪ | ಭಾ.ಜ.ಪ.<br>ಜೆ.ಡಿ.ಎಸ್. | ೬೯೯೦೪<br>೩೨೫೧೨ | ೫೦.೧<br>೨೬.೭ |
| ೧೩೪–ಕೊರಟಗೆರೆ (ಎಸ್.ಸಿ) | ೧. ಡಾ. ಜಿ.ಪರಮೇಶ್ವರ(ಆಯ್ಕೆ)<br>೨. ಚಂದ್ರಯ್ಯ (ವಾಲೆ) | ಭಾ.ರಾ.ಕಾ.<br>ಜೆ.ಡಿ.ಎಸ್. | ೪೯೨೭೬<br>೩೭೭೧೯ | ೩೮.೭<br>೨೯.೬ |
| ೧೩೫–ಗುಬ್ಬಿ | ೧. ಎಸ್.ಆರ್.ಶ್ರೀನಿವಾಸ್(ಆಯ್ಕೆ)<br>೨. ಸಿ.ವಿ.ಮಹದೇವಯ್ಯ | ಜೆ.ಡಿ.ಎಸ್.<br>ಭಾ.ಜ.ಪ. | ೫೨೩೦೨<br>೩೭೬೩೦ | ೪೨.೧<br>೩೦.೩ |
| ೧೩೬–ಶಿರಾ | ೧. ಟಿ.ಬಿ.ಜಯಚಂದ್ರ(ಆಯ್ಕೆ)<br>೨. ಬಿ.ಸತ್ಯನಾರಾಯಣ | ಭಾ.ರಾ.ಕಾ.<br>ಜೆ.ಡಿ.ಎಸ್. | ೬೦೭೯೩<br>೩೪೯೨೭ | ೪೫.೦೨<br>೨೫.೪೦ |

| | | | | |
|---|---|---|---|---|
| ೧೩೭–ಪಾವಗಡ (ಎಸ್.ಸಿ.) | ೧. ವೆಂಕಟರಮಣಪ್ಪ(ಆಯ್ಕೆ)<br>೨. ಕೆ.ಎಂ.ತಿಮ್ಮರಾಯಪ್ಪ | ಸ್ವ.ಅ.<br>ಜೆ.ಡಿ.ಎಸ್. | ೪೩೫೬೨<br>೩೦೫೧೫ | ೩೪.೦೦<br>೨೨.೮ |
| ೧೩೮–ಮಧುಗಿರಿ | ೧. ಡಿ.ಸಿ.ಗೌರಿಶಂಕರ(ಆಯ್ಕೆ)<br>೨. ಕೆ.ಎನ್.ರಾಜಣ್ಣ | ಜೆ.ಡಿ.ಎಸ್.<br>ಭಾ.ರಾ.ಕಾ. | ೫೧೯೭೧<br>೫೧೪೦೮ | ೪೨.೦೧<br>೪೧.೫೫ |

## ೨೦೦೮ರ ಉಪ ಚುನಾವಣಾ ಫಲಿತಾಂಶ

| ಕ್ಷೇತ್ರದ ಸಂಖ್ಯೆ ಮತ್ತು ಹೆಸರು | ಅಭ್ಯರ್ಥಿ | ಪಕ್ಷ | ಪಡೆದ ಮತಗಳು | ಶೇಕಡಾವಾರು |
|---|---|---|---|---|
| ೧೩೮ಮಧುಗಿರಿ | ೧.ಶ್ರೀಮತಿಅನಿತಾಕುಮಾರಸ್ವಾಮಿ(ಆಯ್ಕೆ)<br>೨. ಕ್ಯಾತಸಂದ್ರ ಎನ್.ರಾಜಣ್ಣ | ಜೆ.ಡಿ.ಎಸ್<br>ಭಾ.ರಾ.ಕಾ. | ೪೯,೭೬೮<br>೪೬,೨೮೭ | –<br>– |
| ೧೩೦–ತುರುವೇಕೆರೆ | ೧. ಎಂ.ಟಿ.ಕೃಷ್ಣಪ್ಪ(ಆಯ್ಕೆ)<br>೨.ಎಂ.ಡಿ.ಲಕ್ಷ್ಮೀನಾರಾಯಣ | ಜೆ.ಡಿ.ಎಸ್<br>ಭಾ.ಜ.ಪ, | ೫೫,೮೨೭<br>೫೨,೫೨೬ | –<br>– |

## ವಿಧಾನಸಭಾ ಚುನಾವಣೆ ಫಲಿತಾಂಶ– ೨೦೧೩

| ಕ್ಷೇತ್ರದ ಸಂಖ್ಯೆ ಮತ್ತು ಹೆಸರು | ಅಭ್ಯರ್ಥಿ | ಪಕ್ಷ | ಪಡೆದ ಮತಗಳು | ಶೇಕಡಾವಾರು |
|---|---|---|---|---|
| ೧೨೮–ಚಿಕ್ಕನಾಯಕನಹಳ್ಳಿ | ೧. ಸಿ.ಬಿ.ಸುರೇಶ್‌ಬಾಬು(ಆಯ್ಕೆ)<br>೨. ಜೆ.ಸಿ,ಮಧುಸ್ವಾಮಿ | ಜೆ.ಡಿ.ಎಸ್.<br>ಕೆ.ಜೆ.ಪಿ. | ೬೦,೭೫೯<br>೪೯,೬೨೦ | ೩೭.೭೭<br>೩೦.೮೫ |
| ೧೨೯–ತಿಪಟೂರು | ೧. ಕೆ. ಷಡಕ್ಷರಿ(ಆಯ್ಕೆ)<br>೨. ಬಿ.ಸಿ.ನಾಗೇಶ್ | ಭಾ.ರಾ.ಕಾ.<br>ಭಾ.ಜ.ಪ, | ೫೬,೮೧೭<br>೪೫,೨೧೫ | ೪೦.೫೧<br>೩೨.೨೩ |
| ೧೩೦–ತುರುವೇಕೆರೆ | ೧. ಎಂ.ಟಿ.ಕೃಷ್ಣಪ್ಪ(ಆಯ್ಕೆ)<br>೨. ಮಸಾಲ ಜಯರಾಮ್ | ಜೆ.ಡಿ.ಎಸ್<br>ಕೆ.ಜೆ.ಪಿ. | ೬೬,೦೮೯<br>೫೭,೧೬೪ | ೪೭.೧೮<br>೪೦.೮೦ |
| ೧೩೧–ಕುಣಿಗಲ್ | ೧. ಡಿ.ನಾಗರಾಜಯ್ಯ(ಆಯ್ಕೆ)<br>೨. ಡಿ.ಕೃಷ್ಣಕುಮಾರ್ | ಜೆ.ಡಿ.ಎಸ್<br>ಭಾ.ಜ.ಪ. | ೪೪,೫೭೫<br>೩೪,೯೪೩ | ೩೧.೨೭<br>೨೪.೫೧ |
| ೧೩೨–ತುಮಕೂರು ನಗರ | ೧.ಡಾ.ಎಸ್.ರಫೀಕ್‌ಅಹ್ಮದ್(ಆಯ್ಕೆ)<br>೨. ಜಿ,ಬಿ.ಜ್ಯೋತಿ ಗಣೇಶ್ | ಐ.ಎನ್.ಸಿ<br>ಕೆ.ಜೆ.ಪಿ | ೪೩,೬೮೧<br>೪೦,೦೭೩ | ೩೧.೫೮<br>೨೮.೯೭ |
| ೧೩೩–ತುಮಕೂರು (ಗ್ರಾ) | ೧. ಬಿ.ಸುರೇಶ್‌ಗೌಡ(ಆಯ್ಕೆ)<br>೨. ಡಿ.ಸಿ.ಗೌರಿಶಂಕರ್ | ಭಾ.ಜ.ಪ..<br>ಜೆ.ಡಿ.ಎಸ್. | ೫೫,೦೨೯<br>೫೩,೪೫೭ | ೩೭.೫೦<br>೩೬೪೩ |
| ೧೩೪–ಕೊರಟಗೆರೆ (ಎಸ್.ಸಿ) | ೧.ಸುಧಾಕರಲಾಲ್.ಪಿ.ಆರ್.(ಆಯ್ಕೆ)<br>೨. ಡಾ. ಜಿ.ಪರಮೇಶ್ವರ | ಜೆ.ಡಿ.ಎಸ್.<br>ಭಾ.ರಾ.ಕಾ. | ೭೨,೨೨೯<br>೫೪,೦೭೪ | ೪೭.೪೪<br>೩೫.೫೧ |
| ೧೩೫–ಗುಬ್ಬಿ | ೧. ಎಸ್.ಆರ್.ಶ್ರೀನಿವಾಸ್(ಆಯ್ಕೆ)<br>೨. ಜಿ.ಎನ್.ಬೆಟ್ಟಸ್ವಾಮಿ | ಜೆ.ಡಿ.ಎಸ್.<br>ಕೆ.ಜೆ.ಪಿ. | ೫೮,೭೮೩<br>೫೧,೫೩೯ | ೪೨.೦೯<br>೩೬.೯೦ |
| ೧೩೬–ಶಿರಾ | ೧. ಟಿ.ಬಿ.ಜಯಚಂದ್ರ(ಆಯ್ಕೆ)<br>೨. ಬಿ.ಸತ್ಯನಾರಾಯಣ | ಭಾ.ರಾ.ಕಾ.<br>ಜೆ.ಡಿ.ಎಸ್. | ೭೪,೦೮೯<br>೫೯,೪೦೮ | ೪೬.೪೬<br>೩೭.೨೫ |
| ೧೩೭–ಪಾವಗಡ (ಎಸ್.ಸಿ.) | ೧. ಕೆ.ಎಂ.ತಿಮ್ಮರಾಯಪ್ಪ(ಆಯ್ಕೆ)<br>೨. ಎಚ್.ವಿ.ವೆಂಕಟೇಶ್ | ಜೆ.ಡಿ.ಎಸ್.<br>ಭಾ.ರಾ.ಕಾ. | ೬೮,೬೮೬<br>೬೩,೮೨೩ | ೪೭.೨೪<br>೪೩.೯೦ |
| ೧೩೮–ಮಧುಗಿರಿ | ೧. ಕ್ಯಾತಸಂದ್ರ ಎನ್. ರಾಜಣ್ಣ(ಆಯ್ಕೆ)<br>೨. ಎಂ.ವಿ.ವೀರಭದ್ರಯ್ಯ | ಭಾ.ರಾ.ಕಾ.<br>ಜೆ.ಡಿ.ಎಸ್ | ೭೫,೦೮೬<br>೬೦,೬೫೯ | ೫೦.೯೭<br>೪೧.೧೭ |

**ಕೆ.ಜೆ.ಪಿ: ಕರ್ನಾಟಕ ಜನತಾ ಪಕ್ಷ**

***